2017

JULY "TO" DECEMBER

ಹೊಸ ದಿಗಂತ
ಸೋಮವಾರ
25 ಡಿಸೆಂಬರ್ 2017

ಸನ್ಮಾನ....

ದಿಗಂತ ಚಿತ್ರ



ಬೆಂಗಳೂರಿನಲ್ಲಿ ಭಾನುವಾರ ರಾಷ್ಟ್ರ ನಿರ್ಮಾಣಕ್ಕೆ ವಿವೇಕ ಮತ್ತು ಸಹಾನುಭೂತಿಗಳನ್ನು ಒಳಗೊಂಡ ಶಿಕ್ಷಣ ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಟಿಬೆಟಿಯನ್ ಧರ್ಮಗುರು ದಲಾಯ್ ಲಾಮ ಅವರನ್ನು ಸನ್ಮಾನಿಸಲಾಯಿತು.

ವಿಶ್ವದ ಧರ್ಮ ಸಂಘರ್ಷಕ್ಕೆ ಭಾರತವೇ ಮದ್ದು

ಧಾರ್ಮಿಕ ಸಾಮರಸ್ಯಕ್ಕೆ ಪ್ರಾಚೀನ ಜ್ಞಾನ ಅಗತ್ಯ

▸ ದಿಗಂತ ವರದಿ: ಬೆಂಗಳೂರು, ಡಿ.24

ಆಧುನಿಕ ಭಾರತದಲ್ಲಿ ಪ್ರಾಚೀನ ಭಾರತೀಯ ಜ್ಞಾನವನ್ನು ಪುನರುಜ್ಜೀವನಗೊಳಿಸಬೇಕಾದ ಅಗತ್ಯವಿದೆ ಎಂದು 14 ನೇ ದಲಾಯ್ ಲಾಮ ಅಭಿಪ್ರಾಯಪಟ್ಟರು.

ಬೆಂಗಳೂರಿನಲ್ಲಿ ಭಾನುವಾರ ರಾಷ್ಟ್ರ ನಿರ್ಮಾಣಕ್ಕೆ ವಿವೇಕ ಮತ್ತು ಸಹಾನುಭೂತಿಗಳನ್ನು ಒಳಗೊಂಡ ಶಿಕ್ಷಣ ಕುರಿತು ಉಪನ್ಯಾಸ ನೀಡಿದರು.

ಭಾರತವು 3 ಸಾವಿರ ವರ್ಷಗಳಿಂದ ವಿವಿಧ ಧರ್ಮ ಮತ್ತು ಸಂಪ್ರದಾಯಗಳನ್ನು ಮೈಗೂಡಿಸಿಕೊಂಡಿರುವ ಇತಿಹಾಸ ಹೊಂದಿದ್ದು ಧಾರ್ಮಿಕ ಸಾಮರಸ್ಯ ಕಾಪಾಡಿಕೊಳ್ಳಲು ಭಾರತದ ಪ್ರಾಚೀನ ಜ್ಞಾನ ಅತ್ಯಗತ್ಯ ಎಂದು ಹೇಳಿದರು.

ವಿಶ್ವದ ವಿವಿಧ ದೇಶಗಳು ಧರ್ಮದ ಹೆಸರಿನಲ್ಲಿ ಸಂಘರ್ಷ ಎದುರಿಸುತ್ತಿವೆ. ಆದರೆ, ಭಾರತ ಒಂದು ಹಲವು ದೇಶಗಳಿಗೆ ಉದಾಹರಣೆಯಾಗಿ ನಿಲ್ಲಲಿದೆ. ಹಾಗೆಯೇ, ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಮಾಡಲಿದೆ. ಅಂತಹ ದೇಶಗಳಲ್ಲಿ ನಾನು ಧಾರ್ಮಿಕ ಸಾಮರಸ್ಯದ ಪ್ರಚಾರಕ್ಕಾಗಿ ಬದ್ಧನಾಗಿರುತ್ತೇನೆ ಎಂದು ಅವರು ಹೇಳಿದರು.

ತಂತ್ರಜ್ಞಾನದಿಂದ ಭಾವನಾತ್ಮಕ ಸಮಸ್ಯೆ ಪರಿಹಾರ ಅಸಾಧ್ಯ: ಪುರಾತನ ಭಾರತೀಯ ಜ್ಞಾನವನ್ನು ಆಳವಾಗಿ ಪರಿಶೀಲಿಸುವ ಅಗತ್ಯತೆಯ ಕುರಿತು ಮಾತನಾಡಿದ ಅವರು, ವಿಜ್ಞಾನ ಮತ್ತು ತಂತ್ರಜ್ಞಾನದ ಅಗತ್ಯವಿದ್ದು, ಆದರೆ, ತಂತ್ರಜ್ಞಾನವು ಭಾವನಾತ್ಮಕ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಿಲ್ಲ. ಆದರೆ, ಹಳೆಯ ಸಂಪ್ರದಾಯವು ಭಾವನೆಗಳನ್ನು ಹೇಗೆ

ದಿಗಂತ ಚಿತ್ರ



ಎದುರಿಸಬೇಕು ಎಂಬುದನ್ನು ಸಾವಿರ ವರ್ಷದ ಹಿಂದಿನ ದಿನಗಳು ಸಾರಿ ಹೇಳುತ್ತವೆ. ಇದು ಧರ್ಮದ ವಿಷಯವಲ್ಲ, ಇಂದಿನ ಜಗತ್ತಿಗೂ ಇದು ಪ್ರಸ್ತುತ ಅಂಶ ಎಂದು ಲಾಮಾ ಹೇಳಿದರು. ಪೂರ್ಣ ಪ್ರಮಾಣದ ಶಾಲೆಗಳಿಗೆ ಶಿಕ್ಷಣ ಕ್ಷೇತ್ರದ ಬೆಳವಣಿಗೆ ಹಾಗೂ ಶೈಕ್ಷಣಿಕ ಸಂಸ್ಥೆಗಳು ಮಠಗಳಲ್ಲಿ ಕನಿಷ್ಠ ಪಾತ್ರವನ್ನು ವಹಿಸುವ ಮೂಲಕ ಆಂತರಿಕ ಅಭಿವೃದ್ಧಿಯನ್ನು ಹೆಚ್ಚಿಸಲಿದೆ ಎಂದು ಹೇಳಿದರು.

ಪ್ರಾಚೀನ ಭಾರತೀಯ ಜ್ಞಾನವನ್ನು ಪುನರುಜ್ಜೀವನಗೊಳಿಸುವ ಹಾಗೂ ಧಾರ್ಮಿಕ ಸಾಮರಸ್ಯವನ್ನು ಉತ್ತೇಜಿಸಲು, ಏಕತೆಯ ಭಾವವನ್ನು ಉತ್ತೇಜಿಸಲು ವಿವೇಕ ಮತ್ತು ಸಹಾನುಭೂತಿಗಳನ್ನು ಒಳಗೊಂಡ ಶಿಕ್ಷಣ ಪ್ರಯತ್ನಿಸುತ್ತಿದೆಯೆಂದು ದಲಾಯ್ ಲಾಮಾ ಅಭಿಪ್ರಾಯಪಟ್ಟರು.

ಇಸ್ರೋ ಮುಖ್ಯಸ್ಥ ಡಾ. ಎಸ್. ಕಿರಣ್ ಕುಮಾರ್, ಡಾ. ವೂಡೇ ಪಿ. ಕೃಷ್ಣ ಉಪಸ್ಥಿತರಿದ್ದರು.

ಉದಯವಾಣಿ ಬೆಂಗಳೂರು
ಸೋಮವಾರ, ಡಿಸೆಂಬರ್ 25, 2017



ಶೇಷಾದ್ರಿಪುರಂ ಸಮೂಹ ವಿದ್ಯಾಸಂಸ್ಥೆಗಳ ಬೆಳ್ಳಿ ಮಹೋತ್ಸವದ ಪ್ರಯುಕ್ತ ನಗರದ ಅರಮನೆ ಮೈದಾನದಲ್ಲಿ ಭಾನುವಾರ ಯೋಜಿಸಿದ್ದ ಕಾರ್ಯಕ್ರಮಕ್ಕೆ ಟಿಬೆಟ್ ಧರ್ಮಗುರು ದಲೈಲಾಮಾ ಚಾಲನೆ ನೀಡಿದರು.

ಪ್ರಾಚೀನ ಜ್ಞಾನ ಬಳಸಿ ಸಾಮರಸ್ಯ ಉಳಿಸಿ

ಬೌದ್ಧ ಧರ್ಮಗುರು ದಲೈಲಾಮ ಕರೆ

ಬೆಂಗಳೂರು: ಪ್ರಾಚೀನ ಭಾರತೀಯ ಜ್ಞಾನವನ್ನು ಆಧುನಿಕ ಭಾರತದಲ್ಲಿ ಪುನರುಜ್ಜೀವನಗೊಳಿಸುವ ಮೂಲಕ ಧಾರ್ಮಿಕ ಸಾಮರಸ್ಯ ಉಳಿಸಿಕೊಳ್ಳುವ ಅಗತ್ಯವಿದೆ ಎಂದು ಟಿಬೆಟಿಯನ್ ಧಾರ್ಮಿಕ ಗುರು ದಲೈಲಾಮ ಅಭಿಪ್ರಾಯ ವ್ಯಕ್ತಪಡಿಸಿದರು.

ಶೇಷಾದ್ರಿಪುರಂ ಸಮೂಹ ವಿದ್ಯಾಸಂಸ್ಥೆಗಳ ಬೆಳ್ಳಿ ಮಹೋತ್ಸವದ ಪ್ರಯುಕ್ತ ನಗರದ ಅರಮನೆ ಮೈದಾನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ರಾಷ್ಟ್ರ ನಿರ್ಮಾಣಕ್ಕಾಗಿ ಶಿಕ್ಷಣ ಮತ್ತು ಜ್ಞಾನ' ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು.

ಆಧುನಿಕ ಜಗತ್ತಿಗೆ ಪ್ರಸ್ತುತವಾಗಿರುವ ಭಾರತದ ಪುರಾತನ ಜ್ಞಾನವನ್ನು ಆಳವಾಗಿ ಅಧ್ಯಯನ ಮಾಡಲು ಇದು ಸಕಾಲ ಮತ್ತು ಇದರಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಸಮ್ಮಿಲನವಿದೆ. ಮನುಷ್ಯನ ಭಾವನಾತ್ಮಕ ಸಮಸ್ಯೆಗೆ ತಂತ್ರಜ್ಞಾನದಿಂದ ಪರಿಹಾರ ನೀಡಲು ಸಾಧ್ಯವಿಲ್ಲ. ನಮ್ಮಲ್ಲಿರುವ ಸಾವಿರಾರು ವರ್ಷಗಳ ಸಾಂಪ್ರದಾಯಿಕ ಆಚರಣೆಗಳು ಭಾವನಾತ್ಮಕ ಸಮಸ್ಯೆಗಳನ್ನು ಹೇಗೆ ಎದುರಿಸಬೇಕು ಎಂಬುದನ್ನು ಕಲಿಸಿಕೊಡುತ್ತದೆ. ಇದು ಧರ್ಮಾಧಾರಿತವಲ್ಲ ಎಂಬುದನ್ನು ವಿವರಿಸಿದರು.

ಭಾರತದಲ್ಲಿ 3 ಸಾವಿರ ವರ್ಷದಿಂದ ಇಂದಿನವರೆಗೂ ವಿವಿಧ ಧರ್ಮ ಮತ್ತು ಸಾಂಪ್ರದಾಯಿಕ ಆಚಾರಣೆ ಒಂದಾಗಿ ನಡೆದುಕೊಂಡು ಬರುತ್ತಿದೆ. ಧರ್ಮದ ಹೆಸರಿನಲ್ಲಿ ಸಂಘರ್ಷ ಮಾಡುವ ಅನೇಕ ರಾಷ್ಟ್ರಗಳು ನಮ್ಮ ಕಣ್ಣೆದುರಿಗಿವೆ. ಸಾಮರಸ್ಯದಲ್ಲಿ ಭಾರತವು ವಿಶ್ವಕ್ಕೆ ಮಾದರಿಯಾಗಿದೆ ಮತ್ತು ಧಾರ್ಮಿಕ ಸಂಘರ್ಷ ಶಮನ ಮಾಡಲು ಸಹಾಯ ಮಾಡುತ್ತಿದೆ. ಧಾರ್ಮಿಕ ಸಾಮರಸ್ಯದ ಪ್ರಚಾರಕ್ಕೆ ನಾನೂ ಕೂಡ ಬದ್ಧನಾಗಿದ್ದೇನೆ ಎಂದು ಹೇಳಿದರು.

> ಪ್ರಾಚೀನ ತತ್ವಶಾಸ್ತ್ರವನ್ನು ಅಧ್ಯಯನದ ಮೂಲಕ ಉಳಿಸಿ, ಬೆಳೆಸಿಕೊಂಡು ಹೋಗಬೇಕು. ಶಾಂತಿಯುತ ವ್ಯಕ್ತಿಯಿಂದ ಶಾಂತಿಯುತ ಕುಟುಂಬ, ಸಮಾಜ ಹಾಗೂ ವಿಶ್ವ ನಿರ್ಮಾಣ ಸಾಧ್ಯ.
>
> • ದಲೈಲಾಮ, ಟಿಬೇಟಿಯನ್ ಧರ್ಮ ಗುರು

ಸ್ವಯಂ ಪ್ರತಿಷ್ಠೆ ಬೇಡ: ಸ್ವಯಂ ಪ್ರತಿಷ್ಠೆಗೆ ಒಳಗಾದ ವ್ಯಕ್ತಿ ಒಬ್ಬಂಟಿಯಾಗುತ್ತಾನೆ. ಹುಟ್ಟು ಸಾವಿನಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಹೀಗಾಗಿ ಎಲ್ಲರನ್ನು ಸಮಾನವಾಗಿ ಕಾಣಬೇಕು. ಶಾಂತಿ, ಸೌಹಾರ್ದತೆ ಮತ್ತು ನೆಮ್ಮದಿಯಿಂದ ಬಾಳಬೇಕು. ಆದರೆ, ಕೆಲವು ಭಾಗದಲ್ಲಿ ಅಹಿಂಸೆಯಿಂದ ಜನ ಸಾಯುತ್ತಿದ್ದಾರೆ. ಜಾಗತಿಕ ತಾಪಮಾನ ಮತ್ತು ಆರ್ಥಿಕತೆ ಪ್ರತಿಯೊಬ್ಬರ ಭವಿಷ್ಯದ ಮೇಲೂ ಪ್ರಭಾವ ಬೀರಲಿದೆ. ವಿಶ್ವದ ಸಮಾನತೆಯನ್ನು ಕಾಪಾಡುವ ಜವಾಬ್ದಾರಿ ಎಲ್ಲರ ಮೇಲಿದೆ. ಏಕತೆ, ಸಾಮಾಜಿಕ ಜವಾಬ್ದಾರಿ ಮತ್ತು ಧಾರ್ಮಿಕ ಸೌಹಾರ್ದತೆ ಅತಿ ಅವಶ್ಯಕ ಎಂದು ಹೇಳಿದರು. ಇಸ್ರೋ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಆರ್ .ಪಂಡಿತಾರಾಧ್ಯ, ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ ಉಪಸ್ಥಿತರಿದ್ದರು.

ವಾರ್ತಾ ಭಾರತಿ
ಬೆಂಗಳೂರು | ಸೋಮವಾರ, ಡಿಸೆಂಬರ್ 25, 2017

ಧಾರ್ಮಿಕ ಸಾಮರಸ್ಯ ಉಳಿಸಿಕೊಳ್ಳುವುದು ಅಗತ್ಯ

ಬೆಂಗಳೂರು, ಡಿ.24: ಆಧುನಿಕ ಭಾರತದಲ್ಲಿ ಪ್ರಾಚೀನ ಭಾರತದ ಜ್ಞಾನವನ್ನು ಪುನರುಜ್ಜೀವನಗೊಳಿಸುವ ಮೂಲಕ ಧಾರ್ಮಿಕ ಸಾಮರಸ್ಯವನ್ನು ಉಳಿಸಿಕೊಳ್ಳುವ ಅಗತ್ಯವಿದೆ ಎಂದು ಬೌದ್ಧ ಧರ್ಮಗುರು ದಲಾಯಿ ಲಾಮ ಅಭಿಪ್ರಾಯಪಟ್ಟಿದ್ದಾರೆ.

ರವಿವಾರ ಶೇಷಾದ್ರಿಪುರಂ ಸಮೂಹ ವಿದ್ಯಾ ಸಂಸ್ಥೆಗಳ ಬೆಳ್ಳಿ ಮಹೋತ್ಸವ ಅಂಗವಾಗಿ ನಗರದ ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ರಾಷ್ಟ್ರ ನಿರ್ಮಾಣಕ್ಕಾಗಿ ಶಿಕ್ಷಣ ಮತ್ತು ಜ್ಞಾನ' ಎಂಬ ವಿಷಯ ಕುರಿತು ಅವರು ಮಾತನಾಡಿದರು.



ಭಾರತದ ಪುರಾತನ ಜ್ಞಾನ, ವಿಜ್ಞಾನ, ತಂತ್ರಜ್ಞಾನದ ಸಮ್ಮಿಲನವಾದ್ದರಿಂದ ಇವುಗಳ ಬಗ್ಗೆ ಆಳವಾದ ಅಧ್ಯಯನ ಅಗತ್ಯವಿದೆ. ಮನುಷ್ಯನ ಭಾವನಾತ್ಮಕ ಸಮಸ್ಯೆಗೆ ತಂತ್ರಜ್ಞಾನದಿಂದ ಪರಿಹಾರ ನೀಡಲು ಸಾಧ್ಯವಿಲ್ಲ. ನಮ್ಮಲ್ಲಿರುವ ಸಾವಿರಾರು ವರ್ಷಗಳ ಸಾಂಪ್ರದಾಯಿಕ ಆಚರಣೆಗಳು ಭಾವನಾತ್ಮಕ ಸಮಸ್ಯೆಗಳನ್ನು ಹೇಗೆ ಎದುರಿಸಬೇಕು ಎಂಬುದನ್ನು ಕಲಿಸಿಕೊಡುತ್ತದೆ ಎಂದು ಅವರು ವಿಶ್ಲೇಷಿಸಿದರು.

ಭಾರತದಲ್ಲಿ ಮೂರ್‍ನಾಲ್ಕು ಸಾವಿರ ವರ್ಷದಿಂದ ವಿವಿಧ ಧರ್ಮ ಮತ್ತು ಸಾಂಪ್ರದಾಯಿಕ ಆಚರಣೆ ಒಂದಾಗಿ ನಡೆದುಕೊಂಡು ಬಂದಿವೆ. ಧರ್ಮದ ಹೆಸರಲ್ಲಿ ಅನೇಕ ರಾಷ್ಟ್ರಗಳು ಸಂಘರ್ಷಕ್ಕೆ ಮುಂದಾಗಿವೆ. ಬೇರೆ ರಾಷ್ಟ್ರಗಳಿಗೆ ಹೋಲಿಸಿದರೆ ಸಾಮರಸ್ಯದಲ್ಲಿ ಭಾರತವು ವಿಶ್ವಕ್ಕೆ ಮಾದರಿಯಾಗಿದೆ ಎಂದ ಅವರು, ಧಾರ್ಮಿಕ ಸಾಮರಸ್ಯ ವಿಚಾರದಲ್ಲಿ ನಾನು ಪ್ರಚಾರಕ್ಕೆ ಬದ್ಧನಾಗಿದ್ದೇನೆ ಎಂದು ತಿಳಿಸಿದರು.

ಪ್ರಸ್ತುತ ಶಿಕ್ಷಣ ವ್ಯವಸ್ಥೆ ಪಠ್ಯಕ್ರಮದ ಭಾಗವಾಗಿ ಒಳ ಮೌಲ್ಯಗಳನ್ನು ಪರಿಚಯಿಸುತ್ತದೆ. ಭಾರತದಲ್ಲಿನ ಮಠಗಳು ಶಿಕ್ಷಣ ಕ್ಷೇತ್ರದ ಬೆಳವಣಿಗೆ ಪ್ರಮುಖ ಪಾತ್ರವಹಿಸುತ್ತಿವೆ. ಶಿಕ್ಷಣದಲ್ಲಿ ಮಠಗಳಲ್ಲಿ ಕನಿಷ್ಠ ಪಾತ್ರದಿಂದ ನಮ್ಮೊಳಗಿನ ಆಂತರಿಕ ಮೌಲ್ಯಗಳು, ಮಾನವೀಯ ಗುಣಗಳನ್ನು ಅನಾವರಣಗೊಳಿಸುತ್ತಿದೆ ಎಂದರು

ಬೌದ್ಧ ಧರ್ಮಗುರು ದಲಾಯಿ ಲಾಮ

ಇಸ್ರೋ ಅಧ್ಯಕ್ಷ ಎ.ಎಸ್.ಕಿರಣ್ ಕುಮಾರ್ ಮಾತನಾಡಿ, ತಂತ್ರಜಾನಗಳಿಂದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ. ತಂತ್ರಜ್ಞಾನವನ್ನು ಕೆಲವರು ಒಳ್ಳೆಯದಕ್ಕೆ ಮತ್ತು ಇನ್ನೂ ಕೆಲವರು ಕೆಟ್ಟದಕ್ಕೂ ಬಳಕೆ ಮಾಡುತ್ತಿದ್ದಾರೆ. ಆಧ್ಯಾತ್ಮಿಕ ಮತ್ತು ಜ್ಞಾನವು ಮಾನವೀಯ ಮೌಲ್ಯಗಳ ರಕ್ಷಣೆಗೆ ಸಹಕಾರಿ ಎಂದರು.

ವಿಜಯ ಕರ್ನಾಟಕ

ಸೋಮವಾರ,25 ಡಿಸೆಂಬರ್ 2017

ಟಿಬೆಟಿಯನ್ನರ ಧಾರ್ಮಿಕ ನಾಯಕ ದಲೈಲಾಮಾ ಅಭಿಮತ

ಪುರಾತನ ಜ್ಞಾನದಲ್ಲಿದೆ ಹಲವು ಸಮಸ್ಯೆಗೆ ಉತ್ತರ

ವಿಕ ಸುದ್ದಿಲೋಕ ಬೆಂಗಳೂರು

ಭಾರತದ ಪುರಾತನ ಜ್ಞಾನ ಸಂಪತ್ತಿನಲ್ಲಿ ಜಾಗತಿಕ ಸಮಸ್ಯೆಗಳಿಗೆ ಉತ್ತರವಿದೆ. ಹೀಗಾಗಿ ಆ ಪುರಾತನ ಜ್ಞಾನದ ಅಧ್ಯಯನದ ಅಗತ್ಯವಿದೆ ಎಂದು ಟಿಬೆಟಿಯನ್ನರ ಧಾರ್ಮಿಕ ನಾಯಕ ದಲೈಲಾಮಾ ಅಭಿಪ್ರಾಯಪಟ್ಟರು.

ಶೇಷಾದ್ರಿಪುರಂ ಸಮೂಹ ವಿದ್ಯಾ ಸಂಸ್ಥೆಗಳ ರಜತ ಮಹೋತ್ಸವ ಅಂಗವಾಗಿ ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 'ರಾಷ್ಟ್ರ ನಿರ್ಮಾಣಕ್ಕಾಗಿ ಶಿಕ್ಷಣ ಮತ್ತು ಜ್ಞಾನ' ವಿಷಯ ಕುರಿತು ಭಾನುವಾರ ಮಾತನಾಡಿದರು.

''ಪ್ರಸ್ತುತ ಜಗತ್ತಿನಲ್ಲಿ ಅಹಿಂಸೆ ಹಾಗೂ ಜಾತ್ಯತೀತತೆಗೆ ಧಕ್ಕೆ ತರುವ ಅನೇಕ ಸಮಸ್ಯೆಗಳು ಉಂಟಾಗಿವೆ. ಇಂತಹ ಸಾಕಷ್ಟು ಜಾಗತಿಕ ಸಮಸ್ಯೆಗಳಿಗೆ ಪರಿಹಾರ ಎಲ್ಲಿಯೂ ಕಾಣುತ್ತಿಲ್ಲ. ಆ ಬಗ್ಗೆ ವಿಜ್ಞಾನಿಗಳು, ನುರಿತ ತಜ್ಞರು, ಪರಿಣತರ ಜತೆ ಚರ್ಚಿಸಿದರೂ ಅವರ ಬಳಿಯೂ ಉತ್ತರವಿಲ್ಲ. ಹಾಗಾಗಿ ಈ ಎಲ್ಲವುಗಳ ನಿಯಂತ್ರಣಕ್ಕೆ ಪುರಾತನ ಜ್ಞಾನದಲ್ಲಿ ಉತ್ತರವಿದೆ. ಆದ್ದರಿಂದ ಆ ಪುರಾತನ ಜ್ಞಾನವನ್ನು ಆಧುನಿಕ ಶಿಕ್ಷಣದಲ್ಲಿ ಅಳವಡಿಸಿ ಕೊಳ್ಳುವುದು ಒಳಿತು'' ಎಂದು ಸಲಹೆ ಮಾಡಿದರು.

ವಿದ್ಯಾರ್ಥಿಗಳಿಗೆ ಶಿಕ್ಷಣವೇ ಅಡಿಪಾಯ: ''ವಿದ್ಯಾರ್ಥಿಗಳಿಗೆ ಶಿಕ್ಷಣ ತಳಪಾಯ. ಅದರಿಂದ ವಿವಿಧ ರೀತಿಯ ಸಾಮಾಜಿಕ ಜ್ಞಾನ ಸಿಗುತ್ತದೆ. ಹಾಗಾಗಿ ಓದಿನತ್ತ ಗಮನಹರಿಸಿ. ಓದನ್ನು ಕೇವಲ ಹಣ, ದುಡಿಮೆಗೆ ಮೀಸಲಿಡಬೇಡಿ. ಬದಲಾಗಿ ಅದರಿಂದ ಪ್ರತಿಯೊಬ್ಬರ ಆಂತರಿಕ ಜ್ಞಾನ ಹೆಚ್ಚುವಂತಾಗಬೇಕು'' ಎಂದರು.

''ಭಾರತದಲ್ಲಿ ಮೂರು ಸಾವಿರ ವರ್ಷಗಳಿಂದ ಇಂದಿನವರೆಗೂ ನಾನಾ ಧರ್ಮ ಮತ್ತು ಸಾಂಪ್ರದಾಯಿಕ ಆಚರಣೆ ಒಂದಾಗಿ ನಡೆದುಕೊಂಡು ಬರುತ್ತಿದೆ. ಧರ್ಮದ ಹೆಸರಿನಲ್ಲಿ ಸಂಘರ್ಷ ಮಾಡುವ ಅನೇಕ ರಾಷ್ಟ್ರಗಳು ನಮ್ಮ ಕಣ್ಣ ದುರಿವೆ. ಸಾಮರಸ್ಯದಲ್ಲಿ ಭಾರತವು ವಿಶ್ವಕ್ಕೆ ಮಾದರಿಯಾಗಿದೆ ಮತ್ತು ಧಾರ್ಮಿಕ ಸಂಘರ್ಷ ಶಮನ ಮಾಡಲು ಸಹಾಯ ಮಾಡುತ್ತಿದೆ. ಧಾರ್ಮಿಕ ಸಾಮರಸ್ಯದ ಪ್ರಚಾರಕ್ಕೆ ನಾನೂ ಕೂಡ ಬದ್ಧನಾಗಿದ್ದೇನೆ'' ಎಂದು ನುಡಿದರು.

ಇದೇ ವೇಳೆ ಕೆಲ ಸಭಿಕರು ದಲೈಲಾಮಾ ಅವರಿಗೆ ಪ್ರಶ್ನೆಗಳನ್ನು ಕೇಳಿದರು. ಅದಕ್ಕೆ ತಕ್ಕ ಉತ್ತರಗಳನ್ನೂ ಅವರು ನೀಡಿದರು. ಕಾರ್ಯಕ್ರಮದಲ್ಲಿ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಕಾರ್ಯಕ್ರಮದ ಆಯೋಜಕರಾದ ಡಾ.ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.



ಶೇಷಾದ್ರಿಪುರಂ ಸಮೂಹ ವಿದ್ಯಾ ಸಂಸ್ಥೆಯು ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಟಿಬೆಟ್ ಧಾರ್ಮಿಕ ನಾಯಕ ದಲೈಲಾಮ, ಇಸ್ರೋ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್, ವೂಡೇ ಪಿ. ಕೃಷ್ಣ ಮತ್ತಿತರರಿದ್ದರು.

> ಪ್ರತಿಯೊಬ್ಬರಿಗೂ ಶಿಕ್ಷಣ ಎಂಬುದು ಅತಿಮುಖ್ಯ. ಭೂಮಿ ಮೇಲಿರುವ ಸಂಪತ್ತನ್ನು ಅಗತ್ಯಕ್ಕಿಂತ ಹೆಚ್ಚು ಬಳಸಿದ್ದೇವೆ. ಮುಂದಿನ ಪೀಳಿಗೆಗೆ ಏನನ್ನೂ ಉಳಿಸಲು ಸಾಧ್ಯವಿಲ್ಲ ಎಂಬಂತಾಗಿದೆ. ಭೂಮಿಯ ಮೇಲೆ ಒತ್ತಡದ ಬದುಕು ನಡೆಸುತ್ತಿದ್ದೇವೆ. ವಾಸಕ್ಕೆ ಯೋಗ್ಯವಾಗಿರುವ ಅನ್ಯ ಗ್ರಹದ ಹುಡುಕಾಟ ಆರಂಭವಾಗಿದೆ. ಈ ಹಿನ್ನೆಲೆಯಲ್ಲಿ ಜ್ಞಾನ ಮತ್ತು ಆಧ್ಯಾತ್ಮಿಕ ಚಿಂತನೆ ಬಹಳ ಅಗತ್ಯ.
>
> – **ಎ.ಎಸ್. ಕಿರಣ್‌ಕುಮಾರ್**, ಇಸ್ರೋ ಅಧ್ಯಕ್ಷ

ಬೆಂಗಳೂರು
vishwavani.news
25.12.2017 ಸೋಮವಾರ

ಜ್ಞಾನವು ವಿಜ್ಞಾನ, ತಂತ್ರಜ್ಞಾನದ ಸಮ್ಮಿಲನ: ಬೌದ್ಧ ಧರ್ಮಗುರು ದಲೈಲಾಮ

ಸಾಮರಸ್ಯದಲ್ಲಿ ಭಾರತ ವಿಶ್ವಕ್ಕೆ ಮಾದರಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪ್ರಾಚೀನ ಭಾರತೀಯ ಜ್ಞಾನವನ್ನು ಆಧುನಿಕ ಭಾರತದಲ್ಲಿ ಪುನರುಜ್ಜೀವನಗೊಳಿಸುವ ಮೂಲಕ ಧಾರ್ಮಿಕ ಸಾಮರಸ್ಯ ಉಳಿಸಿಕೊಳ್ಳುವ ಅಗತ್ಯವಿದೆ. ಸಾಮರಸ್ಯದಲ್ಲಿ ಭಾರತವು ವಿಶ್ವಕ್ಕೆ ಮಾದರಿಯಾಗಿದೆ. ಧಾರ್ಮಿಕ ಸಾಮರಸ್ಯದ ಪ್ರಚಾರಕ್ಕೆ ನಾನು ಬದ್ಧನಾಗಿದ್ದೇನೆ ಎಂದು ಟಿಬೆಟಿಯನ್ ಬೌದ್ಧ ಧರ್ಮಗುರು ದಲೈಲಾಮ ಹೇಳಿದರು.

ಶೇಷಾದ್ರಿಪುರಂ ಸಮೂಹ ವಿದ್ಯಾ ಸಂಸ್ಥೆಗಳ ಬೆಳ್ಳಿ ಮಹೋತ್ಸವ ಅಂಗವಾಗಿ ನಗರದ ಅರಮನೆ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ 'ರಾಷ್ಟ್ರ ನಿರ್ಮಾಣಕ್ಕಾಗಿ ಶಿಕ್ಷಣ ಮತ್ತು ಜ್ಞಾನ 'ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು.

ಭಾರತದ ಪುರಾತನ ಜ್ಞಾನವು ವಿಜ್ಞಾನ ಮತ್ತು ತಂತ್ರಜ್ಞಾನದ ಸಮ್ಮಿಲನ. ಇದನ್ನು ಆಳವಾಗಿ ಅಧ್ಯಯನ ಮಾಡಲು ಸಕಾಲ ಮತ್ತು ಆಧುನಿಕ ಜಗತ್ತಿಗೆ ಪ್ರಸ್ತುತವಾಗಿದೆ ಆದರೆ, ಮನುಷ್ಯನ ಭಾವನಾತ್ಮಕ ಸಮಸ್ಯೆಗೆ ತಂತ್ರಜ್ಞಾನದಿಂದ ಪರಿಹಾರ ನೀಡಲು ಸಾಧ್ಯವಿಲ್ಲ, ನಮ್ಮಲ್ಲಿರುವ ಸಾವಿರಾರು ವರ್ಷಗಳ ಹಳೆಯದಾದ ಸಾಂಪ್ರದಾಯಿಕ ಆಚರಣೆಗಳು ಭಾವನಾತ್ಮಕ ಸಮಸ್ಯೆಗಳನ್ನು ಹೇಗೆ ಎದುರಿಸಬೇಕು ಎಂಬುದನ್ನು ಕಲಿಸಿಕೊಡುತ್ತದೆ ಎಂದು ವಿಶ್ಲೇಷಿಸಿದರು.

ಭಾರತದಲ್ಲಿ ಮೂರ್‍ನಾಲ್ಕು ಸಾವಿರ ವರ್ಷದಿಂದ ವಿವಿಧ ಧರ್ಮ ಮತ್ತು ಸಾಂಪ್ರದಾಯಿಕ ಆಚರಣೆ ಒಂದಾಗಿ ಬೆಳೆದುಕೊಂಡು ಬಂದಿದೆ. ಧರ್ಮದ ಹೆಸರನ್ನು ಸಂಘರ್ಷ ನಡೆಸುವ ಅನೇಕ ರಾಷ್ಟ್ರಗಳು ನಮ್ಮ ಕಣ್ಣೆದುರೇ ಇದೆ. ಸಾಮರಸ್ಯದಲ್ಲಿ ಭಾರತವು ವಿಶ್ವಕ್ಕೆ ಮಾದರಿಯಾಗಿದೆ. ಧಾರ್ಮಿಕ ಸಾಮರಸ್ಯದ ಪ್ರಚಾರಕ್ಕೆ ನಾನು ಬದ್ಧನಾಗಿದ್ದೇನೆ ಎಂದರು.

ಇಸ್ರೋ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ಮಾತನಾಡಿ, ತಂತ್ರಜಾನಗಳಿಂದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ, ತಂತ್ರಜ್ಞಾನವನ್ನು ಕೆಲವರು ಒಳ್ಳೆಯದಕ್ಕೆ ಮತ್ತು ಇನ್ನೂ ಕೆಲವರು ಕೆಟ್ಟದಕ್ಕೂ ಬಳಕೆ ಮಾಡುತ್ತಿದ್ದಾರೆ. ಅಧ್ಯಾತ್ಮಿಕ ಚಿಂತನೆ ಮತ್ತು ಜ್ಞಾನವು ಮಾನವೀಯ ಮೌಲ್ಯಗಳನ್ನು ರಕ್ಷಣೆಗೆ ಸಹಕಾರಿ ಎಂದರು.



ಶೇಷಾದ್ರಿಪುರಂ ಸಮೂಹ ವಿದ್ಯಾಸಂಸ್ಥೆಗಳ ಬೆಳ್ಳಿ ಮಹೋತ್ಸವ ಕಾರ್ಯಕ್ರಮವನ್ನು ಟಿಬೆಟಿಯನ್ ಬೌದ್ಧ ಧರ್ಮಗುರು ದಲೈಲಾಮ ಉದ್ಘಾಟಿಸಿದರು. ಇಸ್ರೋ ಅಧ್ಯಕ್ಷ ಎ.ಎಸ್ ಕಿರಣ್ ಕುಮಾರ್, ಅಧ್ಯಕ್ಷ ಎಸ್.ಆರ್.ಪಂಡಿತಾರಾಧ್ಯ, ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ ಇದ್ದರು.

> “ಧಾರ್ಮಿಕ ಸಾಮರಸ್ಯದೊಂದಿಗೆ ಒಟ್ಟಾಗಿ ಬಾಳುವುದು ಆದರ್ಶ ಮತ್ತು ಜಾಗತಿಕ ಬದ್ಧತೆಯು ಕೂಡ. ಸಮಾಜದಲ್ಲಿ ಶಾಂತಿ ಮತ್ತು ಸಹಬಾಳ್ವೆಗೆ ಅಧ್ಯಾತ್ಮಿಕತೆ ಪೂರಕ. ನಮ್ಮಲ್ಲಿ ತೃಪ್ತಿ, ತಾಳ್ಮೆ ರೂಢಿಸಿಕೊಂಡರೆ ಸೋದರತ್ವ ಸಮಾಜ ನಿರ್ಮಿಸಬಹುದು. ನಳಂದ ತತ್ವಜ್ಞಾನವನ್ನು ಟಿಬೆಟಿಯನ್ ಭಾಷೆಯಲ್ಲಿ ಚೆನ್ನಾಗಿ ವಿವರಿಸಲಾಗಿದೆ.
>
> -ದಲೈ ಲಾಮಾ ಟಿಬಿಟಿಯನ್ ಧರ್ಮಗುರು

ಕಾರ್ಯಕ್ರಮದಲ್ಲಿ ಶೇಷಾದ್ರಿಪುರಂ ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ, ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ ಇದ್ದರು.

ಶಿಕ್ಷಣದಿಂದ ಆಂತರಿಕ ಮೌಲ್ಯ ಅನಾವರಣ

ಪ್ರಸ್ತುತ ಶಿಕ್ಷಣ ವ್ಯವಸ್ಥೆ ಪಠ್ಯಕ್ರಮದ ಭಾಗವಾಗಿ ಒಳಮೌಲ್ಯಗಳನ್ನು ಪರಿಚಯಿಸುತ್ತದೆ. ಭಾರತದಲ್ಲಿನ ಮಠಗಳು ಶಿಕ್ಷಣ ಕ್ಷೇತ್ರದ ಬೆಳವಣಿಗೆ ಪ್ರಮುಖ ಪಾತ್ರವಹಿಸುತ್ತಿವೆ. ಶಿಕ್ಷಣದಲ್ಲಿ ಮಠಗಳ ಕನಿಷ್ಠ ಪಾತ್ರದಿಂದ ನಮ್ಮೊಳಗಿನ ಆಂತರಿಕ ಮೌಲ್ಯಗಳು, ಮಾನವೀಯ ಗುಣಗಳನ್ನು ಅನಾವರಣಗೊಳಿಸುತ್ತಿದೆ ಎಂದು ದಲೈಲಾಮ ತಿಳಿಸಿದರು.

ಈ ಸಂಜೆ

ಭಾನುವಾರ, 24-12-2017



ಶೇಷಾದ್ರಿಪುರಂ ಸಮೂಹ ವಿದ್ಯಾಸಂಸ್ಥೆಯ ಬೆಳ್ಳಿ ಮಹೋತ್ಸವ ಉಪನ್ಯಾಸ ಕಾರ್ಯಕ್ರಮವನ್ನು ನೋಬೆಲ್ ಪ್ರಶಸ್ತಿ ಪುರಸ್ಕೃತ ಧರ್ಮಗುರು ದಲೈಲಾಮ ಅವರು ಉದ್ಘಾಟಿಸಿದರು. ಇಸ್ರೋ ಅಧ್ಯಕ್ಷ ಎ.ಎಚ್. ಕಿರಣ್‌ಕುಮಾರ್, ಶಿಕ್ಷಣ ಸಂಸ್ಥೆ ಅಧ್ಯಕ್ಷ ಪಂಡಿತಾರಾಧ್ಯ, ಡಾ. ವೂಡೇ ಪಿ. ಕೃಷ್ಣ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಶಿಕ್ಷಣಕ್ಕೆ ಹೊಸ ಆಲೋಚನೆ, ಸಂಶೋಧನೆ ಅಗತ್ಯ

ಬೆಂಗಳೂರು, ಡಿ.24- ಶಿಕ್ಷಣದಲ್ಲಿ ಹೊಸ ಆಲೋಚನೆಗಳು ಮತ್ತು ಚಿಂತನೆಗಳನ್ನೊಳಗೊಂಡ ಉತ್ತಮ ಸಂಶೋಧನೆ ನಡೆಸಬೇಕು. ಆಗಲೇ ಉನ್ನತ ಶಿಕ್ಷಣಕ್ಕೆ ಬೆಲೆ ಮತ್ತು ಆದ್ಯತೆ ಸಿಗುತ್ತದೆ ಎಂದು ಬೌದ್ಧ ಗುರು ದಲೈಲಾಮಾ ತಿಳಿಸಿದರು.

ಶೇಷಾದ್ರಿಪುರಂ ಸಮೂಹ ವಿದ್ಯಾಸಂಸ್ಥೆ ವತಿಯಿಂದ ಬೆಳ್ಳಿ ಮಹೋತ್ಸವದ ಅಂಗವಾಗಿ ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ, ರಾಷ್ಟ್ರ ನಿರ್ಮಾಣಕ್ಕೆ ವಿವೇಕ ಮತ್ತು ಸಹಾನುಭೂತಿಗಳನ್ನು ಒಳಗೊಂಡ ಶಿಕ್ಷಣದ ಉಪನ್ಯಾಸ ನೀಡಿದರು.

ಪ್ರಪಂಚದಲ್ಲಿ ಏಳು ಶತಕೋಟಿ ಜನರು ಇದ್ದಾರೆ. ಒಂದು ಶತಕೋಟಿ ಜನರು ನಾಸ್ತಿಕರಾಗಿದ್ದಾರೆ. 6 ಶತ ಕೋಟಿ ಜನರು ಧರ್ಮದಲ್ಲಿ ನಂಬಿಕೆ ಇಟ್ಟಿದ್ದು, ಆಸ್ತಿಕರಾಗಿದ್ದಾರೆ. ಇವರಲ್ಲಿ ಕೆಲವರು ಗೊಂದಲಕ್ಕೆ ಒಳಗಾಗಿ ಉಪದ್ರವಿಗಳಾಗಿದ್ದಾರೆ. ಆದ್ದರಿಂದ ದೇಶದಲ್ಲಿ ಏಕತೆ ಸೃಷ್ಟಿಯಾಗಬೇಕು ಎಂದರು.

ಧಾರ್ಮಿಕ ಸೌಹಾರ್ದತೆಯನ್ನು ಕಾಣಬೇಕು, ಪುರಾತನ ಭಾರತೀಯ ಪದ್ಧತಿಗಳು ಮತ್ತು ಶಿಕ್ಷಣವನ್ನು ಪುನರುಜ್ಜೀವನಗೊಳಿಸಿ ಆಧುನಿಕ ಶಿಕ್ಷಣ ನೀಡಬೇಕು ಎಂದರು.

ಭಾರತೀಯ ಪುರಾತನ ಆಧ್ಯಾತ್ಮಿಕತೆಯಲ್ಲಿ ಎಲ್ಲದಕ್ಕೂ ಉತ್ತರ ಸಿಗುತ್ತದೆ. ಮತ್ತು ಪ್ರಸ್ತುತವಾಗಿರುತ್ತದೆ. ಇದನ್ನು ಆಧ್ಯಾತ್ಮಕತೆಯನ್ನು ಶಿಕ್ಷಣಕ್ಕೆ ಅಳವಡಿಸಬೇಕು ಎಂದರು.

ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಮೋದಿ ದೇಶವನ್ನು ಪ್ರಗತಿಯತ್ತ ಕರೆದೊಯ್ಯುತ್ತಿದ್ದಾರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ಈ ಬಗ್ಗೆ ಏನೂ ಹೇಳಲಾರೆ. ಅದನ್ನು ನೀವೇ ಹೇಳಬೇಕು ಎಂದರು.

ವಿದ್ಯಾರ್ಥಿಗಳಿಗೆ ನಿಮ್ಮ ಸಂದೇಶ ಏನು ಕೇಳಿದಾಗ, ಶೈಕ್ಷಣಿಕವಾಗಿ ವೃದ್ಧಿಯಾಗಬೇಕು. ಸಾಮಾಜಿಕ ಶಿಕ್ಷಣದತ್ತ ಗಮನಹರಿಸಬೇಕು ಎಂದು ತಿಳಿಸಿದರು.

ಯುವ ಜನತೆಗೆ ವಿಜ್ಞಾನ ಮತ್ತು ಧರ್ಮ ಮುಖ್ಯವಾಗುತ್ತಾ? ಎಂಬ ಪ್ರಶ್ನೆಗೆ ಪ್ರತಿಕ್ರಯಿಸಿದ ಅವರು, ಎರಡೂ ಅತ್ಯಮೂಲ್ಯವಾದದ್ದು. ಕೇವಲ ಒಂದೇ ಧರ್ಮಕ್ಕೆ ಸೀಮಿತವಾಗಬಾರದು ಎಂದು ಹೇಳಿದರು.

ನಿಜವಾದ ಆಧ್ಯಾತ್ಮಿಕತೆ ಎಂದರೇನು? ಭೂಮಿಯ ವಿಕಸನಗೊಂಡಂತೆ ಆಚರಗಳು ಬದಲಾಗುತ್ತ ಹೋಗುತ್ತದೆ. ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಮಾರ್ಗದರ್ಶನ ಅವಶ್ಯಕತೆ ಇದೆ. ಜಾತಿ ಧರ್ಮಗಳು ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರುತ್ತದೆ. ವಿದ್ಯಾಭ್ಯಾಸದಲ್ಲಿ ಮಾನಸಿಕ ಸ್ಥಿತಿ ಮತ್ತು ಧೈರ್ಯ ಮುಖ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಇಸ್ರೋ ಅಧ್ಯಕ್ಷ ಎ.ಎಚ್.ಕಿರಣ್‌ಕುಮಾರ್, ಶೇಷಾದ್ರಿಪುರಂ ವಿದ್ಯಾಸಂಸ್ಥೆಯ ಅಧ್ಯಕ್ಷ ಪಂಡಿತಾರಾಧ್ಯ, ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಉಪಸ್ಥಿತರಿದ್ದರು.

ಸಂಜೆವಾಣಿ
ಭಾನುವಾರ 24
ಡಿಸೆಂಬರ್ 2017

ಆಧುನಿಕತೆಯಲ್ಲಿ ಪ್ರಾಚೀನತೆ ಅಳವಡಿಸಲು ದಲೈಲಾಮ ಕರೆ

(ನಮ್ಮ ಪ್ರತಿನಿಧಿಯಿಂದ)

ಬೆಂಗಳೂರು, ಡಿ. 24– ಪ್ರಾಚೀನ ಭಾರತದ ಜ್ಞಾನವನ್ನು ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಅಳವಡಿಸಿಕೊಳ್ಳುವ ಅವಶ್ಯಕತೆ ಇದೆ ಎಂದು ನೋಬೆಲ್ ಪ್ರಶಸ್ತಿ ಪುರಸ್ಕೃತ ಮಹಾಗುರು ದಲೈಲಾಮ ತಿಳಿಸಿದರು.

ಅವರು ನಗರದ ತ್ರಿಪುರವಾಸಿನಿ ಅರಮನೆ ಮೈದಾನದಲ್ಲಿ ಶೇಷಾದ್ರಿಪುರಂ ಸಮೂಹ ವಿದ್ಯಾಸಂಸ್ಥೆಗಳ ಬೆಳ್ಳಿ ಮಹೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಪ್ರಾಚೀನ ಭಾರತದ ಜ್ಞಾನದಿಂದ ಗುರುಗಳಿಂದ ಸಾಕಷ್ಟು ಜ್ಞಾನವನ್ನು ಪಡೆದುಕೊಂಡಿದ್ದೇನೆ. ಪ್ರಾಚೀನ ಜ್ಞಾನ ಅದ್ಭುತವಾದದ್ದು ಎಂದ ಅವರು, ಮನಸ್ಸಿನಲ್ಲಿ ಉಂಟಾದ ಚಿಂತನೆಯ ಫಲಗಳೆ ತಾಂತ್ರಿಕತೆ ಅಭಿವೃದ್ಧಿಗೆ ಮೂಲ ಕಾರಣ. ಕಾರಣ ಅಂದಿನ ಜ್ಞಾನವನ್ನು ಇಂದಿನ ಶಿಕ್ಷಣ ಪದ್ಧತಿಯಲ್ಲಿ ಅಳವಡಿಸಬೇಕು ಎಂದರು.

ಪ್ರಸ್ತುತ ವಿಶ್ವದಲ್ಲಿ ಉಂಟಾಗಿರುವ ಅನೇಕ ಸಮಸ್ಯೆಗಳಿಗೆ ಅಹಿಂಸೆ, ಕರುಣೆ, ಜಾತ್ಯಾತೀತತೆ ಪರಿಹಾರವಾಗಬಲ್ಲದು. ದೈಹಿಕ ಸಾಮರ್ಥ್ಯ ಉತ್ತಮವಾಗಿದ್ದರೆ ಜ್ಞಾನದ ವೃದ್ಧಿಗೆ ಸಹಕಾರಿಯಾಗಲಿದೆ.



ಅರಮನೆ ಮೈದಾನದಲ್ಲಿರುವ ತ್ರಿಪುರವಾಸಿನಿಯಲ್ಲಿ ಇಂದು ಶೇಷಾದ್ರಿಪುರಂ ಶಿಕ್ಷಣದತ್ತಿ ಸಂಸ್ಥೆಯ ಬೆಳ್ಳಿ ಮಹೋತ್ಸವದ ಉಪನ್ಯಾಸ ಕಾರ್ಯಾಗಾರವನ್ನು ಟಿಬೇಟ್ ಧರ್ಮಗುರು ದಲೈಲಾಮಾ ಉದ್ಘಾಟಿಸಿದರು. ಇಸ್ರೋ ಅಧ್ಯಕ್ಷ ಎ.ಎಸ್ ಕಿರಣ್ ಕುಮಾರ್, ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ವೂಡೆ ಪಿ. ಕೃಷ್ಣ, ಅಧ್ಯಕ್ಷ ಎನ್.ಆರ್ ಪಂಡಿತಾರಾಧ್ಯ ಇದ್ದಾರೆ.

ನಮ್ಮಲ್ಲಿನ ಜ್ಞಾನವನ್ನು ಮತ್ತೊಬ್ಬರೊಂದಿಗೆ ಹಂಚಿಕೊಳ್ಳುವ ಮೂಲಕ ಜ್ಞಾನ ವಿಸ್ತರಿಸಲು ಪ್ರಯತ್ನಿಸಬೇಕು ಎಂದರು.

ವಿಶ್ವದಲ್ಲಿರುವ 7 ಬಿಲಿಯನ್ ಶತಕೋಟಿ ಜನದಲ್ಲಿ 1 ಶತಕೋಟಿ ನಾಸ್ತಿಕರು, 6 ಶತ–ಕೋಟಿ ಆಸ್ತಿಕರಿದ್ದಾರೆ ಹಾಗೂ ದೇವರ ಮೇಲೆ ನಂಬಿಕೆಯಿಟ್ಟಿದ್ದಾರೆ ಎಂದರು.

ದೇವರನ್ನು ನಂಬಿರುವ 6 ಶತಕೋಟಿ ಜನಗಳ ನಡುವೆ ಗೊಂದಲಗಳು ಸೃಷ್ಟಿಯಾಗಿವೆ. ಈ ಹಿನ್ನೆಲೆ ಗೊಂದಲಕ್ಕೊಳಗಾದವರಲ್ಲಿ ಧಾರ್ಮಿಕತೆ ಆಧರಿಸಿ ಉಪಟಳಗಳ ಸೃಷ್ಟಿಯಾಗುತ್ತಿವೆ. ಕಾರಣ, ವಿಶ್ವದಲ್ಲಿ ಏಕತೆ ಸೃಷ್ಟಿಯಾಗಬೇಕು ಎಂದರು.

ಪ್ರಸ್ತುತ ವಿಶ್ವದಲ್ಲಿ ಉಂಟಾಗಿರುವ ಎಲ್ಲಾ ಸಮಸ್ಯೆಗಳಿಗೂ ಪ್ರಾಚೀನ ಭಾರತದ ಜ್ಞಾನಗಳಲ್ಲಿ ಉತ್ತಮ ಪರಿಹಾರವಿದೆ. ಅಂದಿನ ಜ್ಞಾನದ ಪ್ರಕಾರ ಶಿಕ್ಷಣದಿಂದ ಆಂತರೀಕ ಬಲವರ್ಧನೆ ಸಾಧ್ಯ. ಕಳೆದ 200 ವರ್ಷಗಳಿಂದ ಆರಂಭವಾಗಿರುವ ಶಿಕ್ಷಣ ಬಲವರ್ಧನೆಗೊಳ್ಳಬೇಕಿದೆ ಎಂದರು.

ವಿದ್ಯಾರ್ಥಿಗಳು ತಮ್ಮ ಜ್ಞಾನದ ಅಭಿವೃದ್ಧಿಗಾಗಿ ಎಷ್ಟು ಸಾಧ್ಯವೋ ಅಷ್ಟು ಪ್ರಯತ್ನ ಹಾಗೂ ಬುದ್ಧಿಯನ್ನು ಬಳಸಿಕೊಳ್ಳಬೇಕು. ದುಶ್ಚಟಗಳಿಂದ ದೂರವಿರುವುದರೊಂದಿಗೆ ಶಿಕ್ಷಣದೆಡೆ ಮನಸ್ಸನ್ನು ಕೇಂದ್ರೀಕರಿಸುವುದು ಅತ್ಯಗತ್ಯ ಎಂದರು.

ಕಾರ್ಯಕ್ರಮದ ಅಂಗವಾಗಿ ದಲೈಲಾಮ, ಇಸ್ರೋ ಅಧ್ಯಕ್ಷ ಡಾ. ಕಿರಣ್‌ಕುಮಾರ್ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು.

ವೇದಿಕೆಯಲ್ಲಿ ಶಿಕ್ಷಣ ಸಂಸ್ಥೆಯ ಪ್ರಾಚಾರ್ಯರು, ಇನ್ನಿತರ ಗಣ್ಯರು ಉಪಸ್ಥಿತರಿದ್ದರು.

ಉದಯವಾಣಿ ಬೆಂಗಳೂರು
ಶನಿವಾರ, ಡಿಸೆಂಬರ್ 23, 2017

ನಾಳೆ ನಗರಕ್ಕೆ ಬೌದ್ಧ ಗುರು ದಲೈಲಾಮ

ಬೆಂಗಳೂರು: ಟಿಬಿಟಿಯನ್ ಮೂಲದ ಬೌದ್ಧ ಧರ್ಮಗುರು ದಲೈಲಾಮಾ ಭಾನುವಾರ ನಗರಕ್ಕೆ ಭೇಟಿ ನೀಡಲಿದ್ದಾರೆ. ಅಂದು ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಶೇಷಾದ್ರಿಪುರಂ ಸಮೂಹ ವಿದ್ಯಾಸಂಸ್ಥೆಗಳು ಹಮ್ಮಿಕೊಂಡಿರುವ ಬೆಳ್ಳಿಹಬ್ಬ ಮಹೋತ್ಸವದಲ್ಲಿ ಅವರು ಉಪನ್ಯಾಸ ನೀಡಲಿದ್ದಾರೆ. ಎಂದು ಶೇಷಾದ್ರಿಪುರಂ ವಿದ್ಯಾಸಂಸ್ಥೆಯ ಗೌರವ ಪ್ರದಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಬೆಳಗ್ಗೆ 9ಕ್ಕೆ ಸಮಾರಂಭ ಆರಂಭವಾಗಲಿದ್ದು ಬೆಂಗಳೂರು, ಚನ್ನೈ, ಮೈಸೂರು, ತುಮಕೂರು ಸೇರಿದಂತೆ ರಾಜ್ಯದ ವಿವಿಧ ಕಡೆಗಳಿಂದ ವಿದ್ಯಾಸಂಸ್ಥೆಯ ಪ್ರತಿನಿಧಿಗಳು ಮತ್ತು ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಇಸ್ರೋ ಅಧ್ಯಕ್ಷ ಎ. ಎಸ್.ಕಿರಣ್ ಕುಮಾರ್, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ತಿಳಿಸಿದರು.

ಕನ್ನಡಪ್ರಭ
ಶನಿವಾರ 23.12.2017

ನಾಳೆ ಶೇಷಾದ್ರಿಪುರಂ ಸಂಸ್ಥೆ ಬೆಳ್ಳಿ ಮಹೋತ್ಸವ

ಬೆಂಗಳೂರು: ಶೇಷಾದ್ರಿಪುರಂ ಸಮೂಹ ವಿದ್ಯಾಸಂಸ್ಥೆಗಳ ಬೆಳ್ಳಿ ಮಹೋತ್ಸವ ಸಮಾರಂಭ ಡಿ.24 ರಂದು ನಗರದ ಅರಮನೆ ಮೈದಾನದಲ್ಲಿರುವ ತ್ರಿಪುರ ವಾಸಿನಿಯಲ್ಲಿ ಜರುಗಲಿದೆ ಎಂದು ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9 ಗಂಟೆಗೆ ಜರುಗಲಿರುವ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದು, ಇಸ್ರೋ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್, ವಿದ್ಯಾಸಂಸ್ಥೆಯ ಅಧ್ಯಕ್ಷ ಎನ್. ಆರ್.ಪಂಡಿತಾರಾಧ್ಯ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ. ಇದೇ ಸಂದರ್ಭದಲ್ಲಿ ಟಿಬೆಟ್ ಧಾರ್ಮಿಕ ನಾಯಕ 14ನೇ ಮಹಾಗುರು ದಲೈಲಾಮಾ ಅವರು 'ರಾಷ್ಟ್ರ ನಿರ್ಮಾಣಕ್ಕಾಗಿ ಸಹಾನುಭೂತಿಗಳನ್ನು ಒಳಗೊಂಡ ಶಿಕ್ಷಣ' ಎಂಬ ವಿಷಯದ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದರು. ಈ ವೇಳೆ ದಲೈಲಾಮಾ ಅವರೊಂದಿಗೆ ವಿದ್ಯಾರ್ಥಿಗಳು ಪರಸ್ಪರ ಮಾಹಿತಿ ವಿನಿಮಯ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು. ಬೆಂಗಳೂರು, ಚೆನ್ನೈ, ಮೈಸೂರು, ಕೆಂಗೇರಿ, ತುಮಕೂರು, ಮಾಗಡಿ ಸೇರಿದಂತೆ ರಾಜ್ಯದ ವಿವಿಧೆಡೆ ಇರುವ ವಿದ್ಯಾಸಂಸ್ಥೆಗಳ 10 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಸಂಯುಕ್ತ ಕರ್ನಾಟಕ
ಶನಿವಾರ | 23 | ಡಿಸೆಂಬರ್ | 2017

ಬೆಳ್ಳಿ ಹಬ್ಬದ ಸಡಗರ

ಬೆಂಗಳೂರು: ಶೇಷಾದ್ರಿಪುರಂ ಸಮೂಹ ಸಂಸ್ಥೆಗಳ ಬೆಳ್ಳಿ ಮಹೋತ್ಸವ ಸಮಾರಂಭವನ್ನು ಡಿ.24 ರಂದು ನಗರದ ಅರಮನೆ ಮೈದಾನದಲ್ಲಿರುವ ತ್ರಿಪುರ ವಾಸಿನಿಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದು, ಇಸ್ರೋ ಅಧ್ಯಕ್ಷ ಎ.ಎಸ್. ಕಿರಣ್‌ಕುಮಾರ್, ವಿದ್ಯಾ ಸಂಸ್ಥೆಯ ಅಧ್ಯಕ್ಷ ಎನ್.ಆರ್.ಪಂಡಿತಾರಾಧ್ಯ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದ ಅವರು ಇದೇ ವೇಳೆ ಬೌದ್ಧ ಗುರು, ಟಿಬೆಟ್ ಧಾರ್ಮಿಕ ನಾಯಕ ದಲೈಲಾಮ ಭಾಷಣ ಮಾಡಲಿದ್ದಾರೆಂದು ಹೇಳಿದರು.

ಕರ್ನಾಟಕ
ಶನಿವಾರ,23 ಡಿಸೆಂಬರ್ 2017

ದಲೈಲಾಮ ನಗರಕ್ಕೆ ನಾಳೆ


ಬೆಂಗಳೂರು: ಶೇಷಾದ್ರಿಪುರಂ ಸಮೂಹ ಸಂಸ್ಥೆಗಳ ಬೆಳ್ಳಿ ಮಹೋತ್ಸವವು ಅರಮನೆ ಮೈದಾನದಲ್ಲಿರುವ ತ್ರಿಪುರ ವಾಸಿನಿಯಲ್ಲಿ ಡಿ.24 ರಂದು ನಡೆಯಲಿದ್ದು, ಬೌದ್ಧ ಗುರು, ಟಿಬೆಟ್ ಧಾರ್ಮಿಕ ನಾಯಕ ದಲೈಲಾಮ ಭಾಗವಹಿಸುವರು ಎಂದು ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು.

ಶನಿವಾರ 23 ಡಿಸೆಂಬರ್ 2017
23 DECEMBER 2017

ಶೇಷಾದ್ರಿಪುರಂ ಕಾಲೇಜು ಬೆಳ್ಳಿಹಬ್ಬ

ಬೆಂಗಳೂರು: ಯಲಹಂಕದ ಶ್ರೇಷಾದ್ರಿಪುರಂ ವಿದ್ಯಾಸಂಸ್ಥೆ ಭಾನುವಾರ (ಡಿ.24) ಬೆಳ್ಳಿಹಬ್ಬ ಆಚರಿಸಿಕೊಳ್ಳಲಿದೆ. ಬೆಳಗ್ಗೆ 9ಕ್ಕೆ ಬಳ್ಳಾರಿ ರಸ್ತೆಯ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಶೇಷಾದ್ರಿಪುರಂ ಶಿಕ್ಷಣ ದತ್ತಿ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಿ ಎಂ ಸಿದ್ದರಾಮಯ್ಯ, ಇಸ್ರೋ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ಭಾಗವಹಿಸಲಿದ್ದಾರೆ. ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಬೌದ್ಧರ 14ನೇ ಮಹಾಗುರು ದಲೈಲಾಮಾ ಬೆಳ್ಳಿ ಮಹೋತ್ಸವದ ಅಂಗವಾಗಿ ವಿಶೇಷ ಉಪನ್ಯಾಸ ನೀಡಲಿದ್ದಾರೆ ಎಂದು ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ತಿಳಿಸಿದ್ದಾರೆ.

'ಅಪರೂಪದ ನಾಟಕ ಪೌಲಸ್ತ್ಯನ ಪ್ರಣಯ'



ಮಲ್ಲತಹಳ್ಳಿಯ ಕಲಾಗ್ರಾಮದಲ್ಲಿ ಎಸ್.ವಿ.ಕೃಷ್ಣಶರ್ಮ ರಚನೆ, ನಿರ್ದೇಶನದ ಪೌಲಸ್ತ್ಯನ ಪ್ರಣಯ ಕಥೆ ನಾಟಕ ಪ್ರದರ್ಶನಗೊಂಡಿತು.

■ **ವಿಕ ಸುದ್ದಿಲೋಕ** ಕೆಂಗೇರಿ ಉಪನಗರ

ಪೌಲಸ್ತ್ಯನ ಪ್ರಣಯ ಕಥೆ ನಾಟಕವು ಅಪರೂಪದ ವಿಶೇಷ ಪರಿಕಲ್ಪನೆ ಮೂಡಿಸಿದೆ ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ.ಪಿ. ಕೃಷ್ಣ ಹೇಳಿದರು.

ಮಲ್ಲತಹಳ್ಳಿಯ ಕಲಾಗ್ರಾಮದಲ್ಲಿ ಲತಾ-ವಂಶಿ ಅವರ ಕಾದಂಬರಿಯಾಧರಿತ ನಾಟಕವನ್ನು ರಚಿಸಿ ನಿರ್ದೇಶಿಸಿ, ನಟ ಎಸ್.ವಿ.ಕೃಷ್ಣಶರ್ಮ ಅವರ ಸಂಧ್ಯಾ ಕಲಾವಿದರು ಅಭಿನಯಿಸಿದ ಪೌಲಸ್ತ್ಯನ ಪ್ರಣಯ ಕಥೆ ನಾಟಕ ಪ್ರದರ್ಶನದಲ್ಲಿ ಮಾತನಾಡಿದರು.

"ಖಳನಾಯಕನೆಂದು ಜನಜನಿತವಾದ ರಾವಣನ ಇನ್ನೊಂದು ಮಹಾನ್ ವ್ಯಕ್ತಿತ್ವದ ದರ್ಶನವನ್ನು ಮಾಡಿಸುವ ಮೂಲಕ ಈ ನಾಟಕವು ಹೊಸ ಆಯಾಮಗಳ ಮೇಲೆ ಬೆಳಕು ಚೆಲ್ಲಿದೆ. ಸ್ವಾರಸ್ಯಕರ ಸಂಭಾಷಣೆ ಪ್ರೇಕ್ಷನಿಗೆ ಹೊಸ ಅನುಭವ ನೀಡಿತು. ರಾವಣ ಪಾತ್ರಧಾರಿಯ ಹೃದಯಸ್ಪರ್ಶಿ ಅಭಿನಯ ಪರಿಣಾಮಕಾರಿ," ಎಂದರು.

ರಾಜ್ಯೋತ್ಸವ ಪ್ರಶಸ್ತಿ ವಿಜೇತ ಹಿರಿಯ ರಂಗಕರ್ಮಿ ಸಿ.ಗುಂಡಣ್ಣ ಮಾತನಾಡಿ, "ಪ್ರತಿಯೊಬ್ಬರ ನಟನೆಯು ಪ್ರಶಂಸಾರ್ಹವಾಗಿದೆ. ಪಾತ್ರಗಳ ಪೋಷಣೆ ಪ್ರಾಮುಖ್ಯತೆ ಪಡೆದಿದೆ," ಎಂದರು.

ಸಂಜೆ ವಾಣಿ
ಶುಕ್ರವಾರ 22 ಡಿಸೆಂಬರ್ 2017

ದಲೈಲಾಮಾ ಉಪನ್ಯಾಸ

ಬೆಂಗಳೂರು,ಡಿ.22–ಶೇಷಾದ್ರಿಪುರಂ ಸಮೂಹ ವಿದ್ಯಾಸಂಸ್ಥೆಗಳ 25ನೇ ವರ್ಷದ ಬೆಳ್ಳಿ ಮಹೋತ್ಸವದ ಅಂಗವಾಗಿ ನೊಬೆಲ್ ಶಾಂತಿ ಪ್ರಶಸ್ತಿ ವಿಜೇತ ಮಹಾಗುರು ದಲೈಲಾಮ ಆಧುನಿಕ ಶಿಕ್ಷಣ ಮತ್ತು ಬೆಳ್ಳಿ ಮಹೋತ್ಸವದ ಉಪನ್ಯಾಸ ನೀಡಲಿದ್ದಾರೆ.

ಡಿ. 24 ರಂದು ಅರಮನೆಯ ತ್ರಿಪುರ ವಾಸಿನಿ ಮೈದಾನದಲ್ಲಿ ಶೇಷಾದ್ರಿಪುರಂ ಸಮೂಹ ವಿದ್ಯಾಸಂಸ್ಥೆಗಳ ಬೆಳ್ಳಿಮಹೋತ್ಸವ ನಡೆಯಲಿದೆ ಎಂದು ವಿದ್ಯಾಸಂಸ್ಥೆಯ ಪ್ರಾಚಾರ್ಯ ಡಾ.ಎಸ್.ಎನ್. ವೆಂಕಟೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಟಿಬೆಟ್‌ನ ಧಾರ್ಮಿಕ ನಾಯಕರು ಹಾಗೂ 14ನೇ ಮಹಾಗುರುಗಳಾದ ದಲೈಲಾಮಾ ಆಧುನಿಕ ಶಿಕ್ಷಣಗಳ ಕುರಿತಂತೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಿದ್ದಾರೆ ಹಾಗೂ ರಾಷ್ಟ್ರ ನಿರ್ಮಾಣಕ್ಕಾಗಿ ಶಿಕ್ಷಣ ಮತ್ತು ಜ್ಞಾನ ಎಂಬ ವಿಷಯ ಕುರಿತು ಬೋಧನೆ ನೀಡಲಿದ್ದಾರೆ. ನಂತರ ವಿದ್ಯಾರ್ಥಿಗಳು ಅವರೊಂದಿಗೆ ಪರಸ್ಪರ ಮಾಹಿತಿ ವಿನಿಮಯ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದರು.

ಇನ್ನುಳಿದಂತೆ, ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಇಸ್ರೋ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್, ವಿದ್ಯಾಸಂಸ್ಥೆಯ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಕಾರ್ಯದರ್ಶಿ ಡಾ. ವೂಡೆ ಪಿ. ಕೃಷ್ಣ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಈ ಬೆಳ್ಳಿ ಮಹೋತ್ಸವಕ್ಕೆ ಬೆಂಗಳೂರು ಸೇರಿದಂತೆ, ಚೆನ್ನೈ, ಮೈಸೂರು, ಕೆಂಗೇರಿ, ತುಮಕೂರು, ಮಾಗಡಿ ಸೇರಿದಂತೆ, ರಾಜ್ಯದ ವಿವಿಧೆಡೆ ಇರುವ ವಿದ್ಯಾಸಂಸ್ಥೆಯ ಪ್ರತಿನಿಧಿಗಳು, ವಿದ್ಯಾರ್ಥಿಗಳು, ದೇಶ – ವಿದೇಶಗಳ ಪ್ರಮುಖ ಗಣ್ಯರುಗಳು ಆಗಮಿಸಲಿದ್ದಾರೆ ಎಂದು ತಿಳಿಸಿದರು.

ವೇದಿಕೆಯಲ್ಲಿ ಸಂಸ್ಥೆ ಸಂಚಾಲಕ ಸಂತಾನೂದಾಸ್, ಇತರರು ಉಪಸ್ಥಿತರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಗುರುವಾರ 21 ಡಿಸೆಂಬರ್ 2017
VIJAYAVANI »21 DECEMBER 2017

ಸ್ವಸ್ಥ ಸಮಾಜಕ್ಕೆ ಕ್ರೀಡೆಗಳು ಸಹಕಾರಿ

ಶೇಷಾದ್ರಿಪುರಂ ಶಾಲೆ ಬೆಳ್ಳಿಹಬ್ಬದ ಕ್ರೀಡಾಕೂಟಕ್ಕೆ ಅದ್ದೂರಿ ಚಾಲನೆ

ವಿಜಯವಾಣಿ ಸುದ್ದಿಜಾಲ ಯಲಹಂಕ

ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ಮಕ್ಕಳಲ್ಲಿ ಆತ್ಮಸ್ಥೈರ್ಯ ಹೆಚ್ಚಾಗುತ್ತದೆ ಎಂದು ಇಂಡಿಯನ್ ಪ್ಯಾರಾಲಿಂಪಿಕ್ ಈಜುಪಟು ಶರತ್ ಎಂ. ಗಾಯಕ್ವಾಡ್ ತಿಳಿಸಿದ್ದಾರೆ.

ಯಲಹಂಕ ಶೇಷಾದ್ರಿಪುರ ಶಿಕ್ಷಣ ದತ್ತಿಯ ರಜತೋತ್ಸವ ಕಾರ್ಯಕ್ರಮದಲ್ಲಿ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು.

ಪ್ಯಾರಾಲಿಂಪಿಕ್ ಪಟು ಶರತ್ ಗಾಯಕ್ವಾಡ್ ಹೇಳಿಕೆ

ಸ್ವಸ್ಥ ಮತ್ತು ಶಿಸ್ತುಬದ್ಧ ಸಮಾಜ ನಿರ್ಮಾಣಕ್ಕೆ ಶಿಕ್ಷಣದೊಂದಿಗೆ ಕ್ರೀಡಾ ಚಟುವಟಿಕೆಗಳು ಪೂರಕವಾಗಿವೆ. ಈ ನಿಟ್ಟಿನಲ್ಲಿ ಶಿಕ್ಷಕರು ಹಾಗೂ ಪಾಲಕರು ಒತ್ತು ನೀಡಬೇಕು ಎಂದು ಮನವಿ ಮಾಡಿದರು. ವಿದ್ಯಾರ್ಥಿಗಳು ಶಿಕ್ಷಕರ ಮಾರ್ಗದರ್ಶನದಲ್ಲಿ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು.

ನಮ್ಮ ಶಿಕ್ಷಣ ಸಂಸ್ಥೆ ಉನ್ನತಮಟ್ಟಕ್ಕೆ ತಲುಪಿರುವುದಕ್ಕೆ ಶಿಕ್ಷಕವರ್ಗ ಮತ್ತು ಹಿಂದಿನ ಮುಖ್ಯ ಶಿಕ್ಷಕಿಯರಾದ ಶ್ಯಾಮಲಾ ನಾರಾಯಣ್, ಹೇಮಾವತಿ ಪರಿಶ್ರಮವಿದೆ ಎಂದು ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ತಿಳಿಸಿದರು. ಸಂಸ್ಥೆ ಟ್ರಸ್ಟಿ ಅಶೋಕ್ ಕೃಷ್ಣಸ್ವಾಮಿ, ಪ್ರಾಂಶುಪಾಲೆ ಕೆ. ಕವಿತಾ, ಮೇರಿ ಥಾಮಸ್, ಶೇಷಾದ್ರಿಪುರಂ ಕಾಲೇಜು ಪ್ರಾಂಶುಪಾಲ ದೊಡ್ಡೇಗೌಡ, ಸಿ.ರಾಜಣ್ಣ ಮತ್ತಿತರರಿದ್ದರು. ಮನರಂಜನಾ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ವಿಜೇತರಿಗೆ ಬಹುಮಾನ ವಿತರಿಸಲಾಯಿತು.



ಕ್ರೀಡಾಕೂಟವನ್ನು ಇಂಡಿಯನ್ ಪ್ಯಾರಾಲಿಂಪಿಕ್ ಈಜುಪಟು ಶರತ್ ಎಂ. ಗಾಯಕ್ವಾಡ್ ಉದ್ಘಾಟಿಸಿದರು. ಡಾ. ವೂಡೇ ಪಿ. ಕೃಷ್ಣ ಮತ್ತಿತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ

ಮಂಗಳವಾರ 19 ಡಿಸೆಂಬರ್ 2017

VIJAYAVANI 19 DECEMBER 2017

ಯಲಹಂಕದ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಬೆಳ್ಳಿಹಬ್ಬ

ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ » ಎಸ್ಸೆಸ್ಸೆಲ್ಸಿಯಲ್ಲಿ ಪ್ರತಿವರ್ಷ ಉತ್ತಮ ಫಲಿತಾಂಶ

ವಿಜಯವಾಣಿ ಸುದ್ದಿಜಾಲ ಯಲಹಂಕ

'ಜ್ಞಾನವೇಶಕ್ತಿ' (knowledge is power) ಎಂಬ ಧ್ಯೇಯವಾಕ್ಯದೊಂದಿಗೆ ವಿದ್ಯೆಯನ್ನು ಜ್ಞಾನವನ್ನಾಗಿ ಪರಿವರ್ತಿಸುವ ಉದ್ದೇಶವಿಟ್ಟುಕೊಂಡು 40ರ ದಶಕದಲ್ಲೇ ಅತ್ಯುತ್ಸಾಹಿ ಶಿಕ್ಷಣ ತಜ್ಞೆಯರಾದ ಆನಂದಮ್ಮ ಮತ್ತು ಸೀತಮ್ಮ ಎಂಬುವವರು ಶೇಷಾದ್ರಿಪುರದ ಸಣ್ಣ ಕೊಠಡಿಯಲ್ಲಿ 20 ಮಕ್ಕಳೊಂದಿಗೆ ಪ್ರಾರಂಭಿಸಿದ ಶಾಲೆ ಇಂದು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾಗಿ ಬೆಳೆದಿದೆ. ಈ ಸಂಸ್ಥೆ 1980ರಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಂಸ್ಥೆಯಾಗಿ ಬದಲಾಯಿತು. ಯಲಹಂಕ ಉಪನಗರದಲ್ಲಿ 1992-93ರಲ್ಲಿ ಇದೇ ಸಂಸ್ಥೆಯಿಂದ ಆರಂಭಗೊಂಡ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಇದೀಗ ರಜತೋತ್ಸವದ ಸಂಭ್ರಮದಲ್ಲಿವೆ.

ಯಲಹಂಕ ಉಪನಗರದಲ್ಲಿ ಸಣ್ಣ ಮನೆಯೊಂದರಲ್ಲಿ ಸದರಿ ಶಾಲೆ ಕಾರ್ಯಾರಂಭ ಮಾಡಿತು. ಅಂದಿನ ವಾತಾವರಣದಲ್ಲಿ ಶಿಕ್ಷಣಕ್ಕಾಗಿ ಹಂಬಲಿಸುತ್ತಿದ್ದ ಯಲಹಂಕದ ಸುತ್ತಮುತ್ತಲಿನ ಕೆಳವರ್ಗ ಹಾಗೂ ಮಧ್ಯಮ ವರ್ಗದವರಿಗೆ ಅವರ ಆದಾಯಕ್ಕೆ ಎಟುಕುವಂತೆ ವಿದ್ಯಾಭ್ಯಾಸ ನೀಡುವ ಉದ್ದೇಶದಿಂದ ಶಾಲೆ ಆರಂಭಿಸಲಾಯಿತು. ಆರಂಭದ ವರ್ಷದಲ್ಲಿ ಪ್ರಾಥಮಿಕ ಹಂತದಲ್ಲಿ 180 ವಿದ್ಯಾರ್ಥಿಗಳು, ಪ್ರೌಢಹಂತದಲ್ಲಿ 130 ವಿದ್ಯಾರ್ಥಿಗಳಿದ್ದ ಸಂಸ್ಥೆ ಇಂದು ಮಹಾನ್ ವೃಕ್ಷವಾಗಿ 1,800 ವಿದ್ಯಾರ್ಥಿಗಳಿಗೆ ಶಿಕ್ಷಣ ಒದಗಿಸುತ್ತಿದೆ.

ಸಂಸ್ಥೆಯು ಎಸ್ಸೆಸ್ಸೆಲ್ಸಿ ಪರೀಕ್ಷೆಗಳಲ್ಲಿ ನೂರಕ್ಕೆ ನೂರು ಫಲಿತಾಂಶ ಪಡೆಯುವಲ್ಲಿ ಯಶಸ್ವಿಯಾಗಿದೆ. ಅನುಭವಿ ಶಿಕ್ಷಕರು ನೀಡುತ್ತಿರುವ ಗುಣಮಟ್ಟದ ಬೋಧನೆಯಿಂದ ವಿದ್ಯಾರ್ಥಿಗಳು ಉನ್ನತ ಸಾಧನೆ ಮಾಡುತ್ತಿದ್ದಾರೆ. ಇಲ್ಲಿ ಮೂಲ ಶಿಕ್ಷಣವನ್ನು ಪಡೆದು ಪ್ರತಿಷ್ಠಿತ ಕಾಲೇಜುಗಳಲ್ಲಿ ಉನ್ನತ ಶಿಕ್ಷಣ ಮುಂದುವರಿಸಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.



ಸಾಂಸ್ಕೃತಿಕ ಚಟುವಟಿಕೆಗಳು: ಶಿಕ್ಷಣ ಸಂಸ್ಥೆಯಲ್ಲಿ ಪ್ರತಿವರ್ಷವೂ ವಿಶ್ವಪರಿಸರ ದಿನ, ಸ್ವಾತಂತ್ರ್ಯ ದಿನಾಚರಣೆ, ಶಿಕ್ಷಕರ ದಿನಾಚರಣೆ, ಕನ್ನಡ ರಾಜ್ಯೋತ್ಸವ, ಗಾಂಧಿಜಯಂತಿ ಮತ್ತು ಗಣರಾಜ್ಯೋತ್ಸವ ಸಮಾರಂಭಗಳನ್ನು ಏರ್ಪಡಿಸುತ್ತದೆ. ಕ್ರೀಡಾಕೂಟ, ಮನರಂಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ.

> ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ 1934ರಲ್ಲೇ ಇಬ್ಬರು ಮಹಿಳೆಯರಿಂದ ಪ್ರಾರಂಭವಾದ ಶಾಲೆ ಇಂದು ಬೃಹದಾಕಾರವಾಗಿ ಬೆಳೆದು ರಾಜ್ಯದಲ್ಲೇ ಒಂದು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾಗಿದೆ. ಯಲಹಂಕದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ರಜತೋತ್ಸವ ಆಚರಿಸಿಕೊಳ್ಳುತ್ತಿರುವುದು ಹೆಮ್ಮೆಯ ವಿಷಯ. ಈ ಶಾಲೆಯಲ್ಲಿ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವುದು ವಿಶೇಷ.
>
> | ಡಾ. ವೂಡೇ ಪಿ. ಕೃಷ್ಣ ಸಂಸ್ಥೆ ಗೌರವ ಪ್ರಧಾನ ಕಾರ್ಯದರ್ಶಿ

ರಜತೋತ್ಸವ ಸಂಭ್ರಮ ನಾಳೆ

ರಜತೋತ್ಸವ ಸಮಾರಂಭವನ್ನು ಬುಧವಾರ (ಡಿ.20) ಏರ್ಪಡಿಸಲಾಗಿದೆ. ಇಲ್ಲಿನ ಹೊಯ್ಸಳ ಕ್ರೀಡಾಂಗಣದಲ್ಲಿ ಬೆಳಗ್ಗೆ 10.30ಕ್ಕೆ ಅಂತಾರಾಷ್ಟ್ರೀಯ ಪ್ಯಾರಾ ಒಲಿಂಪಿಕ್ ಈಜುಪಟು ಶರತ್ ಎಂ. ಗಾಯಕ್‌ವಾಡ್ ಕಾರ್ಯಕ್ರಮ ಉದ್ಘಾಟಿಸುವರು. ಟ್ರಸ್ಟ್‌ನ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ. ಕೃಷ್ಣ ಪಾಲ್ಗೊಳ್ಳುವರು. ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶನವಿರಲಿದೆ.

ಸಂಯುಕ್ತ ಕರ್ನಾಟಕ
ಶನಿವಾರ, 16, ಡಿಸೆಂಬರ್, 2017



ಕಸಾಪದಲ್ಲಿ ಜರುಗಿದ ಸಮಾರಂಭದಲ್ಲಿ ಲೇಖಕ ಡಿ.ಎಸ್. ಲಿಂಗರಾಜು ಅವರ ಐದು ಪುಸ್ತಕಗಳನ್ನು ಗಾಂಧಿ ನಿಧಿ ಅಧ್ಯಕ್ಷ ಡಾ. ವೂಡೆ ಪಿ ಕೃಷ್ಣ ಬಿಡುಗಡೆಗೊಳಿಸಿದರು. ಸಾಹಿತಿ ಡಾ.ಬೈರಮಂಗಲ ರಾಮೇಗೌಡ, ಲೇಖಕ ಲಿಂಗರಾಜು ಮತ್ತಿತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಸೋಮವಾರ
11 ಡಿಸೆಂಬರ್ 2017
11 DECEMBER 2017

ಶ್ರೀಕೃಷ್ಣನ ನಾಡಿಂದ ಅಭಿವೃದ್ಧಿ

ಚಿಂತಕ ನಾರಾಯಣಾಚಾರ್ಯ ಅಭಿಮತ । ದೇಶಕ್ಕೆ ಒಳ್ಳೇ ಕಾಲ ಸನಿಹ



ಆರ್.ವಿ. ಡೆಂಟಲ್ ಕಾಲೇಜಿನಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕೃ. ನರಹರಿ ಅವರನ್ನು ಸನ್ಮಾನಿಸಲಾಯಿತು. ಡಾ. ಕೆ.ಎಸ್. ನಾರಾಯಣಾಚಾರ್ಯ ಮತ್ತಿತರರಿದ್ದರು.

ರಾಮ ಮಂದಿರ ನಿರ್ಮಾಣ ಹತ್ತಿರ

ದೇಶದಲ್ಲಿ ಬಾಬರ್, ಖಿಲ್ಜಿ, ತುಘಲಕ್ ವಂಶ ಪರಂಪರೆ ಬೆಳೆಯುತ್ತಿದೆ ಎಂದು ನಾರಾಯಣಾಚಾರ್ಯ ಆತಂಕ ವ್ಯಕ್ತಪಡಿಸಿದರು. ಈ ದೇಶದಲ್ಲೇ ಹುಟ್ಟಿದ ಕೆಲವರು ಪಾಕ್ ಪರ ಮಾತನಾಡುತ್ತಾರೆ. ಪಾಕ್ ಸಹಾಯ ಪಡೆದು ದೇಶದ ಪ್ರಧಾನಿ ಕೊಲ್ಲಲು ಸಂಚು ರೂಪಿಸುತ್ತಾರೆ. ರಾಮ, ಕೃಷ್ಣರು ಹುಟ್ಟಿರುವ ನಾಡಲ್ಲಿ ಈ ರೀತಿ ಮಾಡಬಹುದೇ ಎಂದು ಪ್ರಶ್ನಿಸಿದರು.

ಇತಿಹಾಸ ತಿರುಚುವವರು ದ್ರೋಹಿಗಳು

ಜೆಎನ್‌ಯುನಿಂದ ಐಐಟಿವರೆಗೂ ಇತಿಹಾಸ ತಿರುಚುವ ಕೆಲಸವಾಗುತ್ತಿದೆ. ಇತಿಹಾಸ ತಿರುಚುವವರು ರಾಷ್ಟ್ರದ್ರೋಹಿಗಳು. ಭೂತದಿಂದ ಭವಿಷ್ಯಕ್ಕೆ ಸಾಗುವುದು ಇತಿಹಾಸವಲ್ಲ. ಭವಿಷ್ಯದಿಂದ ಭೂತಕ್ಕೆ ಹೋಗುವುದು ಇತಿಹಾಸ. ಇವೆಲ್ಲದಕ್ಕೂ ಅಂತ್ಯ ಹಾಡುವ ಕಾಲ ಸಮೀಪಿಸುತ್ತಿದೆ. ಯೋಗ, ಆಯುರ್ವೇದ, ಜ್ಯೋತಿಷ್ಯವೆಂದರೆ ಮೂಗು ಮುರಿಯುವವರು ತಕ್ಕ ಪಾಠ ಕಲಿಯುತ್ತಾರೆ ಎಂದು ನಾರಾಯಣಾಚಾರ್ಯ ಕುಟುಕಿದರು.

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಮಥುರೆಯಲ್ಲಿ ಜನಿಸಿ, ಗೋಕುಲ ಬೃಂದಾವನದಲ್ಲಿ ಬೆಳೆದ ಶ್ರೀಕೃಷ್ಣ ದ್ವಾರಕೆಗೆ ಬಂದು ನೆಲೆಸುತ್ತಾನೆ. ಆ ದ್ವಾರಕೆ ಇರುವ ಗುಜರಾತ್‌ನಿಂದಲೇ ಭಾರತದ ಉದ್ಧಾರ ಸಾಧ್ಯ ಎಂದು ಚಿಂತಕ, ವಿಜಯವಾಣಿ ಅಂಕಣಕಾರ ಡಾ. ಕೆ.ಎಸ್. ನಾರಾಯಣಾಚಾರ್ಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪ್ರೊ. ಕೃ. ನರಹರಿ ಅಭಿನಂದನಾ ಸಮಿತಿ ಭಾನುವಾರ ಆರ್.ವಿ. ಡೆಂಟಲ್ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಿಧಾನಪರಿಷತ್ತಿನ ಮಾಜಿ ಸದಸ್ಯ ಕೃ. ನರಹರಿ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

ಸೋದರಿಕೆ ನೆಪದಲ್ಲಿ ಘಟಾನುಘಟಿಗಳೆಲ್ಲ ಕೌರವರ ಜತೆ ಸೇರಿದರೂ, ಶಕುನಿ ಎಷ್ಟೇ ಕುತಂತ್ರ ರೂಪಿಸಿದರೂ, ಕೃಷ್ಣ ಮಾತ್ರ ಪಾಂಡವರ ಜತೆಗಿದ್ದು ಧರ್ಮ ಸಂಸ್ಥಾಪಿಸಿದ. ಇದೀಗ ಅದೇ ಕೃಷ್ಣ ನೆಲೆಸಿದ್ದ ದ್ವಾರಕೆಯಿರುವ ಗುಜರಾತ್‌ನಲ್ಲಿ ಜನಿಸಿದವರಿಂದಲೇ ದೇಶದ ಅಭಿವೃದ್ಧಿ ಸಾಧ್ಯ. ಅಂದಿನ ಪಗಡೆ ದಾಳ ಇಂದಿನ ಚುನಾವಣೆಯಾಗಿದೆ. ಏಳು ದಶಕಗಳಿಂದ ದೇಶವನ್ನು ಹಾಳು ಮಾಡಿದ ರಾಜಕೀಯ ಪಕ್ಷವೊಂದು ಮತ್ತೆ ತಲೆ ಎತ್ತಲು ವೈಶಂಪಾಯನ ಸರೋವರದ ಬಳಿ ಕಾದು ನಿಂತಿದೆ. ಆದರೆ ಅಲ್ಲೇ ಭೀಮನೊಬ್ಬ ಗದೆ ಹಿಡಿದು ನಿಂತಿದ್ದಾನೆ ಎಂದು ಯಾವುದೇ ಪಕ್ಷದ ಹೆಸರು ಹಾಗೂ ವ್ಯಕ್ತಿ ಹೆಸರು ಉಲ್ಲೇಖಿಸದೇ ಮಾರ್ಮಿಕವಾಗಿ ನುಡಿದರು.

> ಸುಭಾಷ್‌ಚಂದ್ರ ಬೋಸ್, ಅಂಬೇಡ್ಕರ್, ವೀರ ಸಾವರ್ಕರ್, ಜಯಪ್ರಕಾಶ್ ನಾರಾಯಣ ಅವರಂಥವರಿದ್ದರೂ ಸಂಸ್ಕೃತಿಗೆ ವಿರೋಧವಾಗಿದ್ದವರನ್ನು ದೇಶದ ಮೊದಲ ಪ್ರಧಾನಿಯನ್ನಾಗಿ ಮಾಡಿದ್ದು ರಾಷ್ಟ್ರಪಿತ ಎನ್ನಿಸಿಕೊಂಡವರು ಮಾಡಿದ ಮೊದಲನೇ ತಪ್ಪು. ನೆಹರು ಪ್ರಧಾನಿಯಾಗದಿದ್ದರೆ ನಮ್ಮ ದೇಶ ಈ ಸ್ಥಿತಿಯಲ್ಲಿ ಇರುತ್ತಿರಲಿಲ್ಲ.
>
> ನಾರಾಯಣಾಚಾರ್ಯ, ಚಿಂತಕ

ದೇಶದ ಅಭಿವೃದ್ಧಿಗೆ ರಾಷ್ಟ್ರಭಕ್ತಿ ಅಗತ್ಯ. ಭಾರತಮಾತೆ ಎಂದರೆ ಕಲ್ಪನೆಯಲ್ಲ. ರಾಷ್ಟ್ರಧ್ವಜ ಎಂದರೆ ತುಂಡು ಬಟ್ಟೆಯಲ್ಲ. ಯಾವುದೇ ಒಂದು ತಪ್ಪುಗಳಾದಾಗ ತಿದ್ದಿಕೊಳ್ಳಲು ಒಳ್ಳೆಯ ಮಾರ್ಗದಲ್ಲಿ ತಿಳಿ ಹೇಳಬೇಕು. ಕೇಳದಿದ್ದಾಗ ಮಾತ್ರ ಅದನ್ನು ಹೇಳುವ ರೀತಿ ಹೇಳಬೇಕು. ಹಿಂದುತ್ವ ಎಂದರೆ ಕೊಲ್ಲುವುದಲ್ಲ, ಬದುಕಿಸುವುದು. ಅದನ್ನು ಮೃದು ಹಿಂದುತ್ವ ಎಂದು ಹೇಳಲು ಸಾಧ್ಯವಿಲ್ಲ ಎಂದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಪ್ರೊ.ಕೃ. ನರಹರಿ, ವ್ಯಕ್ತಿ ಗೌಣ ಮತ್ತು ವ್ಯಕ್ತಿತ್ವ ಶಾಶ್ವತ. ದೇಶದ ಪ್ರತಿಯೊಬ್ಬ ನಾಗರಿಕನೂ ಉನ್ನತಿಯ ಕನಸು ಕಾಣಬೇಕು. ವಿಚಲಿತನಾಗದೆ ಗುರಿಯೆಡೆಗೆ ಹೆಜ್ಜೆ ಇಡಬೇಕು. ನಾವು ಇಡುವ ಪ್ರತಿ ಹೆಜ್ಜೆಯೂ ನಮ್ಮ ಧ್ಯೇಯಕ್ಕೆ ಪೂರಕವಾಗಿದ್ದರೆ ಮಾತ್ರ ಉನ್ನತೀಕರಣ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಇಂದಿನ ರಾಜಕಾರಣಿಗಳಿಗೆ ಹಾಗೂ ಶಿಕ್ಷಕರಿಗೆ ನರಹರಿ ಪ್ರೇರಣೆಯಾಗಿದ್ದಾರೆ. ವೃತ್ತಿಯಲ್ಲಿ ಅಧ್ಯಾಪಕರಾಗಿದ್ದರೂ, ರಾಷ್ಟ್ರೀಯ ಸ್ವಯಂ ಸೇವಕ ಸಂಘದಲ್ಲಿ ಅವರು ಮಾಡಿದ ಕೆಲಸ ಯುವಕರಿಗೆ ಸ್ಫೂರ್ತಿ. ಅವರ ಮಾರ್ಗದರ್ಶನದಲ್ಲಿ ಬೆಳೆದ ಎಷ್ಟೋ ವಿದ್ಯಾರ್ಥಿಗಳು ಸೇವಾ ಮನೋಭಾವ ಬೆಳೆಸಿಕೊಂಡು ಉತ್ತಮ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ಓಇಎಸ್ ವಿವಿ ಕುಲಾಧಿಪತಿ ಡಾ. ದೊರೆಸ್ವಾಮಿ ಹೇಳಿದರು.

ಪ್ರೊ. ಕೃ. ನರಹರಿ ಅವರ ಅಭಿನಂದನಾ ಗ್ರಂಥವನ್ನು ಲೋಕಾರ್ಪಣೆಗೊಳಿಸಲಾಯಿತು. ಬೆಂಗಳೂರು ವಿವಿ ವಿಶ್ರಾಂತ ಉಪಕುಲಪತಿ ಡಾ. ಎನ್.ಆರ್. ಶೆಟ್ಟಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದಕ್ಷಿಣ ಕ್ಷೇತ್ರೀಯ ಸಂಘ ಚಾಲಕ - ವಿ. ನಾಗರಾಜ, ಶೇಷಾದ್ರಿಪುರಂ ದತ್ತಿಶಿಕ್ಷಣ ಸಂಸ್ಥೆಗಳ ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಹೊಸ ದಿಗಂತ

ಶನಿವಾರ
2 ಡಿಸೆಂಬರ್ 201

100 ಗಾಯಕಿಯರ ಕನ್ನಡ ಗೀತೆಗಳ ಸಮೂಹ ಗಾಯನ

ಅಬ್ಬರಕ್ಕಿಂತ ಚಿಂತನೆ ಮೂಡಿಸುವ ಕಲೆಗಳು ಇರಲಿ

ದಿಗಂತ ಚಿತ್ರ



ನೆಲಮಂಗಲ ಪಟ್ಟಣದ ಬಸವಣ್ಣದೇವರ ಮಠದಲ್ಲಿ ಬಂಡ್ಲಹಳ್ಳಿ ವಿಜಯಕುಮಾರ್ ಸಂಯೋಜನೆಯಲ್ಲಿ ಆಯೋಜಿಸಲಾಗಿದ್ದ ಗೀತಯಾನ-2017 ಕಾರ್ಯಕ್ರಮದಲ್ಲಿ ನೂರ ಗಾಯಕಿಯರು ಗೀತಗಾಯನದಲ್ಲಿ ಭಾಗವಹಿಸಿದ್ದರು.

ದಿಗಂತ ವರದಿ: ನೆಲಮಂಗಲ, ಡಿ.1

ಸಿನಿಮಾಗಳ ಅಬ್ಬರಕ್ಕೆ ಜಾನಪದ ಕಲೆಗಳು ನಶಿಸಿಹೊಗುವ ಸನ್ನಿವೇಶದಲ್ಲಿ ಇಂದಿನ ಯುವ ಜನಾಂಗಕ್ಕೆ ತರಬೇತಿ ನೀಡಿ 100 ಗಾಯಕಿಯರ ಸಮೂಹ ಗಾಯನದ ಪ್ರಯೋಗಾತ್ಮಕ ಕಾರ್ಯಕ್ರಮ ಇಂದಿನ ಸಮಾಜಕ್ಕೆ ಸ್ವಾಗತಾರ್ಹ ಎಂದು ಹಾಸ್ಯ ನಟ ಮೈಸೂರು ರಮಾನಂದ್ ತಿಳಿಸಿದರು.

ಪಟ್ಟಣದ ಬಸವಣ್ಣದೇವರ ಮಠದಲ್ಲಿ ಬಂಡ್ಲಹಳ್ಳಿ ವಿಜಯಕುಮಾರ್ ಸಂಯೋಜನೆಯಲ್ಲಿ ಆಯೋಜಿಸಲಾಗಿದ್ದ ಗೀತಯಾನ-2017 ಕನ್ನಡ ಗೀತೆಗಳ ಸಮೂಹ ಗಾಯನ ಕಾರ್ಯಕ್ರಮದಲ್ಲಿ ಮಾತನಾಡಿ, ದೇಶದಲ್ಲಿ ಭಾರತೀಯ ಸಂಸ್ಕೃತಿಯ ಅನೇಕ ಜಾನಪದ ಕಲೆಗಳು ಅಳಿವಿನ ಅಂಚಿನಲ್ಲಿವೆ. ಕೆಲವು ಕಣ್ಮರೆಯಾಗಿವೆ, ಇದಕ್ಕೆ ಮೂಲ ಕಾರಣವೇ ಸಿನಿಮಾಗಳು. ಹಿಂದೆ ನಾಟಕಗಳು, ಜಾನಪದ ಕಲೆಗಳಲ್ಲಿ ಮನೋರಂಜನೆ ಹಾಗೂ ಚಿಂತನೆ ಮಾಡುವ ವಿಷಯಗಳು ಕಂಡು ಬರುತ್ತಿತ್ತು. ಆದರೆ ಇಂದು ಜನರಿಗೆ ಮನೋರಂಜನೆ ಜೊತೆಗೆ ಅರಿವು ನೀಡಬೇಕಾದ ಸಿನಿಮಾಗಳು, ಯುವ ಜನಾಂಗವನ್ನು ದಾರಿ ತಪ್ಪಿಸುವಂತಹ ಕೆಲಸ ಮಾಡುತ್ತಿವೆ, ಇನ್ಮುಂದೆಯಾದರು ಚಿಂತನೆಗಳು ನಮ್ಮಲ್ಲಿ ಮೂಡಲು ನಾಟಕ , ಗೀತಗಾಯನಗಳು ಹೆಚ್ಚು ಹೆಚ್ಚು ನಡೆಯಬೇಕು ಎಂದರು.

ಶಿಕ್ಷಣ ತಜ್ಞ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ನಮ್ಮ ಜೀವನದಲ್ಲಿ ಸಕಾರಾತ್ಮಾಕ ಭಾವನೆಗಳು ವೃದ್ಧಿಯಾಗಲು ಜಾನಪದ ಗೀತೆಗಳು ಸಹಕಾರಿ ಯಾಗಿದೆ. ಅನಾದಿಕಾಲದಿಂದಲು ನಡೆದು ಬಂದ ಪುರಾತನಾ ಕಲೆಯೇ ಜಾನಪದ, ನದಿಯ ಮೂಲವನ್ನು ತಿಳಿಯಲು ಹೇಗೆ ಸಾಧ್ಯವಿಲ್ಲವೋ, ಹಾಗೇ ಜಾನಪದದ ಮೂಲವು ತಿಳಿಯಲಾಗುವುದಿಲ್ಲ, ಜಾನಪದದಲ್ಲಿ ಭಾರತೀಯ ಸಂಸ್ಕೃತಿಯ ಕಣಜವೇ ಅಡಗಿದೆ ಅದನ್ನು ಜನರು ತಿಳಿಯಬೇಕಾಗಿದೆ ಎಂದರು. ಬಂಡ್ಲಹಳ್ಳಿ ವಿಜಯಕುಮಾರ್ ಮಾತನಾಡಿ, ನೆಲಮಂಗಲ ತಾಲೂಕಿನಲ್ಲಿ ನವೆಂಬರ್ 21ರಿಂದ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಕೊನೆ ಕಾರ್ಯಕ್ರಮದಲ್ಲಿ ಕನ್ನಡ ಗೀತೆಗಳ ಸಮೂಹ ಗಾಯನ ನಡೆಸಲಾಗಿದೆ ಎಂದರು.

ಸಂದರ್ಭದಲ್ಲಿ ಪವಾಡ ಬಸವಣ್ಣದೇವರ ಮಠದ ಪೀಠಾಧ್ಯಕ್ಷರು ಶ್ರೀ ಸಿದ್ಧಲಿಂಗ ಮಹಾ ಸ್ವಾಮೀಜಿ, ಹರ್ಷ ಪದವಿ ಪೂರ್ವಕಾಲೇಜಿನ ಪ್ರಾಂಶುಪಾಲ ಎಂ.ವಿ ನೆಗಳೂರು, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಾಸನ್ ರಘು, ಕರ್ನಾಟಕ ನಾಟಕ ಅಕಾಡೆಮಿಯ ವೆಂಕಟರಾಜು, ಬಸವೇಶ್ವರ ಪಿಯು ಕಾಲೇಜಿನ ಪ್ರಾಂಶುಪಾಲ ಮಹದೇವಯ್ಯ, ಹೊಯ್ಸಳ ಪಿಯು ಕಾಲೇಜಿನ ಪ್ರಾಧ್ಯಾಪಕ ಜಾಲಪ್ಪ ಮತ್ತು ಲಯನ್ ವೆಂಕಟಗಿರಿ ಮತ್ತಿತರರಿದ್ದರು.

100 ಗಾಯಕಿಯರಿಂದ ಗಾಯನ

ತಾಲೂಕಿನಲ್ಲಿ ನವೆಂಬರ್ 21ರಿಂದ ಪ್ರಾರಂಭವಾದ ತರಬೇತಿಯಲ್ಲಿ ಪಟ್ಟಣದ ಹೊಯ್ಸಳ ಪಿಯು ಕಾಲೇಜು , ಬಸವೇಶ್ವರ ಪಿಯು ಕಾಲೇಜು ಮತ್ತು ದಿವ್ಯಜ್ಯೋತಿ ಕಾಲೇಜಿನ 100 ವಿದ್ಯಾರ್ಥಿಗಳು ಸಮೂಹ ಗಾಯನ ಮಾಡುವ ಮೂಲಕ ತಾಲೂಕಿನಲ್ಲಿ ದಾಖಲೆ ಬರೆದಿದ್ದಾರೆ.

ಸಾಮರಸ್ಯಕ್ಕೆ ಪ್ರಾಚೀನ ಜ್ಞಾನ ಅವಶ್ಯ

ಬೌದ್ಧಗುರು ದಲೈಲಾಮಾ ಅಭಿಮತ » ಧರ್ಮ, ಸಂಪ್ರದಾಯಕ್ಕಿದೆ ಸಾವಿರಾರು ವರ್ಷದ ಇತಿಹಾಸ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಧಾರ್ಮಿಕ ಸಾಮರಸ್ಯ ಕಾಪಾಡಿಕೊಳ್ಳಲು ಆಧುನಿಕ ಭಾರತದಲ್ಲಿ ಪ್ರಾಚೀನ ಭಾರತದಲ್ಲಿದ್ದ ಜ್ಞಾನವನ್ನು ಪುನರುಜ್ಜೀವನಗೊಳಿಸುವ ಅಗತ್ಯವಿದೆ ಎಂದು ಬೌದ್ಧಗುರು ದಲೈಲಾಮಾ ಹೇಳಿದ್ದಾರೆ.

ಯಲಹಂಕದ ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಯ ಬೆಳ್ಳಿಹಬ್ಬ ಪ್ರಯುಕ್ತ ನಗರದ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ 'ಜ್ಞಾನಕ್ಕಾಗಿ ಶಿಕ್ಷಣ ಮತ್ತು ರಾಷ್ಟ್ರದ ಮರುನಿರ್ಮಾಣಕ್ಕಾಗಿ ಸಹಾನುಭೂತಿ' ಎಂಬ ವಿಷಯದ ಕುರಿತು ಮಾತನಾಡಿದರು.

ಅರಮನೆ ಮೈದಾನದಲ್ಲಿ ಯಲಹಂಕ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಬೆಳ್ಳಿ ಹಬ್ಬ ಆಚರಣೆ

ಧರ್ಮ ಮತ್ತು ಸಂಪ್ರದಾಯಗಳಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಬೇರೆ ದೇಶಗಳಲ್ಲಿ ಧರ್ಮದ ಹೆಸರಿನಲ್ಲಿ ಸಾಕಷ್ಟು ಕೋಮುಗಲಭೆಗಳು ನಡೆಯುತ್ತಿದ್ದು, ಮೂರು ಸಾವಿರ ವರ್ಷಗಳ ಇತಿಹಾಸವಿರುವ ಭಾರತದಲ್ಲಿ ಕೋಮುಗಲಭೆ ಕಡಿಮೆ ಇದೆ, ಇದೊಂದು ಮಾದರಿ ರಾಷ್ಟ್ರವಾಗಿದೆ. ಈ ಬಗೆಯ ಧಾರ್ಮಿಕ ಸಾಮರಸ್ಯದ ಪ್ರಚಾರಕ್ಕೆ ನಾನು ಕಟಿಬದ್ಧನಾಗಿದ್ದೇನೆ ಎಂದರು.

ವಿಶ್ವದಲ್ಲಿ ಶಾಂತಿ ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯ. ಅಲ್ಲದೆ, ಎಲ್ಲರೂ ಏಕತೆಯಲ್ಲಿ ವಿವಿಧತೆಯನ್ನು ಕಾಣುವಂತಾಗಬೇಕು. ದೇಶದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಆದರೆ, ತಂತ್ರಜ್ಞಾನದಿಂದಲೇ ಎಲ್ಲ ಸಮಸ್ಯೆಗೆ ಪರಿಹಾರ ದೊರೆಯುತ್ತದೆ ಎಂಬುದು ಸುಳ್ಳು. ಉದಾಹರಣೆಗೆ ಭಾವನಾತ್ಮಕ ಸಮಸ್ಯೆಗಳಿಗೆ ತಂತ್ರಜ್ಞಾನದಿಂದ ಪರಿಹಾರ ದೊರೆಯುವುದಿಲ್ಲ. ಸಾವಿರ ವರ್ಷಗಳ ಹಿಂದಿನ ಸಾಂಪ್ರದಾಯಗಳು ಇಂಥ ಸಮಸ್ಯೆ ಗಳಿಗೆ ಪರಿಹಾರ ಕಂಡುಕೊಳ್ಳಲು ತಿಳಿಸುತ್ತವೆ ಎಂದರು.

ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಆಂತರಿಕ ಮೌಲ್ಯಗಳನ್ನು ತುಂಬುವಂತಹ ಪಠ್ಯಕ್ರಮ ಅಳವಡಿಸಿಕೊಳ್ಳುವ ಅವಶ್ಯಕತೆ ಇದೆ. ಮಠಗಳು ಈ ರೀತಿಯ ಆಂತರಿಕ ಮೌಲ್ಯದ ಶಿಕ್ಷಣ ನೀಡುತ್ತಿವೆ. ಶಿಕ್ಷಣ ಸಂಸ್ಥೆಗಳು ಬೌದ್ಧಿಕ ಮತ್ತು ಆಂತರಿಕ ಮೌಲ್ಯಗಳಿಗೆ ಅನುಕೂಲವಾಗುವ ಶಿಕ್ಷಣ ನೀಡಬೇಕು ಎಂದರು.

ನಾನೇ ಮೇಲು ಎಂಬ ಅಹಂಕಾರ ಮನುಷ್ಯನಿಗೆ ಇರಬಾರದು. ಎಲ್ಲರನ್ನೂ ಪ್ರೀತಿಸುವ ಗುಣ ಬೆಳೆಸಿಕೊಳ್ಳುವುದರ ಜತೆಗೆ, ಶಾಂತಿ ಮತ್ತು ಸೌಹಾರ್ದತೆಯಿಂದ ನೋಡಬೇಕು. ಕೆಲವು ಭಾಗದಲ್ಲಿ ಅಹಿಂಸೆಯಿಂದ ಜನ ಸಾಯುತ್ತಿದ್ದಾರೆ. ಧರ್ಮಗಳ ನಡುವಿನ ಸಂಘರ್ಷ, ಜಾಗತಿಕ ಪರಿಣಾಮಗಳಿಂದ ಉದ್ಭವಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವ ಜವಾಬ್ದಾರಿ ಎಲ್ಲರ ಮೇಲೂ ಇದೆ ಎಂದರು.

ಜಾಗತಿಕ ತಾಪಮಾನ ಮತ್ತು ಆರ್ಥಿಕತೆ ಪ್ರತಿಯೊಬ್ಬರ ಭವಿಷ್ಯದ ಮೇಲೂ ಪ್ರಭಾವ ಬೀರಲಿದೆ. ವಿಶ್ವದ ಸಮಾನತೆಯನ್ನು ಕಾಪಾಡುವ ಜವಾಬ್ದಾರಿ ಎಲ್ಲರ ಮೇಲಿದೆ. ಏಕತೆ, ಸಾಮಾಜಿಕ ಜವಾಬ್ದಾರಿ ಮತ್ತು ಧಾರ್ಮಿಕ ಸೌಹಾರ್ದತೆ ಅವಶ್ಯಕ ಎಂದು ದಲೈಲಾಮಾ ಹೇಳಿದರು.

ಇಸ್ರೋ ಅಧ್ಯಕ್ಷ ಎ.ಎಸ್. ಕಿರಣ್‌ಕುಮಾರ್ ಮಾತನಾಡಿ, ಭೂಮಿಯ ಮೇಲಿನ ಒತ್ತಡ ಹೆಚ್ಚಾಗುತ್ತಿದೆ. ಹೀಗಾಗಿ ಮನುಷ್ಯ ವಾಸಿಸಲು ಯೋಗ್ಯವಾದ ಗ್ರಹದ ಕುರಿತ ಹುಡುಕಾಟ ನಡೆಸುವ ಪರಿಸ್ಥಿತಿಯನ್ನು ತಲುಪಿದ್ದೇವೆ. ತಂತ್ರಜ್ಞಾನ ಅಭಿವೃದ್ಧಿಯಿಂದ ಅನುಕೂಲ ಮತ್ತು ಅಷ್ಟೇ ಪ್ರಮಾಣದ ಅನನುಕೂಲವೂ ಉಂಟಾಗಿದೆ. ಶಾಂತಿ ಮತ್ತು ನೆಮ್ಮದಿಯಿಂದ ಬದುಕಲು ಆಧ್ಯಾತ್ಮಿಕತೆ ಕಡೆ ಕೂಡ ಒಲವು ತೋರಿಸಬೇಕು ಎಂದರು.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.



ಯಲಹಂಕ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಬೆಳ್ಳಿಹಬ್ಬದಲ್ಲಿ ಬೌದ್ಧಗುರು ದಲೈಲಾಮಾ ಅವರನ್ನು ಗೌರವಿಸಲಾಯಿತು. ವೂಡೇ ಪಿ. ಕೃಷ್ಣ, ಎನ್.ಆರ್. ಪಂಡಿತಾರಾಧ್ಯ ಮತ್ತಿತರರು ಉಪಸ್ಥಿತರಿದ್ದರು.

ಇದು ನಿಮಗೆ ಸಂಬಂಧಿಸಿದ್ದು

ಬೌದ್ಧಗುರು ದಲೈಲಾಮಾ ಭಾಷಣದ ಬಳಿಕ ಸಭೆಯಲ್ಲಿದ್ದ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ವಿದ್ಯಾರ್ಥಿಯೊಬ್ಬ 'ಮೋದಿಯ ಭಾರತ'ದ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ಪ್ರಶ್ನಿಸಿದ. ಅದಕ್ಕೆ ಉತ್ತರಿಸಿದ ದಲೈಲಾಮಾ, 'ಇದು ನೇರವಾಗಿ ನನಗೆ ಸಂಬಂಧಿಸಿದ್ದಲ್ಲ. ನಿಮಗೆ ಬಿಟ್ಟಿದ್ದು' ಎಂದರು. ವ್ಯಕ್ತಿಯೊಬ್ಬರೂ ಭಗವದ್ಗೀತೆಯಲ್ಲಿ ಧರ್ಮ ಮತ್ತು ಪರಧರ್ಮ ಕುರಿತು ಪ್ರಶ್ನಿಸಿದಾಗ 'ನಾನು ಅದಕ್ಕೆ ಉತ್ತರ ನೀಡುವುದಿಲ್ಲ' ಎಂದರು. ವಿದ್ಯಾರ್ಥಿನಿಯೊಬ್ಬಳು, 'ಬೇಡವಾದ ಆಲೋಚನೆ ಬಿಟ್ಟು, ಓದಿನ ಬಗ್ಗೆ ಆಸಕ್ತಿ ಮೂಡಿಸಿಕೊಳ್ಳಲು ಏನು ಮಾಡಬೇಕು' ಎಂದು ಕೇಳಿದಳು. ಅದಕ್ಕೆ 'ನೀವು ಏಕಾಗ್ರತೆ ರೂಢಿಸಿಕೊಳ್ಳಬೇಕು, ಧ್ಯಾನ ಮಾಡಬೇಕು' ಎಂದು ದಲೈಲಾಮಾ ಉತ್ತರಿಸಿದರು.

ಸಂಯುಕ್ತ ಕರ್ನಾಟಕ
ಸೋಮವಾರ, 25, ಡಿಸೆಂಬರ್, 2017
ಬೆಂಗಳೂರು

ತಾಳ್ಮೆಯಿಂದ ಸೋದರತ್ವ ಸಮಾಜ ನಿರ್ಮಾಣ

ಬೆಂಗಳೂರು: ಪ್ರಾಚೀನ ಭಾರತೀಯ ಜ್ಞಾನವನ್ನು ಆಧುನಿಕ ಭಾರತದಲ್ಲಿ ಪುನರುಜ್ಜೀವನಗೊಳಿಸುವ ಮೂಲಕ ಧಾರ್ಮಿಕ ಸಾಮರಸ್ಯವನ್ನು ಉಳಿಸಿಕೊಳ್ಳುವ ಅಗತ್ಯವಿದೆ ಎಂದು ಟಿಬೆಟಿಯನ್ ಬೌದ್ಧ ಧರ್ಮಗುರು ದಲೈಲಾಮ ಹೇಳಿದರು.

ಶೇಷಾದ್ರಿಪುರಂ ಸಮೂಹ ವಿದ್ಯಾ ಸಂಸ್ಥೆಗಳ ಬೆಳ್ಳಿ ಮಹೋತ್ಸವದ ಅಂಗವಾಗಿ ನಗರದ ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ರಾಷ್ಟ್ರ ನಿರ್ಮಾಣಕ್ಕಾಗಿ ಶಿಕ್ಷಣ ಮತ್ತು ಜ್ಞಾನ ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು. ಈ ಸಂದರ್ಭ ಭಾರತದ ಪುರಾತನ ಜ್ಞಾನವು ವಿಜ್ಞಾನ ಮತ್ತು ತಂತ್ರಜ್ಞಾನದ ಸಮ್ಮಿಲನ. ಇದನ್ನು ಆಳವಾಗಿ ಅಧ್ಯಯನ ಮಾಡಲು ಸಕಾಲ ಮತ್ತು ಅದು ಆಧುನಿಕ ಜಗತ್ತಿಗೆ ಪ್ರಸ್ತುತವಾಗಿದೆ. ಆದರೆ, ಮನುಷ್ಯನ ಭಾವನಾತ್ಮಕ ಸಮಸ್ಯೆಗೆ ತಂತ್ರಜ್ಞಾನದಿಂದ ಪರಿಹಾರ ನೀಡಲು ಸಾಧ್ಯವಿಲ್ಲ. ನಮ್ಮಲ್ಲಿರುವ ಸಾವಿರಾರು ವರ್ಷಗಳ ಹಳೆಯದಾದ ಸಾಂಪ್ರದಾಯಿಕ ಆಚರಣೆಗಳು ಭಾವನಾತ್ಮಕ ಸಮಸ್ಯೆಗಳನ್ನು ಹೇಗೆ ಎದುರಿಸಬೇಕು ಎಂಬುದನ್ನು ಕಲಿಸಿಕೊಡುತ್ತದೆ ಎಂದು ತಿಳಿಸಿದರು.

ಭಾರತದಲ್ಲಿ ಮೂರ್ನಾಲ್ಕು ಸಾವಿರ ವರ್ಷದಿಂದ ವಿವಿಧ ಧರ್ಮ ಮತ್ತು ಸಾಂಪ್ರದಾಯಿಕ ಆಚರಣೆಯೊಂದಾಗಿ ನಡೆದುಕೊಂಡು ಬಂದಿವೆ. ಧರ್ಮದ ಹೆಸರಿನಲ್ಲಿ ಸಂಘರ್ಷ ಏಳುತ್ತಿರುವ ಅನೇಕ ರಾಷ್ಟ್ರಗಳನ್ನು ಇಂದು ಕಾಣುತ್ತಿದ್ದೇವೆ. ಆದರೆ, ಸಾಮರಸ್ಯ ಭಾರತವು ವಿಶ್ವಕ್ಕೆ ಮಾದರಿ. ಧಾರ್ಮಿಕ ಸಾಮರಸ್ಯದಿಂದ ಒಟ್ಟಾಗಿ ಬಾಳಬಹುದು ಮತ್ತು ಆದರ್ಶ ಜಗತ್ತು ಸೃಷ್ಟಿಸಬಹುದು. ಶಾಂತಿ ಮತ್ತು ಸಹಬಾಳ್ವೆಗೆ ಆಧ್ಯಾತ್ಮಿಕತೆ ಪೂರಕವಾಗಿದೆ ಎಂದರು.

ಸಹೋದರತ್ವ ಹಾಗೂ ಜಾಗತಿಕ ಸಮಸ್ಯೆಗಳಿಗೆ ಪ್ರಾಚೀನ ಜ್ಞಾನವೇ ಸೂಕ್ತ ಮಾರ್ಗ. ತಂತ್ರಜ್ಞಾನ ಎಷ್ಟೇ ಮುಂದುವರೆದರೂ ಸಮಸ್ಯೆಗಳು ಕಮ್ಮಿಯಾಗುತ್ತಿಲ್ಲ. ಅಹಿಂಸೆ, ಜಾತ್ಯತೀತತೆ ಕಣ್ಮರೆಯಾಗುತ್ತಿದೆ. ಇಂತಹ ಸಮಸ್ಯೆಗಳಿಗೆ ವಿಜ್ಞಾನಿಗಳು ಮತ್ತು ತಜ್ಞರು ಪರಿಣತರಿಂದಲೂ ಪರಿಹಾರ ಸಾಧ್ಯವಿಲ್ಲ. ನಿಯಂತ್ರಣ ಮಾಡುವ ಮೂಲಕ ಪರಿಹಾರ ಕಂಡುಕೊಳ್ಳಬಹುದು ಎಂದರು.

ನಾನು ಎಂಬ ಅಹಂಕಾರ ಯಾರಿಗೂ ಸಲ್ಲದು. ಮನುಷ್ಯ ಸಮಾಜದಲ್ಲಿ ನಾನು ಎಂಬ ಅಹಂಕಾರ ಆತ್ಮನನ್ನು ನಾಶಪಡಿಸುತ್ತದೆ. ಅಂತಹವರು ಸಮಾಜದಲ್ಲಿ ಏಕಾಂಗಿಯಾಗುತ್ತಾರೆ. ಬದಲಾಗಿ ಜನಸಮುದಾಯದ ಜೊತೆಗೆ ಬೆರೆತರೆ ನೆಮ್ಮದಿ ಶ್ರೇಯಸ್ಸು ಹೆಚ್ಚುತ್ತದೆ ಎಂದರು.

ಜಗತ್ತಿನಾದ್ಯಂತ ಏಳು ಬಿಲಿಯನ್ ಶತಕೋಟಿ ಜನರ ಪೈಕಿ ಒಂದು ಶತಕೋಟಿಯಷ್ಟು ನಾಸ್ತಿಕರು ಇದ್ದಾರೆ. ಆರು ಶತಕೋಟಿ ಆಸ್ತಿಕ ಜನರಿದ್ದಾರೆ. ಈ ಎರಡು ಬಗೆಯ ಗುಂಪುಗಳ ಒಂದಲ್ಲ ಒಂದು ಸಾಕಷ್ಟಿದೆ. ಈ ಹಿನ್ನಲೆಯಲ್ಲಿಯೇ ಗುಂಪುಗಳು ಜಾಸ್ತಿಯಾಗಿ ಅಸಹಿಷ್ಣುತೆ, ದ್ವೇಷಾಸೂಯೆಗಳಿಗೆ ಕಾರಣವಾಗುತ್ತಿದೆ. ಧಾರ್ಮಿಕ ವಿಷಯವನ್ನೇ ಮುಖ್ಯ ಕಾರಣವನ್ನಾಗಿಸಿಕೊಂಡು ಗುಂಪು ಸೃಷ್ಟಿಸಲಾಗುತ್ತಿದೆ. ಸಹಿಷ್ಣುತೆ ಬೆಳೆಸುವ, ಒಬ್ಬರನ್ನೊಬ್ಬರು ಪ್ರೀತಿಸುವ ಮೂಲಕ ಹಾಗೂ ಜಾತಿ-ಜಾತಿಗಳ ನಡುವೆ ಅನ್ಯೋನ್ಯತೆ ಸಾಧಿಸುವ ಮೂಲಕ ಇದನ್ನು ನಿವಾರಿಸಬಹುದು ಎಂದರು.

ಕಾರ್ಯಕ್ರಮದಲ್ಲಿ ಇಸ್ರೋ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್, ಶೇಷಾದ್ರಿಪುರಂ ಶಿಕ್ಷಣ ದತ್ತಿ ಅಧ್ಯಕ್ಷ ವಾನ ಆರ್. ಪಂಡಿತಾರಾಧ್ಯ, ಗೌರವ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಹಾಗೂ ಪದಾಧಿಕಾರಿಗಳಾದ ಹಂಜಾರವ್, ಅನಿಲ್ ಕುಮಾರ್, ಪಾರ್ಥಸಾರಥಿ, ಸರೋಜ, ನಂದೀಪ, ವೆಂಕಟೇಶ್, ಶಾಂತಸುದಾನ, ಜಲಾಬಾನು ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಶೇಷಾದ್ರಿಪುರಂ ಸಮೂಹ ವಿದ್ಯಾ ಸಂಸ್ಥೆಗಳ ಬೆಳ್ಳಿ ಮಹೋತ್ಸವದ ಉಪನ್ಯಾಸ ಕಾರ್ಯಕ್ರಮವನ್ನು ಟಿಬೆಟಿಯನ್ ಬೌದ್ಧ ಧರ್ಮಗುರು ದಲೈಲಾಮ ಉದ್ಘಾಟಿಸಿದರು. ಈ ಸಂದರ್ಭ ಎಸ್‌ಇಟಿ ಅಧ್ಯಕ್ಷ ವಾನ ಆರ್. ಪಂಡಿತಾರಾಧ್ಯ, ಡಾ. ವೂಡೇ ಪಿ. ಕೃಷ್ಣ, ಇಸ್ರೋ ಬೆಂಗಳೂರು ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್ ಪಾಲ್ಗೊಂಡಿದ್ದರು.

ಕನ್ನಡಪ್ರಭ

ಸೋಮವಾರ 25.12.2017
ಬೆಂಗಳೂರು

ಉಪನ್ಯಾಸ | ಭಾವನಾತ್ಮಕ ಸಮಸ್ಯೆಗಳಿಗೆ ವಿಜ್ಞಾನ, ತಂತ್ರಜ್ಞಾನದಿಂದ ಪರಿಹಾರ ಅಸಾಧ್ಯ: ಬೌದ್ಧ ಧರ್ಮಗುರು

ಪ್ರಾಚೀನ ಶಿಕ್ಷಣದಿಂದ ಆಂತರಿಕ ಶಾಂತಿ: ದಲೈಲಾಮಾ

• ಕನ್ನಡಪ್ರಭ ವಾರ್ತೆ ಬೆಂಗಳೂರು

ಭಾರತದ ಪ್ರಾಚೀನ ಶಿಕ್ಷಣ ಪದ್ಧತಿ ಅಧ್ಯಯನದಿಂದ ಆಂತರಿಕ ಶಾಂತಿ ಪಡೆಯಲು ಸಾಧ್ಯ ಎಂದು ಬೌದ್ಧ ಧರ್ಮಗುರು ದಲೈಲಾಮ ಹೇಳಿದ್ದಾರೆ. ಶೇಷಾದ್ರಿಪುರ ಸಮೂಹ ಶಿಕ್ಷಣ ಸಂಸ್ಥೆಗಳ ಬೆಳ್ಳಿ ಮಹೋತ್ಸವದ ಅಂಗವಾಗಿ ನಗರದ ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿದ್ದ 'ಜ್ಞಾನಕ್ಕಾಗಿ ಶಿಕ್ಷಣ ಮತ್ತು ರಾಷ್ಟ್ರದ ಪುನರ್ ನಿರ್ಮಾಣದ ಬಗ್ಗೆ ಪ್ರೀತಿ' ವಿಷಯದ ಕುರಿತ ಉಪನ್ಯಾಸ ನೀಡಿದರು.

ವಿಶ್ವದಲ್ಲಿ ಧರ್ಮದ ಹೆಸರಿನಲ್ಲಿ ಸಂಘರ್ಷ ಉಂಟು ಮಾಡುತ್ತಿರುವ ಹತ್ತಾರು ರಾಷ್ಟ್ರಗಳಿವೆ. ಆದರೆ, ಭಾರತ ದೇಶವು ಕಳೆದ ಮೂರು ಸಾವಿರ ವರ್ಷಗಳಲ್ಲಿ ವಿವಿಧ ಧರ್ಮಗಳ ನಾನಾ ಸಂಪ್ರದಾಯಗಳನ್ನು ಅಳವಡಿಸಿಕೊಂಡು ಬರುತ್ತಿದೆ. ಪ್ರಸ್ತುತ ಸಂದರ್ಭದಲ್ಲಿ ಪ್ರಾಚೀನ ಭಾರತದ ಶಿಕ್ಷಣ ಪದ್ಧತಿ ಅಧ್ಯಯನ ಮಾಡಿದಲ್ಲಿ ಮಾನಸಿಕ ಮತ್ತು ಆಂತರಿಕ ಶಾಂತಿ ಕಾಪಾಡಲು ಸಾಧ್ಯವಾಗಲಿದೆ ಎಂದು ತಿಳಿಸಿದರು.



ಶೇಷಾದ್ರಿಪುರ ಸಮೂಹ ಶಿಕ್ಷಣ ಸಂಸ್ಥೆಗಳ ಬೆಳ್ಳಿ ಮಹೋತ್ಸವದ ಅಂಗವಾಗಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 'ಜ್ಞಾನಕ್ಕಾಗಿ ಶಿಕ್ಷಣ ಮತ್ತು ರಾಷ್ಟ್ರದ ಪುನರ್ ನಿರ್ಮಾಣದ ಬಗ್ಗೆ ಪ್ರೀತಿ' ಎಂಬ ವಿಷಯದ ಕುರಿತ ಉಪನ್ಯಾಸ ಕಾರ್ಯಕ್ರಮವನ್ನು ಬೌದ್ಧ ಧರ್ಮಗುರು ದಲೈಲಾಮ ಉದ್ಘಾಟಿಸಿದರು. ಇಸ್ರೋ ಅಧ್ಯಕ್ಷ ಕಿರಣ್‌ಕುಮಾರ್, ಎನ್.ಆರ್. ಪಂಡಿತಾರಾಧ್ಯ, ಡಾ.ವೂಡೇಪಿ.ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದ್ದರೂ ಇವುಗಳಿಂದ ಮನುಷ್ಯನ ಭಾವನಾತ್ಮಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ. ಆದರೆ, ಭಾರತದ ಸಂಪ್ರದಾಯಿಕ ಹಾಗೂ ಪ್ರಾಚೀನ ಶಿಕ್ಷಣಪದ್ಧತಿಯಿಂದಭಾವನಾತ್ಮಕಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದರು.

ಪ್ರಸ್ತುತ ಧಾರ್ಮಿಕ ಸಾಮರಸ್ಯ ಅತ್ಯಂತ ಮುಖ್ಯವಾಗಿದೆ. ಭಾರತದಲ್ಲಿ ಹಲವು ಧಾರ್ಮಿಕಸಂಪ್ರದಾಯಗಳುಇವೆಯಾದರೂ ಅವುಗಳ ನಡುವೆ ಎಲ್ಲರೂ ಒಂದಾಗಿ ಬದುಕುತ್ತಿದ್ದಾರೆ. ಆದರೂ ಧರ್ಮದ ಹೆಸರಿನಲ್ಲಿ ಸಂಘರ್ಷ ನಡೆಸುವುದು ಅತ್ಯಂತ ಕೆಟ್ಟ ಬೆಳವಣಿಗೆಯಾಗಿದೆ. ಸಮಾಜದಲ್ಲಿ ಏಕತೆಯ ಜತೆಗೆ ಇತರರ ಜೀವನ ಕುರಿತು ಕಾಳಜಿ ವಹಿಸಬೇಕು ಎಂದು ಹೇಳಿದರು.

ಇದೇ ವೇಳೆ ದಲೈಲಾಮ ಅವರು, ನಾನು ಆಂತರಿಕ ಸ್ಥಳವನ್ನು ಅನ್ವೇಷಿಸುತ್ತಿರುವಾಗ ನೀವು ಬಾಹ್ಯಾಕಾಶ ಅನ್ವೇಷಿಸುತ್ತಿದ್ದೀರಿ ಎಂದು ಇಸ್ರೋ ಮುಖ್ಯಸ್ಥ ಕಿರಣ್‌ಕುಮಾರ್ ಅವರನ್ನು ಉದ್ದೇಶಿಸಿ ನಗೆ ಚಟಾಕಿ ಹಾರಿಸಿದರು.

ಪ್ರಪಂಚಸಂಕೀರ್ಣ: ಇಸ್ರೋ ಅಧ್ಯಕ್ಷ ಕಿರಣ್ ಕುಮಾರ್ ಮಾತನಾಡಿ, ಆಧುನಿಕತಂತ್ರಜ್ಞಾನವು ಪ್ರಪಂಚವನ್ನುಸಂಕೀರ್ಣಗೊಳಿಸಿದೆ. ಸಂಪರ್ಕ ವ್ಯವಸ್ಥೆ ಸಾಕಷ್ಟು ಅಭಿವೃದ್ಧಿಯಾಗಿದೆ. ತಂತ್ರಜ್ಞಾನದಸದುಪಯೋಗ, ದುರುಪಯೋಗ ಆಗುತ್ತಿರುವುದರಿಂದ ಅನೇಕ ಸಮಸ್ಯೆಯೂ ಹುಟ್ಟಿಕೊಂಡಿದೆ. ಭೂಮಿ ಮೇಲಿರುವ ಸಂಪತ್ತನ್ನು ಅಗತ್ಯಕ್ಕಿಂತ ಹೆಚ್ಚು ಬಳಸಿದ್ದೇವೆ. ಮುಂದಿನ ಪೀಳಿಗೆಗೆ ಏನನ್ನು ಉಳಿಸಲು ಸಾಧ್ಯವಿಲ್ಲ ಎಂಬಂತಾಗಿದೆ. ಭೂಮಿಯ ಮೇಲೆ ಒತ್ತಡದ ಬದುಕು ನಡೆಸುತ್ತಿದ್ದೇವೆ. ವಾಸಕ್ಕೆ ಯೋಗ್ಯವಾಗಿರುವ ಅನ್ಯಗ್ರಹದ ಹುಡುಕಾಟ ಆರಂಭವಾಗಿದೆ. ಇದಕ್ಕೆಜ್ಞಾನಮತ್ತುಆಧ್ಯಾತ್ಮಿಕ ಚಿಂತನೆ ಬಹಳ ಅಗತ್ಯ ಎಂದರು.

ನಿಮಗೆ ಬಿಟ್ಟಿದ್ದು

ಮೋದಿಯವರ ಭಾರತದ ಬಗ್ಗೆ ಸಭಿಕರೊಬ್ಬರು ಕೇಳಿದ ಪ್ರಶ್ನೆ ಉತ್ತರಿಸಿದ ದಲೈಲಾಮ ಇದು ನನಗೆ ಸಂಬಂಧಿಸಿದ್ದಲ್ಲ, ನಿಮಗೆ ಬಿಟ್ಟದ್ದು ಎಂದರು. ಮತ್ತೊಬ್ಬ ಸಭಿಕರಾದ ವಿಶ್ವನಾಥ ಶರ್ಮಾ ಎಂಬುವರು ಸ್ವಧರ್ಮದಿಂದ ಸತ್ತರೂ ಪರವಾಗಿಲ್ಲ ಪರಧರ್ಮ ಎಂದರೆ ಭಯ ಆಗುತ್ತದೆ ಎಂದು ಭಗವದ್ಗೀತೆಯ ಶ್ಲೋಕದ ಕುರಿತು ಪ್ರಶ್ನೆಗೆ ಉತ್ತರಿಸಿದ ದಲೈಲಾಮ ಇದಕ್ಕೆ ಏನೂ ಉತ್ತರ ನೀಡುವುದಿಲ್ಲ ಎಂದು ಸುಮ್ಮನಾದರು.

ಪ್ರಜಾವಾಣಿ
ಶನಿವಾರ ● ಡಿಸೆಂಬರ್ 2, 2017



ಸಮೂಹ ಗಾಯನ ಮಾಡಿದ ವಿದ್ಯಾರ್ಥಿಗಳೊಂದಿಗೆ ರಂಗ ನಿರ್ದೇಶಕ ಮೈಸೂರು ರಮಾನಂದ, ಸಿದ್ದಲಿಂಗ ಸ್ವಾಮೀಜಿ, ಗೀತಯಾನ ನಿರ್ದೇಶಕ ಬಂಡ್ಲಹಳ್ಳಿ ವಿಜಯಕುಮಾರ್ ಇದ್ದಾರೆ

'ಸಮೂಹ ಗಾನದಿಂದ ಭಾಷಾ ಜಾಗೃತಿ'

ಪ್ರಜಾವಾಣಿ ವಾರ್ತೆ

ನೆಲಮಂಗಲ: 'ಯುವ ಜನಾಂಗಕ್ಕೆ ಸಮೂಹ ಗಾಯನದ ಮೂಲಕ ಕನ್ನಡ ಗೀತೆಗಳ ತರಬೇತಿ ನೀಡಿ ಭಾಷೆ, ಸಾಹಿತ್ಯ, ಜನಪದ ಸಂಸ್ಕೃತಿಯ ಬಗ್ಗೆ ಜಾಗೃತಿ ಮೂಡಿಸುವುದು ಗೀತ ಗಾಯನದ ಧ್ಯೇಯ' ಎಂದು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ.ಪಿ.ಕೃಷ್ಣ ತಿಳಿಸಿದರು.

ಆಕಾಶವಾಣಿ ಕಲಾವಿದ ಬಂಡ್ಲಹಳ್ಳಿ ವಿಜಯಕುಮಾರ್ ಬಸವಣ್ಣದೇವರ ಮಠದಲ್ಲಿ ಆಯೋಜಿಸಿದ್ದ ಶತಕಂಠಗಳ 'ಗೀತ ಯಾನ ಸಮೂಹ ಗಾಯನ' ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಜನಪದ ಅಕಾಡೆಮಿ ಸದಸ್ಯ ಹಾಸನ ರಘು, 'ಯುವತಿಯರಿಗೆ ಗಾಯನದೊಂದಿಗೆ ಸಾಹಸ ಕಲೆಗಳನ್ನು ಕಲಿಯಲು ಪ್ರೋತ್ಸಾಹ ನೀಡಬೇಕು. ಮುಂದಿನ ದಿನಗಳಲ್ಲಿ ಆತ್ಮರಕ್ಷಣೆ ಎನ್ನುವ ವಿಷಯ ಪಠ್ಯದಲ್ಲಿ ಜಾಗಪಡೆಯಲಿದೆ' ಎಂದರು.

ರಂಗ ನಿರ್ದೇಶಕ ಮೈಸೂರು ರಮಾನಂದ, 'ಗೌರವಿಸಿ ಡಿಜಿಟಲ್ ಯುಗದಲ್ಲಿಯೂ ಬೃಹತ್ ಸಮೂಹ ಗಾಯನ ಹಮ್ಮಿಕೊಳ್ಳುವ ಮೂಲಕ ಸಾಮಾನ್ಯರನ್ನು ಹಾಡುವಂತೆ ವಿಜಯಕುಮಾರ್ ಪ್ರೇರೇಪಿಸುತ್ತಿದ್ದಾರೆ' ಎಂದು ತಿಳಿಸಿದರು.

ವಿವಿಧ ಕಾಲೇಜಿನ ವಿದ್ಯಾರ್ಥಿಗಳು ಸಾಮೂಹಿಕವಾಗಿ ಹಾಡಿದ ಹಚ್ಚೇವು ಕನ್ನಡದ ದೀಪ, ಶಿವನು ಭಿಕ್ಷಕ್ಕೆ ಬಂದ ಗೀತೆಗಳು ಜನರನ್ನು ರಂಜಿಸಿತು. ಶ್ರೀಮಠದ ಸಿದ್ದಲಿಂಗ ಸ್ವಾಮೀಜಿ ಆಶೀರ್ವಚನ ನೀಡಿದರು.

ನಂ. 1 ಕನ್ನಡ ದಿನಪತ್ರಿಕೆ

ಶುಕ್ರವಾರ 1 ಡಿಸೆಂಬರ್ 2017
VIJAYAVANI » 1 DECEMBER 2017



ವಿಜಯವಾಣಿ ಚಿತ್ರ

ಶೇಷಾದ್ರಿಪುರದ ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಾಹಿತ್ಯ ಅಕಾಡೆಮಿ ಪುರಸ್ಕೃತ ಸಾಹಿತಿ ಚಿಂತಾಮಣಿ ಕೊಡ್ಲೆಕೆರೆ ಅವರನ್ನು ಅಭಿನಂದಿಸಲಾಯಿತು. ಶೇಷಾದ್ರಿಪುರ ಶಿಕ್ಷಣ ದತ್ತಿ ಸಂಸ್ಥೆ ಗೌರವ ಕಾರ್ಯದರ್ಶಿ ವೂಡೇ ಪಿ.ಕೃಷ್ಣ, ಪ್ರಾಂಶುಪಾಲ ಪ್ರೊ.ಜಿ.ಕೆ. ಮಂಜುನಾಥ್, ಆರ್.ವಿ. ಮಂಜುನಾಥ್ ಮತ್ತಿತರರಿದ್ದರು.

ವಿಜಯ ಕರ್ನಾಟಕ ಗುರುವಾರ,30 ನವೆಂಬರ್ 2017

ಸ್ವಚ್ಛತೆಗೆ ಆದ್ಯತೆ ನೀಡಲು ಕಿರುಚಿತ್ರ ಮೂಲಕ ಸಲಹೆ

ವಿಕ ಸುದ್ದಿಲೋಕ ಬೆಂಗಳೂರು

ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕಬಾರದು, ಕಂಡಕಂಡಲ್ಲಿ ಉಗುಳಬಾರದು, ಮನೆ ಹಾಗೂ ಸುತ್ತ ಮುತ್ತಲಿನ ಸ್ಥಳವನ್ನು ಶುಚಿಯಾಗಿಟ್ಟುಕೊಳ್ಳಬೇಕು. ಈ ಮೂಲಕ ಆರೋಗ್ಯ ಕರ ಸಮಾಜ ನಿರ್ಮಾಣಕ್ಕೆ ಕೈ ಜೋಡಿಸಬೇಕು ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಚಲನ ಚಿತ್ರ ವಿಭಾಗದ ಕಿರುಚಿತ್ರ ಪ್ರದರ್ಶನದಲ್ಲಿ ಮಕ್ಕಳಿಗೆ ಸಂದೇಶ ನೀಡಲಾಯಿತು.

ಗಾಂಧಿಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ವಚ್ಛತಾ ಅಭಿಯಾನಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಕಿರುಚಿತ್ರಗಳನ್ನು ಪ್ರದರ್ಶಿಸಲಾಯಿತು. ಭಾರತ್ ಸೇವಾದಳ, ವಿಶ್ವಕಲಾ ನಿಕೇತನ ಹಾಗೂ ಗಾಂಧಿನಗರ ಹೈಸ್ಕೂಲ್‌ನ ಸುಮಾರು 300 ವಿದ್ಯಾರ್ಥಿಗಳು ಕಿರುಚಿತ್ರಗಳನ್ನು ನೋಡಿ ಮನ ರಂಜನೆ, ಸ್ವಚ್ಛತೆ ಕುರಿತ ಸಂದೇಶಗಳನ್ನು ಪಡೆದರು.

ಮೊದಲಿಗೆ ಮಕ್ಕಳಿಗೆ ಮಹಾತ್ಮ ಗಾಂಧಿ ಸ್ವಚ್ಛತೆಗಾಗಿ ಕೈಗೊಂಡ ಅಭಿಯಾನ, ಸ್ವಚ್ಛತೆಗೆ ನೀಡುತ್ತಿದ್ದ ಮಹತ್ವ ಹಾಗೂ ದೇಶದ ಜನರಿಗೆ ಸ್ವಚ್ಛವಾಗಿರಲು ಅವರು ನೀಡಿದ ಸಂದೇಶಗಳನ್ನು ಬಿತ್ತರಿಸಲಾಯಿತು. ಗಾಂಧೀಜಿ ನಡೆಸಿದ ಅಭಿಯಾನ, ಹೋರಾಟ, ಶುಚಿತ್ವ ಕಾರ್ಯಗಳಲ್ಲಿ ತೊಡಗಿಸಿಕೊಂಡ ವೀಡಿಯೊ ಹಾಗೂ ಚಿತ್ರಗಳನ್ನು ಪ್ರದರ್ಶಿಸಲಾಯಿತು. ಬಳಿಕ ಇದನ್ನು ಕೇಂದ್ರ ಸರಕಾರ ಮುಂದುವರಿಸಿದ ವಿಧಾನ ಹಾಗೂ ಸ್ವಚ್ಛತಾ ಅಭಿಯಾನ ಯೋಜನೆಯ ಕುರಿತ ಕಿರುಚಿತ್ರ, ಸಾಕ್ಷ್ಯಚಿತ್ರಗಳ ಮೂಲಕ ವಿವರಿಸಲಾಯಿತು. ಮನೆಯಲ್ಲಿ ಶೌಚಾಲಯ ನಿರ್ಮಿಸಲು ತಮ್ಮ ಕುಟುಂಬದ ವಿರುದ್ಧವೇ ಹೋರಾಟ ನಡೆಸಿದ ಮಹಿಳೆಯರ ಸಾಹಸದ ಕುರಿತ ಸಾಕ್ಷ್ಯಚಿತ್ರ ಪ್ರದರ್ಶನ ಮಕ್ಕಳಲ್ಲಿ ಜಾಗೃತಿ ಮೂಡಿಸಿತು. ಒಟ್ಟು 17 ಕಿರುಚಿತ್ರ, ಸಾಕ್ಷ್ಯಚಿತ್ರಗಳನ್ನು ಪ್ರದರ್ಶಿಸಲಾಯಿತು.

ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೆ ಪಿ.ಕೃಷ್ಣ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸಚಿವಾಲಯದ ಚಲನಚಿತ್ರ ವಿಭಾಗದ ಉಪ ಪ್ರಧಾನ ನಿರ್ದೇಶಕ ವಿ.ಎಸ್.ನಾಗರಾಜನ್, ಹಿರಿಯ ಅಧಿಕಾರಿ ಎಂ.ಆನಂದ್, ಬಸವರಾಜು ಹಾಜರಿದ್ದರು.

ಪ್ರಜಾವಾಣಿ

ಗುರುವಾರ • ನವೆಂಬರ್ 30, 2017

ಸ್ಮಾರ್ಟ್ ಸಿಟಿಗಿಂತ ಕೃಷಿಗೆ ಆದ್ಯತೆ ಸಿಗಲಿ

ವಿಚಾರ ಸಂಕಿರಣದಲ್ಲಿ ಉಪನ್ಯಾಸಕ ಪ್ರೊ.ಮಾರ್ಕ್ ಲಿಂಡ್ಲೆ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ಮಾರ್ಟ್ ಸಿಟಿ, ಬುಲೆಟ್ ಟ್ರೈನ್ ಯೋಜನೆಗಳು ಒಳ್ಳೆಯ ಪರಿಕಲ್ಪನೆಗಳು. ಆದರೆ, ಅದಕ್ಕಿಂತಲೂ 'ಸ್ಮಾರ್ಟ್ ಅಗ್ರಿಕಲ್ಚರ್' (ಸುಧಾರಿತ ಕೃಷಿ) ಕಾರ್ಯರೂಪಕ್ಕೆ ತರುವುದು ಹೆಚ್ಚು ಪ್ರಮುಖವಾದುದು' ಎಂದು ಔರಂಗಾಬಾದ್‌ನ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಮರಾಠವಾಡ ವಿಶ್ವ ವಿದ್ಯಾಲಯದ ಅತಿಥಿ ಉಪನ್ಯಾಸಕ ಪ್ರೊ.ಮಾರ್ಕ್ ಲಿಂಡ್ಲೆ ಅಭಿಪ್ರಾಯಪಟ್ಟರು.

ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆಯ (ಐಎಸ್‌ಇಸಿ) ರಾಮಕೃಷ್ಣ ಹೆಗಡೆ ವಿಕೇಂದ್ರೀಕರಣ ಮತ್ತು ಅಭಿವೃದ್ಧಿ ಅಧ್ಯಯನ ಪೀಠ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್‌ನ ಪ್ರಾದೇಶಿಕ ವಿಭಾಗಗಳ (ಐಐಪಿಎ-ಕೆಆರ್‌ಬಿ) ಆಶ್ರಯದಲ್ಲಿ ನಗರದಲ್ಲಿ ಬುಧವಾರ ಆಯೋಜಿಸಿದ್ದ 'ವಿಕೇಂದ್ರೀಕರಣ ಮತ್ತು ಪರ್ಯಾಯ ಅಭಿವೃದ್ಧಿ: ಗಾಂಧಿ ಮತ್ತು ಕುಮಾರಪ್ಪ ಅವರ ಪರಿಕಲ್ಪನೆಗಳ ಪರಿಶೋಧನೆ' ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

> ಗಾಂಧಿ ಮತ್ತು ಕುಮಾರಪ್ಪ ಅವರ ಆರ್ಥಿಕ ಚಿಂತನೆಗಳ ಬಗ್ಗೆ ಗುಣಾತ್ಮಕ ಸಂಶೋಧನೆ ನಡೆಸುವ ಅಗತ್ಯವಿದೆ. ಸಂಶೋಧಕರು ಈ ಬಗ್ಗೆ ಗಮನ ಹರಿಸಬೇಕು.
>
> ಎಸ್.ವಿ.ರಂಗನಾಥ್, ಐಐಪಿಎ ಪ್ರಾದೇಶಿಕ ವಿಭಾಗದ ಉಪಾಧ್ಯಕ್ಷ



ಕಾರ್ಯಕ್ರಮದಲ್ಲಿ ಪ್ರೊ.ಡಿ.ಜೀವನ್ ಕುಮಾರ್ ಮಾತನಾಡಿದರು. (ಎಡದಿಂದ) ರಾಮಕೃಷ್ಣ ಹೆಗಡೆ ವಿಕೇಂದ್ರೀಕರಣ ಮತ್ತು ಅಭಿವೃದ್ಧಿ ಅಧ್ಯಯನ ಪೀಠದ ಪ್ರೊ. ಜೋಸ್ ಚಾತುಕುಲಂ, ಐಎಸ್‌ಇಸಿ ನಿರ್ದೇಶಕ ಪ್ರೊ.ಎಂ.ಜಿ.ಚಂದ್ರಕಾಂತ್, ಡಾ.ವೂಡೆ ಪಿ.ಕೃಷ್ಣ, ಎಸ್.ವಿ.ರಂಗನಾಥ್ ಇದ್ದಾರೆ -ಪ್ರಜಾವಾಣಿ ಚಿತ್ರ

'ಕೋಟ್ಯಂತರ ಜನರ ಹಸಿವು ನೀಗಿಸಲು ಮತ್ತು ಅವರಿಗೆ ಬದುಕು ಕಟ್ಟಿಕೊಡಲು ಸುಧಾರಿತ ಕೃಷಿಗೆ ಒತ್ತು ಕೊಡಬೇಕು. ಆಹಾರದ ಕೊರತೆ ನೀಗಿಸಲು ಕೈಗೊಂಡ ಹಸಿರು ಕ್ರಾಂತಿ ಎರಡು ಪ್ರಯೋಗಗಳಿಗೆ ಸೀಮಿತವಾಗಬೇಕಿತ್ತು. ಆದರೆ, ಅದನ್ನು ಮುಂದುವರಿಸಿದ್ದರಿಂದ ಪರಿಸರದ ಮೇಲೆ ಅಡ್ಡಪರಿಣಾಮ ಉಂಟಾಗಿದೆ' ಎಂದರು.

'ಕಚ್ಚಾ ತೈಲ, ನೈಸರ್ಗಿಕ ಅನಿಲ, ಅದಿರುಗಳು, ಕಲ್ಲಿದ್ದಲು ಬಳಕೆಯಲ್ಲಿ ಮನುಷ್ಯ ಶಿಖರ ಹಂತ ತಲುಪಿಯಾಗಿದೆ. ನೈಸರ್ಗಿಕ ಸಂಪನ್ಮೂಲಗಳನ್ನು ಅಗತ್ಯಕ್ಕೆ ತಕ್ಕಷ್ಟು ಮಾತ್ರ ಬಳಸಿ, ಮುಂದಿನ ಪೀಳಿಗೆಗೆ ಕಾಪಾಡುವ ವಿವೇಚನೆ ಎಲ್ಲರಿಗೂ ಇರಬೇಕು. ಇದರಲ್ಲಿ ಸರ್ಕಾರದ ಜವಾಬ್ದಾರಿಯೂ ಇದೆ' ಎಂದು ಅವರು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಐಐಪಿಎ ಪ್ರಾದೇಶಿಕ ವಿಭಾಗದ ಉಪಾಧ್ಯಕ್ಷ ಎಸ್.ವಿ.ರಂಗನಾಥ್, 'ಗಾಂಧಿ ಮತ್ತು ಕುಮಾರಪ್ಪ ಅವರ ಆರ್ಥಿಕ ಪರಿಕಲ್ಪನೆಗಳು ಗ್ರಾಮೀಣಾಭಿವೃದ್ಧಿಗೆ ಪೂರಕವಾಗಿವೆ. ಆದರೆ, ಸ್ಥಾಪಿತ ಹಿತಾಸಕ್ತಿ, ವಿಷಯ ಪರಿಣತರ ಕೊರತೆಯಿಂದಾಗಿ ಅವರಿಬ್ಬರ ಆಲೋಚನೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ನಾವು ಸಫಲತೆ ಸಾಧಿಸಿಲ್ಲ' ಎಂದು ವಿಷಾದ ವ್ಯಕ್ತಪಡಿಸಿದರು.

ರಾಷ್ಟ್ರೀಯ ಉನ್ನತ ಅಧ್ಯಯನ ಸಂಸ್ಥೆಯ ಸ್ಕೂಲ್ ಆಫ್ ಸೋಷಿಯಲ್ ಸೈನ್ಸ್ ವಿಭಾಗದ ಪ್ರೊ.ನರೇಂದ್ರಪಾಣಿ, 'ಶ್ರೇಷ್ಠ ಅರ್ಥಶಾಸ್ತ್ರಜ್ಞ ಮತ್ತು ಸ್ವಾತಂತ್ರ್ಯ ಹೋರಾಟಗಾರ ಜೆ.ಸಿ.ಕುಮಾರಪ್ಪ ಅವರು ಪ್ರತಿಪಾದಿಸಿದ ಆರ್ಥಿಕ ವಿಚಾರಗಳು ಇಂದಿಗೂ ಪ್ರಸ್ತುತ. ಅವರು ಗಾಂಧಿ, ಅಂಬೇಡ್ಕರ್, ನೆಹರೂ ಅವರಂತೆ ಏಕೆ ಜನಪ್ರಿಯರಾಗಲಿಲ್ಲ; ಅವರ ಆರ್ಥಿಕ ನೀತಿಯನ್ನು ನಾವೇಕೆ ಅಳವಡಿಸಿಕೊಳ್ಳಲಿಲ್ಲ ಎನ್ನುವ ಪ್ರಶ್ನೆಗಳು ಇಂದಿಗೂ ಕಾಡುತ್ತವೆ' ಎಂದರು.

ಐಐಪಿಎ ಕರ್ನಾಟಕ ಪ್ರಾದೇಶಿಕ ಶಾಖೆಯ ಸಲಹೆಗಾರ ಪ್ರೊ.ಡಿ.ಜೀವನ್ ಕುಮಾರ್ 'ಸದ್ಯ ಅನುಸರಿಸುತ್ತಿರುವ ಅಭಿವೃದ್ಧಿ ಮಾರ್ಗದಲ್ಲಿ ತಕ್ಷಣದ ಲಾಭ ಮತ್ತು ಯಶಸ್ಸು ಸಿಗಬಹುದು. ಆದರೆ, ಭವಿಷ್ಯದ ದೃಷ್ಟಿಯಿಂದ ಇದು ಸರಿಪಡಿಸಲಾಗದ ಸಮಸ್ಯೆ ಸೃಷ್ಟಿಸುತ್ತಿದೆ. ಇದನ್ನು ಸರಿ ದಾರಿಗೆ ತರಲು ಗಾಂಧಿ ಮತ್ತು ಕುಮಾರಪ್ಪ ಅವರ ಆರ್ಥಿಕ ಸಿದ್ಧಾಂತಗಳು ಪರ್ಯಾಯ' ಎಂದರು.

ವಿಜಯ ವಾಣಿ

ಬುಧವಾರ 29 ನವೆಂಬರ್ 2017
VIJAYAVANI » 29 NOVEMBER 2017

ಆನಂದವಿಲ್ಲದ ಸಮಾಜಕ್ಕೆ ಅರ್ಥವಿಲ್ಲ

ಸುಪ್ರೀಂಕೋರ್ಟ್ ನಿವೃತ್ತ ಸಿಜೆ ಎಂ.ಎನ್. ವೆಂಕಟಾಚಲಯ್ಯ ಅಭಿಮತ



ಸರ್ ಆರ್. ವೆಂಕಟರತ್ನಂ ನಾಯ್ಡು ಅವರ ಸಾಮಾಜಿಕ ಕೆಲಸಗಳ ಸಮಗ್ರ ಕೃತಿ-3 ಸಂಪುಟಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಸುಪ್ರೀಂಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ, ಮಲ್ಲೇಪುರಂ ಜಿ. ವೆಂಕಟೇಶ್, ಡಾ. ವೂಡೇ ಪಿ. ಕೃಷ್ಣ ಮತ್ತಿತರರಿದ್ದರು.

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಆನಂದ ಎಂಬುದು ಇಲ್ಲದೇ ಹೋದಲ್ಲಿ ಸಮಾಜಕ್ಕೆ ಅರ್ಥವೇ ಇಲ್ಲ ಎಂದು ಸುಪ್ರೀಂಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಹೇಳಿದ್ದಾರೆ.

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಹಾಗೂ ಬೆಂಗಳೂರು ಬ್ರಹ್ಮ ಸಮಾಜ ಸಂಸ್ಥೆ ಸಹಯೋಗದಲ್ಲಿ ಸೋಮವಾರ ಶೇಷಾದ್ರಿಪುರಂ ಕಾಲೇಜಿನಲ್ಲಿ ಆಯೋಜಿಸಿದ್ದ ಸರ್ ಆರ್. ವೆಂಕಟರತ್ನಂ ನಾಯ್ಡು ಅವರ ಸಾಮಾಜಿಕ ಕೆಲಸಗಳ ಸಮಗ್ರ ಕೃತಿ-3 ಸಂಪುಟಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಾಮಾಜಿಕ ಚಳವಳಿಗಳಲ್ಲಿ ಘರ್ಷಣೆಯೇ ಪ್ರಧಾನವಾಗಿದ್ದ ಕಾಲದಲ್ಲಿ ಆನಂದ, ಚೈತನ್ಯ ಮುಖ್ಯ ಎಂದು ವೆಂಕಟರತ್ನಂ ಪ್ರತಿಪಾದಿಸಿದರು. ತಮ್ಮ ಬರವಣಿಗೆಗಳಲ್ಲಿ ಆನಂದವನ್ನು ಅನುಭವಿಸಿದರು ಎಂಬ ಸಂಗತಿ ಅವರ ಕೃತಿಗಳ ಮೂಲಕ ತಿಳಿಯುತ್ತದೆ. ವೆಂಕಟರತ್ನಂಗೆ ಆಗಿರುವ ಆನಂದ ಅವರ ಭಾಷೆಯಲ್ಲಿ ಪ್ರತೀತಗೊಳ್ಳುತ್ತಿದೆ ಎಂದರು.

ಸರ್ ಆರ್. ವೆಂಕಟರತ್ನಂ ನಾಯ್ಡು ಕೃತಿ ಬಿಡುಗಡೆ

ಬ್ರಹ್ಮ ಸಮಾಜದ ಹಿನ್ನೆಲೆಯಲ್ಲಿ ಕುವೆಂಪು ಅಧ್ಯಯನ: ಕುವೆಂಪು ಅವರನ್ನು ಬ್ರಹ್ಮ ಸಮಾಜದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬೇಕಾದ ಆವಶ್ಯಕತೆ ಇದೆ ಎಂದು 'ವಿಜಯವಾಣಿ' ಅಂಕಣಕಾರ ಹಾಗೂ ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದರು.

ಕುವೆಂಪು ಸಾಹಿತ್ಯದಲ್ಲಿ ಆನಂದ, ಚೈತನ್ಯ ಹಾಗೂ ಲೀಲೆಗಳ ಅಂಶಗಳನ್ನು ಗಮನಿಸಬಹುದು. ಇದು ರವೀಂದ್ರನಾಥ ಠಾಕೂರ್ ಅವರಿಂದ ಪ್ರೇರಿತವಾದ ಅಂಶಗಳು. ಅಲ್ಲದೆ ಜಡತ್ವ ಎಂಬುದು ಸುಳ್ಳೆಂಬ ಅವರ ಪರಿಕಲ್ಪನೆ ಸಿಕ್ಕಿದ್ದು ಕೊಲ್ಕತ್ತದ ಬ್ರಹ್ಮ ಸಮಾಜದ ಮೂಲಕ. ರವೀಂದ್ರನಾಥ ಟ್ಯಾಗೋರ್ ವಿರಚಿತ 'ಗೀತಾಂಜಲಿ'ಯಲ್ಲಿ ಆನಂದ, ಸಂತೋಷ ವಿಷಯಗಳನ್ನು ತಿಳಿಯಬಹುದು. ಆದರೆ ಕುವೆಂಪು ಅವರನ್ನು ಬ್ರಹ್ಮ ಸಮಾಜದ ಹಿನ್ನೆಲೆಯಲ್ಲಿ ಇನ್ನೂ ಅಧ್ಯಯನಗಳು ನಡೆದಿಲ್ಲ ಎಂದರು.

ಬೆಂಗಳೂರು ಬ್ರಹ್ಮ ಸಮಾಜದ ಕಾರ್ಯದರ್ಶಿ ಡಬ್ಲ್ಯು. ಎಚ್. ದೇವಕುಮಾರ್, ಕರ್ನಾಟಕ ಸಂಸ್ಕೃತಿ ವಿವಿ ಸಹಾಯಕ ಪ್ರಾಧ್ಯಾಪಕ ಡಾ. ಪಿ.ವಿನಯ್, ಕಾಲೇಜು ಪ್ರಾಂಶುಪಾಲೆ ಡಾ. ಅನುರಾಧ ರಾಯ್ ಮತ್ತಿತರರಿದ್ದರು.

ಸಾಮಾಜಿಕ ಪುನರುತ್ಥಾನಕ್ಕೆ ಅವಕಾಶ

ಸಾಮಾಜಿಕ ಹಾಗೂ ಸಾಂಸ್ಕೃತಿಕ ಪುನರುತ್ಥಾನ ಮಾಡಿದವರಲ್ಲಿ ಸರ್ ಆರ್. ವೆಂಕಟರತ್ನಂ ನಾಯ್ಡು ಪಾತ್ರ ಹಿರಿದು. ಭಾರತದ ಯಾವುದೇ ಪತ್ರ, ಗ್ರಂಥಗಳಲ್ಲಿ ಈ ಬಗೆಯ ಮಾಹಿತಿ ಇಲ್ಲ. ಕೊಲ್ಕತ್ತಕ್ಕೆ ಬಂದು ಹೊಸ ರೂಪ ಕೊಡಲು ಬ್ರಹ್ಮ ಸಮಾಜದ ಪಾತ್ರ ಹೆಚ್ಚಿದೆ. ಉಪನಿಷತ್ ಆಧಾರದ ಮೇಲೆ ಬ್ರಹ್ಮ ಸಮಾಜದ ಪೂರ್ಣ ಪರಿಕಲ್ಪನೆ ಇತ್ತು. ಉಪನಿಷತ್‌ಗಳಲ್ಲಿರುವ ಕೆಲವು ತಾತ್ವಿಕ ವಿಚಾರಗಳನ್ನು ಸಾಧನಾ ಮಾರ್ಗದಲ್ಲಿ ಕೊಂಡೊಯ್ದರು. ಈ ಮೂಲಕ ಸಾಮಾಜಿಕ ಪುನರುತ್ಥಾನಕ್ಕೆ ಅವಕಾಶ ಮಾಡಿಕೊಟ್ಟರು ಎಂದು ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದರು.

ಸಾರ್ವಜನಿಕ ಬದುಕು ಹಾಗೂ ಹಣದಲ್ಲಿ ಪರಿಶುದ್ಧತೆ ಇಂದಿನ ಪ್ರಮುಖ ಅಗತ್ಯತೆ. ವೆಂಕಟರತ್ನಂ ನಾಯ್ಡು ಅಂದಿನ ಕಾಲಕ್ಕೆ ಸಾಮಾಜಿಕ ಪಿಡುಗಿನ ವಿರುದ್ಧ ಹೋರಾಡಿ, ಸಾರ್ವಜನಿಕವಾಗಿ ಪರಿಶುದ್ಧ ಜೀವನ ಶೈಲಿ ಹೇಗೆ ಸಾಧ್ಯ ಎಂಬುದನ್ನು ತೋರಿಸಿಕೊಟ್ಟರು.

। ಡಾ. ವೂಡೇ ಪಿ. ಕೃಷ್ಣ
ಶೇಷಾದ್ರಿಪುರಂ ಕಾಲೇಜಿನ ಗೌರವ ಕಾರ್ಯದರ್ಶಿ

ಸಂಜೆವಾಣಿ

7 ಮಂಗಳವಾರ 28 ನವೆಂಬರ್ 2017



ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ನಡೆದ ದಿ ಕಂಪ್ಲೀಟ್ ವರ್ಕ್ಸ್ ಆಫ್ ಆರ್. ವೆಂಕಟರತ್ನಂ ನಾಯ್ಡು ಅವರ 3 ಸಂಪುಟಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ, ಸಾಹಿತಿ ಡಾ. ಮಲ್ಲೇಪುರಂ ವೆಂಕಟೇಶ್, ಶೇಷಾದ್ರಿಪುರಂ ಶಿಕ್ಷಣದತ್ತಿಯ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಮತ್ತಿತರರು ಭಗವಹಿಸಿದ್ದರು.

ಹೊಸ ದಿಗಂತ

ಮಂಗಳವಾರ
28 ನವೆಂಬರ್ 2017

ದಿಗಂತ ಚಿತ್ರ




ಶೇಷಾದ್ರಿಪುರ ಕಾಲೇಜನಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ದಿ ಕಂಪ್ಲೀಟ್ ವರ್ಕ್ಸ್ ಆಫ್ ಆರ್.ವೆಂಕಟರತ್ನಂ ನಾಯ್ಡು ಕೃತಿಯನ್ನು ನಿವೃತ್ತ ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಬಿಡುಗಡೆಗೊಳಿಸಿದರು. ಸಾಹಿತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ.ಕೃಷ್ಣ ಮತ್ತಿತರರಿದ್ದರು.

ಈ ಸಂಜೆ

ಸೋಮವಾರ, 27 ನವೆಂಬರ್, 2017

ವೆಂಕಟರತ್ನಂ ನಾಯ್ಡು ಶುದ್ಧ ಸಂತೋಷ ಹಂಚಿದರು



ಬೆಂಗಳೂರು, ನ.27- ವೆಂಕಟ ರತ್ನಂ ನಾಯ್ಡು ಅವರು ಶುದ್ಧ ಸಂತೋಷವನ್ನು ಪ್ರತಿನಿಧಿಸಿದವರು. ಅವರು ಜೀವನದಲ್ಲಿ ಪ್ರತಿ ಕ್ಷಣವನ್ನು ಅರ್ಥಪೂರ್ಣವಾಗಿ ಬದುಕಿದವರು ಎಂದು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ವೂಡೆ ಪಿ.ಕೃಷ್ಣ ಅವರು ಶ್ಲಾಘಿಸಿದರು.

ನಗರದ ಶೇಷಾದ್ರಿಪುರಂ ಕಾಲೇಜು ಮತ್ತು ಬೆಂಗಳೂರು ಬ್ರಹ್ಮ ಸಮಾಜ ಸಹಯೋಗದಲ್ಲಿ ದಿ ಕಂಪ್ಲೀಟ್ ವರ್ಕ್ ಆಫ್ ಆರ್.ವೆಂಕಟರತ್ನಂನಾಯ್ಡು ಎಂಬ ಕೃತಿಯ ಮೂರು ಸಂಪುಟಗಳನ್ನು ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಮಾಜಿಕ ಕ್ಷೇತ್ರದಲ್ಲಿ ಈ ಕೃತಿ ಮಹತ್ವದ್ದಾಗಿದೆ. ಇದೊಂದು ರಾಷ್ಟ್ರೀಯ ಕಾರ್ಯಕ್ರಮವಾಗಿದ್ದು ಇತಿಹಾಸ ಗುರುತು ಮಾಡುವ ದಿನವಾಗಿದೆ ಎಂದು ಸ್ಮರಿಸಿದರು.

ನಾಯ್ಡು ಅವರು ಸಚ್ಚಿದಾನಂದ ತತ್ವದ ಪ್ರತಿನಿಧಿಯಾಗಿದ್ದರು. ಪ್ರತಿಯೊಬ್ಬರೂ ಅವರ ಜೀವನ ಚರಿತ್ರೆಯನ್ನು ಓದಬೇಕು. ಸಾರ್ವ ಜನಿಕ ಬದುಕು ಮತ್ತು ಸಾರ್ವಜನಿಕ ಹಣ ಎರಡನ್ನೂ ನಿಭಾಯಿಸುವಲ್ಲಿ ಪರಿಶುದ್ಧತೆ ಹೊಂದಿದವರಾಗಿದ್ದ ಇವರು ರಾಜಾರಾಂ ಮೋಹನ್‌ರಾಯ್ ಅವರಿಂದ ಸ್ಫೂರ್ತಿಪಡೆದಿದ್ದವರು ಎಂದರು.

ನಾಯ್ಡು ಅವರ ಕಾಲಘಟ್ಟದಲ್ಲಿ ನೃತ್ಯಕ್ಕಾಗಿ ಹೆಣ್ಣು ಮಕ್ಕಳನ್ನು ಬಳಸಿಕೊಳ್ಳಲಾಗಿತ್ತು. ಈ ಸಾಮಾಜಿಕ ಅನಿಷ್ಟ ಪದ್ಧತಿಯ ವಿರುದ್ಧ ಹೋರಾಡಿ ಅದನ್ನು ಕೊನೆಗಾಣಿಸಿದ ಮಹಾನ್ ಭಕ್ತ ಎಂದು ಬಣ್ಣಿಸಿದರು.

ಸಂಸ್ಕೃತ ವಿವಿ ಕುಲಪತಿ ಡಾ.ಮಲ್ಲೇಪುರ ಜಿ.ವೆಂಕಟೇಶ್ ಮಾತನಾಡಿ, ನಾಯ್ಡು ಅವರು ಬ್ರಹ್ಮಸಮಾಜಕ್ಕೆ ಹೊಸ ರೂಪ ನೀಡಿದವರು. ಅವರ ಕೃತಿಗಳನ್ನು ಓದಿದರೆ ಜ್ಞಾನದ ಅರಿವು, ಆಳ ಎಷ್ಟೆಂಬುದು ತಿಳಿಯುತ್ತದೆ. ಇಂತಹ ಶ್ರೇಷ್ಠ ವ್ಯಕ್ತಿಯ ಸಮಗ್ರ ಕೃತಿಗಳು ಸಂಪುಟ ರೂಪದಲ್ಲಿ ಲೋಕಾರ್ಪಣೆಗೊಂಡಿದ್ದು ಸಂತೋಷದ ವಿಷಯ. ಸಾಂಸ್ಕೃತಿಕ ಪುನರುತ್ಥಾನವನ್ನು ಈ ಕೃತಿಗಳು ಪ್ರತಿನಿಧಿಸುತ್ತವೆ ಎಂದ ಅವರು, ಬ್ರಹ್ಮಸಮಾಜಕ್ಕೆ ಇದೊಂದು ಹೊಸ ಚಾಲನೆ ಎಂದು ಶ್ಲಾಘಿಸಿದರು.

ನಿವೃತ್ತ ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಅವರು ದಿ ಕಂಪ್ಲೀಟ್ ವರ್ಕ್ ಆಫ್ ಆರ್.ವೆಂಕಟರತ್ನಂನಾಯ್ಡು ಕುರಿತ ಕೃತಿ ಲೋಕಾರ್ಪಣೆ ಮಾಡಿದರು.

ಕಾಲೇಜಿನ ಪ್ರಾಂಶುಪಾಲ ಡಾ.ಅನುರಾಧ ರಾಯ್, ಆಡಳಿತ ಸಮಿತಿಯ ಅಧ್ಯಕ್ಷ ಎಂ.ಎಸ್.ನಟರಾಜ್ ಮತ್ತಿತರರು ಉಪಸ್ಥಿತರಿದ್ದರು.

ವಿಜಯ ಕರ್ನಾಟಕ
ಗುರುವಾರ,23 ನವೆಂಬರ್ 2017

ಎಲ್ಲಿ-ಏನು?


ಗುರುವಾರ

ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು:ಕರ್ನಾಟಕ



ರಾಜ್ಯೋತ್ಸವ ಸಮಾರಂಭ ಹಾಗೂ ಕಾಡು ಹಾದಿಯ ಹೂಗಳು ಸಿನಿಮಾ ಪ್ರದರ್ಶನ. ಉದ್ಘಾಟನೆ: ಶೇಷಾದ್ರಿಪುರ ಶಿಕ್ಷಣ ದತ್ತಿ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ. ಸ್ಥಳ: ಶೇಷಾದ್ರಿಪುರ ಶಿಕ್ಷಣ ದತ್ತಿ ಸಭಾಂಗಣ, 2ನೇ ಮಹಡಿ, ಶೇಷಾದ್ರಿಪುರ. 11.00

ವಿಶ್ವವಾಣಿ
20.11.2017 | ಸೋಮವಾರ



ಬುದ್ಧ ಬಸವ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಕೆ.ಎಂ ಶೈಲೇಶ್ ಅವರ 'ಧರೆಗೆ ದೊಡ್ಡವರು' ಕವನ ಸಂಕಲನವನ್ನು ಶಿಕ್ಷಣ ತಜ್ಞ ಡಾ.ವೂಡೇ ಪಿ.ಕೃಷ್ಣ ಬಿಡುಗಡೆಗೊಳಿಸಿದರು. ಲೇಖಕ ಎ.ಆರ್ ರಘುರಾಂ ಮತ್ತಿತರರು ಉಪಸ್ಥಿತರಿದ್ದರು.

ವಾರ್ತಾ ಭಾರತಿ

ಸೋಮವಾರ, ನವೆಂಬರ್ ೨೦, ೨೦೧೭

ಜನಪದ ಮಹಾಕಾವ್ಯ ದೇಶದ ಮೂಲ ಪರಂಪರೆ

ಡಿಸಿಪಿ ಸಿದ್ದರಾಜು



ಬೆಂಗಳೂರು, ನ.19: ಜನಪದ ಮಹಾಕಾವ್ಯಗಳು ನಮ್ಮ ಪರಂಪರೆಯಾಗಿದ್ದು, ಪರಿಸರ ಹಾಗೂ ಜೀವಪರ ಆಶಯಗಳನ್ನು ಹೊಂದಿವೆ. ಈ ಪರಂಪರೆಯನ್ನು ಜೀವಂತವಾಗಿಡುವುದು ನಮ್ಮ ಆದ್ಯ ಕರ್ತವ್ಯವಾಗಬೇಕು ಎಂದು ಉಪ ಪೊಲೀಸ್ ಆಯುಕ್ತ ಸಿದ್ದರಾಜು ತಿಳಿಸಿದರು.

ರವಿವಾರ ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ನಗರದ ಕನ್ನಡ ಸಾಹಿತ್ಯ ಪರಿಷತ್‌ನ ಕುವೆಂಪು ಸಭಾಂಗಣದಲ್ಲಿ ಆಯೋಜಿಸಿದ್ದ ಕವಿ ಕೆ.ಎಂ.ಶೈಲೇಶ್‌ರವರ 'ಧರೆಗೆ ದೊಡ್ಡವರು' ಕೃತಿಯ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಜನಪದ ಪರಂಪರೆಯ ಮೂಲ ಸಾರವನ್ನು ನಮ್ಮ ಮನಸುಗಳಲ್ಲಿ ಹಾಸುಹೊಕ್ಕಾಸಿಕೊಂಡಾಗ ಮಾತ್ರ ನಮ್ಮ ನೆಲದ ಕುರಿತು ಪ್ರೀತಿ, ಅಭಿಮಾನ ಹುಟ್ಟಲು ಸಾಧ್ಯವೆಂದು ತಿಳಿಸಿದರು.

ಇವತ್ತಿನ ಆಧುನಿಕ ಜೀವನದಲ್ಲಿ ಯುವ ಜನತೆಯನ್ನು ದಾರಿ ತಪ್ಪಿಸುವಂತಹ ಅಂಶಗಳೇ ಹೆಚ್ಚಿವೆ. ಇಂತಹ ಸಂದರ್ಭದಲ್ಲಿ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದು ಸವಾಲಿನ ಕೆಲಸವಾಗಿದೆ. ಹೀಗಾಗಿ ಸಂಘ, ಸಂಸ್ಥೆಗಳು ನಮ್ಮ ಜನಪದ ಸಂಸ್ಕೃತಿಯನ್ನು ಯುವ ತಲೆಮಾರಿಗೆ ತಲುಪಿಸುವಂತಹ ಕೆಲಸವಾಗಬೇಕು ಎಂದು ಅವರು ಹೇಳಿದರು.

ವೇಗದ ಜೀವನಕ್ಕೆ ಸಿಲುಕಿರುವ ನಾವು ತಾಳ್ಮೆಯನ್ನು ಕಳೆದುಕೊಳ್ಳುತ್ತಿದ್ದೇವೆ. ನಮ್ಮ ಸುತ್ತಮುತ್ತಲು ನಡೆಯುವ ಪ್ರತಿಯೊಂದು ಘಟನೆಯನ್ನು ತಪ್ಪಾಗಿ ಅರ್ಥೈಸಿಕೊಳ್ಳುತ್ತಿದ್ದೇವೆ. ಇದರಿಂದ ಮನುಷ್ಯ ಸಂಬಂಧಗಳು ಹಾಳಾಗುತ್ತಿವೆ. ಹೀಗಾಗಿ ಪರಿಸ್ಥಿತಿಯ ಕಾರಣಕ್ಕಾಗಿ ಕೆಲವರು ತಪ್ಪು ದಾರಿಗೆ ಹೋಗಬಹುದು. ಅದನ್ನೇ ದೊಡ್ಡದು ಮಾಡುವುದರಲ್ಲಿ ಯಾವುದೇ ವಿಶೇಷತೆಯಿಲ್ಲ. ಅಂತಹವರನ್ನು ಕ್ಷಮಿಸಿ ಸರಿದಾರಿಗೆ ಕರೆದೊಯ್ಯುವಂತಹ ಕೆಲಸ ಮಾಡಬೇಕಾಗಿದೆ ಎಂದು ಅವರು ಆಶಿಸಿದರು.


ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ಇತ್ತೀಚೆಗೆ ಕೆಲವರು ತಮ್ಮ ಸ್ವಾರ್ಥಕ್ಕಾಗಿ ಜಾತಿ, ಧರ್ಮ, ಭಾಷೆಗಳ ಮಧ್ಯೆ ದ್ವೇಷ ಬಿತ್ತುವಂತಹ ಕೆಲಸದಲ್ಲಿ ನಿರತರಾಗಿದ್ದಾರೆ. ಇಂತಹ ವಿಚಾರಗಳಿಗೆ ಜನತೆ ಆಸಕ್ತಿ ತೋರದಂತೆ ಮಾಡಲು ಸಾಹಿತ್ಯ-ಸಂಸ್ಕೃತಿಯಿಂದ ಮಾತ್ರ ಸಾಧ್ಯವಾಗಿದೆ. ಹೀಗಾಗಿ ನಾಡಿನ ಎಲ್ಲ ಮನಸುಗಳಲ್ಲಿ ಸಾಹಿತ್ಯ ವಿಚಾರಗಳು ಮೊಳಕೆಯೊಡೆಯಬೇಕು ಎಂದು ಆಶಿಸಿದರು.

ಬುದ್ಧ, ಬಸವ, ಗಾಂಧಿ ಸಾಂಸ್ಕೃತಿಕ ಟ್ರಸ್ಟ್‌ನ ಅಧ್ಯಕ್ಷ ಎಸ್.ರಾಮಲಿಂಗೇಶ್ವರ ಮಾತನಾಡಿ, ಕಳೆದ 20ವರ್ಷಗಳಿಂದ ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಯುವ ಜನತೆಯನ್ನು ಕೇಂದ್ರವಾಗಿಸಿಕೊಂಡು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬರುತ್ತಿದೆ. ಯುವ ಜನತೆ ಎಚ್ಚೆತ್ತರೆ ಮಾತ್ರ ದೇಶದ ಸರ್ವತೋಮುಖ ಅಭಿವೃದ್ಧಿ ಸಾಧ್ಯವೆಂದು ನಂಬಿಕೊಂಡು ಟ್ರಸ್ಟನ್ನು ಮುನ್ನಡೆಸಿಕೊಂಡು ಬರಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಕೃತಿ ಚಿಂತಕ ಎ.ಆರ್.ರಘುರಾಂ 'ಧರೆಗೆ ದೊಡ್ಡವರು' ಕೃತಿಯ ಕುರಿತು ಮಾತನಾಡಿದರು. ಈ ವೇಳೆ ಡಾ.ಸಿ.ಕೆ.ಮೂರ್ತಿ, ಬಸವ ವೇದಿಕೆಯ ನಾ.ಮಲ್ಲಿಕಾರ್ಜುನ, ಕೃತಿಕಾರ ಕೆ.ಎಂ.ಶೈಲೇಶ್ ಮತ್ತಿತರರಿದ್ದರು.

ಸಂಜೆವಾಣಿ

ಭಾನುವಾರ 19 ನವೆಂಬರ್ 2017



ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಇಂದು ನಡೆದ 'ಧರೆಗೆ ದೊಡ್ಡವರು' ಕವನ ಸಂಕಲನವನ್ನು ಶಿಕ್ಷಣ ತಜ್ಞ ಡಾ.ವೂಡೇ ಪಿ ಕೃಷ್ಣರವರು ಬಿಡುಗಡೆ ಮಾಡಿದರು. ಕಲಾವಿದ ಕೆ.ಎಂ.ಶೈಲೇಶ್, ಕನ್ನಡ ನಾಡು - ನುಡಿ ಸಂಕೃತಿ ಪೋಷಕ ಡಾ.ಸಿ.ಕೆ.ಮೂರ್ತಿ, ಸಿಎಆರ್‌ನ ಉಪ ಪೊಲೀಸ್ ಆಯುಕ್ತ ಸಿದ್ದರಾಜು, ಮತ್ತಿತರರು ಭಾಗವಹಿಸಿದ್ದರು.

ಈ ಸಂಜೆ

ಭಾನುವಾರ, 19-11-2017



ಚಾಮರಾಜಪೇಟೆಯ ಕಸಾಪ ಕುವೆಂಪು ಸಭಾಂಗಣದಲ್ಲಿ ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಕಲಾವಿದ ಕೆ.ಎಂ.ಶೈಲೇಶ್ ವಿರಚಿತ ಧರೆಗೆ ದೊಡ್ಡವರು ಕವನ ಸಂಕಲನ ಲೋಕಾರ್ಪಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ, ಕನ್ನಡ ನಾಡು-ನುಡಿ ಸಂಸ್ಕೃತಿ ಪೋಷಕ ಡಾ.ಸಿ.ಕೆ.ಮೂರ್ತಿ, ಲೇಖಕ ಎ.ಆರ್.ರಘುರಾಂ, ಸಿಎಆರ್(ದಕ್ಷಿಣ) ಉಪ ಪೊಲೀಸ್ ಆಯುಕ್ತ ಸಿದ್ದರಾಜು, ಬಸವ ವೇದಿಕೆ ಪ್ರಧಾನ ಕಾರ್ಯದರ್ಶಿ ನಾ.ಮಲ್ಲಿಕಾರ್ಜುನ್ ಮತ್ತಿತರರು ಉಪಸ್ಥಿತರಿದ್ದರು.

ಹಿರಿಯ ಸಾಹಿತಿ ಬಿ.ಆರ್.ಲಕ್ಷ್ಮಣರಾವ್ ಕಳವಳ

ಕನ್ನಡಿಗರಿಂದಲೇ ಕನ್ನಡಕ್ಕೆ ಅಪಾಯದ ಭೀತಿ

■ ವಿಕ ಸುದ್ದಿಲೋಕ ಯಲಹಂಕ

ಕನ್ನಡ ಭಾಷೆ ಬಳಸಲು ಕೀಳರಿಮೆ ಬೇಡ ಎಂದು ಹಿರಿಯ ಸಾಹಿತಿ ಹಾಗೂ ಲೇಖಕ ಬಿ.ಆರ್.ಲಕ್ಷ್ಮಣರಾವ್ ಹೇಳಿದರು.

ಯಲಹಂಕ ಉಪನಗರ ಶೇಷಾದ್ರಿಪುರಂ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ''ಕನ್ನಡ ಭಾಷೆ ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಪ್ರತಿಯೊಬ್ಬ ಕನ್ನಡಿಗನೂ ಕಾರ್ಯಪ್ರವೃತ್ತನಾಗಬೇಕು. ಬೇರೆ ಬೇರೆ ಭಾಷೆಗಳನ್ನು ಕಲಿಯುವುದು ತಪ್ಪಲ್ಲ, ಆದರೆ ಕೇವಲ ಪ್ರತಿಷ್ಠೆಗಾಗಿ ಇಂಗ್ಲಿಷ್ ಅಥವಾ ಇನ್ನಿತರ ಭಾಷೆಗಳನ್ನು ಮಾತನಾಡುವುದು ಮಾತೃಭಾಷೆ ಕನ್ನಡಕ್ಕೆ ಅನ್ಯಾಯ ಮಾಡುವಂತಾಗುತ್ತದೆ,'' ಎಂದು ಆತಂಕ ವ್ಯಕ್ತಪಡಿಸಿದರು.

''ಮನೆಗಳಲ್ಲಿ ಪೋಷಕರು ಮಕ್ಕಳೊಡನೆ ಕನ್ನಡದಲ್ಲೇ ಮಾತನಾಡಿದಾಗ ಭಾಷೆ ತಂತಾನೇ ಅಭಿವೃದ್ಧಿಯಾಗುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಕನ್ನಡಿಗರ ನಿರಾಭಿಮಾನದಿಂದ ಕನ್ನಡಿಗರಿಂದಲೇ ಕನ್ನಡಕ್ಕೆ ಕಂಟಕವಾಗುತ್ತಿದೆ,'' ಎಂದರು.



ಯಲಹಂಕ ಉಪನಗರದ ಶೇಷಾದ್ರಿಪುರಂ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕಳಶ ಹೊತ್ತು ತಾಯಿ ಭುವನೇಶ್ವರಿ ದೇವಿಯ ಬೆಳ್ಳಿಯ ರಥೋತ್ಸವದ ಮೆರವಣಿಗೆ ನಡೆಸಿದರು.

''1956ನವೆಂಬರ್‌ನಲ್ಲಿ ಕರ್ನಾಟಕವಲ್ಲದೆ ಆಂಧ್ರಪ್ರದೇಶ, ಕೇರಳ ಗುಜರಾತ್ ರಾಜ್ಯಗಳು ಸಹ ಉದಯವಾಯಿತು. ಆದರೆ ಆ ರಾಜ್ಯಗಳಲ್ಲಿ ಯಾವುದೇ ಉತ್ಸವ ಸಮಾರಂಭಗಳು ನಡೆಯುವುದಿಲ್ಲ, ಆ ರಾಜ್ಯಗಳ ಭಾಷೆಗಳು ಗಟ್ಟಿನೆಲೆಯಲ್ಲಿ ನಿಂತಿದ್ದು ಅಲ್ಲಿನ ಜನ ಆ ಭಾಷೆಗಳನ್ನು ಬಿಟ್ಟು ಬೇರೆ ಭಾಷೆಗಳನ್ನು ಮಾತನಾಡುವುದಿಲ್ಲ. ಅಲ್ಲದೆ ಅಲ್ಲಿನ ಸರಕಾರಗಳು ಸಹ ಪ್ರಾಂತೀಯ ಭಾಷೆಗಳಿಗೆ ಆಡಳಿತ ಮಾನ್ಯತೆ ನೀಡಿರುವುದರಿಂದ ಆ ಭಾಷೆಗಳಿಗೆ ಯಾವುದೇ ಕುತ್ತು ಬಂದಿಲ್ಲ. ಆದರೆ ಕನ್ನಡಿಗರ ಬಹು ಔದಾರ್ಯ ಕನ್ನಡ ಭಾಷೆಗೆ ಕುತ್ತು ಬಂದಿದೆ,'' ಎಂದು ಕಳವಳ ವ್ಯಕ್ತಪಡಿಸಿದರು.

> **ಕನ್ನಡ ಹೃದಯ ಭಾಷೆಯಾಗ ಬೇಕು. ಅನ್ನಭಾಷೆಯಾಗಿ ಬೆಳೆಯಬೇಕು**

ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ ಮಾತನಾಡಿ, ''ಕನ್ನಡ ವಿಶ್ವದಲ್ಲೇ ಅತಿಪುರಾತನ ಹಾಗೂ ಶಾಸ್ತ್ರೀಯ ಭಾಷೆ. ಸಾಹಿತ್ಯ ಸಂಸ್ಕೃತಿ ಸಂಗೀತಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆ ನೀಡಿದೆ. ಈ ಶ್ರೀಮಂತಿಕೆಯನ್ನು ಉಳಿಸಿಕೊಳ್ಳುವಲ್ಲಿ ವಿದ್ಯಾರ್ಥಿಗಳ ಪಾತ್ರ ಪ್ರಮುಖವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಕನ್ನಡಕ್ಕೆ ಸ್ವಲ್ಪಮಟ್ಟಿನ ಸ್ಥಾನಮಾನವಿದ್ದರೆ, ಅದು ಕನ್ನಡ ಸಾಹಿತಿಗಳು, ಲೇಖಕರ ಶ್ರಮದಿಂದ ಮಾತ್ರ. ಕನ್ನಡ ಹೃದಯ ಭಾಷೆಯಾಗಬೇಕು. ಅನ್ನಭಾಷೆಯಾಗಿ ಬೆಳೆಯಬೇಕು,'' ಎಂದರು.

ನಾವು ಕನ್ನಡಿಗರು
ಬುಧವಾರ
15-11-2017

ಗಾಂಧಿ ತತ್ವಾನುಯಾಯಿ ಡಾ. ವೂಡೇ ಪಿ. ಕೃಷ್ಣ ಅವರಿಗೆ ಗಾಂಧಿ ಪುದುವಟ್ಟು ಪ್ರಶಸ್ತಿ
ಹಿರಿಯ ಸಾಹಿತಿ ಕೆ.ಟಿ. ಗಟ್ಟಿ ಅವರಿಗೆ ಟಿ. ಶ್ರೀನಿವಾಸ ನೆನಪಿನ ಪಿ.ಕೆ. ನಾರಾಯಣ ಪ್ರಶಸ್ತಿ

ಬೆಂಗಳೂರು: ಶ್ರೀಕೃಷ್ಣರಾಜ ಪರಿಷನ್ಮಂದಿರದಲ್ಲಿ ಇತ್ತೀಚೆಗೆ ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ ಸಮಾರಂಭದಲ್ಲಿ ಗಾಂಧಿ ತತ್ವಾನುಯಾಯಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಅವರಿಗೆ ಗಾಂಧಿ ಪುದುವಟ್ಟು ಪ್ರಶಸ್ತಿ (ದತ್ತಿದಾನಿಗಳು: ಎ.ಆರ್. ನಾರಾಯಣಘಟ್ಟ ಮತ್ತು ಸರೋಜಮ್ಮ ದಂಪತಿಗಳು) ಹಾಗೂ ಹಿರಿಯ ಸಾಹಿತಿ ಕೆ.ಟಿ. ಗಟ್ಟಿ ಅವರಿಗೆ (ಅವರ ಪರವಾಗಿ ಅವರ ಸಹೋದರ ಕೆ.ಆರ್. ಗಟ್ಟಿ ಪ್ರಶಸ್ತಿ ಸ್ವೀಕರಿಸಿ ದರು ಟಿ. ಶ್ರೀನಿವಾಸ ಸ್ಮರಣಾರ್ಥ ಪಿ.ಕೆ. ನಾರಾ ಯಣ ದತ್ತಿ ಪ್ರಶಸ್ತಿ (ದತ್ತಿದಾನಿ: ಟಿ. ಶ್ರೀನಿವಾಸ ಅವರ ಪತ್ನಿ ಹಾಗೂ ಪಿ.ಕೆ. ನಾರಾಯಣ ಅವರ ಪುತ್ರಿ, ಹಿರಿಯ ಸಾಹಿತಿ ಡಾ. ವರದಾ ಶ್ರೀನಿವಾಸ) ಪ್ರದಾನ ಮಾಡಲಾಯಿತು. ಮಹಾತ್ಮಗಾಂಧಿ ಅವರ ಮೊಮ್ಮಗಳು ಸುಮಿತ್ರಾ ಗಾಂಧಿ ಕುಲಕರ್ಣಿ ಪ್ರಶಸ್ತಿ ಪ್ರದಾನ ಮಾಡಿದರು.

ಪರಿಷತ್ತಿನ ಖಜಾಂಚಿ ಪಿ. ಮಲ್ಲಿಕಾರ್ಜುನಪ್ಪ ನಿರೂಪಿಸಿದ ಕಾರ್ಯಕ್ರಮ ಆಕಾಶವಾಣಿ ಕಲಾವಿದ ಎಂ.ಆರ್. ಅನಂತಮೂರ್ತಿ ನಾಡಗೀತೆ ಹಾಡುವುದ ರೊಂದಿಗೆ ಆರಂಭವಾಯಿತು. ಸ್ವಾಗತ ಭಾಷಣ ಮಾಡಿದ ಗೌ. ಕಾರ್ಯದರ್ಶಿ ವ.ಚ. ಚನ್ನೇಗೌಡ 'ರಾಷ್ಟ್ರಪಿತ ಮಹಾತ್ಮಗಾಂಧಿಯವರ ಮೊಮ್ಮಗಳು ಗಣ್ಯ ಅತಿಥಿಯಾಗಿ ಆಗಮಿಸಿರುವ ಈ ದಿನ ಪರಿ ಷತ್ತಿನ ಇತಿಹಾಸದಲ್ಲಿ ದಾಖಲೆಯಾಗಿ ಉಳಿಯಲಿದೆ' ಎಂದರು. ಪ್ರಾಸ್ತಾವಿಕ ನುಡಿಗಳನ್ನಾಡಿದ ಕ.ಸಾಪ ಅಧ್ಯಕ್ಷ ಡಾ. ಮನು ಬಳಿಗಾರ್ 'ವಿಶ್ವಕ್ಕೆ ಇಂದು ಅತ್ಯಗತ್ಯವಾಗಿ ಬೇಕಾಗಿರುವುದು ಗಾಂಧಿ ತತ್ವಗಳು. ಗಾಂಧೀಜಿ ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತಿರುವ ಡಾ. ವೂಡೇ ಪಿ. ಕೃಷ್ಣ ಅವರಿಗೆ ಗಾಂಧಿವಾದಿಗಳಾದ ನಾರಾಯಣಘಟ್ಟ ದಂಪತಿಗಳು ಇರಿಸಿರುವ ಪುದುವಟ್ಟಿನಿಂದ ಪ್ರಶಸ್ತಿ ನೀಡುತ್ತಿರುವುದು ಮತ್ತು ಅನೇಕ ಚಳವಳಿಗಳಲ್ಲಿ ಗಾಂಧೀಜಿ ಅವರೊಡನೆ ಬಾಲಕಿಯಾಗಿ ಹೆಜ್ಜೆ ಹಾಕಿದ ಸುಮಿತ್ರಾ ಗಾಂಧಿ ಕುಲ ಕರ್ಣಿ ಇಂದು ಪ್ರಶಸ್ತಿಗಳನ್ನು ಪ್ರದಾನ ಮಾಡುತ್ತಿರುವುದು ಅತ್ಯಂತ ಸಂತಸದ ವಿಷಯ' ಎಂದು ಹೇಳಿದರು.

ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಸುಮಿತ್ರಾ ಗಾಂಧಿ ಕುಲಕರ್ಣಿ (ಪ್ರಶಸ್ತಿ ಪುರಸ್ಕೃತರನ್ನು ಸೊಣ್ಣವಿನಕೆರೆ ರಾಮಕೃಷ್ಣಯ್ಯ ಪರಿಚಯಿಸಿದರು) 15 ವರ್ಷಗಳಿಂದ ತಮಗೆ ಪರಿಚಿತರಿರುವ ಡಾ. ಮನು ಬಳಿಗಾರ್‌ರಂತಹ ಸೌಜನ್ಯಶೀಲ ಅಧಿಕಾರಿ ಯನ್ನು ಕಂಡೇ ಇಲ್ಲ. ಇಂತಹವರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಪರಿಷತ್ತು ಇನ್ನೂ ಎತ್ತರಕ್ಕೆ ಬೆಳೆಯಲಿದೆ ಎಂದು ಅಭಿಪ್ರಾಯಪಟ್ಟರು. ಗಾಂಧೀಜಿಯವರ ಮೊಮ್ಮಗಳು ನಾನೊಬ್ಬಳೇ ಅಲ್ಲ, ನೀವೆಲ್ಲರೂ ಅವರ ಮೊಮ್ಮಕ್ಕಳು, ಮರಿಮಕ್ಕಳು. ಗಾಂಧಿ ತತ್ವಾನುಯಾಯಿ ಡಾ. ವೂಡೇ ಪಿ.ಕೃಷ್ಣರನ್ನು ಸನ್ಮಾನಿಸುವುದರ ಮೂಲಕ ನಮ್ಮನ್ನು ನಾವೇ ಸನ್ಮಾನಿಸಿಕೊಂಡಿದ್ದೇವೆ' ಎಂದು ಹೇಳಿದರು.

ಎ.ಆರ್. ನಾರಾಯಣಘಟ್ಟ ಮಾತನಾಡಿ, 'ಗಾಂಧಿ ವಿಚಾರ ಮಹಾಸಾಗರ. ಸರ್ವೋದಯ, ಸತ್ಯಾಗ್ರಹ ಗಾಂಧೀಜಿ ನೀಡಿದ ಅಮೂಲ್ಯ ರತ್ನಗಳು, ಆ ಮಹಾತ್ಮನ ಹೆಸರಿನಲ್ಲಿ ಡಾ. ವೂಡೇ ಪಿ. ಕೃಷ್ಣ ಅವರಿಗೆ ಪ್ರಶಸ್ತಿ ನೀಡುತ್ತಿರುವುದು ಅತ್ಯಂತ ಸೂಕ್ತವಾಗಿದೆ' ಎಂದು ಹೇಳಿದರು. ಡಾ. ವರದಾ ಶ್ರೀನಿವಾಸ 'ಗಾಂಧೀಜಿ ಮೊಮ್ಮಗಳ ಪಕ್ಕದಲ್ಲಿ ಕುಳಿತಿದ್ದು ನನ್ನ ಅದೃಷ್ಟ' ಎಂದರಲ್ಲದೆ, ಕನ್ನಡ ಚಳವಳಿಗೆ ತಮ್ಮ ಪತಿಯ ಕೊಡುಗೆ ಯನ್ನು ಮತ್ತು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ತಮ್ಮ ತಂದೆ ಪಿ.ಕೆ. ನಾರಾಯಣರ ಕೊಡುಗೆಯನ್ನು ಹಾಗೂ ತಂದೆಯ ಮಿತ್ರರಾಗಿದ್ದ ಶಿವರಾಮ ಕಾರಂತರು 9ನೇ ತರಗತಿಯಲ್ಲಿ ಓದುತ್ತಿದ್ದ ತಮ್ಮ ಬೆನ್ನಿಗೆ ಪ್ರೀತಿಯಿಂದ ಗುದ್ದಿದುದನ್ನು ಸ್ಮರಿಸಿಕೊಂಡರು.

ತಮಗೆ ಇಂದು ನೀಡಿದ ಪ್ರಶಸ್ತಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ ಮೊದಲಾದ ಸಂಸ್ಥೆಗಳಿಗೆ ಸಲ್ಲುತ್ತದೆ ಎಂದು ನಮ್ರತೆಯಿಂದ ನುಡಿದ ಡಾ. ವೂಡೇ ಪಿ.ಕೃಷ್ಣ **'We want lakhs & lakhs of Gandhis and not Billgates'** ಎಂದು ಸಿದ್ಧಗಂಗೆಯ ಡಾ. ಶಿವಕುಮಾರಸ್ವಾಮೀಜಿ ನಾಲ್ಕೈದು ವರ್ಷಗಳ ಹಿಂದೆ ತಮಗೆ ಹೇಳಿದ್ದನ್ನು ಸ್ಮರಿಸಿಕೊಂಡರು. 'ಆಚಾರ ಶುದ್ಧಿ, ವಿಚಾರ ಶುದ್ಧಿಗೆ ಮತ್ತೊಂದು ಹೆಸರಿನಂತಿದ್ದ ಗಾಂಧೀಜಿ ಅವರನ್ನು ಆದರ್ಶ ವಾಗಿರಿಸಿಕೊಂಡಿರುವುದರಿಂದ ನಾನು ನೆಮ್ಮದಿಯಾಗಿದ್ದೇನೆ' ಎಂದು ಹೇಳಿದ.

ಡಾ. ರಾಜಶೇಖರ ಹತಗುಂದಿ ಅವರ ವಂದನಾರ್ಪಣೆಯಿಂದ ಮುಕ್ತಾಯವಾದ ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ 101 ವರ್ಷಗಳ ಕೃಷ್ಣಮಾಚಾರಿ ಮತ್ತು ಚನ್ನಮ್ಮ ಹಳ್ಳಿಕೇರಿ ಮೊದಲಾದವರು ಉಪಸ್ಥಿತರಿದ್ದರು.

ಸೋಮವಾರ 13 ನವೆಂಬರ್ 2017
VIJAYAVANI » 13 NOVEMBER 2017

ಕನ್ನಡಿಗರಿಂದಲೇ ಕನ್ನಡಕ್ಕೆ ಕಂಟಕ

ಲೇಖಕ ಬಿ.ಆರ್. ಲಕ್ಷ್ಮಣರಾವ್ ಕಳವಳ

ಯಲಹಂಕ ಶೇಷಾದ್ರಿಪುರಂ ಶಾಲೆಯಲ್ಲಿ ರಾಜ್ಯೋತ್ಸವ

ವಿಜಯವಾಣಿ ಸುದ್ದಿಜಾಲ ಯಲಹಂಕ

ಪ್ರತಿಷ್ಠೆಗಾಗಿ ಇಂಗ್ಲಿಷ್ ಮತ್ತಿತರ ಭಾಷೆಗಳನ್ನು ಮಾತನಾಡುವ ಕನ್ನಡಿಗರಿಂದಲೇ ಕನ್ನಡಕ್ಕೆ ಕಂಟಕವಾಗುತ್ತಿದೆ ಎಂದು ಹಿರಿಯ ಕವಿ ಬಿ.ಆರ್. ಲಕ್ಷ್ಮಣರಾವ್ ಹೇಳಿದ್ದಾರೆ.

ಯಲಹಂಕ ಉಪನಗರ ಶೇಷಾದ್ರಿಪುರಂ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಆಯೋಜಿಸಿದ್ದ 62ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಮಾತನಾಡಿದರು.

1956ರ ನವೆಂಬರ್‌ನಲ್ಲಿ ಕರ್ನಾಟಕವಲ್ಲದೆ ಆಂಧ್ರಪ್ರದೇಶ, ಕೇರಳ, ಗುಜರಾತ್‌ಗಳು ಸಹ ಉದಯವಾದವು. ಆದರೆ ಆ ರಾಜ್ಯಗಳಲ್ಲಿ ಯಾವುದೇ ಭಾಷಾ ಉತ್ಸವಗಳು ನಡೆಯುವುದಿಲ್ಲ. ಏಕೆಂದರೆ ಆ ರಾಜ್ಯಗಳ ಭಾಷೆಗಳು ಗಟ್ಟಿನೆಲೆಯಲ್ಲಿ ನಿಂತಿವೆ. ಆದರೆ ಕನ್ನಡಿಗರ ಬಹುಔದಾರ್ಯ ಕನ್ನಡ ಭಾಷೆಗೆ ಕುತ್ತು ತಂದಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಕನ್ನಡ ವಿಶ್ವದಲ್ಲೇ ಅತಿಪುರಾತನ ಹಾಗೂ ಶಾಸ್ತ್ರೀಯ ಭಾಷೆ. ಸಾಹಿತ್ಯ ಸಂಸ್ಕೃತಿ ಸಂಗೀತಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆ ನೀಡಿದೆ. ಈ ಶ್ರೀಮಂತಿಕೆಯನ್ನು ಉಳಿಸಿಕೊಳ್ಳುವಲ್ಲಿ ಇಲ್ಲಿನ ವಿದ್ಯಾರ್ಥಿಗಳ ಪಾತ್ರ ಪ್ರಮುಖವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ



ಶೇಷಾದ್ರಿಪುರಂ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಆಯೋಜಿಸಿದ್ದ ರಾಜ್ಯೋತ್ಸವ ಸಮಾರಂಭವನ್ನು ಹಿರಿಯ ಕವಿ ಬಿ.ಆರ್. ಲಕ್ಷ್ಮಣರಾವ್ ಉದ್ಘಾಟಿಸಿದರು.

ಕನ್ನಡಕ್ಕೆ ಸ್ವಲ್ಪಮಟ್ಟಿನ ಸ್ಥಾನಮಾನವಿದ್ದರೆ, ಅದು ಕನ್ನಡ ಸಾಹಿತಿಗಳು ಮತ್ತು ಲೇಖಕರ ಶ್ರಮದಿಂದ ಮಾತ್ರ. ಕನ್ನಡ ಹೃದಯ ಭಾಷೆಯಾಗಬೇಕು ಎಂದು ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾ. ವೂಡೆ ಪಿ. ಕೃಷ್ಣ ತಿಳಿಸಿದರು.

ಶಾಲಾ ವಿದ್ಯಾರ್ಥಿನಿಯರು ಕಳಶ ಹೊತ್ತು ತಾಯಿ ಭುವನೇಶ್ವರಿ ದೇವಿಯ ಬೆಳ್ಳಿ ರಥೋತ್ಸವದ ಮೆರವಣಿಗೆ ಯಲಹಂಕದ ಉಪನಗರದ ಪ್ರಮುಖ ಬೀದಿಗಳಲ್ಲಿ ನಡೆಯಿತು. ಶಾಲೆ ಪ್ರಾಂಶುಪಾಲೆ ಕೆ. ಕವಿತಾ ಮತ್ತಿತರರು ಭಾಗವಹಿಸಿದ್ದರು.

ಪ್ರಜಾವಾಣಿ

ಸೋಮವಾರ • ನವೆಂಬರ್ 13, 2017

'ಅಸಮಾನತೆ ಬೋಧಿಸುವ ಶಿಕ್ಷಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಶಿಕ್ಷಣ ವ್ಯವಸ್ಥೆ ಅಸಮಾನತೆಯನ್ನು ಬೋಧಿಸುತ್ತದೆ' ಎಂದು ಶಿಕ್ಷಣತಜ್ಞ ಜಿ.ಎಸ್.ಜಯದೇವ ಅಭಿಪ್ರಾಯಪಟ್ಟರು.

ಐಎಎಸ್ ಅಧಿಕಾರಿ ಅನಿತಾಕೌಲ್ ನೆನಪಿನಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಆಶ್ರಯದಲ್ಲಿ ನಗರದಲ್ಲಿ ಭಾನುವಾರ ನಡೆದ 'ಶಾಲಾ ಶಿಕ್ಷಣ' ರಾಜ್ಯಮಟ್ಟದ ವಿಚಾರಸಂಕಿರಣ ಹಾಗೂ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ನಮ್ಮ ಶಿಕ್ಷಣವು ಬಹುರಾಷ್ಟ್ರೀಯ ಕಂಪೆನಿಗಳ ಬಳಕೆದಾರರನ್ನು ಸೃಷ್ಟಿಸಲು ಸೀಮಿತವಾಗಿದೆ. ಪ್ರಾಥಮಿಕ ಶಿಕ್ಷಣದಲ್ಲಿ ಕೌಶಲಗಳನ್ನು ಕಲಿಸದಿರುವುದೇ ಮಕ್ಕಳಲ್ಲಿನ ಸೃಜನಶೀಲತೆಯ ಕೊರತೆಗೆ ಪ್ರಮುಖ ಕಾರಣ. ಶಿಕ್ಷಣ ಸಂಸ್ಥೆಗಳು ಮಕ್ಕಳಿಗೆ ಪಾಪಪ್ರಜ್ಞೆ ಕಾಡದಂತೆ ಇತರರನ್ನು ವಂಚಿಸುವುದು ಹೇಗೆ ಎಂಬುದನ್ನು ಕಲಿಸುವ ವ್ಯಾಪಾರ ಕೇಂದ್ರಗಳಾಗಿ ಮಾರ್ಪಟ್ಟಿವೆ' ಎಂದು ವಿಷಾದ ವ್ಯಕ್ತಪಡಿಸಿದರು.

'ಅನುಕರಣೆಯೇ ಅವನತಿ ಎನ್ನುವುದು ಸ್ವಾಮಿ ವಿವೇಕಾನಂದರ ನಂಬಿಕೆಯಾಗಿತ್ತು. ಆದರೆ, ಇಂದು ಶಿಕ್ಷಣ ಕ್ಷೇತ್ರದಲ್ಲಿ ಪಾಶ್ಚಾತ್ಯ ಮಾದರಿಯ ಅನುಕರಣೆ ಹೆಚ್ಚುತ್ತಿದೆ. ಶಿಕ್ಷಣದ ಮೂಲ ಆಶಯವನ್ನೇ ಸರ್ಕಾರ ಮರೆತಿದೆ' ಎಂದರು.

ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್, 'ಅಸಮಾನ ಶಿಕ್ಷಣವು ಸಂವಿಧಾನಾತ್ಮಕ ಕ್ರೌರ್ಯ. ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಸಾಧಿಸುವುದೇ ಶಿಕ್ಷಣದ ಗುರಿಯಾಗಬೇಕು. ದೇಶದಲ್ಲಿ ಆರ್ಥಿಕ ಅಂತರದ ಕಂದಕ ಎಂದಿಗಿಂತಲೂ ಇಂದು ಹೆಚ್ಚಿದ್ದು, ಶೇ 60 ರಷ್ಟು ಸಂಪತ್ತನ್ನು ಕೇವಲ ಶೇ 1 ರಷ್ಟು ಜನರು ಅನುಭವಿಸುತ್ತಿದ್ದಾರೆ' ಎಂದರು.



ಶಿಕ್ಷಕರಾದ ದಿನೇಶ್ ಶೆಟ್ಟಿಗಾರ್, ಹನುಮಪ್ಪ ಹುದ್ದಾರ, ವಿಷ್ಣು ಶೆಟ್ಟಿ, ಲೀಲಾವತಿ ಕುಲಕರ್ಣಿ ಹಾಗೂ ಗಂಗಾ ಸುಭಾಷ್ ಅಶ್ವತ್ಥಪುರ ಅವರಿಗೆ '2017ನೇ ಸಾಲಿನ ಅನಿತಾಕೌಲ್ ಉತ್ತಮ ಶಿಕ್ಷಕ ಪ್ರಶಸ್ತಿ' ನೀಡಲಾಯಿತು. ಜಿ.ಎಸ್.ಜಯದೇವ್, ನಿವೃತ್ತ ಐಎಎಸ್ ಅಧಿಕಾರಿ ಎಂ.ಮದನ್ ಗೋಪಾಲ್, ತಮಿಳುನಾಡು ಸೈನ್ಸ್ ಫೋರಂನ ಎನ್.ಮಾಧವನ್, ಎಚ್.ಎನ್.ನಾಗಮೋಹನದಾಸ್, ಮನೋವೈದ್ಯ ಡಾ.ಸಿ.ಆರ್.ಚಂದ್ರಶೇಖರ್ ಹಾಗೂ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ.ಕೃಷ್ಣ ಇದ್ದರು –ಪ್ರಜಾವಾಣಿ ಚಿತ್ರ

ಗಾಂಧಿ ತತ್ವಾನುಯಾಯಿ ಡಾ. ವೂಡೇ ಪಿ. ಕೃಷ್ಣ ಅವರಿಗೆ ಗಾಂಧಿ ಪುದುವಟ್ಟು ಪ್ರಶಸ್ತಿ

ಹಿರಿಯ ಸಾಹಿತಿ ಕೆ.ಟಿ. ಗಟ್ಟಿ ಅವರಿಗೆ ಟಿ. ಶ್ರೀನಿವಾಸ ನೆನಪಿನ ಪಿ.ಕೆ. ನಾರಾಯಣ ಪ್ರಶಸ್ತಿ

ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಇತ್ತೀಚೆಗೆ ಕನ್ನಡ ಸಾಹಿತ್ಯ ಪರಿಷತ್ತು ಏರ್ಪಡಿಸಿದ್ದ ಸಮಾರಂಭದಲ್ಲಿ ಗಾಂಧಿ ತತ್ವಾನುಯಾಯಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಅವರಿಗೆ ಗಾಂಧಿ ಪುದುವಟ್ಟು ಪ್ರಶಸ್ತಿ (ದತ್ತಿದಾನಿಗಳು: ಎ.ಆರ್. ನಾರಾಯಣಘಟ್ಟ ಮತ್ತು ಸರೋಜಮ್ಮ ದಂಪತಿಗಳು) ಹಾಗೂ ಹಿರಿಯ ಸಾಹಿತಿ ಕೆ.ಟಿ. ಗಟ್ಟಿ ಅವರಿಗೆ (ಅವರ ಪರವಾಗಿ ಅವರ ಸಹೋದರ ಕೆ.ಆರ್. ಗಟ್ಟಿ ಪ್ರಶಸ್ತಿ ಸ್ವೀಕರಿಸಿದರು ಟಿ. ಶ್ರೀನಿವಾಸ ಸ್ಮರಣಾರ್ಥ ಪಿ.ಕೆ. ನಾರಾಯಣ ದತ್ತಿ ಪ್ರಶಸ್ತಿ (ದತ್ತಿದಾನಿ: ಟಿ. ಶ್ರೀನಿವಾಸ ಅವರ ಪತ್ನಿ ಹಾಗೂ ಪಿ.ಕೆ. ನಾರಾಯಣ ಅವರ ಪುತ್ರಿ, ಹಿರಿಯ ಸಾಹಿತಿ ಡಾ. ವರದಾ ಶ್ರೀನಿವಾಸ) ಪ್ರದಾನ ಮಾಡಲಾಯಿತು. ಮಹಾತ್ಮಗಾಂಧಿ ಅವರ ಮೊಮ್ಮಗಳು ಸುಮಿತ್ರಾ ಗಾಂಧಿ ಕುಲಕರ್ಣಿ ಪ್ರಶಸ್ತಿ ಪ್ರದಾನ ಮಾಡಿದರು.



ಡಾ. ವೂಡೇ ಪಿ. ಕೃಷ್ಣ ಮತ್ತು ಆರ್.ಟಿ. ಗಟ್ಟಿ ಅವರಿಗೆ ಪ್ರಶಸ್ತಿ ಪ್ರದಾನ. ವ.ಚ. ಚನ್ನೇಗೌಡ, ಡಾ. ರಾಜಶೇಖರ ಹತಗುಂದಿ, ಡಾ. ಮನುಬಳಿಗಾರ್, ಪಿ. ಮಲ್ಲಿಕಾರ್ಜುನಪ್ಪ, ಸುಮಿತ್ರಾ ಗಾಂಧಿ ಕುಲಕರ್ಣಿ, ಎ.ಆರ್. ನಾರಾಯಣ ಘಟ್ಟ ಮತ್ತು ಡಾ. ವರದಾಶ್ರೀನಿವಾಸ ಇದ್ದಾರೆ.

ಪರಿಷತ್ತಿನ ಖಜಾಂಚಿ ಪಿ. ಮಲ್ಲಿಕಾರ್ಜುನಪ್ಪ ನಿರೂಪಿಸಿದ ಕಾರ್ಯಕ್ರಮ ಆಕಾಶವಾಣಿ ಕಲಾವಿದ ಎಂ.ಆರ್. ಅನಂತಮೂರ್ತಿ ನಾಡಗೀತೆ ಹಾಡುವುದರೊಂದಿಗೆ ಆರಂಭವಾಯಿತು. ಸ್ವಾಗತ ಭಾಷಣ ಮಾಡಿದ ಗೌ. ಕಾರ್ಯದರ್ಶಿ ವ.ಚ. ಚನ್ನೇಗೌಡ 'ರಾಷ್ಟ್ರಪಿತ ಮಹಾತ್ಮಗಾಂಧಿಯವರ ಮೊಮ್ಮಗಳು ಗಣ್ಯ ಅತಿಥಿಯಾಗಿ ಆಗಮಿಸಿರುವ ಈ ದಿನ ಪರಿಷತ್ತಿನ ಇತಿಹಾಸದಲ್ಲಿ ದಾಖಲೆಯಾಗಿ ಉಳಿಯಲಿದೆ' ಎಂದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಕ.ಸಾಪ ಅಧ್ಯಕ್ಷ ಡಾ. ಮನುಬಳಿಗಾರ್ 'ವಿಶ್ವಕ್ಕೆ ಇಂದು ಅತ್ಯಗತ್ಯವಾಗಿ ಬೇಕಾಗಿರುವುದು ಗಾಂಧಿ ತತ್ವಗಳು. ಗಾಂಧೀಜಿ ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತಿರುವ ಡಾ. ವೂಡೇ ಪಿ. ಕೃಷ್ಣ ಅವರಿಗೆ ಗಾಂಧಿವಾದಿಗಳಾದ ನಾರಾಯಣಘಟ್ಟ ದಂಪತಿಗಳು ಇರಿಸಿರುವ ಪುದುವಟ್ಟಿನಿಂದ ಪ್ರಶಸ್ತಿ ನೀಡುತ್ತಿರುವುದು ಮತ್ತು ಅನೇಕ ಚಳವಳಿಗಳಲ್ಲಿ ಗಾಂಧೀಜಿ ಅವರೊಡನೆ ಬಾಲಕಿಯಾಗಿ ಹೆಜ್ಜೆ ಹಾಕಿದ ಸುಮಿತ್ರಾ ಗಾಂಧಿ ಕುಲಕರ್ಣಿ ಇಂದು ಪ್ರಶಸ್ತಿಗಳನ್ನು ಪ್ರದಾನ ಮಾಡುತ್ತಿರುವುದು ಅತ್ಯಂತ ಸಂತಸದ ವಿಷಯ' ಎಂದು ಹೇಳಿದರು.


ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಸುಮಿತ್ರಾ ಗಾಂಧಿ ಕುಲಕರ್ಣಿ (ಪ್ರಶಸ್ತಿ ಪುರಸ್ಕೃತರನ್ನು ನೊಣವಿನ ಕೆರೆ ರಾಮಕೃಷ್ಣಯ್ಯ ಪರಿಚಯಿಸಿದರು) 15 ವರ್ಷಗಳಿಂದ ತಮಗೆ ಪರಿಚಿತರಿರುವ ಡಾ. ಮನುಬಳಿಗಾರ್‌ರಂತಹ ಸೌಜನ್ಯ ಶೀಲ ಅಧಿಕಾರಿಯನ್ನು ಕಂಡೇ ಇಲ್ಲ. ಇಂತಹವರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಪರಿಷತ್ತು ಇನ್ನೂ ಎತ್ತರಕ್ಕೆ ಬೆಳೆಯಲಿದೆ ಎಂದು ಅಭಿಪ್ರಾಯಪಟ್ಟರು. ಗಾಂಧೀಜಿಯವರ ಮೊಮ್ಮಗಳು ನಾನೊಬ್ಬಳೇ ಅಲ್ಲ, ನೀವೆಲ್ಲರೂ ಅವರ ಮೊಮ್ಮಕ್ಕಳು, ಮರಿಮಕ್ಕಳು. ಗಾಂಧಿ ತತ್ವಾನುಯಾಯಿ ಡಾ. ವೂಡೇ ಪಿ.ಕೃಷ್ಣರನ್ನು ಸನ್ಮಾನಿಸುವುದರ ಮೂಲಕ ನಮ್ಮನ್ನು ನಾವೇ ಸನ್ಮಾನಿಸಿಕೊಂಡಿದ್ದೇವೆ' ಎಂದು ಹೇಳಿದರು.

ಎ.ಆರ್. ನಾರಾಯಣ ಘಟ್ಟ ಮಾತನಾಡಿ, 'ಗಾಂಧಿ ವಿಚಾರ ಮಹಾಸಾಗರ. ಸರ್ವೋದಯ, ಸತ್ಯಾಗ್ರಹ ಗಾಂಧೀಜಿ ನೀಡಿದ ಅಮೂಲ್ಯ ರತ್ನಗಳು, ಆ ಮಹಾತ್ಮನ ಹೆಸರಿನಲ್ಲಿ ಡಾ. ವೂಡೇ ಪಿ. ಕೃಷ್ಣ ಅವರಿಗೆ ಪ್ರಶಸ್ತಿ ನೀಡುತ್ತಿರುವುದು ಅತ್ಯಂತ ಸೂಕ್ತವಾಗಿದೆ' ಎಂದು ಹೇಳಿದರು.

ಡಾ. ವರದಾಶ್ರೀನಿವಾಸ 'ಗಾಂಧೀಜಿ ಮೊಮ್ಮಗಳ ಪಕ್ಕದಲ್ಲಿ ಕುಳಿತಿದ್ದು ನನ್ನ ಅದೃಷ್ಟ' ಎಂದರಲ್ಲದೆ, ಕನ್ನಡ ಚಳವಳಿಗೆ ತಮ್ಮ ಪತಿಯ ಕೊಡುಗೆಯನ್ನು ಮತ್ತು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ತಮ್ಮ ತಂದೆ ಪಿ.ಕೆ. ನಾರಾಯಣರ ಕೊಡುಗೆಯನ್ನು ಹಾಗೂ ತಂದೆಯ ಮಿತ್ರರಾಗಿದ್ದ ಶಿವರಾಮ ಕಾರಂತರು 9ನೇ ತರಗತಿಯಲ್ಲಿ ಓದುತ್ತಿದ್ದ ತಮ್ಮ ಬೆನ್ನಿಗೆ ಪ್ರೀತಿಯಿಂದ ಗುದ್ದಿದುದನ್ನು ಸ್ಮರಿಸಿಕೊಂಡರು.

ತಮಗೆ ಇಂದು ನೀಡಿದ ಪ್ರಶಸ್ತಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನ ಮೊದಲಾದ ಸಂಸ್ಥೆಗಳಿಗೆ ಸಲ್ಲುತ್ತದೆ ಎಂದು ನಮ್ರತೆಯಿಂದ ನುಡಿದ ಡಾ. ವೂಡೇ ಪಿ.ಕೃಷ್ಣ 'We want lakhs & lakhs of Gandhis and not Billgates' ಎಂದುಸಿದ್ಧಗಂಗೆಯ ಡಾ. ಶ್ರೀ ಶಿವಕುಮಾರಸ್ವಾಮೀಜಿ ನಾಲ್ಕೈದು ವರ್ಷಗಳ ಹಿಂದೆ ತಮಗೆ ಹೇಳಿದ್ದನ್ನು ಸ್ಮರಿಸಿಕೊಂಡರು. 'ಆಚಾರ ಶುದ್ಧಿ, ವಿಚಾರ ಶುದ್ಧಿಗೆ ಮತ್ತೊಂದು ಹೆಸರಿನಂತಿದ್ದ ಗಾಂಧೀಜಿ ಅವರನ್ನು ಆದರ್ಶವಾಗಿರಿಸಿಕೊಂಡಿರುವುದರಿಂದ ನಾನು ನೆಮ್ಮದಿಯಾಗಿದ್ದೇನೆ' ಎಂದು ಹೇಳಿದು. ಡಾ. ರಾಜಶೇಖರ ಹತಗುಂದಿ ಅವರ ವಂದನಾರ್ಪಣೆಯಿಂದ ಮುಕ್ತಾಯವಾದ ಕಾರ್ಯಕ್ರಮದಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ 101 ವರ್ಷಗಳ ಕೃಷ್ಣಮಾಚಾರಿ ಮತ್ತು ಚನ್ನಮ್ಮ ಹಳ್ಳಿಕೇರಿ ಮೊದಲಾದವರು ಉಪಸ್ಥಿತರಿದ್ದರು.

ಬೆಂಗಳೂರು
vishwavani.news
09.11.2017 ಗುರುವಾರ



ಶೇಷಾದ್ರಿಪುರಂ ಕಾಲೇಜಿನ ಕನ್ನಡ ಸಂಘದ ವತಿಯಿಂದ ಆಯೋಜಿಸಿದ್ದ 'ರೊಕ್ಕ ಲೆಕ್ಕ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ರಮಣಶ್ರೀ ಗ್ರೂಪ್‌ನ ಅಧ್ಯಕ್ಷ ಎಸ್. ಷಡಕ್ಷರಿ, ಶೇಷಾದ್ರಿಪುರದ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಸಾಹಿತಿ ಡಿ.ಯಶೋದಾ ಭಾಗವಹಿಸಿದ್ದರು.

ಪ್ರಜಾವಾಣಿ ಗುರುವಾರ ನವೆಂಬರ್ 2, 2017

ಕಾಲೇಜಿನಲ್ಲಿ ವಿಚಾರ ಸಂಕಿರಣ

'ಜಿಎಸ್‌ಟಿಯಿಂದ ಆರ್ಥಿಕ ವ್ಯವಸ್ಥೆ ಬದಲಾವಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿಯಿಂದ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಗಮನಾರ್ಹವಾದ ಬದಲಾವಣೆಯಾಗಿದೆ' ಎಂದು ಶೇಷಾದ್ರಿಪುರ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ ಹೇಳಿದರು.

ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

'ಗಾಂಧೀಜಿ ಅವರ ತತ್ವ–ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಿಸಬೇಕು. ವಿದ್ಯಾರ್ಥಿಗಳು ತೆರಿಗೆ ಪಾವತಿಯ ಅವಶ್ಯಕತೆ ಹಾಗೂ ಅದರ ಅನುಕೂಲತೆ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು' ಎಂದು ಸಲಹೆ ನೀಡಿದರು.

ವಾಣಿಜ್ಯ ತೆರಿಗೆ ಇಲಾಖೆಯ ಹೆಚ್ಚುವರಿ ಆಯುಕ್ತ ಬಿ.ಎ. ನಾಣಿಯಪ್ಪ, 'ಭ್ರಷ್ಟಾಚಾರ ಮುಕ್ತ ದೇಶ ನಿರ್ಮಾಣಕ್ಕಾಗಿ ಇಲಾಖೆ ಪಣತೊಟ್ಟಿದೆ. ಅದಕ್ಕಾಗಿ ಸಾಕಷ್ಟು ಬದಲಾಣೆಗಳನ್ನು ತರಲಾಗಿದೆ. ದೇಶದಲ್ಲಿ ಮೊದಲ ಬಾರಿಗೆ ರಾಜ್ಯದಲ್ಲಿ 'ಇ-ಸುಗಮ್' ವ್ಯವಸ್ಥೆಯನ್ನು ಜಾರಿಗೆ ತರಲಾಗಿದ್ದು, ಈ ವ್ಯವಸ್ಥೆಯನ್ನು ಬೇರೆ ರಾಜ್ಯಗಳಲ್ಲೂ ಜಾರಿಗೆ ತರಲು ಕೇಂದ್ರ ಸರ್ಕಾರ ಚಿಂತಿಸಿದೆ' ಎಂದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ

ಸೋಮವಾರ
23 ಅಕ್ಟೋಬರ್ 2017
23 OCTOBER 2017

ಗಾಂಧಿ ಮನಸ್ಕರನ್ನು ರೂಪಿಸಬೇಕಿದೆ

ಡಾ.ವೂಡೇ ಪಿ. ಕೃಷ್ಣ ಆಶಯ » ಕಸಾಪದಲ್ಲಿ ಪ್ರಶಸ್ತಿ ಪ್ರದಾನ



ಡಾ.ವೂಡೇ ಪಿ. ಕೃಷ್ಣ, ಕೆ.ಟಿ.ಗಟ್ಟಿ ಸಹೋದರ ಕೆ.ಆರ್.ಗಟ್ಟಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಡಾ. ಮನು ಬಳಿಗಾರ್ ಇತರರಿದ್ದರು.

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಇತ್ತೀಚೆಗೆ ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸಿದರೆ ಗಾಂಧಿ ಮನಸ್ಕ ಜನರನ್ನು ತಯಾರು ಮಾಡುವ ಅಗತ್ಯವಿದೆ ಎಂದು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ ಅಭಿಪ್ರಾಯಪಟ್ಟಿದ್ದಾರೆ.

ಶಾಂತಿ ಮತ್ತು ಸೌಹಾರ್ದತೆ ನೆಲೆಗೊಂಡರೆ ಸಮಾಜ ಸ್ವಸ್ಥ

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಆಯೋಜಿಸಿದ್ದ ಎ.ಆರ್. ನಾರಾಯಣ ಘಟ್ಟ ಮತ್ತು ಸರೋಜಮ್ಮ ದತ್ತಿ ಗಾಂಧಿ ಪುದುವಟ್ಟು ಪ್ರಶಸ್ತಿ ಮತ್ತು ಪಿ.ಕೆ. ನಾರಾಯಣ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಗಾಂಧಿ ಪುದುವಟ್ಟು ಪ್ರಶಸ್ತಿ ಸ್ವೀಕರಿಸಿ ಮಾತನಾಡಿದರು.

ಗಾಂಧೀಜಿ ತತ್ವಗಳನ್ನು ಪಸರಿಸುವ ಉದ್ದೇಶದಿಂದ ಗಾಂಧಿ ಸ್ಮಾರಕ ನಿಧಿ ಮತ್ತು ಗಾಂಧಿ ಶಾಂತಿ ಪ್ರತಿಷ್ಠಾನ ಯುವಕರನ್ನು ತಲುಪುವ ಕೆಲಸ ಮಾಡುತ್ತಿದೆ. ಎಲ್ಲೆಡೆ ಶಾಂತಿ-ಸೌಹಾರ್ದತೆ ನೆಲೆಗೊಂಡರೆ ಸಮಾಜವೂ ಸ್ವಸ್ಥವಾಗಿರುತ್ತದೆ ಎಂದರು.

ಭಾರತೀಯ ಕಾವ್ಯ ಮೀಮಾಂಸೆಗೆ ಮಹಾತ್ಮಾ ಗಾಂಧಿ ಸರ್ವೋದಯ ಮತ್ತು ಅಹಿಂಸೆ ಎಂಬ ಮಹತ್ವವಾದ ರತ್ನಗಳು ನೀಡಿದ್ದಾರೆ. ದಕ್ಷಿಣ ಆಫ್ರಿಕಾದಲ್ಲಿ ಭಾರತೀಯ ಗುಲಾಮಗಿರಿ ವಿರುದ್ಧ ರೂಪಿಸಿದ ಚಳವಳಿ ಚರಿತ್ರಾರ್ಹವಾದುದು. ಸತ್ಯಕ್ಕಾಗಿ ಚಳವಳಿ ಮಾಡುವ ಮೂಲಕ ಸತ್ಯಾಗ್ರಹ ಪರಿಕಲ್ಪನೆ ಹುಟ್ಟುಹಾಕಿದರು. ಇತ್ತೀಚೆಗೆ ಸತ್ಯಾಗ್ರಹದ ಮೂಲ ಕಲ್ಪನೆಯೇ ನಶಿಸಿಹೋಗುತ್ತಿದ್ದು, ಖಾದಿ ಮತ್ತು ಕೈಮಗ್ಗದ ವಸ್ತುಗಳ ಮೇಲಿನ ತೆರಿಗೆ ಕಡಿತಗೊಳಿಸುವಂತೆ ರಂಗಕರ್ಮಿ ಪ್ರಸನ್ನ ನೇತೃತ್ವದ ಧರಣಿಯನ್ನು ನಿಜವಾದ ಸತ್ಯಾಗ್ರಹ ಎಂದು ಕರೆಯಬಹುದು. ಉಳಿದವೆಲ್ಲ ಬರೀ ಮುಷ್ಕರಗಳಷ್ಟೆ ಎಂದು ಗಾಂಧಿ ಪುದುವಟ್ಟು ಪ್ರಶಸ್ತಿ ಸ್ಥಾಪಕ ಎ.ಆರ್. ನಾರಾಯಣ ಘಟ್ಟ ಅಭಿಪ್ರಾಯಪಟ್ಟರು.

ಹಿರಿಯ ಸಾಹಿತಿ ಕೆ.ಟಿ. ಗಟ್ಟಿ ಅನುಪಸ್ಥಿತಿಯಲ್ಲಿ ಅವರ ಸಹೋದರ ಕೆ.ಆರ್.ಗಟ್ಟಿ ಅವರು 'ಪಿ.ಕೆ. ನಾರಾಯಣ ಸಾಹಿತ್ಯ ಪ್ರಶಸ್ತಿ' ಸ್ವೀಕರಿಸಿದರು. ಹಿರಿಯ ಸಾಹಿತಿ ಮತ್ತು ಪಿ.ಕೆ. ನಾರಾಯಣ ಸಾಹಿತ್ಯ ಪ್ರಶಸ್ತಿ ದತ್ತಿ ದಾನಿ ವರದಾ ಶ್ರೀನಿವಾಸ್, ಕಸಾಪ ಅಧ್ಯಕ್ಷ ಡಾ.ಮನು ಬಳಿಗಾರ್ ಮತ್ತಿತರರು ಉಪಸ್ಥಿತರಿದ್ದರು.

> ನಾನು ಗಾಂಧೀಜಿ ಮೊಮ್ಮಗಳು ಮಾತ್ರವಲ್ಲ, ಸತ್ಯ-ಅಹಿಂಸೆ ಪಾಲಿಸುವ ಎಲ್ಲರ ಸಂಬಂಧಿ ಎಂದು ಭಾವಿಸಿದ್ದೇನೆ. ಕರ್ನಾಟಕಕ್ಕೆ ಬಂದಾಗಲೆಲ್ಲ ನನಗೆ ಕುಟುಂಬದವರೊಂದಿಗಿದ್ದ ಅನುಭವವಾಗುತ್ತದೆ. ಗಾಂಧೀಜಿ ವಿಚಾರಧಾರೆಗಳನ್ನು ಅನುಸರಿಸುವ ಮೂಲಕ ಅವರ ಹಾದಿಯಲ್ಲಿ ಸಾಗುವುದೇ ನಮ್ಮ ಜೀವನಧರ್ಮ.
>
> ಸುಮಿತ್ರಾ ಗಾಂಧಿ ಕುಲಕರ್ಣಿ
> ಗಾಂಧೀಜಿ ಮೊಮ್ಮಗಳು

ಪ್ರಜಾವಾಣಿ ಭಾನುವಾರ • ಅಕ್ಟೋಬರ್ 22, 2017

ಚಿತ್ರಾವಳಿ



ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶನಿವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ ಅವರಿಗೆ ಗಾಂಧಿ ಪುದುವಟ್ಟು ಪ್ರಶಸ್ತಿ ಹಾಗೂ ಸಾಹಿತಿ ಕೆ.ಟಿ.ಗಟ್ಟಿ (ಅವರ ಪರವಾಗಿ ಸಹೋದರ ಆರ್.ಟಿ.ಗಟ್ಟಿ ಅವರು ಪ್ರಶಸ್ತಿ ಸ್ವೀಕರಿಸಿದರು) ಅವರಿಗೆ ಪಿ.ಕೆ.ನಾರಾಯಣ ಸಾಹಿತ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವ.ಚ.ಚೆನ್ನೇಗೌಡ, ಪಿ.ಮಲ್ಲಿಕಾರ್ಜುನಪ್ಪ, ರಾಜಶೇಖರ ಹತಗುಂದಿ, ಕಸಾಪ ಅಧ್ಯಕ್ಷ ಡಾ.ಮನು ಬಳಿಗಾರ್, ಗಾಂಧೀಜಿ ಅವರ ಮೊಮ್ಮಗಳಾದ ಸುಮಿತ್ರಾ ಗಾಂಧಿ ಕುಲಕರ್ಣಿ, ಗಾಂಧಿ ಪುದುವಟ್ಟು ಪ್ರಶಸ್ತಿ ಸ್ಥಾಪಕ ಎ.ಆರ್.ನಾರಾಯಣ ಘಟ್ಟ, ಲೇಖಕಿ ವರದಾ ಶ್ರೀನಿವಾಸ್ ಇದ್ದಾರೆ – ಪ್ರಜಾವಾಣಿ ಚಿತ್ರ

ಸುಮಿತ್ರಾ ಗಾಂಧಿ ಕುಲಕರ್ಣಿ ಅಭಿಮತ

ಗಾಂಧಿ ಹಾದಿಯಿಂದ ಸಮಾಜದಲ್ಲಿ ಶಾಂತಿ

ವಿಕ ಸುದ್ದಿಲೋಕ ಬೆಂಗಳೂರು

'ಪ್ರಸ್ತುತ ಸಂದರ್ಭದಲ್ಲಿ ಸಮಾಜದಲ್ಲಿ ಶಾಂತಿ, ಸೌಹಾರ್ದತೆ ನೆಲೆಗೊಳ್ಳಬೇಕೆಂದರೆ ಗಾಂಧೀಜಿಯವರ ಹಾದಿಯಲ್ಲಿ ಸಾಗುವುದು ನಮ್ಮೆಲ್ಲರ ಕರ್ತವ್ಯ' ಎಂದು ಗಾಂಧೀಜಿಯವರ ಮೊಮ್ಮಗಳು ಸುಮಿತ್ರಾ ಗಾಂಧಿ ಕುಲಕರ್ಣಿ ಅಭಿಪ್ರಾಯಪಟ್ಟರು.

ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆಯ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶನಿವಾರ ಅವರು ಮಾತನಾಡಿದರು.

''ಗಾಂಧೀಜಿಯವರ ವಿಚಾರಧಾರೆಗಳನ್ನು ಅನುಸರಿಸುವವರೆಲ್ಲರೂ ನನ್ನ ಬಂಧುಗಳು. ನಾನು ಗಾಂಧೀಜಿಯವರ ಮೊಮ್ಮಗಳು ಮಾತ್ರವಲ್ಲ, ಕರ್ನಾಟಕದ ಹಾಗೂ ನಿಮ್ಮೆಲ್ಲರ ಮೊಮ್ಮಗಳು'' ಎಂದು ಅಭಿಮಾನದಿಂದ ನುಡಿದರು. ಇದೇ ವೇಳೆ ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿದರು.

ಪ್ರಶಸ್ತಿ ಪುರಸ್ಕೃತರು: ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಅವರಿಗೆ 'ಗಾಂಧಿ ಪುದುವಟ್ಟು ಪ್ರಶಸ್ತಿ' ಹಾಗೂ ಹಿರಿಯ ಸಾಹಿತಿ ಕೆ.ಟಿ. ಗಟ್ಟಿ (ಇವರ ಅನುಪಸ್ಥಿತಿಯಲ್ಲಿ ಸೋದರನಿಂದ ಸ್ವೀಕಾರ)ಯವರಿಗೆ 'ಪಿ.ಕೆ. ನಾರಾಯಣ ಸಾಹಿತ್ಯ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಪ್ರಶಸ್ತಿಯು ತಲಾ 10 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.


ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಮನು ಬಳಿಗಾರ್, ಗಾಂಧಿ ಪುದುವಟ್ಟು ಸ್ಥಾಪಕರಾದ ಎ.ಆರ್. ನಾರಾಯಣ ಘಟ್ಟ, ಪಿ.ಕೆ. ನಾರಾಯಣ ಸಾಹಿತ್ಯ ಪ್ರಶಸ್ತಿ ದತ್ತಿ ದಾನಿ ವರದಾ ಶ್ರೀನಿವಾಸ್ ಪಾಲ್ಗೊಂಡಿದ್ದರು.



ಚಾಮರಾಜಪೇಟೆಯ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಡಾ. ವೂಡೇ ಪಿ. ಕೃಷ್ಣ ಹಾಗೂ ಸಾಹಿತಿ ಕೆ.ಟಿ. ಗಟ್ಟಿ (ಇವರ ಅನುಪಸ್ಥಿತಿಯಲ್ಲಿ ಸೋದರನಿಂದ ಸ್ವೀಕಾರ) ಯವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

> ಗಾಂಧೀಜಿಯವರದು ತ್ಯಾಗಮಯ, ನಿಷ್ಕಳಂಕ ಜೀವನ. ಅವರು ನಮಗೆ ಆದರ್ಶ ಮತ್ತು ಸ್ಫೂರ್ತಿಯ ಸೆಲೆ. ಇವರ ಹೆಸರಿನಲ್ಲಿ ನೀಡುತ್ತಿರುವ 'ಗಾಂಧಿ ಪುದುವಟ್ಟು ಪ್ರಶಸ್ತಿ' ನನಗೆ ಸಂದಿರುವುದರಿಂದ ಅತೀವ ಸಂತೋಷವಾಗಿದೆ.
>
> **-ಡಾ. ವೂಡೆ ಪಿ. ಕೃಷ್ಣ** 'ಗಾಂಧಿ ಪುದುವಟ್ಟು' ಪ್ರಶಸ್ತಿ ಪುರಸ್ಕೃತರು

ಉದಯವಾಣಿ ಬೆಂಗಳೂರು
ಭಾನುವಾರ, ಅಕ್ಟೋಬರ್ 22, 2017



ಸ್ಮೃತಿ ಗಾಂಧಿ ಕುಲಕರ್ಣಿ ಅವರ ಹೆಸರಲ್ಲಿ ಗಾಂಧಿ ಪುಡವಟ್ಟು ಪ್ರಶಸ್ತಿಯನ್ನು ಕಸಾಪದಲ್ಲಿ ಡಾ. ವೂಡಿ ಪಿ ಕೃಷ್ಣರವರಿಗೆ ನೀಡಲಾಯಿತು.

ಸಂಯುಕ್ತ ಕರ್ನಾಟಕ
ಭಾನುವಾರ, 22, ಅಕ್ಟೋಬರ್, 2017

ಉತ್ತಮ ಸಮಾಜಕ್ಕೆ ಗಾಂಧಿ ಮಾರ್ಗ ಸೂಕ್ತ



ಬೆಂಗಳೂರು: ಇಂದಿನ ಸಮಾಜದಲ್ಲಿ ಮಹಾತ್ಮಗಾಂಧಿಯವರ ಮಾರ್ಗ ದರ್ಶನದಲ್ಲಿ ಸಾಗುವ ಅಗತ್ಯವಿದೆ ಎಂದು ಗಾಂಧೀಜಿ ಮೊಮ್ಮಗಳಾದ ಸುಮಿತ್ರಾ ಗಾಂಧಿ ಕುಲಕರ್ಣಿ ಅಭಿಪ್ರಾಯಪಟ್ಟರು.


ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಪ್ರಸ್ತುತ ಸಮಾಜದಲ್ಲಿ ಗಾಂಧೀಜಿಯವರ ಹಾದಿಯಲ್ಲಿ ಸಾಗುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಗಾಂಧಿಯವರ ವಿಚಾರಗಳನ್ನು ಪ್ರತಿಯೊಬ್ಬರು ಅನುಸರಿಸಬೇಕೆಂದರು.

ಗಾಂಧೀಜಿಯವರ ವಿಚಾರಧಾರೆಗಳನ್ನು ಅನುಸರಿಸುವವರೆಲ್ಲರೂ ನನ್ನ ಬಂಧುಗಳು. ನಾನು ಗಾಂಧೀಜಿಯವರ ಮೊಮ್ಮಗಳು ಮಾತ್ರವಲ್ಲ. ಕರ್ನಾಟಕದ ಹಾಗೂ ನಿಮ್ಮೆಲ್ಲರ ಮೊಮ್ಮಗಳು ಎಂದು ನುಡಿದ ಅವರು, ಇದೇ ವೇಳೆ ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿದರು.

ಪ್ರಶಸ್ತಿಗೆ ಪಾತ್ರರಾದವರು: ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಅವರಿಗೆ 'ಗಾಂಧಿ ಪುದುವಟ್ಟು ಪ್ರಶಸ್ತಿ' ಹಾಗೂ ಹಿರಿಯ ಸಾಹಿತಿ ಕೆ.ಟಿ. ಗಟ್ಟಿ ಅವರಿಗೆ ಅವರ ಅನುಪಸ್ಥಿತಿಯಲ್ಲಿ ಸೋದರನಿಗೆ 'ಪಿ.ಕೆ. ನಾರಾಯಣ ಸಾಹಿತ್ಯ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಪ್ರಶಸ್ತಿಯು ತಲಾ 10 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

ಪ್ರಶಸ್ತಿ ಸ್ವೀಕರಿಸಿದ ಡಾ. ವೂಡೆ ಪಿ. ಕೃಷ್ಣ ಮಾತನಾಡಿ, ಗಾಂಧೀಜಿಯವರದು ನಿಷ್ಕಳಂಕ ಜೀವನ, ತ್ಯಾಗಮಯಿಯೂ ಹೌದು. ಇವರು ನಮಗೆ ಆದರ್ಶ ಮತ್ತು ಸ್ಫೂರ್ತಿಯ ಸೆಲೆ. ಇವರ ಹೆಸರಿನಲ್ಲಿ ನೀಡುತ್ತಿರುವ 'ಗಾಂಧಿ ಪುದುವಟ್ಟು ಪ್ರಶಸ್ತಿ' ನನಗೆ ಸಂದುದು ಅತೀವ ಸಂತೋಷವಾಗಿದೆ ಎಂದರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಮನು ಬಳಿಗಾರ್, ಗಾಂಧಿ ಪುದುವಟ್ಟು ಸ್ಥಾಪಕರಾದ ಎ.ಆರ್. ನಾರಾಯಣ ಘಟ್ಟಿ, ಪಿ.ಕೆ. ನಾರಾಯಣ ಸಾಹಿತ್ಯ ಪ್ರಶಸ್ತಿ ದತ್ತಿ ದಾನಿ ವರದಾ ಶ್ರೀನಿವಾಸ್ ಮತ್ತಿತರರಿದ್ದರು.

ಪ್ರಜಾವಾಣಿ ಭಾನುವಾರ ● ಅಕ್ಟೋಬರ್ 22, 2017



ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶನಿವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ ಅವರಿಗೆ ಗಾಂಧಿ ಪುದುವಟ್ಟು ಪ್ರಶಸ್ತಿ ಹಾಗೂ ಸಾಹಿತಿ ಕೆ.ಟಿ.ಗಟ್ಟಿ (ಅವರ ಪರವಾಗಿ ಸಹೋದರ ಆರ್.ಟಿ.ಗಟ್ಟಿ ಅವರು ಪ್ರಶಸ್ತಿ ಸ್ವೀಕರಿಸಿದರು) ಅವರಿಗೆ ಪಿ.ಕೆ.ನಾರಾಯಣ ಸಾಹಿತ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವ.ಚ.ಚೆನ್ನೇಗೌಡ, ಪಿ.ಮಲ್ಲಿಕಾರ್ಜುನಪ್ಪ, ರಾಜಶೇಖರ ಹತಗುಂದಿ, ಕಸಾಪ ಅಧ್ಯಕ್ಷ ಡಾ.ಮನು ಬಳಿಗಾರ್, ಗಾಂಧೀಜಿ ಅವರ ಮೊಮ್ಮಗಳಾದ ಸುಮಿತ್ರಾ ಗಾಂಧಿ ಕುಲಕರ್ಣಿ, ಗಾಂಧಿ ಪುದುವಟ್ಟು ಪ್ರಶಸ್ತಿ ಸ್ಥಾಪಕ ಎ.ಆರ್.ನಾರಾಯಣ ಘಟ್ಟ, ಲೇಖಕಿ ವರದಾ ಶ್ರೀನಿವಾಸ್ ಇದ್ದಾರೆ – ಪ್ರಜಾವಾಣಿ ಚಿತ್ರ

ಕನ್ನಡಪ್ರಭ
ಭಾನುವಾರ 22.10.2017



ಕಸಾಪದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ.ಕೃಷ್ಣರಿಗೆ 'ಗಾಂಧಿ ಪುದುವಟ್ಟು ಪ್ರಶಸ್ತಿ' ಹಾಗೂ ಹಿರಿಯ ಸಾಹಿತಿ ಕೆ.ಟಿ.ಗಟ್ಟಿ ಅವರಿಗೆ (ಸಹೋದರ ಸ್ವೀಕಾರ) 'ಪಿ.ಕೆ.ನಾರಾಯಣ ಸಾಹಿತ್ಯ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಡಾ.ವೂಡೇ ಪಿ.ಕೃಷ್ಣರಿಗೆ 'ಗಾಂಧಿ ಪುದುವಟ್ಟು ಪ್ರಶಸ್ತಿ'


ಬೆಂಗಳೂರು: ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಅವರಿಗೆ 'ಗಾಂಧಿ ಪುದುವಟ್ಟು ಪ್ರಶಸ್ತಿ' ಹಾಗೂ ಹಿರಿಯ ಸಾಹಿತಿ ಕೆ.ಟಿ.ಗಟ್ಟಿ ಅವರಿಗೆ 'ಪಿ.ಕೆ.ನಾರಾಯಣ ಸಾಹಿತ್ಯ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ಮಹಾತ್ಮ ಗಾಂಧಿ ಮೊಮ್ಮಗಳಾದ ಸುಮಿತ್ರಾ ಗಾಂಧಿ ಕುಲಕರ್ಣಿ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಗಾಂಧೀಜಿ ಅವರ ಮಾರ್ಗದಲ್ಲಿ ಸಾಗಿದಾಗ ಮಾತ್ರ ಸಮಾಜದಲ್ಲಿ ಸೌಹಾರ್ದತೆ ಹಾಗೂ ಶಾಂತಿ ನೆಲೆಗೊಳ್ಳಲು ಸಾಧ್ಯವಾಗುತ್ತದೆ. ಹಾಗಾಗಿ ಸಮಾಜಕ್ಕೆ ಅಗತ್ಯವಾಗಿರುವ ಗಾಂಧಿ ವಿಚಾರಧಾರೆ ಹಾಗೂ ತತ್ವ ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆಯೋಣ ಎಂದು ಹೇಳಿದರು. ನಾನು ಗಾಂಧೀಜಿ ಅವರ ಮೊಮ್ಮಗಳೇ ಇರಬಹುದು. ಆದರೆ, ಗಾಂಧಿ ತತ್ವಾದರ್ಶಗಳನ್ನು ಅನುಸರಿಸುವ ಎಲ್ಲರೂ ನನ್ನ ಬಂಧುಗಳೇ ಎಂದ ಅವರು, ಪ್ರಶಸ್ತಿ ಪುರಸ್ಕೃತರನ್ನು ಅಭಿನಂದಿಸಿದರು. ಪ್ರಶಸ್ತಿ ಪುರಸ್ಕೃತ ಡಾ. ವೂಡೇ ಪಿ.ಕೃಷ್ಣ ಮಾತನಾಡಿ, ಮಹಾತ್ಮ ಗಾಂಧಿ ಹೆಸರಿನಲ್ಲಿ 'ಗಾಂಧಿ ಪದುವಟ್ಟು ಪ್ರಶಸ್ತಿ' ಪಡೆಯಲು ಸಂತಸವಾಗುತ್ತಿದೆ ಎಂದರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಮನು ಬಳಿಗಾರ್, ಗಾಂಧಿ ಪುದುವಟ್ಟು ಪ್ರಶಸ್ತಿ ಸ್ಥಾಪಕರಾದ ಎ.ಆರ್. ನಾರಾಯಣ ಘಟ್ಟ, ಪಿ.ಕೆ. ನಾರಾಯಣ ಸಾಹಿತ್ಯ ದತ್ತಿ ಪ್ರಶಸ್ತಿ ದಾನಿ ವರದಾ ಶ್ರೀನಿವಾಸ್ ಮತ್ತಿತರರಿದ್ದರು.

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಶುಕ್ರವಾರ
20 ಅಕ್ಟೋಬರ್ 2017
20 OCTOBER 2017

ಕಸಾಪ ದತ್ತಿ ಪ್ರಶಸ್ತಿ ಪ್ರದಾನ ನಾಳೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಶನಿವಾರ (ಅ.21) ಸಂಜೆ 5.30ಕ್ಕೆ ಎ.ಆರ್. ನಾರಾಯಣ ಘಟ್ಟ ಮತ್ತು ಶ್ರೀಮತಿ ಸರೋಜಮ್ಮ ದತ್ತಿಯ 'ಗಾಂಧಿ ಪುದುವಟ್ಟು ಪ್ರಶಸ್ತಿ ಮತ್ತು ಪಿ.ಕೆ. ನಾರಾಯಣ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಮಹಾತ್ಮ ಗಾಂಧೀಜಿ ಮೊಮ್ಮಗಳು ಸುಮಿತ್ರಾ ಕುಲಕರ್ಣಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಗಾಂಧಿ ಪುದುವಟ್ಟು ಪ್ರಶಸ್ತಿ ಪಿ.ಕೆ. ನಾರಾಯಣ ಸಾಹಿತ್ಯ ಪ್ರಶಸ್ತಿಗೆ ಕೆ.ಟಿ. ಗಟ್ಟಿ ಆಯ್ಕೆಯಾಗಿದ್ದಾರೆ.


ಕೆ.ಟಿ. ಗಟ್ಟಿ


ವೂಡೇ ಪಿ. ಕೃಷ್ಣ

ನಮಸ್ತೆ ಬೆಂಗಳೂರು


ನಂ. ಕನ್ನಡ ದಿನಪತ್ರಿಕೆ

ಸೋಮವಾರ 16 ಅಕ್ಟೋಬರ್ 2017
VIJAYAVANI » 16 OCTOBER 2017

ಆಧುನಿಕ ಶಿಕ್ಷಣದಿಂದ ದೇಶದ ಅಭಿವೃದ್ಧಿ ಸಾಧ್ಯ

ದೂರಸಂಪರ್ಕ ದಿಗ್ಗಜ ಸ್ಯಾಮ್ ಪಿತ್ರೋಡ ಅಭಿಮತ

ವಿಜಯವಾಣಿ ಚಿತ್ರ



ಯಲಹಂಕದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ರಜತ ಮಹೋತ್ಸವದಲ್ಲಿ ಸ್ಯಾಮ್ ಪಿತ್ರೋಡ ಅವರನ್ನು ಸನ್ಮಾನಿಸಲಾಯಿತು.

ವಿಜಯವಾಣಿ ಸುದ್ದಿಜಾಲ ಯಲಹಂಕ

ನ್ಯಾಯಯುತ ಮಾರ್ಗಗಳ ಮೂಲಕ ಪಡೆಯುವ ಜ್ಞಾನ ಉತ್ತಮವಾದದ್ದು ಎಂದು ದೇಶದ ದೂರಸಂಪರ್ಕ ಕ್ರಾಂತಿಯ ಹರಿಕಾರ ಸ್ಯಾಮ್ ಪಿತ್ರೋಡ ಅಭಿಪ್ರಾಯಪಟ್ಟಿದ್ದಾರೆ.

ಯಲಹಂಕ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ರಜತ ಮಹೋತ್ಸವದಲ್ಲಿ ಮಾತನಾಡಿದರು. ಆಧುನಿಕ ಶಿಕ್ಷಣ ದೇಶದ ಅಭಿವೃದ್ಧಿಯನ್ನು ಹೊಸ ದಿಕ್ಕಿನತ್ತ ಕರೆದೊಯ್ಯುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ದೂರಸಂಪರ್ಕ ಕ್ಷೇತ್ರ ಹೆಚ್ಚಿನ ಅಭಿವೃದ್ಧಿ ಹೊಂದಿದೆ. ಇದನ್ನು ಸಮರ್ಪಕವಾಗಿ ಬಳಸಿಕೊಂಡು ವಿದ್ಯಾರ್ಜನೆಯಲ್ಲಿ ಹೆಚ್ಚಿನ ಸಾಧನೆಯಾಗದಿರುವುದು ವಿಪರ್ಯಾಸ ಎಂದರು.

ಶೇಷಾದ್ರಿಪುರಂ ಕಾಲೇಜು ರಜತ ಮಹೋತ್ಸವ

ಕೌಶಲ, ಜ್ಞಾನ ಇದ್ದರಷ್ಟೇ ಭವಿಷ್ಯ

ಇಂದಿನ ಉದ್ಯೋಗ ಕ್ಷೇತ್ರ ಬಯಸುವುದು ಕೇವಲ ಕೌಶಲಯುತ ಜ್ಞಾನವನ್ನೇ ಹೊರತು ಅಂಕಗಳನ್ನಲ್ಲ. ಒಂದು ಸ್ಥಾನ ತುಂಬಲು 300 ಜನರನ್ನು ಸಂದರ್ಶನಕ್ಕೆ ಕರೆಯುವ ಅನಿವಾರ್ಯತೆ ಒದಗಿದೆ. ಶಿಕ್ಷಣ ಹಣ ಮಾಡುವ ಕ್ಷೇತ್ರವಾಗಿ ಪರಿಣಮಿಸಿದೆ. ರ್‍ಯಾಂಕ್ ಗಳಿಕೆಯೇ ಸಾಧನೆಯಲ್ಲ. ಕೌಶಲ ಹಾಗೂ ಜ್ಞಾನವಿದ್ದರೆ ಮಾತ್ರ ಭವಿಷ್ಯ ವಿದ್ಯಾರ್ಥಿಗಳ ಕೈಹಿಡಿಯುತ್ತದೆ. ಈ ಹಿನ್ನೆಲೆಯಲ್ಲಿ ಅಂಕಗಳ ಜತೆಗೆ ಜ್ಞಾನ ಹಾಗೂ ಕೌಶಲವೃದ್ಧಿಗೂ ವಿದ್ಯಾರ್ಥಿಗಳು ಒತ್ತು ನೀಡಬೇಕು ಎಂದು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಎನ್. ವೆಂಕಟೇಶ್, ಎಸ್ಇಟಿ ನಿರ್ದೇಶಕ ಡಾ.ಎಂ. ಪ್ರಕಾಶ್, ಟ್ರಾನ್ಸ್ ಡಿಸಿಪ್ಲಿನರಿ ವಿವಿ ಕುಲಪತಿ ಡಾ. ಬಾಲಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.

ಬೆಂಗಳೂರು ಉದಯವಾಣಿ
ಭಾನುವಾರ, ಅಕ್ಟೋಬರ್ 15, 2017

ಉದ್ಯೋಗ ಕ್ಷೇತ್ರ ಬಯಸೋದು ಅಂಕಗಳನ್ನಲ್ಲ: ಸ್ಯಾಮ್ ಪಿತ್ರೋಡ

ವಾಮಮಾರ್ಗದಿಂದ ಉತ್ತೀರ್ಣರಾಗೋ ಬದಲು ಮತ್ತೆ ಓದಲು ಸಲಹೆ


ಯಲಹಂಕ: ಸರಿಯಾದ ಕೌಶಲ್ಯತೆ ಹಾಗೂ ಜ್ಞಾನ ಮಾತ್ರ ಮುಂಬರುವ ದಿನಗಳಲ್ಲಿ ವಿದ್ಯಾರ್ಥಿಗಳ ಕೈಹಿಡಿಯುತ್ತದೆ ಎಂದು ದೇಶದ ದೂರ ಸಂಪರ್ಕ ಕ್ರಾಂತಿಯ ಪಿತಾಮಹ ಹಾಗೂ ಪದ್ಮಭೂಷಣ ಸ್ಯಾಮ್ ಪಿತ್ರೋಡ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಗರದ ಯಲಹಂಕದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ರಜತ ಮಹೋತ್ಸವದಲ್ಲಿ ಆಶಾದಾಯಕ ಮನಸ್ಸುಗಳಿಗಾಗಿ ಆಧುನಿಕ ವಿದ್ಯಾಭ್ಯಾಸದಲ್ಲಿ ಹೊಸತನ (ಸೃಜನಶೀಲತೆ) ಈ ವಿಷಯದ ಕುರಿತು ಉಪನ್ಯಾಸ ನೀಡಿದರು.

ವಿದ್ಯಾರ್ಥಿಗಳು ಕೇವಲ ಅಂಕಗಳನ್ನು ಗಳಿಸುವುದರ ಜೊತೆಯಲ್ಲಿಯೇ, ಜ್ಞಾನ ಹಾಗೂ ಕೌಶಲ್ಯ ವೃದ್ಧಿಗೂ ಒತ್ತು ನೀಡಬೇಕು. ಪೋಷಕರೂ ಇಂತಹ ವ್ಯವಸ್ಥೆಗೆ ಮುಂದಾಗಬೇಕು ಎಂದರು.

ಆಧುನಿಕ ಶಿಕ್ಷಣ ದೇಶದ ಅಭಿವೃದ್ಧಿಯನ್ನು ಹೊಸ ದಿಕ್ಕಿನತ್ತ ಕರೆದೊಯ್ಯುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ದೇಶ ದೂರ ಸಂಪರ್ಕ ಕ್ಷೇತ್ರದಲ್ಲಿ ಹೆಚ್ಚಿನ ಅಭಿವೃದ್ಧಿ ಹೊಂದಿದೆ. ಆದರೆ, ಇದನ್ನು ಸಮರ್ಪಕವಾಗಿ ಬಳಸಿಕೊಂಡು ವಿದ್ಯಾರ್ಜನೆಯಲ್ಲಿ ಹೆಚ್ಚಿನ ಸಾಧನೆಯಾಗದೇ ಇರುವುದು ವಿಪರ್ಯಾಸ ಎಂದು ವಿಷಾದಿಸಿದರು.

ಪೋಷಕರು ಹಾಗೂ ಸಮಾಜದ ಒತ್ತಡದ ನಡುವೆ ವಿದ್ಯಾರ್ಥಿಗಳು ಅಂಕಗಳನ್ನು ಗಳಿಸುವತ್ತ ಹೆಚ್ಚಿನ ಗಮನ ಹರಿಸುತ್ತಿದ್ದಾರೆ. ಅಲ್ಲದೆ, ಅನೇಕ ವಿದ್ಯಾರ್ಥಿಗಳು ವಾಮಮಾರ್ಗಗಳನ್ನು ಉಪಯೋಗಿಸುವ ಚಿಂತನೆಯನ್ನು ಮಾಡುತ್ತಾರೆ. ಆದರೆ, ವಾಮ ಮಾರ್ಗಗಳಿಂದ ಗಳಿಸುವ ಅಂಕಗಳಿಗಿಂತಾ ಒಂದು ವರ್ಷ ಅದೇ ವಿಷಯವನ್ನು ಕಲಿತು ಜ್ಞಾನವನ್ನು ಹೆಚ್ಚಿಸಿಕೊಳ್ಳುವುದು ಒಳಿತು ಎಂದು ಸಲಹೆ ನೀಡಿದರು.



ಯಲಹಂಕದ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ರಜತ ಮಹೋತ್ಸವದಲ್ಲಿ ದೂರ ಸಂಪರ್ಕ ಕ್ರಾಂತಿಯ ಪಿತಾಮಹ ಸ್ಯಾಮ್ ಪಿತ್ರೋಡ ಅವರನ್ನು ಸನ್ಮಾನಿಸಲಾಯಿತು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ . ಡಾ. ವೂಡೆ. ಪಿ.ಕೃಷ್ಣ ಅಧ್ಯಕ್ಷರಾದ ಎನ್.ಆರ್ ಪಂಡಿತಾರಾಧ್ಯ ಮತ್ತಿತರರಿದ್ದರು.

ಕಾರ್ಯಕ್ರಮದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ಡಾ.ವೂಡೆ ಪಿ.ಕೃಷ್ಣ ಅಧ್ಯಕ್ಷರಾದ ಎನ್.ಆರ್. ಪಂಡಿತಾರಾಧ್ಯ, ಶೇಷಾದ್ರಿಪುರಂ ಫಸ್ಟ್ ಗ್ರೇಡ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಎನ್ ವೆಂಕಟೇಶ್, ಡಾ.ಎಂ.ಪ್ರಕಾಶ್, ನಿರ್ದೇಶಕರು, ಎಸ್‌ಇಟಿ, ಟ್ರಾನ್ಸ್ ಡಿಸಿಪ್ಲಿನರಿ ವಿಶ್ವವಿದ್ಯಾಲಯದ ಉಪ ಕುಲಪತಿ. ಡಾ.ಬಾಲಕೃಷ್ಣ ಶಿಸುಪತಿ ಮತ್ತಿತರರಿದ್ದರು.

> ಈಗಿನ ಉದ್ಯೋಗ ಕ್ಷೇತ್ರ ಬಯಸುವುದು ಕೇವಲ ಕೌಶಲ್ಯಯುತ ಜ್ಞಾನವನ್ನೇ ಹೊರತು ಅಂಕಗಳನ್ನಲ್ಲ. ಒಂದು ಸ್ಥಾನವನ್ನು ತುಂಬಲು 300 ಜನರನ್ನು ಸಂದರ್ಶನಕ್ಕೆ ಒಳಪಡಿಸುವ ಅನಿವಾರ್ಯತೆ ಒದಗಿದೆ. ಶಿಕ್ಷಣ ಕ್ಷೇತ್ರ ಇಂದು ಕೇವಲ ಹಣ ಮಾಡುವ ಕ್ಷೇತ್ರವಾಗಿ ಪರಿಣಮಿಸಿದ್ದು, ರ್‍ಯಾಂಕ್ ಗಳಿಕೆಯೇ ಸಾಧನೆಯಲ್ಲ.
>
> • **ಸ್ಯಾಮ್ ಪಿತ್ರೋಡ**, ದೂರ ಸಂಪರ್ಕ ಕ್ರಾಂತಿಯ ಪಿತಾಮಹ

ಕನ್ನಡಪ್ರಭ ಭಾನುವಾರ 15.10.2017

ಅಸಹಿಷ್ಣುತೆ ದೇಶದ ಅಭಿವೃದ್ಧಿಗೆ ಮಾರಕ: ಸ್ಯಾಮ್ ಪಿತ್ರೋಡ

ಪರಸ್ಪರ ದ್ವೇಷ, ಗುಂಪು ದಾಳಿ ಭಾವದಿಂದ ಸಮಸ್ಯೆ
ಪ್ರತಿಯೊಬ್ಬರ ಅಭಿಪ್ರಾಯಕ್ಕೆ ಸ್ಪಂದಿಸಿ, ಗೌರವಿಸಿ



ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನ ರಜತ ಮಹೋತ್ಸವ ಪ್ರಯುಕ್ತ ನಡೆದ ಉಪನ್ಯಾಸದಲ್ಲಿ ಪದ್ಮಭೂಷಣ ಸ್ಯಾಮ್ ಪಿತ್ರೋಡರಿಗೆ ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೆ ಪಿ.ಕೃಷ್ಣ ಸ್ಮರಣಿಕೆ ನೀಡಿ ಗೌರವಿಸಿದರು. ಎನ್.ಆರ್.ಪಂಡಿತಾರಾಧ್ಯ, ಡಾ.ಎಸ್.ಎನ್.ವೆಂಕಟೇಶ್ ಉಪಸ್ಥಿತರಿದ್ದರು.

ಬೆಂಗಳೂರು: ಒಬ್ಬರ ಭಾವನೆಗಳನ್ನು ಮತ್ತೊಬ್ಬರು ಸಹಿಸದ ಪರಿಸ್ಥಿತಿ ನಿರ್ಮಾಣವಾಗಿದ್ದು, ಜಾಗತಿಕ ಮಟ್ಟದಲ್ಲಿ ದೇಶದ ಅಭಿವೃದ್ಧಿಗೆ ಮಾರಕವಾಗಲಿದೆ ಎಂದು ಭಾರತ ದೂರ ಸಂಪರ್ಕ ಕ್ರಾಂತಿಯ ಹರಿಕಾರ ಪದ್ಮಭೂಷಣ ಸ್ಯಾಮ್ ಪಿತ್ರೋಡ ಆತಂಕ ವ್ಯಕ್ತಪಡಿಸಿದ್ದಾರೆ.

ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ಶನಿವಾರ ಹಮ್ಮಿಕೊಂಡಿದ್ದ ರಜತ ಮಹೋತ್ಸವದಲ್ಲಿ 'ಆಶಾದಾಯಕ ಮನಸ್ಸುಗಳಿಗಾಗಿ ಆಧುನಿಕ ಶಿಕ್ಷಣದಲ್ಲಿ ಆವಿಷ್ಕಾರ' ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಸಮಾಜದಲ್ಲಿ ಪ್ರತಿಯೊಬ್ಬರ ಅಭಿಪ್ರಾಯ, ಭಾವನೆಗಳಿಗೆ ಸ್ಪಂದನೆ ನೀಡಿ ಗೌರವಿಸಬೇಕು. ಆದರೆ, ಪ್ರಸ್ತುತದಲ್ಲಿ ಒಬ್ಬರನ್ನು ಮತ್ತೊಬ್ಬರು ದ್ವೇಷ ಭಾವನೆಯಿಂದ ನೋಡುವಂತಾಗಿದೆ. ಗುಂಪುಗಳ ನಡುವೆ ದಾಳಿ ನಡೆಸುವ ಮನೋಭಾವ ಬೆಳೆಸಿ ಕೊಳ್ಳುತ್ತಿದ್ದಾರೆ ಎಂದರು. ಜನಸಂಖ್ಯೆ ಹೆಚ್ಚಾದಂತೆ ಉದ್ಯೋಗ ಸೃಷ್ಟಿಯೂ ಹೆಚ್ಚಾಗಬೇಕು. ಆದರೆ, ಕಳೆದ 4 ವರ್ಷಗಳಿಂದ ಉದ್ಯೋಗ ಸೃಷ್ಟಿಯಲ್ಲಿ ವಿಫಲವಾಗಿದ್ದೇವೆ. ಇದರಿಂದಾಗಿ ಪದವಿ ಪಡೆದ ನೂರಾರು ಪದವೀಧರರು ನಿರುದ್ಯೋಗಿಗಾಗುತ್ತಿದ್ದಾರೆ ಎಂದು ಆರೋಪಿಸಿದರು.

ಆಧುನಿಕ ಶಿಕ್ಷಣ ವ್ಯವಸ್ಥೆ ದೇಶವನ್ನು ಅಭಿವೃದ್ಧಿಯತ್ತ ಸಾಗಲು ನೆರವಾಗಲಿದೆ. ಪ್ರಸಕ್ತ ದೇಶದಲ್ಲಿ ದೂರ ಸಂಪರ್ಕ ಕ್ಷೇತ್ರ ಕ್ರಾಂತಿ ಮಾಡಿದ್ದು, ಯುವ ಸಮುದಾಯ ಸಮರ್ಪಕವಾಗಿ ವಿದ್ಯಾರ್ಜನೆಗೆ ಬಳಸಿಕೊಳ್ಳಬೇಕು. ಉದ್ಯೋಗ ಕ್ಷೇತ್ರ ಬಯಸುವುದು ಕೌಶಲ್ಯವುಳ್ಳ ಜ್ಞಾನವೇ ಹೊರತು ಅಂಕಗಳನ್ನಲ್ಲ. ಆದರೆ, ಪೋಷಕರು, ಸಮಾಜದ ಒತ್ತಡದ ನಡುವೆ ವಿದ್ಯಾರ್ಥಿಗಳು ಅಂಕಗಳನ್ನು ಗಳಿಸುವತ್ತ ಶ್ರಮಿಸುತ್ತಿದ್ದು, ಕೌಶಲ್ಯ ಮತ್ತು ಜ್ಞಾನಾರ್ಜನೆಯಲ್ಲಿ ವಿಫಲವಾಗುತ್ತಿದ್ದಾರೆ. ಅಂಕ ಗಳಿಸುವುದರಲ್ಲಿ ಜ್ಞಾನ ಹಾಗೂ ಕೌಶಲ್ಯ ವೃದ್ಧಿಗೂ ಒತ್ತ ನೀಡಬೇಕು ಎಂದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೆ ಪಿ. ಕೃಷ್ಣ, ಅಧ್ಯಕ್ಷ ಎನ್. ಆರ್ ಪಂಡಿತಾರಾಧ್ಯ, ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಎಸ್. ಎನ್ ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ
ಭಾನುವಾರ ○ ಅಕ್ಟೋಬರ್ 15, 2017

ದೂರಸಂಪರ್ಕ ಕ್ರಾಂತಿಯ ಪಿತಾಮಹ ಸ್ಯಾಮ್ ಪಿತ್ರೋಡ ವಿಷಾದ


ಶಿಕ್ಷಣದಲ್ಲಿ ಕಾಣದ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೂರಸಂಪರ್ಕ ಕ್ಷೇತ್ರದಲ್ಲಿ ದೇಶವು ಗಣನೀಯ ಪ್ರಗತಿ ಸಾಧಿಸಿದೆ. ಇದನ್ನು ಸಮರ್ಪಕವಾಗಿ ಬಳಸಿಕೊಂಡು ವಿದ್ಯಾರ್ಜನೆಯಲ್ಲಿ ಹೆಚ್ಚಿನ ಸಾಧನೆಯಾಗದಿರುವುದು ವಿಪರ್ಯಾಸ' ಎಂದು ದೂರಸಂಪರ್ಕ ಕ್ರಾಂತಿಯ ಪಿತಾಮಹ ಸ್ಯಾಮ್ ಪಿತ್ರೋಡ ವಿಷಾದಿಸಿದರು.

ಯಲಹಂಕದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ ರಜತ ಮಹೋತ್ಸವದ ಅಂಗವಾಗಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಆಶಾದಾಯಕ ಮನಸ್ಸುಗಳಿಗಾಗಿ ಆಧುನಿಕ ಶಿಕ್ಷಣದಲ್ಲಿ ಸೃಜನಶೀಲತೆ' ವಿಷಯ ಕುರಿತು ಅವರು ಉಪನ್ಯಾಸ ನೀಡಿದರು.

'ಅನ್ಯಮಾರ್ಗಗಳ ಮೂಲಕ ಹೆಚ್ಚಿನ ಅಂಕಗಳನ್ನು ಪಡೆಯುವುದಕ್ಕಿಂತ ನ್ಯಾಯ ಮಾರ್ಗಗಳ ಮೂಲಕ ಪಡೆಯುವ ಜ್ಞಾನವು ಮನುಷ್ಯನನ್ನು ಪರಿಪೂರ್ಣ ವ್ಯಕ್ತಿಯನ್ನಾಗಿ ರೂಪಿಸುತ್ತದೆ. ಪೋಷಕರು ಹಾಗೂ ಸಮಾಜದ ಒತ್ತಡದ ನಡುವೆ ವಿದ್ಯಾರ್ಥಿಗಳು ಹೆಚ್ಚಿನ ಅಂಕಗಳನ್ನು ಗಳಿಸುವತ್ತ ಗಮನ ಹರಿಸುತ್ತಿದ್ದಾರೆ. ಅನೇಕ ವಿದ್ಯಾರ್ಥಿಗಳು ವಾಮಮಾರ್ಗಗಳನ್ನು ಅನುಸರಿಸಲು ಯೋಚಿಸುತ್ತಾರೆ. ಇದರಿಂದ ಗಳಿಸುವ ಅಂಕಗಳಿಗಿಂತ ಒಂದು ವರ್ಷ ಅದೇ ವಿಷಯವನ್ನು ಕಲಿತು ಜ್ಞಾನ ವೃದ್ಧಿಸಿಕೊಳ್ಳುವುದು ಉತ್ತಮ' ಎಂದು ತಿಳಿಸಿದರು.



ಶೇಷಾದ್ರಿಪುರ ಶಿಕ್ಷಣ ದತ್ತಿಯ ಪ್ರಧಾನಕಾರ್ಯದರ್ಶಿ ವೂಡೇ.ಪಿ.ಕೃಷ್ಣ, ಸ್ಯಾಮ್ ಪಿತ್ರೋಡ, ಟ್ರಾನ್ಸ್ ಡಿಸಿಪ್ಲಿನರಿ ವಿಶ್ವವಿದ್ಯಾಲಯದ ಕುಲಪತಿ ಬಾಲಕೃಷ್ಣ ಪಿಸುಪತಿ, ಶೇಷಾದ್ರಿಪುರ ಶಿಕ್ಷಣದತ್ತಿಯ ಟ್ರಸ್ಟಿ ಎಂ.ಗೋಪಾಲ್ ಇದ್ದರು

'ಸದ್ಯ ಉದ್ಯೋಗ ಕ್ಷೇತ್ರ ನಿರೀಕ್ಷಿಸುವುದು ಕೌಶಲಯುಕ್ತ ಜ್ಞಾನವನ್ನೇ ಹೊರತು ಅಂಕಗಳನ್ನಲ್ಲ. ಶಿಕ್ಷಣ ಕ್ಷೇತ್ರವು ಇಂದು ಕೇವಲ ಹಣ ಗಳಿಸುವ ಕ್ಷೇತ್ರವಾಗಿ ಮಾರ್ಪಡುತ್ತಿದೆ. ಒಳ್ಳೆಯ ಕೌಶಲ ಮತ್ತು ಜ್ಞಾನ ಮಾತ್ರ ಮುಂಬರುವ ದಿನಗಳಲ್ಲಿ ವಿದ್ಯಾರ್ಥಿಗಳ ನೆರವಿಗೆ ಬರಲಿದೆ. ಈ ದಿಸೆಯಲ್ಲಿ ಅಂಕಗಳ ಜತೆಗೆ ಜ್ಞಾನ ಹಾಗೂ ಕೌಶಲವೃದ್ಧಿಗೆ ಹೆಚ್ಚಿನ ಒತ್ತು ನೀಡಬೇಕು' ಎಂದು ಸಲಹೆ ನೀಡಿದರು.

'ದೇಶವು ಶೇ.50ಕ್ಕಿಂತಲೂ ಹೆಚ್ಚು ಯುವಜನರನ್ನು ಹೊಂದಿದೆ. ಮುಂದಿನ ದಿನಗಳಲ್ಲಿ ವಿಶ್ವದ ಮುಂಚೂಣಿ ರಾಷ್ಟ್ರಗಳ ಪಟ್ಟಿಗೆ ಭಾರತ ಸೇರಬೇಕಾದರೆ ಯುವಶಕ್ತಿ ಸಮರ್ಪಕವಾಗಿ ಬಳಕೆಯಾಗಬೇಕು. ಜತೆಗೆ ಸೇವಾ ಮನೋಭಾವನೆ ಬೆಳೆಸುವುದು ಅತಿ ಮುಖ್ಯ' ಎಂದರು.

ಉದಯವಾಣಿ ಬೆಂಗಳೂರು
ಶುಕ್ರವಾರ, ಅಕ್ಟೋಬರ್ 13, 2017

ಅಸಮಾನತೆ ತೊಲಗಿದರೆ ದೇಶದ ಪ್ರಗತಿ

ಹಿರಿಯ ಪತ್ರಕರ್ತ, ಲೋಹಿಯಾ ಒಡನಾಡಿ ಮದನಲಾಲ್ ಅಭಿಪ್ರಾಯ

ಬೆಂಗಳೂರು: 'ಸಮಾಜದಲ್ಲಿನ ಅಸಮಾನತೆಗಳು ತೊಲಗದ ಹೊರತು, ಭಾರತ ಸೂಪರ್‌ಪವರ್ ಆಗಲು ಸಾಧ್ಯವಿಲ್ಲ, ಸೂಪರ್‌ಪವರ್ ಆಗಿರುವ ಅಮೆರಿಕ, ಚೀನದಂತಹ ದೇಶಗಳೊಂದಿಗೆ ಪೈಪೋಟಿ ನಡೆಸಲಿಕ್ಕೂ ಶಕ್ತ ಆಗುವುದಿಲ್ಲ ಎಂದು ಹಿರಿಯ ಪತ್ರಕರ್ತ ಹಾಗೂ ಲೋಹಿಯಾ ಒಡನಾಡಿ ಮದನಲಾಲ್ ಹಿಂದ್ ಅಭಿಪ್ರಾಯಪಟ್ಟರು.

ನಗರದ ಗಾಂಧಿ ಭವನದಲ್ಲಿ ಡಾ.ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯ, ಗಾಂಧಿ ಸ್ಮಾರಕ ನಿಧಿ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಕೋಶ ಸಂಯುಕ್ತವಾಗಿ ಗುರುವಾರ ಹಮ್ಮಿಕೊಂಡಿದ್ದ . 'ಲೋಹಿಯಾ ನೆನಪು-50' ಉದ್ಘಾಟಿಸಿ ಮಾತನಾಡಿದ ಅವರು, ಶೈಕ್ಷಣಿಕ, ಆರ್ಥಿಕ ಅಸಮಾನತೆಯಿಂದ ದೇಶ ಬಳಲುತ್ತಿದೆ. ಈ ಅಸಮಾನತೆಗಳನ್ನು ಹೋಗಲಾಡಿಸದೆ, ಭಾರತ ಸೂಪರ್‌ಪವರ್ ಆಗಲು ಸಾಧ್ಯವಿಲ್ಲ ಎಂದು ಹೇಳಿದರು.

ದೇಶದ ಪ್ರಧಾನಿ, ಮುಖ್ಯಮಂತ್ರಿಯಿಂದ ಹಿಡಿದು ಒಬ್ಬ ಕೂಲಿ ಕಾರ್ಮಿಕನವರೆಗಿನ ಎಲ್ಲ ಮಕ್ಕಳಿಗೂ ಏಕರೂಪ ಶಿಕ್ಷಣದ ಕನಸು ಕಂಡಿದ್ದರು ಲೋಹಿಯಾ. ಆದರೆ, ಇಂದು ಒಂದೆಡೆ ಒಂದು ಮಗುವಿನ ಪ್ರಾಥಮಿಕ ಶಿಕ್ಷಣಕ್ಕೆ ತಿಂಗಳಿಗೆ 50 ಸಾವಿರ ರೂ. ಸುರಿಯಲಾಗುತ್ತಿದೆ. ಮತ್ತೊಂದೆಡೆ ಮಗುವಿನ ಶಿಕ್ಷಣಕ್ಕೂ ಗತಿ ಇಲ್ಲ. ಎಲ್ಲಿಯವರೆಗೆ ಪ್ರಾಥಮಿಕ ಶಿಕ್ಷಣದಲ್ಲಿ ಸಮಾನತೆ ಬರುವುದಿಲ್ಲವೋ ಅಲ್ಲಿಯವರೆಗೂ ಲೋಹಿಯಾ ಪ್ರಸ್ತುತ ಆಗಿರುತ್ತಾರೆ ಎಂದು ತಿಳಿಸಿದರು.

ಪರ್ಯಾಯ ಸಾಂಸ್ಕೃತಿಕ ರಾಜಕಾರಣ ಬೇಕು: 'ಕರ್ನಾಟಕ ರಾಜಕಾರಣದಲ್ಲಿ ಲೋಹಿಯಾ ಚಿಂತನೆಗಳ ಪ್ರಭಾವ' ಕುರಿತು ಮಾತನಾಡಿದ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ದಿನೇಶ್ ಅಮಿನ್‌ಮಟ್ಟು, ಕೋಮುವಾದದ ಸಾಂಸ್ಕೃತಿಕ ರಾಜಕಾರಣ ಎದುರಿಸಲು ಪರ್ಯಾಯವಾದ ಮತ್ತೊಂದು ಸಾಂಸ್ಕೃತಿಕ ರಾಜಕಾರಣ ಕಟ್ಟುವ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟರು.

ಇಂದು ನಾವು ಮಾಡಬೇಕಾದದ್ದು ಚುನಾವಣಾ ರಾಜಕಾರಣವಲ್ಲ; ಸಾಂಸ್ಕೃತಿಕ ರಾಜಕಾರಣ. ಈ ನಿಟ್ಟಿನಲ್ಲಿ ಲೋಹಿಯಾ ಚಿಂತನೆ ಮಾತ್ರ ನಮಗೆ ಮಾದರಿ. ಯಾಕೆಂದರೆ, ಇಂದಿನ ಕೋಮುವಾದ ಎದುರಿಸಲು ಜಾತಿ ಮತ್ತು ಧರ್ಮದ ಬಗ್ಗೆ ಸ್ಪಷ್ಟತೆ ಇರಬೇಕು. ಇವೆರಡರ ಬಗ್ಗೆ ಅತ್ಯಂತ ಸ್ಪಷ್ಟವಾಗಿ ಮಾತನಾಡಿದವರು ಲೋಹಿಯಾ. ರಾಜಕೀಯ ಸಂದೇಶದ ರವಾನೆಗೆ ಸಂಸ್ಕೃತಿ ಒಂದು ಸಾಧನ. ರಾಜಕೀಯ ಎಂಬುದು ಅಲ್ಪಕಾಲೀನ ಧರ್ಮ; ಧರ್ಮ ಎನ್ನುವುದು ದೀರ್ಘಕಾಲೀನ ರಾಜಕೀಯ ಲೋಹಿಯಾ ಬಣ್ಣಿಸಿದ್ದರು ಎಂದರು. ಮಾಜಿ ಅಡ್ವೊಕೇಟ್ ಜನರಲ್ ಪ್ರೊ.ರವಿವರ್ಮಕುಮಾರ್, ಇಂದಿರಾ ಕೃಷ್ಣಪ್ಪ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ ಮತ್ತಿತರರು ಉಪಸ್ಥಿತರಿದ್ದರು.


ನಗರದ ಗಾಂಧಿ ಭವನದಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಲೋಹಿಯಾ ನೆನಪು-50' ಕಾರ್ಯಕ್ರಮದಲ್ಲಿ ಮದನಲಾಲ್ ಹಿಂದ್, ದಿನೇಶ್ ಅಮಿನ್‌ಮಟ್ಟು ಇತರರಿದ್ದರು.

ಕನ್ನಡಪ್ರಭ
ಶುಕ್ರವಾರ 13.10.2017
ಬೆಂಗಳೂರು

ಭಾರತ ದೇಶದ ಸಮಸ್ಯೆಗಳಿಗೆ ಲೋಹಿಯಾ ಚಿಂತನೆ ಪರಿಹಾರ


• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಭಾರತ ಎದುರಿಸುತ್ತಿರುವ ಎಲ್ಲ ಸಮಸ್ಯೆಗಳಿಗೆ ಡಾ.ರಾಮಮನೋಹರ ಲೋಹಿಯಾ ಅವರ ಸಿದ್ಧಾಂತ, ಚಿಂತನೆಗಳಲ್ಲಿ ಪರಿಹಾರವಿದೆ ಎಂದು ಲೋಹಿಯಾ ಒಡನಾಡಿ ಹಾಗೂ ದೆಹಲಿಯ ಹಿರಿಯ ಪತ್ರಕರ್ತ ಮದನಲಾಲ್ ಹಿಂದ್ ಹೇಳಿದರು.

ಡಾ.ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಕೋಶ ನಗರದ ಗಾಂಧಿಭವನದಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ಲೋಹಿಯಾ ನೆನಪು-50' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ದೇಶದ ರಾಜಕಾರಣಿಗಳಿಗೆ ರಾಜಕೀಯ ಗೊತ್ತಿಲ್ಲ, ವೈದ್ಯರಿಗೆ ವೈದ್ಯಕೀಯ ತಿಳಿದಿಲ್ಲ, ದೇಶದ ಗಡಿಗಳು ಸುರಕ್ಷಿತವಾಗಿಲ್ಲ. ಸಾವಿರಾರು ವರ್ಷಗಳಿಂದಲೂ ಜಾರಿಯಲ್ಲಿರುವ ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿರುವ ಅಸಮಾನತೆಯ ಆಚರಣೆಗಳು ಇಂದಿಗೂ ಬದಲಾಗಿಲ್ಲ. ಹಾಗಾಗಿ ದೇಶದ ಸರ್ವತೋಮುಖ ಅಭಿವೃದ್ಧಿ ಮರೀಚಿಕೆಯಾಗಿಯೇ ಉಳಿದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ದಿನೇಶ್ ಅಮೀನ್ ಮಟ್ಟು ಮಾತನಾಡಿ, ದೇಶದಲ್ಲಿ ಲೋಹಿಯಾ ಅವರ ಸಮಾಜವಾದಿ ಆಶಯಗಳನ್ನು ಜಾರಿಗೆ ಮಾಡಿದ ಏಕೈಕ ರಾಜ್ಯ ಕರ್ನಾಟಕವಾಗಿದೆ. ಮಾಜಿ ಮುಖ್ಯಮಂತ್ರಿ ದಿ. ದೇವರಾಜ ಅರಸು ಆಡಳಿತಾವಧಿಯಲ್ಲಿ ಜಾರಿಗೆ ಬಂದ ಭೂ ಸುಧಾರಣೆ, ಮಲ ಹೊರುವ ಪದ್ಧತಿ ನಿಷೇಧ, ವಿಕೇಂದ್ರಿಕರಣ, ಮಹಿಳಾ ಮೀಸಲಾತಿ ಸೇರಿದಂತೆ ಹಲವು ಕಾರ್ಯಕ್ರಮಗಳು ಲೋಹಿಯಾ ಚಿಂತನೆಯ ಪ್ರತಿಫಲವಾಗಿವೆ ಎಂದು ತಿಳಿಸಿದರು.

ಹಿರಿಯ ನ್ಯಾಯವಾದಿ ಪ್ರೊ.ರವಿವರ್ಮಕುಮಾರ್ ಮಾತನಾಡಿ, ಲೋಹಿಯಾ ಅಂದರೆ ಹೋರಾಟ ಸಂಕೇತ. ಅಂತರ್‌ಜಾತಿ ವಿವಾಹ ಹಾಗೂ ಸಹಪಂಕ್ತಿ ಭೋಜನದಿಂದ ಮಾತ್ರವೇ ಜಾತಿ ವಿನಾಶವಾಗಲು ಸಾಧ್ಯವೆಂದು ಲೋಹಿಯಾ ಪ್ರಬಲವಾಗಿ ಪ್ರತಿಪಾದಿಸುತ್ತಿದ್ದರು ಎಂದು ಅವರು ಸ್ಮರಿಸಿದರು. ವೇದಿಕೆಯಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ, ಕೆ. ಅರ್ಕೇಶ್, ಹೋರಾಟಗಾತಿ ಇಂದಿರಾ ಕೃಷ್ಣಪ್ಪ, ಗಾಂಧಿ ಸ್ಮಾರಕ ನಿಧಿ ಉಪಾಧ್ಯಕ್ಷರಾದ ಶಿವರಾಜ್, ತಿಪ್ಪಣ್ಣಗೌಡ ಇನ್ನಿತರರು ಉಪಸ್ಥಿತರಿದ್ದರು.



'ಲೋಹಿಯಾ ನೆನಪು-50' ಕಾರ್ಯಕ್ರಮದಲ್ಲಿ ಸಿಆರ್‌ಪಿಎಫ್ ನಿವೃತ್ತ ಐಜಿಪಿ ಕೆ. ಅರ್ಕೇಶ್, ಸಿಎಂ ಮಾಧ್ಯಮ ಸಲಹೆಗಾರ ದಿನೇಶ್ ಅಮೀನ್ ಮಟ್ಟು, ನ್ಯಾಯವಾದಿ ಪ್ರೊ. ರವಿವರ್ಮಕುಮಾರ್, ಹಿರಿಯ ಪತ್ರಕರ್ತ ಮದನಲಾಲ್ ಹಿಂದ್, ಡಾ. ವೂಡೇ ಪಿ. ಕೃಷ್ಣ ಅವರು ಲೋಹಿಯಾ ಭಾವಚಿತ್ರಕ್ಕೆ ಪುಷ್ಪನಮನ ಅರ್ಪಿಸಿದರು.

ಕರ್ನಾಟಕ VK ಶುಕ್ರವಾರ,13 ಅಕ್ಟೋಬರ್ 2017, ಬೆಂಗಳೂರು



ನಗರದ ಗಾಂಧಿ ಭವನದಲ್ಲಿ ಗುರುವಾರ ಆಯೋಜಿಸಿದ್ದ 'ಲೋಹಿಯಾ ನೆನಪು' ಕಾರ್ಯಕ್ರಮದಲ್ಲಿ ಮದನ್ ಲಾಲ್ ಹಿಂದ್, ವೂಡೆ ಪಿ. ಕೃಷ್ಣ, ಪ್ರೊ. ರವಿವರ್ಮ ಕುಮಾರ್ , ದಿನೇಶ್ ಅಮೀನ್ ಮಟ್ಟು ಪಾಲ್ಗೊಂಡಿದ್ದರು.

ನಾವು ಕನ್ನಡಿಗರು

ಗುರುವಾರ
12-10-2017

12ನೇ ಶತಮಾನದ ಚಿಂತನೆಗಳು 18ನೇ ಶತಮಾನದಲ್ಲಿ ಸಾಕಾರಗೊಂಡವು

ರಾಜಾರಾಮ ಮೋಹನರಾಯರ 184ನೇ ಸಂಸ್ಮರಣೆ ಕಾರ್ಯಕ್ರಮದಲ್ಲಿ ಡಾ.ಲೀಲಾದೇವಿ ಆರ್. ಪ್ರಸಾದ್



"12ನೇ ಶತಮಾನದಲ್ಲಿ ಬಸವಾದಿ ಶರಣರು ನಡೆಸಿದ ಉದಾತ್ತ ಚಿಂತನೆಗಳು 18ನೇ ಶತಮಾನದಲ್ಲಿ ರಾಜಾರಾಮ ಮೋಹನರಾಯ್ ಮೊದಲಾದ ಮಹಾಪುರುಷರಿಂದ ಸಾಕಾರಗೊಂಡವು. ಹೆಣ್ಣು ಮಕ್ಕಳಿಗೂ ಗೌರವದ ಬದುಕಿದೆ ಎಂದು ತೋರಿಸಿಕೊಟ್ಟವರು ರಾಜಾರಾಮ ಮೋಹನರಾಯ್. ಅವರು ಗತಿಸಿ 184 ವರ್ಷಗಳಾದರೂ ಇಂದೂ ವಿಧವೆಯರ ಬಾಳು ನಿಕೃಷ್ಟವಾಗಿದೆ. ಎಳೆಯ ಮಕ್ಕಳಿಂದ ಹಿಡಿದು ಮುದುಕಿಯರ ಮೇಲೂ ಅತ್ಯಾಚಾರ ನಡೆಯುತ್ತಿದೆ. ನಮ್ಮ ಮನಸ್ಸುಗಳು ಬದಲಾಗದೆ ಹೋದರೆ, ಎಷ್ಟು ಮೌಢ್ಯ ನಿಷೇಧ ಕಾನೂನುಗಳನ್ನು ಜಾರಿಗೆ ತಂದರೂ ಏನು ಪ್ರಯೋಜನ?" ಎಂದು ಮಾಜಿ ಸಚಿವೆ, ಹಿರಿಯ ಸಾಹಿತಿ ಡಾ.ಲೀಲಾದೇವಿ ಆರ್.ಪ್ರಸಾದ್ ಪ್ರಶ್ನಿಸಿದರು.

ಬೆಂಗಳೂರು ಬ್ರಹ್ಮ ಸಮಾಜ ಮತ್ತು ಅ.ನ.ಕೃ. ಕನ್ನಡ ಸಂಘ ಸಂಯುಕ್ತವಾಗಿ ಏರ್ಪಡಿಸಿದ್ದ "ಸತಿ ಸಹಗಮನ ಪದ್ಧತಿಯ ವಿರುದ್ಧ ಹೋರಾಡಿದ ಮಾನವೀಯತೆಯ ಹರಿಕಾರ, ಪತ್ರಿಕಾ ಸ್ವಾತಂತ್ರ್ಯಕ್ಕೆ ಮತ್ತು ಮಹಿಳಾ ವಿಮೋಚನೆಗೆ ಒತ್ತು ನೀಡಿದ ರಾಜಾರಾಮ ಮೋಹನರಾಯ್" ಅವರ 184ನೇ ಪುಣ್ಯ ಸಂಸ್ಮರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ.ಲೀಲಾದೇವಿ "ಸಮಾಜದಿಂದ ಬಹಿಷ್ಕೃತರಾಗುವ ಬೆದರಿಕೆ ಇದ್ದರೂ ನನ್ನ ತಂದೆ 80 ವರ್ಷಗಳ ಹಿಂದೆಯೇ ಚಿಕ್ಕಂದಿನಲ್ಲೇ ವಿಧವೆಯಾಗಿದ್ದ ತಮ್ಮ ಸೋದರಿಗೆ ಮರು ವಿವಾಹ ಮಾಡಿದೆ"? ಎಂದರಲ್ಲದೆ, ಚಿತ್ರದುರ್ಗದ ಮುರುಘಾಶರಣರು ಒಂದು ಕಾರ್ಯಕ್ರಮದ ಉದ್ಘಾಟನೆಯನ್ನು ವಿಧವೆಯೊಬ್ಬರಿಂದ ಮಾಡಿಸಿದ ಮರು ದಿನವೇ ಅದೇ ಸ್ಥಳದಲ್ಲಿ ಒಂದು ಬಸ್ಸು ಅಪಘಾತಕ್ಕೀಡಾಗಿ ಕೆಲವರ ಪ್ರಾಣಹಾನಿಯಾದಾಗ, ಜನ ಮತ್ತು ಕೆಲವು ಪತ್ರಿಕೆಗಳು ಮಾಡಬಾರದ್ದು ಮಾಡಿದರೆ ಆಗಬಾರದ್ದು ಆಗುತ್ತೆ ಎಂದು ಶರಣರ ವಿರುದ್ಧ ಟೀಕಾ ಪ್ರಹಾರ ಮಾಡಿದಾಗ ಅಲ್ಲೇ ಇದ್ದ ನಾನು ಈ ಅಪಘಾತ ಕಾಕತಾಳೀಯ. ಇಂದಿರಾಗಾಂಧಿಯವರು ಸುದೀರ್ಘಕಾಲ ಪ್ರಧಾನಿಯಾಗಿ ದೇಶಕ್ಕೆ ಅನೇಕ ಒಳಿತುಗಳನ್ನು ಮಾಡಲಿಲ್ಲವೇ ಎಂದು ಹೇಳಿ ಟೀಕಾಕಾರರ ಬಾಯಿ ಮುಚ್ಚಿಸಿದೆ ಎಂದು ಹೇಳಿದರು. ರಾಜಾರಾಮ ಮೋಹನರಾಯರ ತತ್ವಗಳನ್ನು ಅಳವಡಿಸಿಕೊಂಡರೆ ಮಾತ್ರ ಅವರಿಗೆ ನಾವು ಗೌರವ ನೀಡಿದಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು. "ಗಂಡು ಮೋಹಿಸಿ ಹೆಣ್ಣು ಹಿಡಿದರೆ ಅದು ಒಬ್ಬರ ಒಡವೆ" -ಶರಣೆ ಗೊಗ್ಗವ್ವನ ಈ ವಚನವನ್ನು ಉಲ್ಲೇಖಿಸಿದರು.



ಕಾರ್ಯಕ್ರಮ ಉದ್ಘಾಟಿಸಿದ ಶಿಕ್ಷಣ ತಜ್ಞ ಡಾ.ಪ್ರೊಡೇ ಪಿ.ಕೃಷ್ಣ "ಅನೇಕ ಮೌಢ್ಯಾಚಾರಣೆಗಳಿಂದಾಗಿ ಅತ್ಯಂತ ಅಂಧಕಾರದಲ್ಲಿದ್ದ ಭಾರತದ ಜನ ಜೀವನವನ್ನು ಸುಧಾರಿಸಲು 18ನೇ ಶತಮಾನದಲ್ಲಿ ಅವತರಿಸಿದ ಸಂತ ರಾಜಾರಾಮಮೋಹನ್‌ರಾಯ್ ಅಮಾನವೀಯ ಸತಿ ಸಹಗಮನ ಪದ್ಧತಿಯ ವಿರುದ್ಧ ಏಕಾಂಗಿಯಾಗಿ ಹೋರಾಡಿದರು. ನಿಧನರಾಗಿ 184 ವರ್ಷಗಳಾದರೂ ನಮ್ಮ ಹೃದಯಗಳಲ್ಲಿ ಜೀವಂತವಾಗಿದ್ದಾರೆ. 15 ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದ ಅವರು ಎಲ್ಲಾ ಧರ್ಮೀಯರು ಒಂದೆಡೆ ಸೇರಿ ಪ್ರಾರ್ಥಿಸಲು ಬ್ರಹ್ಮ ಸಮಾಜ ಸ್ಥಾಪಿಸುತ್ತಾರೆ. ಇನ್ನೂರು ವರ್ಷಗಳ ಹಿಂದೆಯೇ ಪತ್ರಿಕಾ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದರು. ಇಂಗ್ಲೀಷ್ ಮತ್ತು ವಿಜ್ಞಾನ ಶಿಕ್ಷಣಗಳಿಗೆ ಒತ್ತು ನೀಡಿ ಕಲ್ಕತ್ತಾನಗರದಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. 12ನೇ ಶತಮಾನದಲ್ಲಿ ಬಸವಣ್ಣ ಬೋಧಿಸಿದ ಏಕದೇವೋಪಾಸನೆ ತತ್ವವನ್ನೇ 18ನೇ ಶತಮಾನದಲ್ಲಿ ರಾಜಾರಾಮ ಮೋಹನರಾಯರು ಬೋಧಿಸಿದರು. ಬಹುಶಃ ಬಸವಣ್ಣನವರ ವಚನಗಳು ಇಂಗ್ಲೀಷ್ ಮತ್ತು ಇತರ ಭಾಷೆಗಳಿಗೆ ಅನುವಾದಗೊಂಡಿದ್ದಿದ್ದರೆ, ರಾಜರಾಮ ಮೋಹನರಾಯರಿಗೆ ಇನ್ನೂ ಹೆಚ್ಚಿನ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತಿತ್ತೇನೋ" ಎಂದು ಅಭಿಪ್ರಾಯ ಪಟ್ಟರು. ಭಾರತದ ಮಹಿಳೆಯರಿಗೆ ಪರಿಪೂರ್ಣ ಶಿಕ್ಷಣ ದೊರೆತಾಗ ಮಾತ್ರ ನಾವು ರಾಜಾರಾಮ ಮೋಹನರಾಯರಿಗೆ ಗೌರವ ಸಲ್ಲಿಸಿದಂತಾಗುತ್ತದೆ ಎಂದು ಹೇಳಿದರು.

ಡಾ.ವೀ. ಮಂಜುಳಾ ಶಿವಾನಂದ ನಿರೂಪಿಸಿದ ಕಾರ್ಯಕ್ರಮ ಬಾಪುಗೌಡ ಪಾಟೀಲ ನಾಡಗೀತೆ ಹಾಡುವುದರೊಂದಿಗೆ ಆರಂಭವಾಯಿತು. ಎಸ್.ಎಸ್.ಪಡಶೆಟ್ಟಿ, ಎಂ.ಆರ್. ಅನಂತಮೂರ್ತಿ, ಗು.ಮ.ವೀರಣ್ಣ ಕನ್ನಡ ಗೀತೆಗಳನ್ನು ಹಾಡಿದರು. ಸುನಂದ ರು.ಬಸಪ್ಪ ಸ್ವಾಗತಿಸಿದರು. ಬೆಂಗಳೂರು ಬ್ರಹ್ಮ ಸಮಾಜದ ಅಧ್ಯಕ್ಷ ಡಾ.ಅಶೋಕಗುರುದಾಸ್ ಮತ್ತು ಗೌ.ಕಾರ್ಯದರ್ಶಿ ಡಬ್ಲ್ಯೂ. ಎಚ್.ದೇವಕುಮಾರ್ ಮುಖ್ಯ ಅತಿಥಿಗಳಾಗಿದ್ದರು.

ಕವಯತ್ರಿ ರಾಣಿಗೋವಿಂದರಾಜು ಅವರ ಅಧ್ಯಕ್ಷತೆಯಲ್ಲಿ ನಡೆದ ರಾಜಾರಾಮಮೋಹನರಾಯರಿಗೆ ಕಾವ್ಯ ನಮನ ಕಾರ್ಯಕ್ರಮದಲ್ಲಿ ಡಾ.ರಾಧಿಕಾರಂಜನಿ, ಆರ್. ಹಂಸಾ, ನಳಿನಿ ಮಹಾದೇವಸ್ವಾಮಿ ಮತ್ತು ಡಾ.ಬಿ.ಇಂದಿರಾದೇವಿ ಭಾಗವಹಿಸಿದ್ದರು.


ವಾರ್ತಾ ಭಾರತಿ

ಆರ್ಥಿಕ, ಸಾಮಾಜಿಕ ಸಮಾನತೆಯಿಲ್ಲದೆ ಭಾರತ ಅಭಿವೃದ್ಧಿಯಾಗದು

ಮದನಲಾಲ್ ಹಿಂದ್

ಬೆಂಗಳೂರು, ಅ.12: ದೇಶದಲ್ಲಿ ಸಾವಿರಾರು ವರ್ಷಗಳಿಂದಲೂ ಜಾರಿಯಲ್ಲಿರುವ ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿರುವ ಅಸಮಾನತೆಯ ಆಚರಣೆಗಳು ಇಂದಿಗೂ ಬಲವಾಗಿದೆ ಉಳಿದಿರುವುದರಿಂದ ದೇಶದ ಸರ್ವತೋಮುಖ ಅಭಿವೃದ್ಧಿ ಮರೀಚಿಕೆಯಾಗಿಯೇ ಉಳಿದಿದೆ ಎಂದು ಹಿರಿಯ ಪತ್ರಕರ್ತ ಮದನಲಾಲ್ ಹಿಂದ್ ಅಭಿಪ್ರಾಯಿಸಿದರು.

ಗುರುವಾರ ಡಾ.ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಕೋಶ ನಗರದ ಗಾಂಧಿ ಭವನದಲ್ಲಿ ಆಯೋಜಿಸಿದ್ದ 'ಲೋಹಿಯಾ ನೆನಪು-50' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಕಾಲಘಟ್ಟದಲ್ಲಿಯೇ ಚೀನಾ ದೇಶವೂ ಸ್ವತಂತ್ರವಾಯಿತು. ಆದರೆ, ಶಿಕ್ಷಣ, ಆರೋಗ್ಯ, ಸಂಶೋಧನೆ ಸೇರಿದಂತೆ ಯಾವುದೇ ಕ್ಷೇತ್ರದಲ್ಲಿ ಚೀನಾಕ್ಕೆ ಹೋಲಿಸಿದರೆ ಭಾರತ ಅತ್ಯಂತ ಕೆಳ ಹಂತದಲ್ಲಿದೆ. ಭಾರತದ ಈ ದುಸ್ಥಿತಿಯನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಿದರೆ ದೇಶದಲ್ಲಿ ಅನಾದಿಕಾಲದಿಂದಲೂ ಬೇರು ಬಿಟ್ಟಿದ್ದ ಅಸಮಾನತೆಯನ್ನು ಹೋಗಲಾಡಿಸಲು ನಾವು ವಿಫಲರಾಗಿದ್ದೇವೆ. ಹೀಗಾಗಿ ದೇಶ ಎಲ್ಲ ರಂಗದಲ್ಲೂ ಅತ್ಯಂತ ಕಳಪೆ ಮಟ್ಟದಲ್ಲಿದೆ ಎಂದು ಅವರು ವಿಷಾದಿಸಿದರು.

ದೇಶದಲ್ಲಿ ಕನಿಷ್ಠ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಾದರೂ ಸಮಾನತೆ ತರಬೇಕೆಂಬುದು ಲೋಹಿಯಾರವರ ಕನಸಾಗಿತ್ತು. ಆದರೆ, ಪ್ರಸ್ತುತ ದೇಶದಲ್ಲಿ ಒಂದನೇ ತರಗತಿಗೆ ಲಕ್ಷಾಂತರ ರೂ. ಶುಲ್ಕ ಕಟ್ಟಿ ಶಾಲೆಗೆ ಕಳುಸುವಂತಹ ಪರಿಸ್ಥಿತಿ ಇದ್ದರೆ, ಇನ್ನು ಕೆಲವು ಸಮುದಾಯದ ಮಕ್ಕಳು ತರಗತಿಯ ಮುಖವನ್ನೇ ನೋಡದ ಸ್ಥಿತಿಯಲ್ಲಿದ್ದಾರೆ. ಇಂತಹ ಪರಿಸ್ಥಿತಿ ಹೊಂದಿರುವ ಭಾರತ ಅಭಿವೃದ್ಧಿಗೊಳ್ಳಲು ಸಾಧ್ಯವಿದೆಯೇ ಎಂದು ಅವರು ಪ್ರಶ್ನಿಸಿದರು.


> "ಲೋಹಿಯಾ ಅಂದರೆ ಹೋರಾಟದ ಸಂಕೇತ. ಅವರ ಚಿಂತನೆಗಳ ಸ್ಫೂರ್ತಿಯಿಂದ ಒಂದು ಸಂದರ್ಭದಲ್ಲಿ ರಾಜ್ಯದಲ್ಲಿ ಅಂತರ್ಜಾತಿ ವಿವಾಹಗಳು ಹೆಚ್ಚಾಗಿ ನಡೆದವು. ಅಂತರ್ಜಾತಿ ವಿವಾಹ ಹಾಗೂ ಸಹಪಂಕ್ತಿ ಭೋಜನದಿಂದ ಮಾತ್ರವೇ ಜಾತಿ ವಿನಾಶವಾಗಲು ಸಾಧ್ಯವೆಂದು ಲೋಹಿಯಾ ಪ್ರಬಲವಾಗಿ ಪ್ರತಿಪಾದಿಸುತ್ತಿದ್ದರು.
>
> । ಪ್ರೊ.ರವಿವರ್ಮಕುಮಾರ್, ಹಿರಿಯ ನ್ಯಾಯವಾದಿ

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ದಿನೇಶ್ ಅಮೀನ್ ಮಟ್ಟು ಮಾತನಾಡಿ, ದೇಶದಲ್ಲಿ ಲೋಹಿಯಾರವರ ಸಮಾಜವಾದಿ ಆಶಯಗಳನ್ನು ಜಾರಿಗೆ ಮಾಡಿದ ಏಕೈಕ ರಾಜ್ಯ ಕರ್ನಾಟಕವಾಗಿದೆ. ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಆಡಳಿತಾವಧಿಯಲ್ಲಿ ಜಾರಿಗೆ ಬಂದ ಭೂ ಸುಧಾರಣೆ, ಮಲಹೊರುವ ಪದ್ಧತಿ ನಿಷೇಧ, ವಿಕೇಂದ್ರೀಕರಣ, ಮಹಿಳಾ ಮೀಸಲಾತಿ ಸೇರಿದಂತೆ ಹಲವು ಕಾರ್ಯಕ್ರಮಗಳು ಲೋಹಿಯಾ ಚಿಂತನೆಯ ಪ್ರತಿಫಲವಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಲೋಹಿಯಾ ಚಿಂತನೆಗಳು ಮೇಲ್ಜಾತಿಗೆ ಸೀಮಿತಗೊಂಡು, ತಳ ಸಮುದಾಯಕ್ಕೆ ತಲುಪುವಲ್ಲಿ ವಿಫಲವಾಯಿತು. ಇದರಿಂದಾಗಿ ರಾಜ್ಯದಲ್ಲಿ ಸಮಾಜವಾದಿ ಚಿಂತನೆ ರಾಜಕೀಯ ಸ್ವರೂಪವನ್ನು ಪಡೆಯುವಲ್ಲಿ ವಿಫಲವಾಯಿತು. ಇಂದಿಗೂ ಕೆಲವು ಸಮಾಜವಾದಿಗಳು ಲೋಹಿಯಾ ಒಂದು ಕಾಲಘಟ್ಟದಲ್ಲಿ ತೋರಿದ ಕಾಂಗ್ರೆಸ್ ವಿರೋಧಿ ಧೋರಣೆಯನ್ನು ತಮ್ಮ ಅನುಕೂಲಕ್ಕೆ ತಕ್ಕನಾಗೆ ಬಳಸಿಕೊಳ್ಳುತ್ತಿದ್ದಾರೆ ಎಂದು ಅವರು ವಿಷಾದಿಸಿದರು.

ನಿವೃತ್ತ ಐಜಿಪಿ ಕೆ.ಅರ್ಕೇಶ್, ದಲಿತ ಹೋರಾಟಗಾರ್ತಿ ಇಂದಿರಾ ಕೃಷ್ಣಪ್ಪ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ಹೊಡೇ ಪಿ.ಕೃಷ್ಣ ವಹಿಸಿದ್ದರು. ಈ ವೇಳೆ ಗಾಂಧಿ ಸ್ಮಾರಕ ನಿಧಿಯ ಪ್ರೊ.ಶಿವರಾಜ್, ತಿಪ್ಪಣ್ಣಗೌಡ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ ಬುಧವಾರ , ಅಕ್ಟೋಬರ್ 11, 2017



ವಿದ್ಯಾರ್ಥಿಗಳು ಸಂಶೋಧನೆ ನಡೆಸಿ ಸಿದ್ಧಪಡಿಸಿದ್ದ ಭಿತ್ತಿಪತ್ರಗಳನ್ನು ಎಂ.ವೀರಪ್ಪ ಮೊಯಿಲಿ ಅನಾವರಣಗೊಳಿಸಿದರು. ಪೂಡೇ ಪಿ.ಕೃಷ್ಣ, ಅಧ್ಯಯನ ನಿರ್ದೇಶಕ ಎಂ.ಪ್ರಕಾಶ್, ಕಾಲೇಜು ಪ್ರಾಂಶುಪಾಲ ಎಸ್.ಎನ್.ವೆಂಕಟೇಶ್ ಇದ್ದಾರೆ

ಪ್ರತಿಭೆ ಹೊಸಕಬೇಡಿ: ಮೊಯಿಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಕ್ಷಣ ಕ್ಷೇತ್ರದಲ್ಲಿ ಪ್ರತಿಭೆಗಳನ್ನು ತುಳಿಯುವ ಕೆಲಸ ಎಂದಿಗೂ ಆಗಬಾರದು. ಶಿಕ್ಷಣದಲ್ಲಿ ಕ್ರಾಂತಿಯಾಗಿ, ಅವಕಾಶಗಳು ಸುಲಭ ಸಾಧ್ಯವಾದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ' ಎಂದು ಸಂಸದ ಎಂ.ವೀರಪ್ಪ ಮೊಯಿಲಿ ಅಭಿಪ್ರಾಯ ಪಟ್ಟರು.

ಯಲಹಂಕದ ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ 'ಜಾಗತಿಕ ಪ್ರಚಲಿತ ವಿದ್ಯಮಾನಗಳು, ವಿಜ್ಞಾನ ಮತ್ತು ತಂತ್ರಜ್ಞಾನಗಳ ಪಾತ್ರ' ಕುರಿತ ಅಂತ-ರರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

'ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿಗಳ ಪ್ರತಿಭೆಗೆ ತಕ್ಕಂತೆ ಸಮಾನ ಅವಕಾಶಗಳು ದೊರೆಯುತ್ತಿಲ್ಲ. ಶಿಕ್ಷಣ ಸಂಸ್ಥೆಗಳು ಈ ಬಗ್ಗೆ ಗಮನಹರಿಸ ಬೇಕು. ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆ ಗುರುತಿಸಿ, ಪ್ರೋತ್ಸಾಹಿಸುವ ವಾತಾವರಣ ಕಾಲೇಜುಗಳಲ್ಲಿ ನಿರ್ಮಾಣವಾಗಬೇಕು' ಎಂದು ಸಲಹೆ ನೀಡಿದರು.



ಕರ್ನಾಟಕ ರಾಜ್ಯ ಕ್ಷಯ ರೋಗ ಸಂಘ ವತಿಯಿಂದ ರಾಜಭವನದಲ್ಲಿ ಹಮ್ಮಿಕೊಂಡಿದ್ದ ಟಿಬಿ ಮುಕ್ತ ಅಭಿಯಾನ ಕಾರ್ಯಕ್ರಮವನ್ನು ರಾಜ್ಯಪಾಲ ವಿ.ಆರ್.ವಾಲಾ ಉದ್ಘಾಟಿಸಿದರು. ಆರೋಗ್ಯ ಸಚಿವ ಕೆ.ಆರ್.ರಮೇಶ್‌ಕುಮಾರ್, ಪ್ರಧಾನಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ನಿರ್ದೇಶಕ ಡಾ.ಪಿ.ಎ.ನಟರಾಜ್, ಡಾ.ಎಚ್.ಎಸ್.ರುದ್ರೇಶ್, ಗಾಂಧಿ ಭವನದ ಅಧ್ಯಕ್ಷ ವೂಡೇ.ಪಿ.ಕೃಷ್ಣ ಮತ್ತಿತರರು ಪಾಲ್ಗೊಂಡಿದ್ದರು.


ಕರ್ನಾಟಕ

ಭಾನುವಾರ,8 ಅಕ್ಟೋಬರ್ 2017

'ವಿದ್ಯಾರ್ಥಿಗಳ ಪ್ರತಿಭೆ ಅನಾವರಣವಾಗಲಿ'

ವಿಕ ಸುದ್ದಿಲೋಕ ಯಲಹಂಕ

ವಿದ್ಯಾರ್ಥಿಗಳ ಪ್ರತಿಭೆ ಅನಾವರಣಗೊಂಡರೆ ದೇಶದ ಪ್ರಗತಿ ಸಾಧ್ಯ ಎಂದು ಸಂಸದ ಎಂ ವೀರಪ್ಪ ಮೊಯ್ಲಿ ಹೇಳಿದರು.



ಸಮ್ಮೇಳನವನ್ನು ಸಂಸದ ವೀರಪ್ಪ ಮೊಯಿಲಿ ಉದ್ಘಾಟಿಸಿದರು.

ಇಲ್ಲಿನ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನದ ಜಾಗತಿಕ ಸಮಸ್ಯೆಗಳ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ''ಇತ್ತೀಚೆಗೆ ವಿದ್ಯಾರ್ಥಿಗಳ ಪ್ರತಿಭೆಗೆ ಪೂರಕವಾಗಿ ಅವಕಾಶಗಳು ದೊರೆಯುತ್ತಿಲ್ಲ. ಈ ಕುರಿತು ವಿದ್ಯಾರ್ಥಿಗಳು ಸರಕಾರದ ಗಮನ ಸೆಳೆಯಬೇಕು,'' ಎಂದರು.

''ದೇಶದಲ್ಲಿ ಸಾಮಾಜಿಕ ನ್ಯಾಯ ಇರುವುದರಿಂದ ಅನೇಕ ವಿದ್ಯಾರ್ಥಿಗಳಿಗೆ ಅವಕಾಶ ಸಿಗುತ್ತಿದೆ. ಇದರಿಂದ ಅನೇಕ ಹುದ್ದೆಗಳು ಅಲಂಕರಿಸಲು ಸಾಧ್ಯವಾಗಿದೆ,'' ಎಂದರು.

ಸಮ್ಮೇಳನದಲ್ಲಿ ಅಫಘಾನಿಸ್ಥಾನ, ಸೂಡಾನ್ ಮತ್ತಿತರ ದೇಶಗಳ ವಿದ್ಯಾರ್ಥಿಗಳು ಪಾಲ್ಗೊಂಡು ವಿಚಾರ ವಿನಿಮಯ ಮಾಡಿಕೊಂಡರು. ಸಮಾರಂಭದಲ್ಲಿ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವೂಡೆ ಪಿ ಕೃಷ್ಣ ಹಾಗೂ ಮತ್ತಿತರರು ಪಾಲ್ಗೊಂಡಿದ್ದರು.

ಉದಯವಾಣಿ ಬೆಂಗಳೂರು


ಭಾನುವಾರ, ಅಕ್ಟೋಬರ್ 8, 2017

ಪ್ರತಿಭೆಯಿಂದ ದೇಶದ ಪ್ರಗತಿ: ಮೊಯ್ಲಿ

ಯಲಹಂಕ: ಪ್ರತಿಭೆಯನ್ನುವುದು ಕ್ರಾಂತಿಯಾಗಿ ಹೊರಹೊಮ್ಮಿದಾಗ ಮಾತ್ರ ದೇಶದ ಪ್ರಗತಿ ಸಾಧ್ಯ ಎಂದು ಸಂಸದ ಎಂ.ವೀರಪ್ಪ ಮೊಯ್ಲಿ ಹೇಳಿದರು.

ಇಲ್ಲಿನ ಶೇಷಾದ್ರಿಪುರಂ ಪ್ರಥಮದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನದ ಜಾಗತಿಕ ಸಮಸ್ಯೆಗಳ ಸಮ್ಮೇಳನದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ವಿಧ್ಯಾರ್ಥಿಗಳ ಪ್ರತಿಭೆಗೆ ತಕ್ಕ ಅವಕಾಶಗಳು ದೊರೆಯುತ್ತಿಲ್ಲ. ಇದರ ಬಗ್ಗೆ ವಿದ್ಯಾಸಂಸ್ಥೆಗಳು, ಸರ್ಕಾರ ಗಮನಹರಿಸಬೇಕು ಎಂದರು.

ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿರುವ ಪ್ರತಿಭೆಯನ್ನು ಪ್ರೋತ್ಸಾಹಿಸುವ ಕೆಲಸ ಕಾಲೇಜು ವಾತಾವರಣದಲ್ಲಿ ನಡೆಯಬೇಕು. ಇಂದು ಸಾಮಾಜಿಕ ನ್ಯಾಯದಿಂದ ವಿದ್ಯಾರ್ಥಿಗಳಿಗೆ ಉನ್ನತ ಸ್ಥಾನಮಾನ ದೊರೆತಿದೆ. ಬೆಂಗಳೂರಿನಲ್ಲಿ ಎಲಕ್ಟ್ರಾನಿಕ್ ಸಿಟಿ ನಿರ್ಮಾಣದಿಂದ ದೇಶ ಹಾಗೂ ಪ್ರಪಂಚ ಬೆಂಗಳೂರಿನತ್ತ ತಿರುಗಿ ನೊಡುವಂತಾಗಿದೆ ಎಂದರು.



ಯಲಹಂಕದ ಶೇಷಾದ್ರಿಪುರಂ ಪ್ರಥಮದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ವಿಜ್ಞಾನ ಮತ್ತು ತಂತ್ರಜ್ಞಾನದ ಜಾಗತಿಕ ಸಮಸ್ಯೆಗಳ ಸಮ್ಮೇಳನವನ್ನು ಸಂಸದ ವೀರಪ್ಪ ಮೊಯ್ಲಿ ಉದ್ಘಾಟಿಸಿದರು.

ಸಮ್ಮೇಳನದಲ್ಲಿ ಆಫ್ಘಾನಿಸ್ಥಾನ, ಸೂಡಾನ್ ಸೇರಿದಂತೆ ವಿವಿಧ ದೇಶದ ವಿವಿ ವಿದ್ಯಾರ್ಥಿಗಳು ವಿಚಾರ ವಿನಿಮಯದಲ್ಲಿ ಪಾಲ್ಗೊಂಡಿದ್ದರು. ಪ್ರಾಂಶುಪಾಲ ವೆಂಕಟೇಶ್ ಮತ್ತಿತರರು ಹಾಜರಿದ್ದರು.

ಪ್ರಜಾವಾಣಿ
ಬುಧವಾರ ಅಕ್ಟೋಬರ್ 4, 2017

ತ್ರಿಪುರ ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕ ನಿಶಿಕಾಂತ್ ಕೊಲ್ಗೆ ಅಭಿಮತ

ಜಾತಿ ನಿರ್ಮೂಲನೆಗೆ ಶ್ರಮಿಸಿದ್ದ ಗಾಂಧೀಜಿ

ಪ್ರಜಾವಾಣಿ ವಾರ್ತೆ



ಶೇಷಾದ್ರಿಪುರ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ಕಾಲೇಜಿನಲ್ಲಿ ಮಂಗಳವಾರ ಡಾ.ನಿಶಿಕಾಂತ್ ಕೊಲ್ಗೆ ಉಪನ್ಯಾಸ ನೀಡಿದರು. –ಪ್ರಜಾವಾಣಿ ಚಿತ್ರ

ಬೆಂಗಳೂರು: 'ಗಾಂಧೀಜಿ ಆರಂಭದ ದಿನಗಳಲ್ಲಿ ಜಾತಿ ವ್ಯವಸ್ಥೆ ಒಪ್ಪಿದ್ದರು. ಆದರೆ, ಕ್ರಮೇಣ ಅದು ಸಾಮಾಜಿಕ ಪಿಡುಗಾಗಿ ಬೆಳೆಯುತ್ತಿದ್ದುದನ್ನು ಮನಗಂಡು ಜಾತಿ ನಿರ್ಮೂಲನೆಗೆ ಪ್ರಾಮಾಣಿಕ ಹೋರಾಟ ನಡೆಸಿದ್ದಾರೆ' ಎಂದು ತ್ರಿಪುರ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಸಹಪ್ರಾಧ್ಯಾಪಕ ಡಾ.ನಿಶಿಕಾಂತ್ ಕೊಲ್ಗೆ ಅಭಿಪ್ರಾಯಪಟ್ಟರು.

ಶೇಷಾದ್ರಿಪುರ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ಹಾಗೂ ಗಾಂಧಿ ಶಾಂತಿ ಪ್ರತಿಷ್ಠಾನ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ 'ಜಾತಿ ವಿರುದ್ಧ ಗಾಂಧಿ' ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

'ಗಾಂಧೀಜಿ ಬರವಣಿಗೆಯಲ್ಲಿ ಅಷ್ಟೇ ಅಲ್ಲ, ಬದುಕಿನ ನಡವಳಿಕೆಯಲ್ಲೂ ಜಾತಿ ವ್ಯವಸ್ಥೆಯ ವಿರುದ್ಧವಾಗಿದ್ದರು. ಅಂತರ್ಜಾತಿ ಮತ್ತು ಅಂತರ್‌ಧರ್ಮೀಯ ವಿವಾಹ ಪ್ರೋತ್ಸಾಹಿಸಿದ್ದರು. ಸ್ವಂತ ಮಕ್ಕಳಿಗೆ ಅಂತರ್ಜಾತಿ ವಿವಾಹ ಮಾಡಿಸಿದ್ದರು. ಅಂತರ್ಜಾತಿ ವಿವಾಹಗಳಲ್ಲಿ ಮಾತ್ರ ಪಾಲ್ಗೊಂಡು ಬದ್ಧತೆ ಪ್ರದರ್ಶಿಸಿದ್ದರು' ಎಂದು ಹೇಳಿದರು.

> **ಗಾಂಧಿ ಮತ್ತು ಅಂಬೇಡ್ಕರ್ ಹೋರಾಟದ ಮಾರ್ಗಗಳು ಬೇರೇ ಬೇರೆಯಾಗಿದ್ದರೂ, ಗುರಿ ಒಂದೇ ಆಗಿತ್ತು. ಇದನ್ನು ಯುವಜನರು ಅರ್ಥ ಮಾಡಿಕೊಳ್ಳಬೇಕು.**
>
> **ಡಾ.ಡಿ.ಜೀವನ್‌ಕುಮಾರ್,**
> ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗೌರವ ಪ್ರಾಧ್ಯಾಪಕ

'ಸ್ವಾತಂತ್ರ್ಯ ಮತ್ತು ಆರ್ಥಿಕಾಭಿವೃದ್ಧಿಗೆ ಜಾತಿ ತೊಡಕಾಗಬಾರದು. ದೇಶದಲ್ಲಿ ಜಾತಿ ವ್ಯವಸ್ಥೆ ಸಂಪೂರ್ಣ ನಿರ್ಮೂಲನೆ ಆಗಬೇಕೆನ್ನುವುದು ಅವರ ಇಂಗಿತವಾಗಿತ್ತು. ದಲಿತರು, ಶೂದ್ರರಿಗೆ ಪ್ರವೇಶ ಇರದ ಕಡೆಗೆ ಅವರು ಕಾಲಿಡುತ್ತಿರಲಿಲ್ಲ' ಎಂದು 'ಗಾಂಧಿ ಅಗೆನೆಸ್ಟ್ ಕ್ಯಾಸ್ಟ್' ಕೃತಿಯ ಲೇಖಕ ಕೊಲ್ಗೆ ತಿಳಿಸಿದರು.

ಗಾಂಧಿ ಶಾಂತಿ ಪ್ರತಿಷ್ಠಾನದ ಕಾರ್ಯದರ್ಶಿ ಡಾ.ಮಲ್ಲೇಪುರಂ ಜಿ.ವೆಂಕಟೇಶ್ ಮಾತನಾಡಿ, 'ಇಂದು ಸಾಮಾಜಿಕ ರಂಗದಲ್ಲಿ ಜಾತಿ ವ್ಯವಸ್ಥೆ ಇಲ್ಲ. ಆದರೆ, ರಾಜಕೀಯ ಕ್ಷೇತ್ರದಲ್ಲಿ ಇದು ಗಟ್ಟಿಯಾಗಿ ಬೇರೂರಿದೆ. 1950-60ರ ದಶಕಗಳಲ್ಲಿ ಹೋಟೆಲ್‌ಗಳಲ್ಲಿ ಬ್ರಾಹ್ಮಣರು ಮತ್ತು ಲಿಂಗಾಯಿತರನ್ನು ಬಿಟ್ಟು ಉಳಿದವರಿಗೆ ಕುಡಿಯುವ ನೀರಿನ ಲೋಟಗಳನ್ನು ಹೊರಗಡೆ ಇಡುತ್ತಿದ್ದರು. ದಲಿತರಿಗೆ ಹೋಟೆಲ್, ದೇವಸ್ಥಾನಗಳಲ್ಲಿ ಪ್ರವೇಶ ನಿರಾಕರಿಸುತ್ತಿದ್ದರು. ಸಾರ್ವಜನಿಕ ಬಾವಿ, ಕೆರೆಗಳಲ್ಲಿ ದಲಿತರು ನೀರು ಮುಟ್ಟುವಂತಿರಲಿಲ್ಲ. ಸಾಮಾಜಿಕ ಜೀವನದಲ್ಲಿ ಅಸ್ಪೃಶ್ಯತೆ ಕಡಿಮೆಯಾಗುತ್ತಿದ್ದರೂ, ಕಾರ್ಪೊರೇಟ್ ವಲಯದಲ್ಲಿ ಮತ್ತೊಂದು ಬಗೆಯ ಅಸ್ಪೃಶ್ಯತೆ ತಲೆ ಎತ್ತಿದೆ' ಎಂದುಬೇಸರ ವ್ಯಕ್ತಪಡಿಸಿದರು.

ಗಾಂಧಿ ಶಾಂತಿ ಪ್ರತಿಷ್ಠಾನ ಅಧ್ಯಕ್ಷ ಡಾ.ವೊಡೇ ಪಿ.ಕೃಷ್ಣ ಮಾತನಾಡಿ, 'ಹಸಿವು, ಜಾತಿ ಹಾಗೂ ಭ್ರಷ್ಟಾಚಾರಮುಕ್ತ ದೇಶ ನಿರ್ಮಿಸುವ ಸವಾಲು ಯುವಜನರ ಮುಂದಿದೆ' ಎಂದು ಹೇಳಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಚ್.ಕೆ.ಪಾಟೀಲ ಹೇಳಿಕೆ

‘ಗಾಂಧಿ ಇ–ಮ್ಯೂಸಿಯಂಗೆ ₹10 ಕೋಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗಾಂಧಿ ಭವನದಲ್ಲಿ ಗಾಂಧೀಜಿ ಬದುಕಿನ ಸಮಗ್ರ ಚಿತ್ರಣ ಒದಗಿಸುವ ಇ–ಮ್ಯೂಸಿಯಂ ಆರಂಭಿಸುತ್ತೇವೆ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಗಾಂಧಿ ಸ್ಮಾರಕ ನಿಧಿಯು ಇಲ್ಲಿ ಸೋಮವಾರ ಆಯೋಜಿಸಿದ್ದ ಗಾಂಧಿ ಜಯಂತಿ ಹಾಗೂ ವಿಶ್ವ ಅಹಿಂಸಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

‘ಯುವಜನರಿಗೆ ಮತ್ತು ಮಕ್ಕಳಿಗೆ ಮಹಾತ್ಮನನ್ನು ಪರಿಚಯಿಸುವ ಸಲುವಾಗಿ 11,000 ಚದರ ಅಡಿ ವಿಸ್ತೀರ್ಣದಲ್ಲಿ ಇ–ಮ್ಯೂಸಿಯಂ ಸ್ಥಾಪಿಸಲಾಗುತ್ತದೆ. ಇದಕ್ಕೆ ₹ 10 ಕೋಟಿ ಅನುದಾನ ನೀಡಲಾಗುವುದು. ದೇಶದಲ್ಲೇ ರಾಷ್ಟ್ರಪಿತನ ಕುರಿತ ಮೊದಲ ಇ–ಮ್ಯೂಸಿಯಂ ಇದಾಗಲಿದೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮಾಹಿತಿ ಒದಗಿಸಲಾಗುವುದು’ ಎಂದರು.

‘ಗಾಂಧೀಜಿ ಅವರ 150ನೇ ವರ್ಷಾಚರಣೆ ಪ್ರಯುಕ್ತ 2018ರ ಅಕ್ಟೋಬರ್‌ನಿಂದ 2019ರ ಅಕ್ಟೋಬರ್ ನಡುವೆ ಅವರ ವಿಚಾರಗಳಿಗೆ ಸಂಬಂಧಿಸಿದ 150 ಪುಸ್ತಕಗಳನ್ನು ಬಿಡುಗಡೆ ಮಾಡಲಿದ್ದೇವೆ. ಅವರ ವೈಯುಕ್ತಿಕ ಬದುಕು ಹಾಗೂ ಗಾಂಧಿ ಯುಗಕ್ಕೆ ಸಂಬಂಧಿಸಿದ ಕನ್ನಡ ಪುಸ್ತಕಗಳ ಮರುಮುದ್ರಣ, ಪರಿಷ್ಕರಣೆ ಹಾಗೂ ಹೊಸ ಪುಸ್ತಕಗಳ ಪ್ರಕಟಣೆ ಇದರಲ್ಲಿ ಸೇರಿದೆ’ ಎಂದರು.

‘ರಾಜ್ಯದ ಮೂರು ಸಾವಿರ ಗ್ರಾಮ ಪಂಚಾಯಿತಿಗಳು ಇಂದಿನಿಂದ ಬಹಿರ್ದೆಸೆ ಮುಕ್ತ ಗ್ರಾಮಗಳಾಗಲಿವೆ. 2018ರ ಮಾರ್ಚ್ ಒಳಗಾಗಿ ಸಂಪೂರ್ಣ ರಾಜ್ಯವನ್ನು ಬಯಲು ಶೌಚ ಮುಕ್ತ ರಾಜ್ಯವನ್ನಾಗಿ ರೂಪಿಸುತ್ತೇವೆ’ ಎಂದು ಅವರು ಭರವಸೆ ನೀಡಿದರು.

ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ, ‘ದೇಶದಲ್ಲಿ ಕನಿಷ್ಠ ಕಾನೂನುಗಳಿರಬೇಕು ಎಂಬುದು ಗಾಂಧೀಜಿಯ ಆಶಯವಾಗಿತ್ತು. ಆದರೆ, ಇಂದು ಹೆಚ್ಚುತ್ತಿರುವ ನ್ಯಾಯಾಲಯಗಳು, ಜೈಲುಗಳು ನಮ್ಮ ವ್ಯಕ್ತಿತ್ವದ ಮಾಪಕಗಳಾಗಿವೆ. ವಿನೋಬಾ ಭಾವೆ ಅವರು ದೇಹದಲ್ಲಿ ಮಲ ಎಷ್ಟಿದೆಯೋ ದೇಶದಲ್ಲಿ ಅಷ್ಟು ಕಾನೂನುಗಳಿರಬೇಕು ಎಂದಿದ್ದರು. ಆದರೆ, ಇಂದು ದೇಹವೆಲ್ಲಾ ಮಲವಾಗಿದೆ’ ಎಂದು ವಿಷಾದ ವ್ಯಕ್ತಪಡಿಸಿದರು.

‘ಹೆಚ್ಚುತ್ತಿರುವ ಆಸ್ಪತ್ರೆಗಳು, ನ್ಯಾಯಾಲಯಗಳು, ಜೈಲುಗಳು ಅಭಿವೃದ್ಧಿಯ ಸಂಕೇತವಲ್ಲ. ಅವುಗಳ ಪ್ರಮಾಣ ಕಡಿಮೆಯಾಗುವುದೇ ಗಾಂಧಿ ಪರಿಕಲ್ಪನೆಯ ನಿಜವಾದ ಪ್ರಗತಿ. ಆ ದಿಶೆಯ ಅಭಿವೃದ್ಧಿ ನಮ್ಮ ಗುರಿಯಾಗಬೇಕು’ ಎಂದು ಅವರು ಹೇಳಿದರು.

ಹಿರಿಯ ಪತ್ರಕರ್ತ ಡಾ.ಪಾಟೀಲ ಪುಟ್ಟಪ್ಪ, ‘ರಾಜ್ಯದಲ್ಲಿ ಗಾಂಧಿ ಆದರ್ಶದಂತೆ ಮದ್ಯಪಾನವನ್ನು ನಿಷೇಧಿಸಿದ ಮೊದಲ ವ್ಯಕ್ತಿ ಟಿಪ್ಪು ಸುಲ್ತಾನ್. ಆದರೆ ಇಂದು ಅನೇಕ ಸಂಶೋಧಕರು ಆತನನ್ನು ಟೀಕಿಸುತ್ತಿದ್ದಾರೆ’ ಎಂದು ಅವರು ಬೇಸರ ವ್ಯಕ್ತಪಡಿಸಿದರು.



ಎಚ್.ಎಸ್.ದೊರೆಸ್ವಾಮಿ ಮತ್ತು ಎಚ್.ಕೆ. ಪಾಟೀಲ ಅವರು ಚರಕವನ್ನು ತಿರುಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ.ಪಿ.ಕೃಷ್ಣ, ಡಾ.ಪಾಟೀಲ ಪುಟ್ಟಪ್ಪ ಇದ್ದರು —ಪ್ರಜಾವಾಣಿ ಚಿತ್ರ


ಜಯಶ್ರೀ ಟ್ರಸ್ಟ್ ಪುರಸ್ಕಾರ

ನಾಗರಾಜ ಚಿಕ್ಕನಾಯಕನಹಳ್ಳಿ ಅವರು ರಚಿಸಿದ ‘ಗಾಂಧೀಜಿಯ ನೂರು ಆದರ್ಶಗಳ ನೆನಪುಗಳು’ ಕೃತಿಗೆ 2017ನೇ ಸಾಲಿನ ಜಯಶ್ರೀ ಟ್ರಸ್ಟ್ ಪುರಸ್ಕಾರವನ್ನು ಸಚಿವ ಎಚ್.ಕೆ.ಪಾಟೀಲ ಪ್ರದಾನ ಮಾಡಿದರು. ‘ಬಾಪು ಪ್ರಪಂಚ’ ವಿಶೇಷ ಸಂಚಿಕೆಯನ್ನು ಲೋಕಾರ್ಪಣೆ ಮಾಡಲಾಯಿತು.

ಹೊಸ ದಿಗಂತ

ಮಂಗಳವಾರ
3 ಅಕ್ಟೋಬರ್ 2017

ದಿಗಂತ ಚಿತ್ರ



ವಾರ್ತಾ ಇಲಾಖೆ, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಸಹಯೋಗದೊಂದಿಗೆ ಗಾಂಧಿ ಶಾಂತಿ ಪ್ರತಿಷ್ಠಾನ ಸೋಮವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಗಾಂಧೀಜಿ ಭಾವಚಿತ್ರಕ್ಕೆ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಹಾಗೂ ಸಚಿವ ಎಚ್.ಕೆ. ಪಾಟೀಲ್ ಪುಷ್ಪ ನಮನ ಸಲ್ಲಿಸಿದರು.

ತಲೆ ಎತ್ತಲಿದೆ ₹ 10 ಕೋಟಿ ವೆಚ್ಚದ ಸಂಗ್ರಹಾಲಯ

ಶೀಘ್ರ ಇ-ಗಾಂಧಿ ಮಲ್ಟಿ ಮೀಡಿಯಾ ಮ್ಯೂಸಿಯಂ

• ದಿಗಂತ ವರದಿ: ಬೆಂಗಳೂರು, ಅ.2

ನಗರದ ಗಾಂಧಿಭವನದಲ್ಲಿಅಂದಾಜು 10 ಕೋಟಿ ರೂ. ವೆಚ್ಚದಲ್ಲಿ ಇ-ಗಾಂಧಿ ಮಲ್ಟಿ ಮೀಡಿಯಾ ಮ್ಯೂಸಿಯಂ ಸ್ಥಾಪಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ.ಪಾಟೀಲ್ ಹೇಳಿದರು.

ವಾರ್ತಾ ಇಲಾಖೆ, ರಾಜ್ಯ ಮದ್ಯಪಾನ ಸಂಯಮ ಮಂಡಳಿ ಸಹಯೋಗದೊಂದಿಗೆ ಗಾಂಧಿಶಾಂತಿ ಪ್ರತಿಷ್ಠಾನವು ಸೋಮವಾರ ಹಮ್ಮಿಕೊಂಡಿದ್ದ ಗಾಂಧಿ ಜಯಂತಿ ಹಾಗೂ ವಿಶ್ವ ಅಹಿಂಸಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಗಾಂಧೀಜಿಕುರಿತಯೋಜನೆಗಳಕುರಿತುಗಾಂಧಿಭವನದಿಂದ ಏನೇ ಪ್ರಸ್ತಾವನೆ ಬಂದರೂ ರಾಜ್ಯ ಸರ್ಕಾರವು ಯೋಜನೆ ಅನುಷ್ಠಾನಕ್ಕೆ ತರುತ್ತೇವೆ ಎಂದು ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭರವಸೆ ನೀಡಿದ್ದಾರೆ. ಅದರಂತೆ ಗಾಂಧಿಭವನದಲ್ಲಿ ಗಾಂಧಿ ಕುರಿತು ಎಲ್ಲಾ ವಿಚಾರಧಾರೆಗಳ ಒಳಗೊಂಡ ಆಧುನಿಕ ತಾಂತ್ರಿಕತೆ ಬಳಸಿಕೊಂಡು ಇ-ಗಾಂಧಿ ಮ್ಯೂಸಿಯಂ ಮಾಡಲು ಉದ್ದೇಶಿಸಿರುವ ಯೋಜನೆಗೆ ಮುಖ್ಯಮಂತ್ರಿಯ ಸಮ್ಮತಿ ಇರಲಿದೆ. ಯೋಜನೆಗೆ ಬೇಕಾಗುವ ಅನುದಾನದ ಕುರಿತು ಮುಖ್ಯಮಂತ್ರಿಯೊಂದಿಗೆ ಚರ್ಚಿಸಿ, ಶೀಘ್ರದಲ್ಲಿ ಹಣ ಬಿಡುಗಡೆ ಮಾಡಿಸಿ, ಶೀಘ್ರದಲ್ಲಿ ಯೋಜನೆಗೆ ಅಡಿಗಲ್ಲು ಹಾಕಲಾಗುವುದು ಎಂದು ಆಶ್ವಾಸನೆ ನೀಡಿದರು.

ಗಾಂಧಿ ತತ್ವ ಸಾರುವ 150 ಪುಸ್ತಕ: ಗಾಂಧೀಜಿ ಅವರ ಗ್ರಾಮಸ್ವರಾಜ್ಯ ಕಲ್ಪನೆ ಸೇರಿದಂತೆ ಅವರೆಲ್ಲಾ ವಿಚಾರಧಾರೆಗಳನ್ನು ತಲುಪಿಸಲು ಹಾಗೂ ಕಸ್ತೂರ ಬಾ ಅವರ 150 ಜನ್ಮ ವರ್ಷಾಚರಣೆ ಅರ್ಥಪೂರ್ಣವಾಗಿ ಆಚರಿಸುವ ಸಲುವಾಗಿ 2018ರಿಂದ ಅ.2ರಿಂದ 2019 ಅ.2ರವರೆಗೆ ಗಾಂಧಿ ತತ್ವಗಳ ವಿಚಾರಗಳ ಕುರಿತು ಬೆಳಕು ಚೆಲ್ಲುವಂತಹ 150 ಪುಸ್ತಕಗಳನ್ನು ಹೊರ ತರಲಾಗುವುದು ಎಂದರು.

ಆಸ್ಪತ್ರೆ, ಕೋರ್ಟ್ ಕಟ್ಟುವುದೇ ಅಭಿವೃದ್ಧಿಯಲ್ಲ: ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಮಾತನಾಡಿ, ಮಹಾನ್ ವ್ಯಕ್ತಿಗಳ ಪಟವನ್ನು ಇಟ್ಟು ಪೂಜೆ ಮಾಡಿದರೆ ಅವರಿಗೆ ಗೌರವ ಸಲ್ಲಿಸಿದಂತಾಗುವುದಿಲ್ಲ. ಆ ವ್ಯಕ್ತಿಯ ಆಚಾರ ವಿಚಾರಗಳನ್ನು ಪಾಲಿಸುವುದೇ ನಾವು ಅವರಿಗೆ ಸಲ್ಲಿಸುವ ಗೌರವವಾಗುತ್ತದೆ. ಹೇಳುವುದು ಒಂದು ಮಾಡುವುದು ಇನ್ನೊಂದು ಎನ್ನುವಂತಾದರೆ ನಾವು ಆ ಪಟದಲ್ಲಿರುವ ವ್ಯಕ್ತಿಗೆ ಚಿತ್ರಹಿಂಸೆಯನ್ನು ನೀಡಿದಂತಾಗುತ್ತದೆ ಎಂದರು.

ದೇಶದಲ್ಲಿ ಆಸ್ಪತ್ರೆ, ನ್ಯಾಯಾಲಯಗಳು, ಪೊಲೀಸ್ ಠಾಣೆಗಳು ಹೆಚ್ಚಾಗುವುದನ್ನೇ ಅಭಿವೃದ್ಧಿ ಎಂದು ಮನಗಂಡಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಸಾಹಿತಿ ಪಾಟೀಲ ಪುಟ್ಟಪ್ಪ, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ, ಉಪಾಧ್ಯಕ್ಷ ವಿ.ಎನ್.ತಿಪ್ಪನಗೌಡ ಮತ್ತಿತರರು ಉಪಸ್ಥಿತರಿದ್ದರು.

ಮ್ಯೂಸಿಯಂನಲ್ಲಿ ಏನೇನಿರಲಿದೆ?

ಗಾಂಧಿ ಭವನ ಕಟ್ಟಡದ ಒಂದು ಬದಿಯಲ್ಲಿ ಸುಮಾರು 11 ಸಾವಿರ ಚದರ ಅಡಿ ಜಾಗದಲ್ಲಿ ನೂತನ ಇ-ಗಾಂಧಿ ಮ್ಯೂಸಿಯಂ ನಿರ್ಮಾಣವಾಗಲಿದೆ. ಗಾಂಧೀಜಿ ಹುಟ್ಟಿದಾಗಿನಿಂದ ಸಾಯುವವರೆಗೂ ಅವರ ಸಂಪೂರ್ಣ ಮಾಹಿತಿ ಇದರಲ್ಲಿ ಅಡಕವಾಗಿರಲಿದೆ. ಕಿರುಸಂದೇಶಗಳು, ಪುಸ್ತಕಗಳು, ಪ್ರಮುಖ ಘಟನಾವಳಿಗಳು ಸೇರಿದಂತೆ ಗಾಂಧೀಜಿ ಅವರಿಗೆ ಸಂಬಂಧಿಸಿದಂತೆ ಎಲ್ಲಾ ಮಾಹಿತಿಗಳು ಒಂದೇ ಸೂರಿನಡಿಯಲ್ಲಿ ನೋಡಬಹುದಾಗಿದೆ. ಮ್ಯೂಸಿಯಂ ಬರುವ ಸಾರ್ವಜನಿಕರು ನೇರವಾಗಿ ಗಾಂಧೀಜಿಗೆ ಪ್ರಶ್ನೆ ಕೇಳಿದರೆ ಉತ್ತರ ಪಡೆಯುವ ಹಾಗೆ ತಂತ್ರಜ್ಞಾನ ವ್ಯವಸ್ಥೆ ಮತ್ತಿತರ ಸೌಲಭ್ಯಗಳು ಇರಲಿವೆ.

ಹೊಸ ದಿಗಂತ

ಮಂಗಳವಾರ
3 ಅಕ್ಟೋಬರ್ 2017

ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಅವರಿಗೆ ಮಹಾತ್ಮಗಾಂಧಿ ಸೇವಾ ಪ್ರಶಸ್ತಿ ಪ್ರದಾನ

ಗಾಂಧೀಜಿ ಸೋದರತೆ, ಅಹಿಂಸಾ ಮಾರ್ಗದಿಂದಲೇ ಮಹಾತ್ಮರಾದರು

■ ದಿಗಂತ ವರದಿ: ಬೆಂಗಳೂರು, ಅ.2

ಮಹಾತ್ಮ ಗಾಂಧೀಜಿಯವರು ಪ್ರೀತಿ, ಸೋದರತೆ, ಅನುಕಂಪ, ಸತ್ಯ ಮತ್ತು ಅಹಿಂಸೆ ಎಂಬ ಐದು ಸೂತ್ರಗಳನ್ನು ತಮ್ಮ ಜೀವನದುದ್ದಕ್ಕೂ ಅಳವಡಿಸಿಕೊಂಡಿದ್ದರು. ಅವರ ತತ್ವಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಸೋಮವಾರ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಆಯೋಜಿಸಿದ್ದ ಮಹಾತ್ಮಗಾಂಧಿ ಸೇವಾ ಪ್ರಶಸ್ತಿ ಕರ್ನಾಟಕ-2017 ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮಹಾತ್ಮ ಗಾಂಧಿ ಎಂಬ ಹೆಸರು ಹೇಳಿದರೆ ವಿಸ್ಮಯವಾಗುತ್ತದೆ. ಅವರು ತನ್ನ ಅಂತ್ಯದವರೆಗೂ ಯಾವುದೇ ಚ್ಯುತಿ ಬಾರದಂತೆ ನಡೆದುಕೊಂಡ ಮಹಾನ್ ವ್ಯಕ್ತಿ. ಅಂತಹ ಮಹಾನ್ ಚೇತನ ನಮ್ಮ ದೇಶದಲ್ಲಿ ಇನ್ನಷ್ಟು ಹೆಚ್ಚು ಕಾಲ ಬದುಕಬೇಕಿತ್ತು.

ದಿಗಂತ ಚಿತ್ರ



ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಸೋಮವಾರ ಆಯೋಜಿಸಿದ್ದ ಮಹಾತ್ಮಗಾಂಧಿ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಿ ಸನ್ಮಾನಿಸಿದರು.

ಆದರೆ, ಮತಾಂಧರು ಬದುಕಲು ಬಿಡದೆ ಹತ್ಯೆಗೈದರು ಎಂದು ವಿಷಾದ ವ್ಯಕ್ತಪಡಿಸಿದರು.

ಈ ಹಿಂದೆ ಮತಾಂಧ ಶಕ್ತಿಗಳಿಂದ ಮಹಾತ್ಮ ಗಾಂಧಿಯವರ ಹತ್ಯೆ ಮಾಡಿದ್ದರು. ಆದರೆ, ಅಂತಹ ಶಕ್ತಿಗಳು ಇಂದು ಕೂಡ ಸಮಾಜದಲ್ಲಿ ಜೀವಂತ ಇರುವುದು ವಿಷಾದನೀಯ ಸಂಗತಿ ಎಂದರು.

₹ 2 ಲಕ್ಷ ಸಮಾಜ ಸೇವೆಗೆ

ಇದೇ ವೇಳೆ ನನಗೆ ಸರ್ಕಾರದಿಂದ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಹಾಗೂ ಐದು ಲಕ್ಷ ರೂ. ನಗದು ಮೊತ್ತ ನೀಡಿದೆ. ಅದರಲ್ಲಿ 1 ಲಕ್ಷ ರೂ.ಗಳನ್ನು ನನ್ನ ಹೋರಾಟ ಸಮಿತಿಗೆ ಹಾಗೂ ಜಯದೇವ ಸರ್ಕಾರಿ ಆಸ್ಪತ್ರೆಯು ಸಾರ್ವಜನಿಕರ ಸೇವೆ ಸಲ್ಲಿಸುತ್ತಿರುವುದನ್ನು ಗೌರವ ಕೊಡುವ ದೃಷ್ಟಿಯಿಂದ 1 ಲಕ್ಷ ರೂ.ಗಳನ್ನು ಆಸ್ಪತ್ರೆಗೆ ನೀಡುತ್ತಿದ್ದೇನೆ. ಇನ್ನುಳಿದ 3 ಲಕ್ಷ ರೂ.ಗಳನ್ನು ನನ್ನ ಪತ್ನಿಗೆ ಕೊಡುತ್ತಿದ್ದೇನೆ ಎಂದು ದೊರೆಸ್ವಾಮಿ ಪ್ರಕಟಿಸಿದರು.

ಸ್ವಾತಂತ್ರ್ಯ ಹೋರಾಟಗಾರ ದೊರೆಸ್ವಾಮಿ ಗಾಂಧೀಜಿ ಅವರ ದಾರಿಯಲ್ಲಿ ನಡೆಯುತ್ತಿದ್ದಾರೆ. ಕ್ವಿಟ್ ಇಂಡಿಯಾ ಚಳವಳಿಯಿಂದ ಆರಂಭಿಸಿ ಇದುವರೆಗೂ ನ್ಯಾಯಕ್ಕಾಗಿ, ಅನ್ಯಾಯದ ವಿರುದ್ಧ ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ಅವರ ಗುರಿ ಎಲ್ಲಿಯೂ ಬದಲಾಗಿಲ್ಲ ಎಂದರು.

ದೊರೆಸ್ವಾಮಿ ಅವರು ನಮ್ಮ ಸರ್ಕಾರದ ವಿರುದ್ಧವೂ ಟೀಕೆ ಮಾಡುತ್ತಾರೆ. ಆದರೆ, ಅದನ್ನು ನಾನು ಉದ್ದೇಶಪೂರ್ವಕವಲ್ಲ ಎಂದು ನಂಬಿದ್ದೇನೆ. ಅಲ್ಲದೆ, ಅವರ ಟೀಕೆಗಳನ್ನು ನಮ್ಮ ಮುಂದಿನ ನಡೆಯ ಮಾರ್ಗದರ್ಶನವೆಂದು ಭಾವಿಸಿದ್ದೇನೆ ಎಂದರು.

ರಾಜಕೀಯ ಪಕ್ಷಗಳು ಹೆಂಡ ಕುಡಿಸುವುದ ನಿಲ್ಲಿಸಲಿ: ಸ್ವಾತಂತ್ರ್ಯ ಹೋರಾಟಗಾರ ಎಚ್. ಎಸ್. ದೊರೆಸ್ವಾಮಿ ಮಾತನಾಡಿ, ಮುಂದಿನ ಚುನಾವಣೆಯಲ್ಲಿ ಜನಪರವಾಗಿರುವವರಿಗೆ ಅವಕಾಶ ನೀಡಿ. ಕಳ್ಳರಿಗೆ, ಹಣವಂತರನ್ನು ತಿರಸ್ಕರಿಸಿ ಎಂದು ಸಲಹೆ ನೀಡಿದರು. ಅಲ್ಲದೆ, ಖಾದಿ ಮೇಲಿನ ಕರ ಹಿಂಪಡೆಯುವಂತೆ ಕೇಂದ್ರ ಸರ್ಕಾರಕ್ಕೂ ಆಗ್ರಹಿಸಿದರು.

ಚುನಾವಣೆ ವೇಳೆ ರಾಜಕೀಯ ಪಕ್ಷಗಳು ಜನರಿಗೆ ಹೆಂಡ ಕುಡಿಸುವುದನ್ನು ಬಿಡಬೇಕು. ಪ್ರಾಮಾಣಿಕ ಚುನಾವಣೆಗೆ ಆದ್ಯತೆ ನೀಡಬೇಕು. ಅಂದಾಗ ಮಾತ್ರ ಗಾಂಧಿ ಕಂಡ ಕನಸು ನನಸಾಗುತ್ತದೆ ಎಂದರು.

ಈಸಂದರ್ಭದಲ್ಲಿಗೃಹಸಚಿವರಾಮಲಿಂಗಾರೆಡ್ಡಿ, ನಗರಾಭಿವೃದ್ಧಿ ಸಚಿವ ಕೆ.ಜೆ. ಜಾರ್ಜ್, ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ ಎಚ್.ಎಸ್.ನಾಗಮೋಹನ್‌ದಾಸ್, ಕೃಷ್ಣ, ದೊರೆಸ್ವಾಮಿಯವರ ಪತ್ನಿ ಉಪಸ್ಥಿತರಿದ್ದರು.

ಬೆಂಗಳೂರು
vishwavani.news
03.10.2017 ಮಂಗಳವಾರ

ಕಾನೂನು ಇಲ್ಲದ ರಾಜ್ಯಗಳು ಸೃಷ್ಟಿಯಾಗಲಿ । ಮದ್ಯಪಾನ ನಿಷೇಧಕ್ಕೆ ಸರಕಾರ ಮುತುವರ್ಜಿ ವಹಿಸಲಿ

ಮಾರ್ಚ್ 31ಕ್ಕೆ ಬಯಲು ಬಹಿರ್ದೆಸೆ ಮುಕ್ತ ರಾಜ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಮ್ಮ ರಾಜ್ಯ 2018ರ ಮಾರ್ಚ್ 31ರ ವೇಳೆಗೆ ಬಯಲು ಬಹಿರ್ದೆಸೆ ಮುಕ್ತವಾಗಲಿದೆ. ಇದೇ ನವೆಂಬರ್ 19ರಂದು ನಡೆಯಲಿರುವ ಮಾಜಿ ಪ್ರಧಾನಿ ದಿ.ಇಂದಿರಾ ಗಾಂಧಿ ಜಯಂತಿ ವೇಳೆ 8 ಸಾವಿರ ಗ್ರಾಮ ಬಯಲು ಬಹಿರ್ದೆಸೆ ಮುಕ್ತವಾಗಲಿವೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಚ್.ಕೆ.ಪಾಟೀಲ್ ಭರವಸ ನೀಡಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಸೋಮವಾರ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಗಾಂಧಿ ಜಯಂತಿ ನಿಮಿತ್ತ ನಡೆದ ಸದ್ಭಾವನಾ ಪಾದಯಾತ್ರೆ, ವಿಶ್ವ ಅಹಿಂಸಾ ದಿನಾಚರಣೆ ಹಾಗೂ ಜಯಶ್ರೀ ಟ್ರಸ್ಟ್ ಪುರಸ್ಕಾರ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

2018 ರಂದು ನಡೆಯಲಿರುವ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ 150ನೇ ಜನ್ಮ ದಿನಾಚರಣೆಯಂದು ಕರ್ನಾಟಕವನ್ನು ಬಯಲು ಬಹಿರ್ದೆಸೆ ಮುಕ್ತ ರಾಜ್ಯವನ್ನಾಗಿ ಘೋಷಣೆ ಮಾಡಲಾಗುತ್ತದೆ. ಶೌಚಾಲಯವನ್ನು ಪ್ರತಿಯೊಬ್ಬರೂ ಕಟ್ಟಿಸಿಕೊಳ್ಳಿ, ಬಳಸಿ, ಸ್ವಚ್ಛತೆಯನ್ನು ಕಾಪಾಡಿದಾಗ ಮಾತ್ರ ಸ್ವರಾಜ್ಯಕ್ಕೆ ಅರ್ಹನನ್ನಾಗಿ ಮಾಡುತ್ತದೆ ಎಂದು ಗಾಂಧೀಜಿ ಹೇಳಿದ್ದಾರೆ. ಪ್ರತಿಯೊಬ್ಬರೂ ಗಾಂಧೀಜಿ ತತ್ವಗಳನ್ನು ಪಾಲಿಸಬೇಕು. ಗ್ರಾಮ ಸ್ವರಾಜ್ ಪರಿಕಲ್ಪನೆಯನ್ನು ಸಾಕಾರಗೊಳಿಸಬೇಕು. ಗ್ರಾಮೀಣ ಪ್ರದೇಶದ ಜನರು ಸ್ವಾಭಿಮಾನಿಗಳಾಗಿದ್ದು, ಸ್ವಾವಲಂಭಿಗಳಾಗಿ ಬದುಕಬೇಕು ಎಂದು ಕರೆ ನೀಡಿದರು.



ಗಾಂಧಿ ಸ್ಮಾರಕ ನಿಧಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಗಾಂಧಿ ಜಯಂತಿ ಸಮಾರಂಭವನ್ನು ಸಚಿವ ಎಚ್.ಕೆ.ಪಾಟೀಲ್ ಅವರು ಚರಕದಲ್ಲಿ ನೂಲುವ ಮೂಲಕ ಉದ್ಘಾಟಿಸಿದರು. ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ, ನಾಡೋಜ ಪಾಟೀಲ ಪುಟ್ಟಪ್ಪ, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ.ಕೃಷ್ಣ ಇದ್ದರು.

ಗಾಂಧೀಜಿ ಅವರು ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಡಿದ್ದಲ್ಲದೇ, ಅಹಿಂಸೆ, ಭ್ರಷ್ಟಾಚಾರ, ಜಾತಿ ಪದ್ಧತಿ ವಿರುದ್ಧ ಧ್ವನಿ ಎತ್ತಿದ್ದಾರೆ. ಸ್ವಚ್ಛತೆ ಮತ್ತು ಆರೋಗ್ಯ ಕುರಿತು ಮಾರ್ಗದರ್ಶನ ನೀಡಿದ್ದಾರೆ. ಗಾಂಧೀಜಿ ಅವರ ಪ್ರೇರಣೆಯಂತೆ ನಿರ್ಮಲ ಗ್ರಾಮಗಳು ಹೆಚ್ಚಾಗುತ್ತಿವೆ. ಗಾಂಧೀಜಿ ಅವರ ತತ್ವಾದರ್ಶಗಳು, ಸಮಾಜಕ್ಕೆ ಸಾರಿದ ಸಂದೇಶ ಹಾಗೂ ಇವರ ಕುರಿತು ಸಾಹಿತಿಗಳು ಬರೆದಿರುವ ಪುಸ್ತಕಗಳು ಒಂದೇ ಕೈಪಿಡಿಯಲ್ಲಿ ಲಭ್ಯವಾಗುವಂತೆ ಗಾಂಧಿ ಸ್ಮಾರಕ ನಿಧಿ ಮತ್ತು ವಾರ್ತಾ ಇಲಾಖೆಯು ಗ್ರಂಥ ಹೊರತರಬೇಕು. ಇದನ್ನು ನಮ್ಮ ಇಲಾಖೆ ವತಿಯಿಂದ ಬಿಡುಗಡೆ ಮಾಡಲಾಗುತ್ತದೆ ಎಂದು ಹೇಳಿದರು.

ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಮಾತನಾಡಿ, ಪ್ರತಿ ವರ್ಷವೂ ಗಾಂಧಿ ಜಯಂತಿ ಆಚರಿಸುತ್ತೇವೆ. 'ಆದರೆ ಯಾರೂ ಅವರ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುತ್ತಿಲ್ಲ. ಸಮಾಜ ಹದಗೆಡಲು ಹಲವು ಕಾರಣಗಳಿವೆ. ಗಾಂಧೀಜಿ ಅವರ ದೃಷ್ಟಿಕೋನದಂತೆ ಕಾನೂನು ಇಲ್ಲದ ರಾಜ್ಯಗಳು ಸೃಷ್ಟಿಯಾಗಬೇಕು. ಕಾನೂನು ಇದ್ದರೂ ದುಷ್ಟರಿಗಾಗಿ ಇರಬೇಕು. ಆದರೆ ಎಲ್ಲರೂ ದುಷ್ಟರಾಗುತ್ತಿದ್ದೇವೆ. ಕಾನೂನು, ನ್ಯಾಯಾಲಯಗಳನ್ನು ಬೆಳೆಸುತ್ತಿದ್ದೇವೆ. ದೇಹದಲ್ಲಿ ಎಷ್ಟು ಮಲವಿದೆಯೋ ಅಷ್ಟು ಮಾತ್ರ ಕಾನೂನುಗಳು ಇರಬೇಕು. ದೇಹವೇ ಮಲವಾಗುವ ರೀತಿಯಲ್ಲಿ ಕಾನೂನುಗಳನ್ನು ಸೃಷ್ಟಿ ಮಾಡುತ್ತಿದ್ದೇವೆ ಎಂದು ಬೇಸರ ವ್ಯಕ್ತ ಪಡಿಸಿದರು.

ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ಬದುಕಬೇಕು. ಅಹಿಂಸಾ ಮಾರ್ಗವನ್ನು ಅನುಸರಿಸಿ ಸಜ್ಜನರಾಗಿ ಬದುಕಬೇಕು. ಮಕ್ಕಳಲ್ಲಿ ಶಾಂತಿಯುತ ವಾತಾವರಣ ಉಂಟು ಮಾಡುವ ಕೆಲಸವನ್ನು ಶಿಕ್ಷಣ ಸಂಸ್ಥೆಗಳು ಮಾಡಬೇಕು. ಗಾಂಧೀಜಿ ಕಂಡ ಕನಸುಗಳನ್ನು ಯುವ ಜನತೆ ಸಾಕಾರಗೊಳಿಸಬೇಕು' ಎಂದು ಹೇಳಿದರು.

ಮದ್ಯ ನಿಷೇಧವಿಲ್ಲ : ನಾಡೋಜ ಪಾಟೀಲ ಪುಟ್ಟಪ್ಪ ಮಾತನಾಡಿ, ಗಾಂಧೀಜಿ ಇಲ್ಲದೇ ಹೋಗಿದ್ದರೆ ದೇಶಕ್ಕೆ ಸ್ವಾತಂತ್ರ್ಯ ಬರುತ್ತಿರಲಿಲ್ಲ. ಹಾಗೆಯೇ ಗುಲಾಮಗಿರಿ ಪದ್ಧತಿ ಇಂದಿಗೂ ಕೊನೆಗಾಣುತ್ತಿರಲಿಲ್ಲ. ದೇಶದಲ್ಲಿ ಮದ್ಯಪಾನ ನಿಷೇಧ ಮಾಡಬೇಕೆಂಬ ಕನಸನ್ನು ಹೊಂದಿದ್ದರು. ಆದರೆ ಇಂದಿಗೂ ಈ ಕನಸು ನನಸಾಗಿಲ್ಲ. ಖಾದಿ ಬಗ್ಗೆ ಸರಕಾರವೂ ಆಸಕ್ತಿ ತೋರುತ್ತಿಲ್ಲ. ದೇಶವು ಅಹಿಂಸೆ, ಅನಾಚಾರಗಳಿಂದ ತುಂಬಿ ತುಳುಕುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಬಾಪು ಪ್ರಪಂಚ ಎಂಬ ವಿಶೇಷ ಸಂಚಿಕೆ ಮತ್ತು ಜನಪದ ಹಾಗೂ ಮಾರ್ಚ್ ಜ್ಞಾ ಕರ್ನಾಟಕ ಪುಸ್ತಕ ಲೋಕಾರ್ಪಣೆ ಮಾಡಲಾಯಿತು.

ಇ-ಗಾಂಧಿ ಮ್ಯೂಸಿಯಂಗೆ ಅನುದಾನ ಕೊಡಿ

ಗಾಂಧಿ ಭವನದ ಆವರಣದಲ್ಲಿ 11 ಸಾವಿರ ಚದರ ಅಡಿ ವ್ಯಾಪ್ತಿಯಲ್ಲಿ ಇ-ಗಾಂಧಿ ಮ್ಯೂಸಿಯಂ ನಿರ್ಮಿಸಲು 10 ಕೋಟಿ ರು. ಅನುದಾನವನ್ನು ಸರಕಾರ ನೀಡಬೇಕು. 2018 ರಂದು ನಡೆಯಲಿರುವ ಗಾಂಧೀಜಿ ಮತ್ತು ಕಸ್ತೂರ ಬಾ ಅವರ ಜನ್ಮ ದಿನಾಚರಣೆ ಅಂಗವಾಗಿ ಹಲವು ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ.ಕೃಷ್ಣ ಒತ್ತಾಯಿಸಿದರು.

ಹೋ.ಶ್ರೀನಿವಾಸಯ್ಯ ಸ್ಮಾರಕ ನಿರ್ಮಿಸಿ

ಗಾಂಧಿ ಭವನದ ನಿರ್ಮಾಣಕ್ಕೆ ಅಡಿಗಲ್ಲು ಮತ್ತು ಪ್ರಮುಖ ಪಾತ್ರ ವಹಿಸಿರುವ ಹೋ. ಶ್ರೀನಿವಾಸಯ್ಯ ಅವರ ಹುಟ್ಟೂರಿನಲ್ಲಿ ಸ್ಮಾರಕ ನಿರ್ಮಿಸಬೇಕು ಎಂದು ನಾಡೋಜ ಪಾಟೀಲ ಪುಟ್ಟಪ್ಪ ಒತ್ತಾಯಿಸಿದರು.

ಬೆಂಗಳೂರು
vishwavani.news
03.10.2017 ಮಂಗಳವಾರ

ಮನುಷ್ಯ ಮನುಷ್ಯರ ನಡುವೆ ಕಂದಕಗಳನ್ನು ನಿರ್ಮಿಸಿ ದ್ವೇಷ ಉಂಟು ಮಾಡುವುದು ಅಮಾನವೀಯ: ಸಿಎಂ

ಮತಾಂಧ ಶಕ್ತಿಗಳ ಅಟ್ಟಹಾಸ ಕೊನೆಗೊಳ್ಳಲಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮತಾಂಧ ಶಕ್ತಿಗಳು ಇಂದಿಗೂ ಧರ್ಮ ಧರ್ಮಗಳ ನಡುವೆ ದ್ವೇಷ ಮತ್ತು ಅಸೂಹೆಗಳನ್ನು ಬಿತ್ತುತ್ತಿವೆ. ಮನುಷ್ಯ ಮನುಷ್ಯರ ನಡುವೆ ಕಂದಕಗಳನ್ನು ನಿರ್ಮಿಸಿ ದ್ವೇಷ ಉಂಟು ಮಾಡುವುದು ಅಮಾನವೀಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಳವಳ ವ್ಯಕ್ತಪಡಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಸೋಮವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಚ್.ಎಸ್ .ದೊರೆಸ್ವಾಮಿ ಅವರಿಗೆ 'ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಪ್ರದಾನ' ಮಾಡಿ ಮಾತನಾಡಿದರು.

ಸಮಾಜದಲ್ಲಿ ಸಾಮರಸ್ಯ ಮತ್ತು ಸಹಬಾಳ್ವೆ ಬಹಳಷ್ಟು ಮುಖ್ಯ. ಅವು ಇಲ್ಲದಿದ್ದಲ್ಲಿ ದೇಶ ಅಭಿವೃದ್ಧಿ ಆಗುವುದಿಲ್ಲ. ಈಗಾಗಲೇ ಸರಕಾರದ ವತಿಯಿಂದ ಶೌಚಾಲಯ ಸಮರ ಸಾರುತ್ತಿದ್ದು, 31 ಲಕ್ಷ 60 ಸಾವಿರ ಶೌಚಾಲಯಗಳ ನಿರ್ಮಾಣ ಮಾಡಿದ್ದೇವೆ. ಮತ್ತೆ ಗಾಂಧೀಜಿಯವರ ಮಾರ್ಗದರ್ಶನದಲ್ಲಿಯೇ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ ಎಂದರು.

11 ಜಿಲ್ಲೆಗಳ ಬಯಲು ಬಹಿರ್ದೆಸೆ ಮುಕ್ತವಾಗಿದೆ. 2018ರ ಮಾರ್ಚ್ ಅಂತ್ಯಕ್ಕೆ ಕರ್ನಾಟಕವನ್ನು ಬಯಲು ಬಹಿರ್ದೆಸೆ ಮುಕ್ತ ಮಾಡುವ ಮೂಲಕ ಗಾಂಧೀಜಿ ಕನಸನ್ನು ಸಾಕಾರಗೊಳಿಸಲಾಗುತ್ತದೆ. ಬಡತನ, ಹಸಿವು, ಅಸ್ಪೃಷ್ಯತೆ, ನಿರುದ್ಯೋಗ ಇಂತಹ ಸಮಸ್ಯೆಗಳಿಂದ ಮುಕ್ತಿಗೊಳ್ಳುವ ಯೋಜನೆಯನ್ನು ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.



ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿಯನ್ನು ಎಚ್.ಎಸ್.ದೊರೆಸ್ವಾಮಿ ಅವರಿಗೆ ಪ್ರದಾನ ಮಾಡಲಾಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಕೆ.ಜೆ. ಜಾರ್ಜ್, ರಾಮಲಿಂಗಾರೆಡ್ಡಿ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, ನಿವೃತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ಇದ್ದರು.

> ಭಾರತ ಗುಲಾಮಗಿರಿ ಮತ್ತು ಹಸಿವು, ಅಸ್ಪೃಶ್ಯತೆಯಿಂದ ವಿಮೋಚನೆಯಾಗಬೇಕೆಂಬ ಕನಸನ್ನು ಗಾಂಧಿ ಹೊಂದಿದ್ದರು. ಅಸಮಾನತೆ, ಬಡತನದಿಂದ ಇನ್ನೂ ವಿಮೋಚನೆಯಾಗಿಲ್ಲ. ಅಹಿಂಸೆ ಮಾರ್ಗದ ಮೂಲಕ ಸರಳ ಜೀವನವನ್ನು ನಡೆಸಬೇಕು.
>
> **ಎಚ್.ಎನ್ ನಾಗಮೋಹನ್‌ದಾಸ್**
> ನಿವೃತ ನ್ಯಾಯಮೂರ್ತಿ

ಸರಳ ವ್ಯಕ್ತಿತ್ವ: ಗಾಂಧೀಜಿ ಅತ್ಯಂತ ಸರಳ ಮತ್ತು ವಿರಳ ವ್ಯಕ್ತಿ. ಅವರ ಜೀವನದಲ್ಲಿ ವಿದ್ಯೆ, ಸೋದರತೆ, ಸತ್ಯ ಅಹಿಂಸೆಯನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದಾರೆ. ದೊರೆಸ್ವಾಮಿ ಹಲವು ಗುರಿಗಳನ್ನು ಇಟ್ಟುಕೊಂಡು ಹೋರಾಟ ನಡೆಸುತ್ತಿದ್ದಾರೆ. ರಾಜ್ಯ ಸರಕಾರದ ವಿರುದ್ಧ ತೀಕ್ಷ್ಣವಾಗಿ ಟೀಕೆ ಮಾಡಿದ್ದಾರೆ. ಅದನ್ನು ನಾನು ಮಾರ್ಗದರ್ಶನ ರೂಪದಲ್ಲಿ ಸ್ವೀಕರಿಸುತ್ತೇನೆ ಎಂದು ಹೇಳಿದರು.

ಸ್ವಾತಂತ್ರ ಹೋರಾಟಗಾರ ದೊರೆಸ್ವಾಮಿ ಮಾತನಾಡಿ, ಈ ಗಾಂಧಿ ಪ್ರಶಸ್ತಿಯು ನನ್ನ ಜತೆ ಗಾಂಧಿ ಸೇವೆ ಮಾಡಿದವರೆಲ್ಲರಿಗೂ ಸಲ್ಲುತ್ತದೆ. ಈ 5 ಲಕ್ಷ ನಗದು ಬಹುಮಾನದಲ್ಲಿ 1 ಲಕ್ಷ ರು. ಹೋರಾಟ ಸಮಿತಿಗೆ ನೀಡುತ್ತಿದ್ದೇನೆ. 1 ಲಕ್ಷ ರು. ಜಯದೇವ ಆಸ್ಪತ್ರೆಗೆ ಮೀಸಲಿಟ್ಟಿದ್ದೇನೆ. ದೇಶದಲ್ಲಿ ಹಿಂಸೆ ಹೆಚ್ಚುತ್ತಿದೆ. ಮತಾಂಧತೆ, ಅಸಹಿಷ್ಣುತೆ ಉಂಟುಮಾಡುವ ಭಯ ಭೀತ ರೋಗಗಳು ಹರಡುತ್ತಿವೆ ಎಂದು ಅಭಿಪ್ರಾಯಪಟ್ಟರು.

ಇತ್ತೀಚೆಗೆ ನಡೆದಿರುವ ಸಾಹಿತಿಗಳ ಹತ್ಯೆ ಕುರಿತು ಸೂಕ್ತ ತನಿಖೆ ಕೈಗೊಳ್ಳಬೇಕು. ಹಿಂಸಾಚಾರ ಪ್ರವೃತ್ತಿ ಕೊನೆಗೊಂಡರೆ ಗೂಂಡಾಗಿರಿ ಕಡಿಮೆಯಾಗುತ್ತದೆ. ನಮ್ಮ ರಾಜ್ಯ ಕೋಮುವಾದದಿಂದ ನರಳುತ್ತಿದೆ. ಇತ್ತೀಚೆಗೆ ಮಂಗಳೂರಿನಲ್ಲಿ ನಡೆದ ಕೋಮುಗಲಭೆಗಳ ಘಟನೆಗಳು ರಾಜ್ಯದಲ್ಲಿ ಮರುಕಳಿಸಬಾರದು ಎಂದು ಸಲಹೆ ನೀಡಿದರು.

ಇಂದಿನ ರಾಜಕೀಯ ವ್ಯಕ್ತಿಗಳು ಧರ್ಮವನ್ನು ರಾಜಕೀಯಕ್ಕೆ ಬೆರೆಸುತ್ತಿದ್ದಾರೆ. ರಾಜಕೀಯ ವ್ಯಕ್ತಿಗಳ ಮಠಗಳಿಗೆ ಹಣ ನೀಡುವುದು, ಮಠಾಧೀಶರ ಓಲೈಸುವ ಕೆಲಸವನ್ನು ಬಿಡಬೇಕು ಮತ್ತು ಚುನಾವಣೆ ಸಂದರ್ಭದಲ್ಲಿ ಮದ್ಯ ಹಾಗೂ ಹಣ ನೀಡುವುದನ್ನು ಬಿಡಬೇಕು. ಪ್ರಾಮಾಣಿಕರಿಗೆ ಮತ್ತು ಕ್ರಿಯಾಶೀಲ ವ್ಯಕ್ತಿಗಳಿಗೆ ರಾಜಕೀಯ ಪ್ರಾತಿನಿಧ್ಯ ನೀಡಬೇಕು ಎಂದು ಒತ್ತಾಯಿಸಿದರು.

ಖಾದಿ ಉತ್ಪನ್ನಗಳನ್ನು ಕರಮುಕ್ತಗೊಳಿಸಬೇಕು. ಖಾದಿ ಗ್ರಾಮೋದ್ಯೋಗ ಮತ್ತು ಕೈಮಗ್ಗಗಳ ಮೇಲೆ ತೆರಿಗೆ ವಿಧಿಸಿರುವುದು ನ್ಯಾಯಸಮ್ಮತವಲ್ಲ. ತಿಂಡಿ ತಿನಿಸುಗಳಿಗೆ ತೆರಿಗೆ ವಿಧಿಸಬಾರದು. ರಾಜ್ಯ ಸರಕಾರ ಕೇಂದ್ರ ಸರಕಾರಕ್ಕೆ ಒತ್ತಾಯಿಸಬೇಕು ಎಂದರು.

ದೊರೆಸ್ವಾಮಿಗೆ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಪ್ರದಾನ

ಪ್ರಶಸ್ತಿ ಮೊತ್ತದಲ್ಲಿ 2 ಲಕ್ಷ ರೂ. ದೇಣಿಗೆ, 3 ಲಕ್ಷ ರೂ. ಪತ್ನಿಗೆ ' ಸ್ವಾತಂತ್ರ್ಯ ಹೋರಾಟಗಾರ ಎಚ್ಎಸ್‌ಡಿ ಘೋಷಣೆ



ವಿಜಯವಾಣಿ ಚಿತ್ರ

ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಎಚ್.ಎಸ್. ದೊರೆಸ್ವಾಮಿ ಅವರಿಗೆ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಿಎಂ ಸಿದ್ದರಾಮಯ್ಯ, ಸಚಿವರಾದ ಕೆ.ಜೆ. ಜಾರ್ಜ್, ರಾಮಲಿಂಗಾರೆಡ್ಡಿ ಮತ್ತಿತರರಿದ್ದರು.

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಐದು ರೂ. ಪ್ರಶಸ್ತಿ ಮೊತ್ತದಲ್ಲಿ ತಲಾ 1 ಲಕ್ಷ ರೂ. ಅನ್ನು ಹೋರಾಟ ಸಮಿತಿ, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ನೀಡಿ ಉಳಿದ 3 ಲಕ್ಷ ರೂ.ಗಳನ್ನು ಪತ್ನಿಗೆ ಕೊಡುವುದಾಗಿ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಘೋಷಿಸಿದ್ದಾರೆ.

» ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೀಡುವ ಪ್ರಶಸ್ತಿ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೀಡುವ 'ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಕರ್ನಾಟಕ 2017' ಪ್ರಶಸ್ತಿಯನ್ನು ಸೋಮವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಸ್ವೀಕರಿಸಿ ಮಾತನಾಡಿದರು.

ಜಿಎಸ್‌ಟಿ ಜಾರಿಯಿಂದ ಖಾದಿ ಮತ್ತು ಕರಕುಶಲ ವಸ್ತುಗಳ ಮಾರಾಟಗಾರರಿಗೆ ತೊಂದರೆ ಉಂಟಾಗಿದೆ. ಸಣ್ಣಪುಟ್ಟ ಕರಕುಶಲ ವಸ್ತುಗಳನ್ನು ರೂಪಿಸಿ, ಸೂಕ್ತ ಮಾರುಕಟ್ಟೆ ಕಂಡುಕೊಳ್ಳುತ್ತಿರುವವರಿಗೆ ಜಿಎಸ್‌ಟಿ ಮಾರಕವಾಗಿ ಪರಿಣಮಿಸಿದೆ. ಇದನ್ನು ತೆರವುಗೊಳಿಸಲು ಸರ್ಕಾರ ಪ್ರಯತ್ನಿಸಬೇಕು.

ಸ್ವಾತಂತ್ರ್ಯ ಹೋರಾಟಗಾರ

ಭ್ರಷ್ಟಾಚಾರ ನಿರ್ಮೂಲನೆ ಮಾಡಲು ರಾಜ್ಯ ಸರ್ಕಾರ ಅರೆ ಮನಸ್ಸು ಮಾಡಿದೆ. ರಾಜ್ಯದಲ್ಲಿ ಹಿಂಸೆ ಮತ್ತು ಅಸಹಿಷ್ಣುತೆ ಹೆಚ್ಚಾಗುತ್ತಿದೆ. ಹಿಂಸಾವೃತ್ತಿ ರಾಜಕೀಯವನ್ನೂ ಆವರಿಸಿದೆ. ಧರ್ಮಾಚಾರದಿಂದ ಹಿಂಸಾಚಾರ ನಡೆಯುತ್ತಿದೆ. ಇದಕ್ಕೆ ಮಂಗಳೂರಿನಲ್ಲಿ ನಡೆಯುತ್ತಿರುವ ಘಟನೆಗಳೇ ಸಾಕ್ಷಿ. ಮಠಗಳಿಗೆ ಹಣ ನೀಡುವ ಮೂಲಕ ಮಠಾಧಿಪತಿಗಳ ಓಲೈಕೆಗೆ ಸರ್ಕಾರ ಮುಂದಾಗಿದೆ. ಚುನಾವಣೆಯಲ್ಲಿ ಹೆಂಡ ಮತ್ತು ಹಣದ ಹೊಳೆ ಹರಿಸುವುದನ್ನು ನಿಲ್ಲಿಸಬೇಕು ಎಂದು ಸರ್ಕಾರಕ್ಕೆ ಸಲಹೆ ನೀಡಿದರು.

ಸಿಎಂ ಸಿದ್ದರಾಮಯ್ಯ ಮಾತನಾಡಿ, ದೊರೆಸ್ವಾಮಿ ಅವರು ಸರ್ಕಾರ ನಡೆ ಬಗ್ಗೆ ಪ್ರಸ್ತಾಪಿಸಿರುವುದನ್ನು ನಾನು ಟೀಕೆ ಎಂದು ಬಿಟ್ಟುಬಿಡುವುದಿಲ್ಲ. ಬದಲಾಗಿ ಮಾರ್ಗದರ್ಶನ ಎಂದು ಪರಿಗಣಿಸುತ್ತೇನೆ. ಗಾಂಧಿ ಇನ್ನೂ ಸ್ವಲ್ಪ ವರ್ಷ ಬದುಕಬೇಕಿತ್ತು. ಅವರನ್ನು ಕೊಂದ ಮತಾಂಧರು ಇಂದಿಗೂ ಜೀವಂತವಾಗಿದ್ದಾರೆ. ಅವರಿಂದಲೇ ದೇಶದಲ್ಲಿ ಅಸೂಯೆ ಮತ್ತು ಸಂಘರ್ಷಗಳು ನಡೆಯುತ್ತಿವೆ. ಮನುಷ್ಯ-ಮನುಷ್ಯರ ನಡುವೆ ಗೋಡೆ ಕಟ್ಟುವ ಕೆಲಸ ನಡೆಯುತ್ತಿದೆ. ಇದೊಂದು ಅಮಾನವೀಯ ಕೆಲಸ ಎಂದರು.

ಸಾಮರಸ್ಯ-ಸಹಬಾಳ್ವೆ ನೆಲೆಸಿಲ್ಲವಾದರೆ ಯಾವ ದೇಶ ಕೂಡ ಉದ್ಧಾರವಾಗುವುದಿಲ್ಲ. ದೊರೆಸ್ವಾಮಿ ಅವರಿಗೆ ಪ್ರಶಸ್ತಿ ನೀಡಿರುವುದು ಸೂಕ್ತವಾಗಿದೆ. ಗಾಂಧಿ ತತ್ವದಲ್ಲೇ ಇವರು ನಡೆಯುತ್ತಿದ್ದಾರೆ ಎಂದರು.

ಸಚಿವರಾದ ರಾಮಲಿಂಗಾ ರೆಡ್ಡಿ, ಕೆ.ಜೆ. ಜಾರ್ಜ್, ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ ಎಚ್.ಎನ್. ನಾಗಮೋಹನ್ ದಾಸ್, ವಾರ್ತಾ ಇಲಾಖೆ ನಿರ್ದೇಶಕ ಡಾ. ಪಿ.ಎಸ್. ಹರ್ಷ ಮತ್ತಿತರರು ಇದ್ದರು.

ಯುನೈಟೆಡ್‌ನಿಂದ ಮೆಗಾ ಕ್ಲೀನಥಾನ್

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಯುನೈಟೆಡ್ ಬೆಂಗಳೂರು ಸಂಘಟನೆ ಸೋಮವಾರ 'ಮೆಗಾ ಕ್ಲೀನಥಾನ್' ಆಯೋಜನೆ ಮಾಡುವ ಮೂಲಕ ವಿಭಿನ್ನವಾಗಿ ಗಾಂಧಿ ಜಯಂತಿ ಆಚರಿಸಿತು. ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ನಿವಾಸದಿಂದ ಆರಂಭವಾದ ಸ್ವಚ್ಛತಾ ಅಭಿಯಾನ, ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ಕೊನೆಗೊಂಡಿತು.

ಯುನೈಟೆಡ್ ಬೆಂಗಳೂರು ಸಂಘಟನೆ ಆಯೋಜನೆ

ಎಚ್.ಎಸ್. ದೊರೆಸ್ವಾಮಿ ಮನೆಯಿಂದ ಜ್ಞಾನಭಾರತಿ ಕ್ಯಾಂಪಸ್ ವರೆಗೆ ನಡಿಗೆ

ರಾಜ್ಯಸಭಾ ಸದಸ್ಯ ರಾಜೀವ್ ಚಂದ್ರಶೇಖರ್ ಪೊರಕೆ ಹಿಡಿದು ಕಸ ಗುಡಿಸಿ, ತ್ಯಾಜ್ಯವನ್ನು ರಸ್ತೆಗೆ ಬಿಸಾಡದಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು. ಕಸದಿಂದ ಗಲೀಜಾಗಿದ್ದ ಗೋಡೆಗಳಿಗೆ ಸುಣ್ಣ-ಬಣ್ಣ ಬಳಿದು ಅದರ ಅಂದ ಹೆಚ್ಚುವಂತೆ ಮಾಡಿದರು.

ಕೇಂದ್ರ ಸಚಿವ ಅನಂತಕುಮಾರ್, ಬಿಜೆಪಿ ವಕ್ತಾರೆ ಮಾಳವಿಕಾ ಅವಿನಾಶ್, ಶಾಸಕ ವಿಜಯಕುಮಾರ್ ಸೇರಿ ಪಾಲಿಕೆ ಸದಸ್ಯರು, ಪೌರಕಾರ್ಮಿಕರು, ಸ್ವಯಂಸೇವಕರು, ವಯಸ್ಕರು, ಹಿರಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬಳಿಕ ಹಲಗೆವಡೇರಹಳ್ಳಿ ಕೆರೆಯಲ್ಲಿ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಯಿತು. ನಟ ಗಣೇಶ್, ಶಿಲ್ಪಾ ಗಣೇಶ್, ನಟಿಯರಾದ ಮಯೂರಿ, ಸಂಯುಕ್ತಾ ಬೆಳವಾಡಿ, ಪಾಲಿಕೆ ಸದಸ್ಯ ರಾಮಚಂದ್ರ ಪಾಲ್ಗೊಂಡು ಸ್ವಚ್ಛತೆ ಕೈಗೊಂಡರು. ಮೆಗಾ ಕ್ಲೀನ್‌ಥಾನ್‌ನಲ್ಲಿ ನಗರದ 72 ವಾರ್ಡ್‌ಗಳಲ್ಲಿ 14 ಸಾವಿರಕ್ಕೂ ಹೆಚ್ಚಿನ ಜನರು ಪಾಲ್ಗೊಂಡಿದ್ದರು.

ಸಂಗೀತದ ಮೂಲಕ ಅರಿವು

ಪಟ್ಟಾಭಿರಾಮನಗರದಲ್ಲಿ ಕಲತ್ತ ಎಂಬ ರಾಕ್ ಮ್ಯೂಸಿಕ್ ತಂಡ 'ಭೂಮಿಯು ಸ್ವರ್ಗವಾಗುತ್ತಿದೆ ನೋಡು..' ಗೀತೆ ಮೂಲಕ ಜಾಗೃತಿ ಮೂಡಿಸಿತು. ಹಲಗೆವಡೇರಹಳ್ಳಿಯಲ್ಲಿ ಗ್ರೀನ್‌ಸ್ಟೇಜ್ ಬೀದಿನಾಟಕ ತಂಡವು ಸ್ವಚ್ಛತೆ ಕಾಪಾಡುವುದು ಮತ್ತು ಕಸ ವಿಲೇವಾರಿ, ಬೀದಿ ಬದಿ ಕಸ ಎಸೆಯುವುದರಿಂದ ಆಗುತ್ತಿರುವ ಸಮಸ್ಯೆಗಳನ್ನು ಮನಮುಟ್ಟುವಂತೆ ಪ್ರದರ್ಶಿಸಿತು.

ಪೊಲೀಸರ ಕಿರಿಕ್: ಬೆಂಗಳೂರು ವಿವಿ ಜ್ಞಾನಭಾರತಿ ಆವರಣದಲ್ಲಿ ಸ್ವಚ್ಛತಾ ಕಾರ್ಯ ಕೈಗೊಳ್ಳಲು ಅಂದಾಜು 250ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದ ವಿದ್ಯಾರ್ಥಿಗಳು ಹಾಗೂ ನಾಗರಿಕರನ್ನು ವಾಪಸ್ ಮನೆಗೆ ತೆರಳುವಂತೆ ಪೊಲೀಸರು ಸೂಚಿಸುವ ಮೂಲಕ ಕಾರ್ಯಕ್ರಮಕ್ಕೆ ಅಡ್ಡಿಪಡಿಸಿದ ಘಟನೆ ಜರುಗಿತು. ಅಧಿಕ ಸಂಖ್ಯೆಯಲ್ಲಿ ಜನರು ಆಗಮಿಸಿದ್ದನ್ನು ಗಮನಿಸಿದ ಪೊಲೀಸರು ಇದರಿಂದ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುತ್ತದೆ ಎಂದು ಗುಂಪನ್ನು ಚದುರಿಸಿದರು. ಪೊಲೀಸರ ಈ ಕೃತ್ಯಕ್ಕೆ ನಮ್ಮ ಬೆಂಗಳೂರು ಪ್ರತಿಷ್ಠಾನ ಅಧಿಕಾರಿಗಳು ಬೇಸರ ವ್ಯಕ್ತಪಡಿಸಿದರು.

"ಬೆಂಗಳೂರಿನ ಜೀವಜಲವಾಗಿರುವ ಕೆರೆಗಳ ಸಂರಕ್ಷಣೆಗೆ ಯುನೈಟೆಡ್ ಸಂಘಟನೆ ಮುಂದಾಗಿರುವುದು ಖುಷಿಯ ಸಂಗತಿ. ಎಲ್ಲರೂ ಸೇರಿ ಬೆಂಗಳೂರು, ಕರ್ನಾಟಕ ಮತ್ತು ಭಾರತವನ್ನು ಸ್ವಚ್ಛ-ಸುಂದರ ಮಾಡಬೇಕಿದೆ.

। ಅನಂತಕುಮಾರ್ ಕೇಂದ್ರ ಸಚಿವ



"ಯಾವುದೇ ಕೆಲಸವಾಗಲಿ ಮನಃಪೂರ್ವಕವಾಗಿ ಮಾಡಬೇಕು. ಮನೆ ಮುಂದೆ ಕಸ ಎಸೆದು ಸ್ವಚ್ಛತಾ ಕಾರ್ಯ ಕೈಗೊಳ್ಳುತ್ತೇನೆ ಎಂದರೆ ಸಾಧ್ಯವಿಲ್ಲ.

। [illegible] ನಟ

"ಗಾಂಧೀಜಿ ಸಂದೇಶದಂತೆ ನಾವು ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಅರ್ಥಪೂರ್ಣವಾಗಿ ಆಚರಿಸಿದ್ದೇವೆ. ಇದಕ್ಕೆ ಜನರಿಂದ ಉತ್ತಮ ಸ್ಪಂದನೆ ಸಿಕ್ಕಿರುವುದು ಖುಷಿಯ ವಿಚಾರ.

। ರಾಜೀವ್ ಚಂದ್ರಶೇಖರ್ ರಾಜ್ಯಸಭಾ ಸದಸ್ಯ

ಪ್ರಜಾವಾಣಿ
ಮಂಗಳವಾರ • ಅಕ್ಟೋಬರ್ 3, 2017

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಚ್.ಕೆ.ಪಾಟೀಲ ಹೇಳಿಕೆ

‘ಗಾಂಧಿ ಇ–ಮ್ಯೂಸಿಯಂಗೆ ₹10 ಕೋಟಿ’


ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗಾಂಧಿ ಭವನದಲ್ಲಿ ಗಾಂಧೀಜಿ ಬದುಕಿನ ಸಮಗ್ರ ಚಿತ್ರಣ ಒದಗಿಸುವ ಇ-ಮ್ಯೂಸಿಯಂ ಆರಂಭಿಸುತ್ತೇವೆ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಗಾಂಧಿ ಸ್ಮಾರಕ ನಿಧಿಯು ಇಲ್ಲಿ ಸೋಮವಾರ ಆಯೋಜಿಸಿದ್ದ ಗಾಂಧಿ ಜಯಂತಿ ಹಾಗೂ ವಿಶ್ವ ಅಹಿಂಸಾ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

‘ಯುವಜನರಿಗೆ ಮತ್ತು ಮಕ್ಕಳಿಗೆ ಮಹಾತ್ಮನನ್ನು ಪರಿಚಯಿಸುವ ಸಲುವಾಗಿ 11,000 ಚದರ ಅಡಿ ವಿಸ್ತೀರ್ಣದಲ್ಲಿ ಇ-ಮ್ಯೂಸಿಯಂ ಸ್ಥಾಪಿಸಲಾಗುತ್ತದೆ. ಇದಕ್ಕೆ ₹ 10 ಕೋಟಿ ಅನುದಾನ ನೀಡಲಾಗುವುದು. ದೇಶದಲ್ಲೇ ರಾಷ್ಟ್ರಪಿತನ ಕುರಿತ ಮೊದಲ ಇ-ಮ್ಯೂಸಿಯಂ ಇದಾಗಲಿದೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಮಾಹಿತಿ ಒದಗಿಸಲಾಗುವುದು’ ಎಂದರು.

‘ಗಾಂಧೀಜಿ ಅವರ 150ನೇ ವರ್ಷಾಚರಣೆ ಪ್ರಯುಕ್ತ 2018ರ ಅಕ್ಟೋಬರ್‌ನಿಂದ 2019ರ ಅಕ್ಟೋಬರ್ ನಡುವೆ ಅವರ ವಿಚಾರಗಳಿಗೆ ಸಂಬಂಧಿಸಿದ 150 ಪುಸ್ತಕಗಳನ್ನು ಬಿಡುಗಡೆ ಮಾಡಲಿದ್ದೇವೆ. ಅವರ ವೈಯುಕ್ತಿಕ ಬದುಕು ಹಾಗೂ ಗಾಂಧಿ ಯುಗಕ್ಕೆ ಸಂಬಂಧಿಸಿದ ಕನ್ನಡ ಪುಸ್ತಕಗಳ ಮರುಮುದ್ರಣ, ಪರಿಷ್ಕರಣೆ ಹಾಗೂ ಹೊಸ ಪುಸ್ತಕಗಳ ಪ್ರಕಟಣೆ ಇದರಲ್ಲಿ ಸೇರಿದೆ’ ಎಂದರು.



ಎಚ್.ಎಸ್.ದೊರೆಸ್ವಾಮಿ ಮತ್ತು ಎಚ್.ಕೆ. ಪಾಟೀಲ ಅವರು ಚರಕವನ್ನು ತಿರುಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ.ಪಿ.ಕೃಷ್ಣ, ಡಾ.ಪಾಟೀಲ ಪುಟ್ಟಪ್ಪ ಇದ್ದರು –ಪ್ರಜಾವಾಣಿ ಚಿತ್ರ

‘ರಾಜ್ಯದ ಮೂರು ಸಾವಿರ ಗ್ರಾಮ ಪಂಚಾಯಿತಿಗಳು ಇಂದಿನಿಂದ ಬಹಿರ್ದೆಸೆ ಮುಕ್ತ ಗ್ರಾಮಗಳಾಗಲಿವೆ. 2018ರ ಮಾರ್ಚ್ ಒಳಗಾಗಿ ಸಂಪೂರ್ಣ ರಾಜ್ಯವನ್ನು ಬಯಲು ಶೌಚ ಮುಕ್ತ ರಾಜ್ಯವನ್ನಾಗಿ ರೂಪಿಸುತ್ತೇವೆ’ ಎಂದು ಅವರು ಭರವಸೆ ನೀಡಿದರು.

ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ, ‘ದೇಶದಲ್ಲಿ ಕನಿಷ್ಠ ಕಾನೂನುಗಳಿರಬೇಕು ಎಂಬುದು ಗಾಂಧೀಜಿಯ ಆಶಯವಾಗಿತ್ತು. ಆದರೆ, ಇಂದು ಹೆಚ್ಚುತ್ತಿರುವ ನ್ಯಾಯಾಲಯಗಳು, ಜೈಲುಗಳು ನಮ್ಮ ವ್ಯಕ್ತಿತ್ವದ ಮಾಪಕಗಳಾಗಿವೆ. ವಿನೋಬಾ ಭಾವೆ ಅವರು ದೇಹದಲ್ಲಿ ಮಲ ಎಷ್ಟಿದೆಯೋ ದೇಶದಲ್ಲಿ ಅಷ್ಟು ಕಾನೂನುಗಳಿರಬೇಕು ಎಂದಿದ್ದರು. ಆದರೆ, ಇಂದು ದೇಹವೆಲ್ಲಾ ಮಲವಾಗಿದೆ’ ಎಂದು ವಿಷಾದ ವ್ಯಕ್ತಪಡಿಸಿದರು.

ಜಯಶ್ರೀ ಟ್ರಸ್ಟ್ ಪುರಸ್ಕಾರ

ನಾಗರಾಜ ಚಿಕ್ಕನಾಯಕನಹಳ್ಳಿ ಅವರು ರಚಿಸಿದ ‘ಗಾಂಧೀಜಿಯ ನೂರು ಆದರ್ಶಗಳ ನೆನಪುಗಳು’ ಕೃತಿಗೆ 2017ನೇ ಸಾಲಿನ ಜಯಶ್ರೀ ಟ್ರಸ್ಟ್ ಪುರಸ್ಕಾರವನ್ನು ಸಚಿವ ಎಚ್.ಕೆ.ಪಾಟೀಲ ಪ್ರದಾನ ಮಾಡಿದರು. ‘ಬಾಪು ಪ್ರಪಂಚ’ ವಿಶೇಷ ಸಂಚಿಕೆಯನ್ನು ಲೋಕಾರ್ಪಣೆ ಮಾಡಲಾಯಿತು.

‘ಹೆಚ್ಚುತ್ತಿರುವ ಆಸ್ಪತ್ರೆಗಳು, ನ್ಯಾಯಾಲಯಗಳು, ಜೈಲುಗಳು ಅಭಿವೃದ್ಧಿಯ ಸಂಕೇತವಲ್ಲ. ಅವುಗಳ ಪ್ರಮಾಣ ಕಡಿಮೆಯಾಗುವುದೇ ಗಾಂಧಿ ಪರಿಕಲ್ಪನೆಯ ನಿಜವಾದ ಪ್ರಗತಿ. ಆ ದಿಶೆಯ ಅಭಿವೃದ್ಧಿ ನಮ್ಮ ಗುರಿಯಾಗಬೇಕು’ ಎಂದು ಅವರು ಹೇಳಿದರು.

ಹಿರಿಯ ಪತ್ರಕರ್ತ ಡಾ.ಪಾಟೀಲ ಪುಟ್ಟಪ್ಪ, ‘ರಾಜ್ಯದಲ್ಲಿ ಗಾಂಧಿ ಆದರ್ಶದಂತೆ ಮದ್ಯಪಾನವನ್ನು ನಿಷೇಧಿಸಿದ ಮೊದಲ ವ್ಯಕ್ತಿ ಟಿಪ್ಪು ಸುಲ್ತಾನ್. ಆದರೆ ಇಂದು ಅನೇಕ ಸಂಶೋಧಕರು ಆತನನ್ನು ಟೀಕಿಸುತ್ತಿದ್ದಾರೆ’ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ನಂ. 1 ಕನ್ನಡ ದಿನಪತ್ರಿಕೆ

ಮಂಗಳವಾರ
3 ಅಕ್ಟೋಬರ್ 2017
3 OCTOBER 2017

ಗಾಂಧಿ ಭವನದಲ್ಲಿ ಹೈಟೆಕ್ ಮ್ಯೂಸಿಯಂ

ಅಗತ್ಯ ಅನುದಾನ ಶೀಘ್ರ ಬಿಡುಗಡೆ » ಸಚಿವ ಎಚ್.ಕೆ. ಪಾಟೀಲ್ ಭರವಸೆ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಗಾಂಧಿ ತತ್ವ ಹಾಗೂ ಸಿದ್ಧಾಂತಗಳನ್ನು ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಗಾಂಧಿ ಭವನದಲ್ಲಿ ಇ- ಗಾಂಧಿ ಮಲ್ಟಿಮೀಡಿಯಾ ಮ್ಯೂಸಿಯಂ ಆರಂಭಗೊಳ್ಳಲಿದೆ. ಗಾಂಧಿ ಸ್ಮಾರಕ ನಿಧಿ ಸಹಯೋಗದೊಂದಿಗೆ ನಿರ್ಮಾಣವಾಗಲಿರುವ ಇ-ಗಾಂಧಿ ಮಲ್ಟಿಮೀಡಿಯಾಗೆ ರಾಜ್ಯ ಸರ್ಕಾರ ಶೀಘ್ರ ಅನುದಾನ ಬಿಡುಗಡೆ ಮಾಡಲಿದೆ.

10 ಕೋಟಿ ರೂ. ವೆಚ್ಚ

ಗಾಂಧಿ ಜಯಂತಿ, ವಿಶ್ವ ಅಹಿಂಸಾ ದಿನಾಚರಣೆ

ಗಾಂಧಿ ಭವನದಲ್ಲಿ ಸೋಮವಾರ ಏರ್ಪಡಿಸಿದ್ದ ಗಾಂಧಿ ಜಯಂತಿ ಹಾಗೂ ವಿಶ್ವ ಅಹಿಂಸಾ ದಿನಾಚರಣೆ ಕಾರ್ಯಕ್ರಮದಲ್ಲಿ ಈ ಸಂಬಂಧ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ. ಕೃಷ್ಣ ಹಾಗೂ ಸದಸ್ಯರು ಸಲ್ಲಿಸಿದ ಮನವಿಗೆ ಸ್ಪಂದಿಸಿದ ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ. ಪಾಟೀಲ್, ಶೀಘ್ರದಲ್ಲೇ ಸಿಎಂ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ಮ್ಯೂಸಿಯಂಗೆ 10 ಕೋಟಿ ರೂ. ಅಗತ್ಯವಿದ್ದು, ಪ್ರಸ್ತುತ ಇರುವ ಕಟ್ಟಡಕ್ಕೆ ಮತ್ತೊಂದು ಮಹಡಿ ಸೇರಿಸಲಾಗುತ್ತದೆ. ಬಾಪು ಅವರ ಹುಟ್ಟಿನಿಂದ ಕೊನೆವರೆಗಿನ ಎಲ್ಲ ಘಟನೆಗಳನ್ನು ಫ್ಲೋ ಚಾರ್ಟ್ ಮೂಲಕ ಪ್ರಸ್ತುತ ಪಡಿಸಲಿದ್ದು, ಸಂಪೂರ್ಣ ವಿದ್ಯುನ್ಮಾನ ಮ್ಯೂಸಿಯಂ ಆಗಿರಲಿದೆ. ಮ್ಯೂಸಿಯಂಗೆ ಭೇಟಿ ನೀಡುವವರು ಕೇಳುವ ಪ್ರಶ್ನೆಗಳಿಗೆ ಬಾಪು ಧ್ವನಿಯಲ್ಲೇ ಉತ್ತರವೂ ಸಿಗಲಿದೆ. ಇಂತಹ ಚಟುವಟಿಕೆಗಳುಳ್ಳ ಹೊಸ ನಮೂನೆ ಮ್ಯೂಸಿಯಂ ಸಿದ್ಧಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಸಚಿವರ ಭರವಸೆ: ಕಾರ್ಯಕ್ರಮ ಉದ್ಘಾಟಿಸಿದ ಸಚಿವ ಎಚ್.ಕೆ. ಪಾಟೀಲ, ಗಾಂಧಿ ಭವನ ಈವರೆಗೆ ಸಲ್ಲಿಸಿದ ಯಾವುದೇ ಪ್ರಸ್ತಾವನೆಯನ್ನು ಸರ್ಕಾರ ತಿರಸ್ಕರಿಸಿಲ್ಲ. ಇ-ಗಾಂಧಿ ಮ್ಯೂಸಿಯಂ ನಿರ್ಮಾಣ ಸಂಬಂಧ ಅಗತ್ಯ ಸಹಕಾರ ನೀಡಲಾಗುವುದು. ಅಂತೆಯೇ ಗಾಂಧೀಜಿ 150ನೇ ಜನ್ಮ ದಿನಾಚರಣೆ ಸಂದರ್ಭದಲ್ಲಿ ಗಾಂಧೀಜಿ ಹಾಗೂ ಕಸ್ತೂರಬಾ ಅವರ ವಿಚಾರಗಳ ಬಗ್ಗೆ ಗಾಂಧಿ ಸ್ಮಾರಕ ನಿಧಿಯಿಂದ 150 ಪುಸ್ತಕಗಳನ್ನು ಹೊರತರಲು ಉದ್ದೇಶಿಸಲಾಗಿದೆ. ಈ ಪುಸ್ತಕಗಳನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಪ್ರಕಟಿಸಲಾಗುವುದು ಎಂದು ಪ್ರಕಟಿಸಿದರು.

ಗಾಂಧೀಜಿ ಗ್ರಾಮಗಳ ಅಭಿವೃದ್ಧಿ ಕನಸು ಕಂಡಿದ್ದರು. ಅಂತೆಯೇ ನಿರ್ಮಲ ಗ್ರಾಮ ನಿರ್ಮಾಣ ಅವರ ಮುಖ್ಯ ಅಪೇಕ್ಷೆಯಲ್ಲೊಂದಾಗಿತ್ತು. ಅದರಂತೆ 2018ರ ಮಾರ್ಚ್ ಅಂತ್ಯದೊಳಗೆ ಕರ್ನಾಟಕವನ್ನು ಬಯಲು ಬಹಿರ್ದೆಸೆ ಮುಕ್ತ ರಾಜ್ಯವನ್ನಾಗಿ ಮಾಡಲಾಗುವುದು. ಸರ್ಕಾರ ಗ್ರಾಮಗಳ ಅಭ್ಯುದಯಕ್ಕಾಗಿಯೇ ಅಗತ್ಯ ಕಾನೂನುಗಳನ್ನು ತಿದ್ದುಪಡಿ ಮಾಡಿದೆ ಎಂದು ತಿಳಿಸಿದರು.

ಸ್ವಯಂ ಹತೋಟಿ: ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಮಾತನಾಡಿ, ಸ್ವರಾಜ್ಯ ಎಂದರೆ 'ತನ್ನ ಮೇಲಿನ ಹತೋಟಿ' ಎಂದರ್ಥ. ಪ್ರಸ್ತುತ ಸಮಾಜದಲ್ಲಿ ತಮ್ಮ ಮೇಲೆ ಹತೋಟಿ ಇಲ್ಲದವರೇ ಹೆಚ್ಚಾಗಿದ್ದಾರೆ. ನ್ಯಾಯಾಲಯ, ಪೊಲೀಸ್ ಠಾಣೆ, ಆಸ್ಪತ್ರೆಗಳು ಹೆಚ್ಚಾಗುವುದು ಅಭಿವೃದ್ಧಿ ಅಲ್ಲ. ಇವುಗಳು ಕಡಿಮೆಯಾದರೆ ಮಾತ್ರ ಅಭಿವೃದ್ಧಿ ಎಂದಾಗುತ್ತದೆ ಎಂದರು.

ಸರ್ಕಾರಗಳಲ್ಲಿ ಕಾನೂನುಗಳೇ ಹೆಚ್ಚಾಗುತ್ತಿವೆ. ಕಾನೂನುಗಳು ಎಷ್ಟಿವೆ ಎಂಬುದು ಸರ್ಕಾರಕ್ಕೂ ತಿಳಿದಿಲ್ಲ. ಸಮಾಜದಲ್ಲಿ ಸೇವಾ ಹಾಗೂ ಸಮರ್ಪಣಾ ಮನೋಭಾವನೆ ಹೆಚ್ಚಾಗಬೇಕಿದ್ದು, ಮಕ್ಕಳಲ್ಲಿ ಉತ್ತಮ ಮೌಲ್ಯಗಳನ್ನು ತರುವಲ್ಲಿ ಶಿಕ್ಷಣ ಇಲಾಖೆ, ಸಂಸ್ಥೆಗಳುಕಾರ್ಯೋನ್ಮುಖವಾಗಿಬದ್ಧತೆಮೆರೆಯಬೇಕುಎಂದು ದೊರೆಸ್ವಾಮಿ ಹೇಳಿದರು. ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಎಚ್.ಸಿ. ರುದ್ರಪ್ಪ, ವಾರ್ತಾ ಇಲಾಖೆ ನಿರ್ದೇಶಕ ಡಾ.ಪಿ.ಎಸ್. ಹರ್ಷ ಮತ್ತಿತರರು ಉಪಸ್ಥಿತರಿದ್ದರು.



ಗಾಂಧಿ ಭವನದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಗಾಂಧೀಜಿ ಕುರಿತ ವಿಶೇಷ ಸಂಚಿಕೆಗಳನ್ನು ಬಿಡುಗಡೆ ಮಾಡಲಾಯಿತು. ಸಚಿವ ಎಚ್.ಕೆ. ಪಾಟೀಲ್, ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ, ವೂಡೇ ಪಿ. ಕೃಷ್ಣ ಮತ್ತಿತರರಿದ್ದರು.

ಹೊ. ಶ್ರೀನಿವಾಸಯ್ಯ ನೆನಪು

ಗಾಂಧಿ ಭವನದಲ್ಲಿ ಸದಾ ಎಲ್ಲರನ್ನೂ ಚಟುವಟಿಕೆಯಿಂದ ಇರಿಸುತ್ತಿದ್ದ ಹೊ. ಶ್ರೀನಿವಾಸಯ್ಯ, ರಾಜ್ಯವನ್ನು ಬಯಲು ಬಹಿರ್ದೆಸೆ ಮುಕ್ತವನ್ನಾಗಿಸುವ ಘೋಷಣೆ ಮಾಡಿದ ವೇಳೆ ಭೇಟಿ ಮಾಡಿ ಹರಸಿದ್ದರು. ಸ್ವಚ್ಛತೆ ಕಾಳಜಿಯ ಬಗ್ಗೆ ಗಾಂಧೀಜಿ ಅವರ ಬರಹಗಳನ್ನು ನೀಡಿದ್ದರು ಎಂದು ಹೊ. ಶ್ರೀನಿವಾಸಯ್ಯ ಜತೆಗಿನ ಒಡನಾಟವನ್ನು ಸಚಿವ ಎಚ್.ಕೆ. ಪಾಟೀಲ ಸ್ಮರಿಸಿದರು.

ಸಂಯುಕ್ತ ಕರ್ನಾಟಕ
೩ ಅಕ್ಟೋಬರ್ 2017 ಮಂಗಳವಾರ

ಗಾಂಧಿ ಹತ್ಯೆ ಹಂತಕ ಶಕ್ತಿ ಇನ್ನೂ ಸಕ್ರಿಯ



ರವೀಂದ್ರ ಕಲಾಕ್ಷೇತ್ರದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಆಯೋಜಿಸಿದ್ದ 'ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಕರ್ನಾಟಕ–2017' ಪ್ರಶಸ್ತಿಯನ್ನು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್ ದೊರೆಸ್ವಾಮಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸನ್ಮಾನಿಸಿದರು.

ಬೆಂಗಳೂರು: ರಾಷ್ಟ್ರಪಿತ ಮಹಾತ್ಮಗಾಂಧಿಯನ್ನು ಹತ್ಯೆ ಮಾಡಿದ ಮತಾಂದರು ಇಂದಿಗೂ ಧರ್ಮ–ಧರ್ಮಗಳ ನಡುವೆ ದ್ವೇಷದ. ಬೀಜ ಬಿತ್ತುತ್ತಿದ್ದಾರೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಳವಳ ವ್ಯಕ್ತಪಡಿಸಿದರು.

ರವೀಂದ್ರ ಕಲಾಕ್ಷೇತ್ರದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಆಯೋಜಿಸಿದ್ದ 'ಮಹಾತ್ಮಗಾಂಧಿ ಸೇವಾ ಪ್ರಶಸ್ತಿ ಕರ್ನಾಟಕ–2017' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿ, ಗಾಂಧಿಜಿ ಪ್ರೀತಿ, ಸೋದರತೆ, ಅನುಕಂಪ, ಸತ್ಯ ಮತ್ತು ಅಹಿಂಸೆಯ ಐದು ಸೂತ್ರಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ತನ್ನ ಅಂತ್ಯದವರೆಗೂ ಯಾವುದೇ ಚ್ಯುತಿಬಾರದಂತೆ ನಡೆದುಕೊಂಡ ಮಹಾನ್ ವ್ಯಕ್ತಿ. ಅಂತಹ ಮಹಾನ್ ಚೇತನ ನಮ್ಮ ದೇಶದಲ್ಲಿ ಇನ್ನಷ್ಟು ಹೆಚ್ಚು ಕಾಲ ಬದುಕಬೇಕಿತ್ತು. ಆದರೆ, ಮತಾಂದರು ಬದುಕಲು ಬಿಡದೆ ಹತ್ಯೆಗೈದರು ಎಂದು ವಿಷಾದ ವ್ಯಕ್ತಪಡಿಸಿದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ದೊರೆಸ್ವಾಮಿ ಗಾಂಧಿಯ ದಾರಿಯಲ್ಲಿ ನಡೆಯುತ್ತಿದ್ದಾರೆ. ಕ್ವಿಟ್ ಇಂಡಿಯಾ ಚಳವಳಿಯಿಂದ ಆರಂಭಿಸಿ ಇದುವರೆಗೂ ನ್ಯಾಯಕ್ಕಾಗಿ, ಅನ್ಯಾಯದ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ. ಅವರ ಗುರಿ ಎಲ್ಲಿಯೂ ಬದಲಾಗಿಲ್ಲ. ನಮ್ಮ ಸರ್ಕಾರದ ವಿರುದ್ಧವೂ ಟೀಕೆ ಮಾಡುತ್ತಾರೆ. ಆದರೆ, ಅದನ್ನು ನಾನು ಉದ್ದೇಶಪೂರ್ವಕವಲ್ಲ ಎಂದು ನಂಬಿದ್ದೇನೆ. ಅಲ್ಲದೆ, ಅವರ ಟೀಕೆಗಳನ್ನು ನಮ್ಮ ಮುಂದಿನ ನಡೆಯ ಮಾರ್ಗದರ್ಶನವೆಂದು ಭಾವಿಸಿದ್ದೇನೆ ಎಂದು ಹೇಳಿದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ದೊರೆಸ್ವಾಮಿ ಮಾತನಾಡಿ, ದೇಶದಲ್ಲಿ ಹಿಂಸೆ, ಅಸಹಿಷ್ಣುತೆ ಜಾಸ್ತಿಯಾಗುತ್ತಿದ್ದು, ಭಯದ ವಾತಾವರಣ ನಿರ್ಮಾಣವಾಗುತ್ತಿದೆ ಎಂದರು.

ಸಚಿವರಾದ ರಾಮಲಿಂಗಾರೆಡ್ಡಿ, ಕೆ.ಜೆ ಜಾರ್ಜ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಡಾ.ಪಿ.ಎಸ್. ಹರ್ಷ, ನಿವೃತ್ತ ಹೈಕೋರ್ಟ್ ನ್ಯಾ. ಎಚ್.ಎನ್. ನಾಗಮೋಹನ್ ದಾಸ್ ಮತ್ತಿತರರಿದ್ದರು.

ಉದಯವಾಣಿ ಬೆಂಗಳೂರು
ಮಂಗಳವಾರ, ಅಕ್ಟೋಬರ್ 3, 2017

ಭ್ರಷ್ಟಾಚಾರ ನಿರ್ಮೂಲನೆಗೆ ಅರೆಮನಸ್ಸಿನ ಧೋರಣೆ

▫ ರಾಜ್ಯ ಸರ್ಕಾರ ತೃಪ್ತಿಕರವಾಗಿ ಕೆಲಸ ಮಾಡಿಲ್ಲ ▫ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಟೀಕೆ

ಬೆಂಗಳೂರು: 'ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ರಾಜ್ಯ ಸರ್ಕಾರ ಅರೆಮನಸ್ಸಿನ ಧೋರಣೆ ಹೊಂದಿದೆ,' ಎಂದು ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಟೀಕಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಸೋಮವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಹಾತ್ಮಗಾಂಧಿ ಸೇವಾ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, 'ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ಸರ್ಕಾರ ತೃಪ್ತಿಕರ ಕೆಲಸ ಮಾಡಿಲ್ಲ. ಭ್ರಷ್ಟಾಚಾರವನ್ನು ಬುಡಸಮೇತ ಕಿತ್ತುಹಾಕಬೇಕು,' ಎಂದು ಆಗ್ರಹಿಸಿದರು.

'ಧರ್ಮವನ್ನು ರಾಜಕೀಯದಲ್ಲಿ ಬೆರೆಸುವ ಪ್ರಯತ್ನ ಮಾಡಬೇಡಿ. ಇದೊಂದು ಮಹಾ ಅಪರಾಧ. ಹಾಗೆಯೇ ಸರ್ಕಾರಗಳು ಮಠಕ್ಕೆ, ಮಠಾಧೀಶರಿಗೆ ಹಣ ನೀಡುವುದನ್ನು ನಿಲ್ಲಿಸಬೇಕು. ಚುನಾವಣೆಯಲ್ಲಿ ಹಣ, ಹೆಂಡ ಹಂಚುವುದನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ಗಾಂಧೀಜಿಯವರ ಆಶಯಕ್ಕೆ ತಕ್ಕಂತೆ ಸರ್ಕಾರ ನಡೆದುಕೊಳ್ಳಬೇಕು ಹಾಗೂ ಜನರು ಗಾಂಧೀಜಿಯ ಹಾದಿಯಲ್ಲೇ ಸಾಗುವ ಪ್ರಯತ್ನ ಮಾಡಬೇಕು,' ಎಂದರು.

'ದೇಶಾದ್ಯಂತ ಹಿಂಸೆ ಹೆಚ್ಚಾಗುತ್ತಿದೆ. ಹಿಂಸೆಯೇ ಅಸಹಿಷ್ಣುತೆಗೆ ಕಾರಣವಾಗುತ್ತಿದೆ. ಹಿಂಸಾ ಪ್ರವೃತ್ತಿ ರಾಜಕೀಯ ವಲಯಕ್ಕೂ ವಿಸ್ತಾರವಾಗಿದೆ. ಮಂಗಳೂರಿನ ಘಟನೆ ಸಂಪೂರ್ಣ ರಾಜಕೀಯ ಪ್ರೇರಿತವಾಗಿದ್ದು, ಕಾನೂನು ಸುವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಇನ್ನಷ್ಟು ಕಠಿಣ ಕ್ರಮ ತೆಗೆದುಕೊಳ್ಳಬೇಕು,' ಎಂಬ ದೊರೆಸ್ವಾಮಿ ಅವರು ಸಲಹೆ ನೀಡಿದರು.

'ಧರ್ಮಾಚರಣೆಯಿಂದ ಹಿಂಸಾಚಾರ ಹೆಚ್ಚಾಗುತ್ತಿದೆ. ಗೌರಿ ಲಂಕೇಶ್ ಹತ್ಯೆಯ ಪ್ರಕರಣವನ್ನು ಸರ್ಕಾರ ಎಲ್ಲಾ ರೀತಿಯಿಂದಲೂ ತನಿಖೆ ನಡೆಸುತ್ತಿದೆ. ಈ ಹಿನ್ನೆಲೆಯಲ್ಲೂ ತನಿಖೆಯಾಗಬೇಕು. ಧರ್ಮಾಚರಣೆ ಅತಿಯಾದರೆ, ಸಿವಿಲ್ ವಾರ್ ಉಂಟಾಗಬಹುದು. ಗೂಂಡಾಗಳು ಅಧಿಕಾರಕ್ಕೆ ಬರುವ ಸಾಧ್ಯತೆಯೂ ಇದೆ. ಇದನ್ನೆಲ್ಲ ಈಗಿಂದಲೇ ಚಿವುಟಿ ಹಾಕಬೇಕು,' ಎಂದು ಅಭಿಪ್ರಾಯಪಟ್ಟರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, 'ಗಾಂಧೀಜಿ ಇನ್ನು ಹೆಚ್ಚು ಕಾಲ ಬದುಕಬೇಕಿತ್ತು. ಆದರೆ, ಮತಾಂಧ ಶಕ್ತಿ ಅವರನ್ನು ಬದುಕುಲು ಬಿಟ್ಟಿಲ್ಲ. ಅದೇ ಶಕ್ತಿ ಇಂದು ಸಮಾಜದಲ್ಲಿ ದ್ವೇಷ ಅಸೂಯೆ ಸೃಷ್ಟಿಸುತ್ತಿದೆ. ಮನುಷ್ಯ ಮನುಷ್ಯನ ನಡುವೆ ಗೋಡೆ ನಿರ್ಮಾಣ ಮಾಡುವುದು ಅತ್ಯಂತ ಅಮಾನವೀಯ. ವೋಟು ಅಥವಾ ಇನ್ಯಾವುದೇ ಕಾರಣಕ್ಕೂ ದ್ವೇಷದ ಕಿಚ್ಚು ಹಚ್ಚಿಸುವ ಕೆಲಸ ಯಾರೂ ಮಾಡಬಾರದು ಎಂದರು.

ಗೃಹ ಸಚಿವ ರಾಮಲಿಂಗಾರೆಡ್ಡಿ, ಬೆಂಗಳೂರು ಅಭಿವೃದ್ಧಿ ಸಚಿವ ಕೆ.ಜೆ.ಜಾರ್ಜ್, ಪ್ರಶಸ್ತಿ ಸಮಿತಿ ಅಧ್ಯಕ್ಷ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್, ಇಲಾಖೆ ನಿರ್ದೇಶಕ ಡಾ.ಪಿ.ಎಸ್. ಹರ್ಷ ಮೊದಲಾದವರು ಉಪಸ್ಥಿತರಿದ್ದರು.





ರವೀಂದ್ರ ಕಲಾಕ್ಷೇತ್ರದಲ್ಲಿ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಅವರಿಗೆ ಸಿಎಂ ಸಿದ್ದರಾಮಯ್ಯ ಅವರು ಮಹಾತ್ಮಗಾಂಧಿ ಸೇವಾ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು(ಎಡಚಿತ್ರ). ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಹಾಗೂ ಸಿಎಂ ಸಿದ್ದರಾಮಯ್ಯ ಆಪ್ತ ಸಮಾಲೋಚನೆ.

ಖಾದಿಗೆ ಬ್ರಿಟೀಷರೂ ತೆರಿಗೆ ವಿಧಿಸಿರಲಿಲ್ಲ

'ಬ್ರಿಟಿಷರು ಭಾರತವನ್ನು ಆಳುತ್ತಿದ್ದ ಸಂದರ್ಭದಲ್ಲಿಯೂ ಖಾದಿ ಉತ್ಪನ್ನಗಳ ಮೇಲೆ ಯಾವುದೇ ತೆರಿಗೆ ವಿಧಿಸಿರಲಿಲ್ಲ. ನಮ್ಮ ಶತ್ರುಗಳೇ ಖಾದಿಯ ಮೇಲೆ ತೆರಿಗೆ ಹಾಕಿಲ್ಲ ಎಂದಾದ ಮೇಲೆ ಕೇಂದ್ರ ಸರ್ಕಾರವು ಖಾದಿ ಉತ್ಪನ್ನವನ್ನು ಜಿಎಸ್‌ಟಿ ವ್ಯಾಪ್ತಿಗೆ ತಂದಿರುವುದು ಸರಿಯಲ್ಲ. ಹಾಗೆಯೇ ತಿನ್ನುವ ಪದಾರ್ಥಗಳನ್ನು ಜಿಎಸ್‌ಟಿಯಿಂದ ಹೊರಗಿಡಬೇಕು,' ಎಂದು ಸ್ವಾತಂತ್ರ್ಯ ಹೋರಾಟಗಾರ ಚ್.ಎಸ್.ದೊರೆಸ್ವಾಮಿ ಒತ್ತಾಯಿಸಿದರು.

❝ ರಾಜ್ಯ ಸರ್ಕಾರ ಮಹಾತ್ಮಗಾಂಧಿ ಸೇವಾ ಪ್ರಶಸ್ತಿಯ ಜತೆಗೆ 5 ಲಕ್ಷ ನಗದು ನೀಡಿದೆ. ಅದರಲ್ಲಿ 1 ಲಕ್ಷವನ್ನು ಭೂ ಒತ್ತುವರಿ ತೆರವು ಹೋರಾಟ ಸಮಿತಿಗೆ, ಇನ್ನೊಂದು ಲಕ್ಷವನ್ನು ಜಯದೇವ ಹೃದ್ರೋಗ ಆಸ್ಪತ್ರೆಗೆ ಹಾಗೂ ಉಳಿದ ಮೂರು ಲಕ್ಷವನ್ನು ಮಡದಿಗೆ ನೀಡಲಿದ್ದೇನೆ.

● ಎಚ್.ಎಸ್.ದೊರೆಸ್ವಾಮಿ, ಸ್ವಾತಂತ್ರ್ಯ ಹೋರಾಟಗಾರ

ಉದಯವಾಣಿ ಬೆಂಗಳೂರು
ಮಂಗಳವಾರ, ಅಕ್ಟೋಬರ್ 3, 2017

'ಬಯಲು ಬಹಿರ್ದೆಸೆ ಮುಕ್ತ ರಾಜ್ಯ ಗುರಿ'

ಗಾಂಧಿ ಕುರಿತು ರಾಜ್ಯದಲ್ಲಿ ನಡೆದಿರುವ ಕೆಲಸಗಳನ್ನು ಪುಸ್ತಕ ರೂಪದಲ್ಲಿ ಹೊರ ತರಲು ಸಿದ್ಧತೆ

ಬೆಂಗಳೂರು: '2018ರ ಮಾರ್ಚ್ 31ರೊಳಗೆ ರಾಜ್ಯವನ್ನು ಬಯಲು ಬಹಿರ್ದೆಸೆ ಮುಕ್ತ ಮಾಡುವ ಗುರಿ ಹೊಂದಲಾಗಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಎಚ್.ಕೆ.ಪಾಟೀಲ್ ತಿಳಿಸಿದ್ದಾರೆ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೇರಿ ವಿವಿಧ ಸಂಘ- ಸಂಸ್ಥೆಗಳ ಸಹಯೋಗದಲ್ಲಿ ನಗರದ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಗಾಂಧಿ ಜಯಂತಿ ಹಾಗೂ ವಿಶ್ವ ಅಹಿಂಸಾ ದಿನಾಚರಣೆ ಮತ್ತು ಜಯಶ್ರೀ ಟ್ರಸ್ಟ್ ಪುರಸ್ಕಾರ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

'ರಾಜ್ಯ ಸರ್ಕಾರ ಬಯಲು ಬಹಿರ್ದೆಸೆ ಮುಕ್ತ ಗ್ರಾಮಗಳನ್ನು ಮಾಡುವ ಯೋಜನೆ ಕೈಗೊಂಡಾಗ ಗಾಂಧಿವಾದಿ ಹೊ. ಶ್ರೀನಿವಾಸಯ್ಯ ಅವರು ಅತೀವ ಸಂತಸ ವ್ಯಕ್ತಪಡಿಸಿದ್ದರು. ಸ್ವಾತಂತ್ರ್ಯಪೂರ್ವದಲ್ಲೇ ಗಾಂಧೀಜಿಯವರು ಶೌಚಾಲಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದ್ದರ ಕುರಿತು ದಾಖಲೆಗಳ ಸಹಿತ ಅವರು ಮಾಹಿತಿ ನೀಡಿದ್ದರು. ಇಂದು ಅವರಿದ್ದಿದ್ದರೆ ಹೆಚ್ಚು ಸಂತಸಪಡುತ್ತಿದ್ದರು' ಎಂದು ಸ್ಮರಿಸಿದ ಸಚಿವರು, 'ಪ್ರಸ್ತುತ ಸುಮಾರು 6 ಜಿಲ್ಲೆಗಳ 51 ಗ್ರಾಮ ಪಂಚಾಯಿತಿಯ 1934 ಗ್ರಾಮಗಳು ಬಯಲು ಬಹಿರ್ದೆಸೆ ಮುಕ್ತವಾಗಿದ್ದು, 2018ರ ಮಾರ್ಚ್ ಅಂತ್ಯದೊಳಗೆ ಈ ಯೋಜನೆ ಪೂರ್ಣಗೊಳಿಸುತ್ತೇವೆ' ಎಂದರು.

ಯುವಜನತೆ ಗಾಂಧೀಜಿ ಮತ್ತು ಶಾಸ್ತ್ರೀ ಅವರ ತತ್ವಾದರ್ಶ, ವಿಚಾರಗಳನ್ನು ಅರ್ಥೈಸಿಕೊಂಡು ಬದುಕಿನಲ್ಲಿ ಸಾರ್ಥಕತೆ ಹೊಂದಬೇಕು. ಗಾಂಧೀಜಿ ಕಂಡ ಕನಸು ನನಸಾಗಲು ಅವರ ಆದರ್ಶಗಳನ್ನು ಅಳವಡಿಸಿಕೊಂಡು ಸನ್ಮಾರ್ಗದಲ್ಲಿ ನಡೆಯಬೇಕು. ಈ ನಿಟ್ಟಿನಲ್ಲಿ ಗಾಂಧೀಜಿ ಕುರಿತು ಇಡೀ ರಾಜ್ಯದಲ್ಲಿ ನಡೆದಿರುವ ಕೆಲಸಗಳನ್ನು ಪುಸ್ತಕ ರೂಪದಲ್ಲಿ ಹೊರ ತರಲು ಗ್ರಾಮೀಣಾಭಿವೃದ್ಧಿ ಇಲಾಖೆ ಸಿದ್ಧವಿದ್ದು, ಕಾರ್ಯ ಆರಂಭಿಸುವಂತೆ ಗಾಂಧಿ ಸ್ಮಾರಕ ನಿಧಿ, ವಾರ್ತಾ ಇಲಾಖೆಗೆ ಸೂಚಿಸಿದರು.

ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಮಾತನಾಡಿ, 'ನಿಜವಾದ ಸ್ವರಾಜ್ಯ ಬರಬೇಕೆಂದರೆ ಗಾಂಧೀಜಿಯವರ ಆಶಯದಂತೆ ಸನ್ಮಾರ್ಗದಲ್ಲಿ ನಡೆಯಬೇಕು. ಸ್ವಾತಂತ್ರ್ಯದ ಫಲ ಸಮಾಜದ ಕಟ್ಟಕಡೆಯವರೆಗೂ ತಲುಪಬೇಕು. ದೇಶದಲ್ಲಿ ಕಾನೂನು ಇರಲೇಬಾರದಷ್ಟು, ನಮ್ಮ ನಡತೆಯಲ್ಲಿ ಬದಲಾವಣೆಯಾಗಬೇಕು. ಶ್ರೀಮಂತರು, ಬಡವರ ನಡುವೆ ಅಂತರವಿಲ್ಲವಂತಾದಾಗ ಸುಖಿ ಸಮಾಜ ನಿರ್ಮಾಣವಾಗುತ್ತದೆ' ಎಂದು ಅಭಿಪ್ರಾಯಪಟ್ಟರು.

ಪ್ರಾಸ್ತಾವಿಕವಾಗಿ ಮಾತನಾಡಿದ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ, 'ಡಿಜಿಟಲ್ ಗಾಂಧಿಭವನ ನಿರ್ಮಾಣ ಮತ್ತು 150 ಗಾಂಧಿವಿಚಾರ ಕುರಿತ ಪುಸ್ತಕ ಪ್ರಕಟಣೆಗೆ ನಿರ್ಧರಿಸಲಾಗಿದ್ದು, ಸರ್ಕಾರದಿಂದ ಅಗತ್ಯ ನೆರವು ಕೋರಲಾಗಿದೆ. ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ.ಪಾಟೀಲ್ ಮೂಲಕ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಗಿದೆ' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ನಾಡೋಜ ಡಾ.ಪಾಟೀಲ ಪುಟ್ಟಪ್ಪ, ವಾರ್ತಾ ಇಲಾಖೆ ನಿರ್ದೇಶಕ ಡಾ.ಪಿ.ಎಸ್.ಹರ್ಷ, ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಎಚ್.ಸಿ.ರುದ್ರಪ್ಪ, ಮಾಜಿ ಶಾಸಕ ಡಿ.ಆರ್ .ಪಾಟೀಲ್ ಮತ್ತಿತರರು ಪಾಲ್ಗೊಂಡಿದ್ದರು.



ಬೆಂಗಳೂರಿನ ಗಾಂಧಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿವ ಎಚ್.ಕೆ. ಪಾಟೀಲ್, ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ, ಪಾಟೀಲ್ ಪುಟ್ಟಪ್ಪ ಇತರರಿದ್ದರು.

ಗಾಂಧೀಜಿ ಮರೆತರೆ ದೇಶಕ್ಕೆ ಭವಿಷ್ಯವಿಲ್ಲ

ಬೆಂಗಳೂರು: ಮಹಾತ್ಮ ಗಾಂಧೀಜಿ ಅವರನ್ನು ಮರೆತರೆ ದೇಶಕ್ಕೆ ಒಳ್ಳೆಯ ಭವಿಷ್ಯವಿಲ್ಲ. ಹಾಗೆಯೇ ಲಾಲ್ ಬಹದ್ದೂರ್ ಶಾಸ್ತ್ರೀ ಅವರು ಇನ್ನೂ ಹೆಚ್ಚು ದಿನ ಬದುಕಿದ್ದರೆ ದೇಶದಲ್ಲಿ ಒಳ್ಳೆಯ ಮೌಲ್ಯ ಸ್ಥಾಪನೆಯಾಗುತ್ತಿತ್ತು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀ ಅವರ ಜನ್ಮ ದಿನಾಚರಣೆ ಪ್ರಯುಕ್ತ ಸೋಮವಾರ ವಿಧಾನ ಸೌಧದ ಆವರಣದಲ್ಲಿರುವ ಅವರಿಬ್ಬರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಗಾಂಧೀಜಿ ಅವರ ತ್ಯಾಗ, ಬಲಿದಾನ ಶ್ಲಾಘನೀಯ ಹಾಗೂ ಯುದ್ಧ ಮಾಡದೇ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಜಗತ್ತಿನ ಮಹಾನ್ ವ್ಯಕ್ತಿ ಎಂದು ಬಣ್ಣಿಸಿದರು.

ಗಾಂಧಿ ಸ್ಮರಣೆ ಅವಶ್ಯ: ಗಾಂಧೀಜಿ ನಾಯಕತ್ವದಲ್ಲಿ ಅನೇಕರು ಸ್ವಾತಂತ್ರ್ಯ ಹೋರಾಟದಲ್ಲಿ, ಚಳವಳಿಯಲ್ಲಿ ಸಕ್ರಿಯವಾಗಿ ಭಾಗ ವಹಿಸಿದ್ದರು. ಅಹಿಂಸಾ ತತ್ವದ ಮೂಲಕ ಗಾಂಧೀಜಿ ತಂದುಕೊಟ್ಟಿರುವ ಸ್ವಾತಂತ್ರ್ಯದ ಫಲವನ್ನು ನಾವೆಲ್ಲರೂ ಇಂದು ಸವಿಯುತ್ತಿದ್ದೇವೆ. ಗಾಂಧೀಜಿ ಅವರನ್ನು ತಿಳಿದುಕೊಳ್ಳುವುದರ ಜತೆಗೆ ಸ್ಮರಣೆಯನ್ನೂ ಮಾಡಬೇಕು ಎಂದು ಹೇಳಿದರು.

ಗಾಂಧೀಜಿಯವರು ದೇಶಕ್ಕೆ ಮಾತ್ರವಲ್ಲ ವಿಶ್ವಕ್ಕೆ ನಾಯಕರು. ಗಾಂಧೀಜಿಯವರಲ್ಲಿ ವಿಶ್ವ ನಾಯಕನ ಎಲ್ಲ ಗುಣ, ತತ್ವ ಹಾಗೂ ಆದರ್ಶ ಅಡಗಿತ್ತು. ಈ ಬಗ್ಗೆ ಅನೇಕರು ತಮ್ಮ ಪುಸ್ತಕ, ಲೇಖನದಲ್ಲಿ ವರ್ಣಿಸಿದ್ದಾರೆ. ಅಂತಹ ಮಹಾನ್ ಚೇತನಕ್ಕೆ ನಾವೆಲ್ಲರೂ ಗೌರವ ಸಲ್ಲಿಸಲೇಬೇಕು ಎಂದರು.


ಭಾರತಕ್ಕೆ ಸ್ವಾತಂತ್ರ್ಯ ಬಂದ ಕೆಲವೇ ತಿಂಗಳಲ್ಲಿ ಮತಾಂಧನ ಗುಂಡಿಗೆ ಗಾಂಧೀಜಿ ಬಲಿಯಾಗಿದ್ದರು. ಭಾರತ ವಿಭಜನೆ ಆಗಬಾರದು, ಎಲ್ಲರೂ ಒಂದೇ ದೇಶದಲ್ಲಿರಬೇಕು. ಭಾರತ ಮತ್ತು ಪಾಕಿಸ್ತಾನ ಎರಡು ಭಾಗ ಆಗಬಾರದು ಎಂದು ಗಾಂಧೀಜಿ ಹೋರಾಟ ಮಾಡಿದ್ದರು. ದೇಶದ ಇಂದಿನ ರಾಜಕಾರಣಕ್ಕೆ ಗಾಂಧೀಜಿಯವರ ಮಾರ್ಗದರ್ಶನ ಅವಶ್ಯಕ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ತತ್ವಕ್ಕೆ ಬದ್ಧರಾಗಿದ್ದ ಶಾಸ್ತ್ರೀ: ಗಾಂಧೀಜಿಯವರು ಹುಟ್ಟಿದ ದಿನವೇ ಲಾಲ್ ಬಹದ್ದೂರ್ ಶಾಸ್ತ್ರೀ ಹುಟ್ಟಿದ್ದರು. ಅತ್ಯಂತ ಕಡಿಮೆ ಅವಧಿಗೆ ದೇಶದ ಪ್ರಧಾನಿಯಾದರೂ, ಪ್ರಾಮಾಣಿಕವಾಗಿ ದೇಶಕ್ಕೆ ಸೇವೆ ಸಲ್ಲಿಸಿದ್ದರು. ಅವರು ಇನ್ನೂ ಹೆಚ್ಚು ದಿನ ಬದುಕಿದ್ದರೆ ಒಳ್ಳೆಯ ಮೌಲ್ಯಗಳು ದೇಶದಲ್ಲಿ ಸ್ಥಾಪನೆಯಾಗುತ್ತಿದ್ದವು. ಅವರು ನಂಬಿರುವ ಮೌಲ್ಯಕ್ಕೆ, ತತ್ವಕ್ಕೆ ಬದ್ಧರಾಗಿ ಜೀವನ ನಡೆಸಿದ್ದರು ಎಂಬುದನ್ನು ನೆನಪಿಸಿದರು.

ಶಾಸ್ತ್ರೀಯವರು ದೇಶಕ್ಕೆ ನೀಡಿದ್ದ ಜೈ ಜವಾನ್, ಜೈ ಕಿಸಾನ್ ಘೋಷಣೆಯು ಜನರಲ್ಲಿ ರಾಷ್ಟ್ರಾಭಿಮಾನ ಮೂಡಿಸುವುದರ ಜತೆಗೆ ರೈತರ ಮತ್ತು ಸೈನಿಕರ ಬಗ್ಗೆ ಸಾಮಾನ್ಯ ಜನರಲ್ಲೂ ಗೌರವ ಮೂಡುವಂತೆ ಮಾಡಿದೆ. ದೇಶಕ್ಕೆ ರೈತರು ಹಾಗೂ ಸೈನಿಕರು ಎಷ್ಟು ಅವಶ್ಯಕ ಎಂಬುದನ್ನು ಅಂದೇ ಅರಿತಿದ್ದರು ಎಂಬುದನ್ನು ವಿವರಿಸಿದರು.

ವಿಜಯ ಕರ್ನಾಟಕ ಮಂಗಳವಾರ,3 ಅಕ್ಟೋಬರ್ 2017,

ಗಾಂಧಿ ಮ್ಯೂಸಿಯಂಗೆ 10 ಕೋಟಿ: ಎಚ್. ಕೆ. ಪಾಟೀಲ್



ಬೆಂಗಳೂರಿನಲ್ಲಿ ಸೋಮವಾರ ನಡೆದ ವಿಶ್ವ ಅಹಿಂಸಾ ದಿನಾಚರಣೆಯಲ್ಲಿ ಸಚಿವ ಎಚ್ ಕೆ ಪಾಟೀಲ್, ದೊರೆಸ್ವಾಮಿ, ಪಾಟೀಲ್ ಪುಟ್ಟಪ್ಪ ಮತ್ತಿತರರಿದ್ದರು.

ವಿಕ ಸುದ್ದಿಲೋಕ ಬೆಂಗಳೂರು

ಗಾಂಧಿ ಭವನದಲ್ಲಿ 'ಇ-ಗಾಂಧಿ ಮಲ್ಟಿ ಮೀಡಿಯಾ ಮ್ಯೂಸಿಯಂ' ನಿರ್ಮಿಸಲು 10 ಕೋಟಿ ಅನುದಾನ ಒದಗಿಸುವುದಾಗಿ ಸಚಿವ ಎಚ್.ಕೆ. ಪಾಟೀಲ್ ಭರವಸೆ ನೀಡಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ಗಾಂಧಿ ಜಯಂತಿ ಅಂಗವಾಗಿ ಗಾಂಧಿ ಭವನದಲ್ಲಿ ಆಯೋಜಿಸಿದ್ದ 'ವಿಶ್ವ ಅಹಿಂಸಾ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ ಸೋಮವಾರ ಅವರು ಮಾತನಾಡಿದರು.

ಅನುದಾನ ಹಾಗೂ ಇತರೆ ಬೇಡಿಕೆಗಳ ಸಂಬಂಧ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೊಡೇ ಪಿ.ಕೃಷ್ಣ ಹಾಗೂ ಸದಸ್ಯರು ಸಲ್ಲಿಸಿದ ಮನವಿಗೆ ಸ್ಪಂದಿಸಿದ ಸಚಿವರು, "ಸಿಎಂ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ, ಶೀಘ್ರದಲ್ಲೇ ಅನುದಾನ ಬಿಡುಗಡೆ ಮಾಡಲಾಗುವುದು," ಎಂದು ಭರವಸೆ ನೀಡಿದರು.

ಹಿರಿಯ ಸಾಹಿತಿ ಪಾಟೀಲ್ ಪುಟ್ಟಪ್ಪ ಮಾತನಾಡಿ, "ಗಾಂಧಿ ತತ್ವಾದರ್ಶಗಳನ್ನು ಅನುಸರಿಸುವವರ ಸಂಖ್ಯೆ ವಿರಳವಾಗುತ್ತಿದೆ. ಟಿಪ್ಪು ಸುಲ್ತಾನ್ ತನ್ನ ಅಧಿಕಾರಾವಧಿಯಲ್ಲಿ ಮದ್ಯಪಾನ ನಿಷೇಧಿಸಿದ್ದನು. ಸತ್ಯ ವಿಚಾರಗಳನ್ನು ತಿಳಿಯದ ಸಂಶೋಧಕರೊಬ್ಬರು ಟಿಪ್ಪುವನ್ನು ಟೀಕಿಸುತ್ತಾರೆ. ಅಗತ್ಯ ವಿಚಾರಗಳ ಬಗ್ಗೆ ಸಂಶೋಧನೆ ಮಾಡದೇ, ಅನಗತ್ಯ ಸಂಗತಿಗಳ ಬಗ್ಗೆ ಸಂಶೋಧನೆ ಮಾಡುತ್ತಾರೆ," ಎಂದು ಪಾಟೀಲ್ ಪುಟ್ಟಪ್ಪ ಟೀಕಿಸಿದರು.

ಕನ್ನಡಪ್ರಭ

ಮಂಗಳವಾರ 3.10.2017
ಬೆಂಗಳೂರು

ದೊರೆಸ್ವಾಮಿಗೆ ₹5 ಲಕ್ಷ ಗಾಂಧಿ ಪ್ರಶಸ್ತಿ

ಪ್ರಶಸ್ತಿ ಮೊತ್ತದಲ್ಲಿ 2 ಲಕ್ಷ ರು. ದೇಣಿಗೆ, 3 ಲಕ್ಷ ರು. ಪತ್ನಿಗೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಗಾಂಧಿ ಜಯಂತಿ ಅಂಗವಾಗಿ ರಾಜ್ಯ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೀಡುವ 2017ನೇ ಸಾಲಿನ 'ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ'ಯನ್ನು ಸ್ವಾತಂತ್ರ್ಯ ಹೋರಾಟಗಾರ ಡಾ.ಎಚ್.ಎಸ್.ದೊರೆಸ್ವಾಮಿ ಅವರಿಗೆ ಪ್ರದಾನ ಮಾಡಲಾಯಿತು.

ರವೀಂದ್ರ ಕಲಾಕ್ಷೇತ್ರದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಡಾ.ಎಚ್.ಎಸ್.ದೊರೆಸ್ವಾಮಿ ಅವರಿಗೆ ಪ್ರಶಸ್ತಿ ಫಲಕ ಹಾಗೂ 5 ಲಕ್ಷ ಮೊತ್ತದ ಚೆಕ್ ನೀಡುವ ಮೂಲಕ ಗೌರವಿಸಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಎಚ್.ಎಸ್.ದೊರೆಸ್ವಾಮಿ ಅವರು, ಈ ಪ್ರಶಸ್ತಿಯು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ನನ್ನ ಸಮಕಾಲಿನ ಹೋರಾಟಗಾರರಿಗೆ ಸಲ್ಲುತ್ತದೆ. ಪ್ರಶಸ್ತಿಯ ಮೊತ್ತ 5 ಲಕ್ಷ ರು.ಗಳ ಪೈಕಿ 1 ಲಕ್ಷವನ್ನು ಹೋರಾಟ ಸಮಿತಿಗಳಿಗೆ ನೀಡುತ್ತೇನೆ. 1 ಲಕ್ಷವನ್ನು ಜಯದೇವ ಆಸ್ಪತ್ರೆಗೆ ಹಾಗೂ ಉಳಿದ 3 ಲಕ್ಷವನ್ನು ನನ್ನ ಮಡದಿಗೆ ನೀಡುತ್ತೇನೆ ಎಂದು ಹೇಳಿದರು.



ದೊರೆಸ್ವಾಮಿ ಅವರಿಗೆ ಗಾಂಧಿ ಪ್ರಶಸ್ತಿ ಪ್ರಧಾನ

ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ಆ ಮತಾಂಧ ಶಕ್ತಿಗಳು ಜಾತಿಗಳ, ಧರ್ಮಗಳ ನಡುವೆ ದ್ವೇಷ ಬಿತ್ತುವ ಕೆಲಸ ಮಾಡುತ್ತಿವೆ. ಮನುಷ್ಯರ ನಡುವೆ ಜಾತಿ, ಧರ್ಮ ಅಥವಾ ವೋಟ್ ಬ್ಯಾಂಕ್‌ಗಾಗಿ ಗೋಡೆ ಹಾಕುವುದು ಸರಿಯಲ್ಲ. ಯಾರು ಆ ಕೆಲಸ ಮಾಡಬಾರದು ಎಂದು ಹೇಳಿದರು.

ಸಂಜೆವಾಣಿ

ಸೋಮವಾರ, ಅಕ್ಟೋಬರ್ 2, 2017

2018ರ ವೇಳೆಗೆ ರಾಜ್ಯ ಬಯಲು ಶೌಚ ಮುಕ್ತ



ನಗರದ ಗಾಂಧಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಾಪು ಪ್ರಪಂಚ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು. ಸಚಿವ ಎಚ್.ಕೆ.ಪಾಟೀಲ್, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಮತ್ತಿತರರಿದ್ದರು.

ಬೆಂಗಳೂರು, ಅ. 2– ರಾಜ್ಯದಲ್ಲಿ 2018 ಮಾರ್ಚ್ 31ರೊಳಗೆ ಬಯಲು ಬಹಿರ್ದೆಸೆ ಮುಕ್ತ ಕರ್ನಾಟಕ ರಾಜ್ಯವನ್ನಾಗಿ ಮಾಡಲು ಸಮರೋಪಾದಿಯಲ್ಲಿ ಶೌಚಾಲಯಗಳನ್ನು ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಹೆಚ್. ಕೆ. ಪಾಟೀಲ್ ಅವರು, ಇಂದು ಇಲ್ಲಿ ತಿಳಿಸಿದರು.

ನಗರದ ಗಾಂಧಿ ಭವನದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ವಿವಿಧ ಇಲಾಖೆಗಳೊಂದಿಗೆ ಆಯೋಜಿಸಲಾಗಿದ್ದ ಗಾಂಧಿ ಜಯಂತಿ ಹಾಗೂ ವಿಶ್ವ ಅಹಿಂಸಾ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

ರಾಜ್ಯದಲ್ಲಿ 33 ಸಾವಿರ ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿದ್ದು, ಆ ಗ್ರಾಮಗಳು ಇಂದಿನಿಂದ ಬಯಲು ಬಹಿರ್ದೆಸೆ ಮುಕ್ತಗೊಂಡಿವೆ.

ಇಂದಿರಾ ಗಾಂಧಿ ಜಯಂತಿ ದಿನದಂದು ಇನ್ನೂ 8 ಸಾವಿರ ಗ್ರಾಮಗಳು ಬಹಿರ್ದೆಸೆ ಮುಕ್ತವಾಗಲಿವೆ ಎಂದರು.

ಮಹಾತ್ಮ ಗಾಂಧಿಯವರು ಸ್ವಚ್ಛತೆ, ನಿರ್ಮಲ ಗ್ರಾಮಗಳ ಕನಸು ಕಂಡಿದ್ದರು.

ಅವರ ಕನಸು ನನಸಾಗಿಸುವಲ್ಲಿ ಸರ್ಕಾರ ಕಾರ್ಯಕ್ರಮಗಳನ್ನು ರೂಪಿಸಿದೆ ಎಂದರು.

ಗಾಂಧಿ ಭವನದ ಆವರಣದಲ್ಲಿ 10 ಕೋಟಿ ರೂ. ವೆಚ್ಚದಲ್ಲಿ ಇ–ಗಾಂಧಿ ಮ್ಯೂಸಿಯಂ ಮಾಡುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಸಮಾಲೋಚಿಸಿದ್ದೇನೆ. ಅಗತ್ಯಬಿದ್ದಲ್ಲಿ ನಿಯೋಗವನ್ನು ಕೊಂಡೊಯ್ದು ಮುಖ್ಯಮಂತ್ರಿಗಳಲ್ಲಿ ಮನವರಿಕೆ ಮಾಡಿಕೊಡಲಿದ್ದೇನೆ ಎಂದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಅವರು ಮಾತನಾಡಿ, ಸರ್ಕಾರಕ್ಕೆ ಎಷ್ಟು ಕಾನೂನುಗಳು ಇದೆಯೋ ಎಂಬುದು ಗೊತ್ತಿಲ್ಲ. ಕಾನೂನುಗಳು ದೇಹದಲ್ಲಿ ಮಲ ಇದ್ದಷ್ಟು ಇರಬೇಕು. ಆದರೆ ದೇಹವೆಲ್ಲಾ ಮಲವಾಗಬಾರದು ಎಂದು ಹೇಳಿದರು.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆ. ಆದರೆ ಅದರ ಫಲ ಎಲ್ಲರಿಗೂ ಸಿಗಬೇಕು. ದೇಶದಲ್ಲಿ ಆಸ್ಪತ್ರೆಗಳು, ನ್ಯಾಯಾಲಯಗಳು, ಪೊಲೀಸ್ ಠಾಣೆಗಳ ಸಂಖ್ಯೆ ಹೆಚ್ಚಾಗುವುದಷ್ಟೇ ದೇಶದ ಅಭಿವೃದ್ಧಿಯಲ್ಲ. ಇವುಗಳ ಸಂಖ್ಯೆ ಕಡಿಮೆಯಾಗಬೇಕು ಎಂದರು.

ಎಲ್ಲರಿಗೂ ನೆಮ್ಮದಿ ಸಿಗಬೇಕು ಎಂಬುದು ಗಾಂಧೀಜಿಯವರ ಕನಸು. ಆದರೆ ಸ್ವಾತಂತ್ರ್ಯ ಸಿಕ್ಕಿತಾದರೂ, ಮಿಕ್ಕಿದ್ದೆಲ್ಲಾ ಗೌಣವಾಗುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರು ಮಾತನಾಡಿ, ನಾವು ಸತ್ಯವನ್ನು ಬಳಸಬೇಕು ಎಂದು ಹೇಳಿದರು.

ಮಂತ್ರಿಗಳು, ಶಾಸಕರು ಹಾಗೂ ಗಾಂಧೀಜಿಯವರನ್ನು ಆರಾಧಿಸುವ ಹೆಚ್ಚಿನ ಮಂದಿಗೆ ಖಾದಿ ಬಟ್ಟೆಯ ಬಗ್ಗೆ ಒಲವು ಇಲ್ಲ. ಮೇಲ್ನೋಟಕ್ಕೆ ಖಾದಿ ಸ್ವೆಟರ್, ಅಂತರಾಳದಲ್ಲಿ ಗಾಂಧಿ ತತ್ವವನ್ನು ಅನುಸರಿಸುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಗಾಂಧೀಜಿಯವರ ತತ್ವಾದರ್ಶಗಳನ್ನು ತಲುಪಿಸುವಲ್ಲಿ ಕೈಗೊಂಡಷ್ಟೂ ಕಾರ್ಯಕ್ರಮಗಳನ್ನು ಗುಜರಾತ್ ರಾಜ್ಯದ ಸರ್ಕಾರ ಕೂಡ ಕೈಗೊಂಡಿಲ್ಲ ಎಂದು ಹೇಳಿದರು.

ಟಿಪ್ಪು ಸುಲ್ತಾನ್ ಬಗ್ಗೆ ಕೆಲ ಇತಿಹಾಸ ಸಂಶೋಧಕರು ಟೀಕೆ ಮಾಡುತ್ತಾರೆ. ಎಲ್ಲರನ್ನೂ ಮುಸ್ಲಿಮರನ್ನಾಗಿ ಪರಿವರ್ತಿಸಿದ ಎಂದು ಆರೋಪಿಸಿದ್ದಾರೆ. ನಾವು ಕೃತಜ್ಞರಾಗಬಾರದು. ಅವನಿಗೆ ಕೃತಜ್ಞತೆಯಿಂದಿರಬೇಕು ಎಂದು ಹೇಳಿದರು.

ಪ್ರಾಸ್ತಾವಿಕ ಭಾಷಣ ಮಾಡಿದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೆ ಪಿ. ಕೃಷ್ಣ ಅವರು, 30 ದಿನಗಳಲ್ಲಿ ಗಾಂಧಿ ಭವನ ನಿರ್ಮಾಣ ಮಾಡುವ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಅದೇ ರೀತಿ 10 ಕೋಟಿ ರೂ. ವೆಚ್ಚದಲ್ಲಿ ಗಾಂಧಿ ಮ್ಯೂಸಿಯಂ ಅನ್ನು ಆರಂಭಿಸಲು ಉದ್ದೇಶಿಸಿದ್ದೇವೆ. ಇದಕ್ಕೆ ಸರ್ಕಾರ ಸಹಾಯ ಹಸ್ತ ಚಾಚಬೇಕು ಎಂದು ಮನವಿ ಮಾಡಿದರು.

ಈ ಸಂಜೆ

ಸೋಮವಾರ 02 ಅಕ್ಟೋಬರ್ 2017



ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಗಾಂಧಿ ಜಯಂತಿ ಹಾಗೂ ವಿಶ್ವ ಅಹಿಂಸಾ ದಿನಾಚರಣೆ ಕಾರ್ಯಕ್ರಮದಲ್ಲಿ 'ಬಾಪು ಪ್ರಪಂಚ' ವಿಶೇಷ ಸಂಚಿಕೆಯನ್ನು ಗ್ರಾಮೀಣಾಭಿವೃದ್ಧಿ ಸಚಿವ ಎಚ್.ಕೆ.ಪಾಟೀಲ್, ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ, ನಾಡೋಜ ಪಾಟೀಲ ಪುಟ್ಟಪ್ಪ ಲೋಕಾರ್ಪಣೆ ಮಾಡಿದರು. ವಾರ್ತಾ ಇಲಾಖೆ ನಿರ್ದೇಶಕ ಡಾ.ಪಿ.ಎಸ್.ಹರ್ಷ, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ.ವೂಡೆ ಪಿ.ಕೃಷ್ಣ, ವಾರ್ತಾ ಇಲಾಖೆಯ ಅಧಿಕಾರಿ ದಿನೇಶ್ ಮತ್ತಿತರರು ಹಾಜರಿದ್ದರು.


ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಗಾಂಧಿ ಜಯಂತಿ – [illegible]

ದಿನಾಂಕ: 01.10.2017 ಸಂಜೆ 6.00 ರಿಂದ 7.00 ಗಂಟೆವರೆಗೆ. ಸ್ಥಳ: ಗಾಜಿನ ಮನೆ, ರಾಜ್ ಭವನ, ಬೆಂಗಳೂರು





[illegible]
ಘನತೆವೆತ್ತ ರಾಜ್ಯಪಾಲರು, ಕರ್ನಾಟಕ

ಶ್ರೀ ಶ್ರೀ ಡಾ. [illegible]
ಶ್ರೀ ಕೊಳದ ಮಠ ಮಹಾಸಂಸ್ಥಾನ, ಬೆಂಗಳೂರು

[illegible]
ಆರ್ಚ್ ಬಿಷಪ್, ಬೆಂಗಳೂರು

ಶ್ರೀ [illegible]
ಅಧ್ಯಕ್ಷರು, ಗುರುಸಿಂಗ್ ಸಭಾ, ಬೆಂಗಳೂರು

[illegible]
ಮಹಾಬೋಧಿ ಸೊಸೈಟಿ, ಬೆಂಗಳೂರು

[illegible]

ಶ್ರೀ ಡಿ. ಎಚ್. [illegible]
ಗೌರವಾನ್ವಿತ ಸಭಾಪತಿಗಳು, ವಿಧಾನ ಪರಿಷತ್ತು

[illegible]
ಗೌರವಾನ್ವಿತ ಅಧ್ಯಕ್ಷರು, ವಿಧಾನ ಸಭೆ

[illegible]
ಮಾನ್ಯ ಗೃಹ ಮಂತ್ರಿಗಳು

ಶ್ರೀ ಐವಾನ್ ಡಿ'ಸೋಜಾ [illegible]
ಸರ್ಕಾರದ ಮುಖ್ಯ ಸಚೇತಕರು, ವಿಧಾನ ಪರಿಷತ್ತು

[illegible]
ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು, ವಿಧಾನ ಪರಿಷತ್ತು

[illegible] ಭಾ.ಆ.ಸೇ.
ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ

ಗೌರವ ಅತಿಥಿಗಳು

ಶ್ರೀಮತಿ [illegible]
ಸ್ವಾತಂತ್ರ್ಯ ಹೋರಾಟಗಾರರು

ಡಾ. [illegible]
ಅಧ್ಯಕ್ಷರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು

[illegible] ಕಾರ್ಯಕ್ರಮ ದೂರದರ್ಶನ [illegible] 02.10.2017 [illegible]
[illegible] ರಾತ್ರಿ [illegible] ಗಂಟೆಗೆ [illegible]

[illegible], ಐ.ಟಿ.ಎಸ್
ಹೆಚ್ಚುವರಿ ಮಹಾನಿರ್ದೇಶಕರು (ದಕ್ಷಿಣ ವಲಯ)
ಬೆಂಗಳೂರು

ಎಸ್. ಚಂದ್ರಶೇಖರ್, [illegible]
ಉಪಮಹಾನಿರ್ದೇಶಕರು
ದೂರದರ್ಶನ ಕೇಂದ್ರ, ಬೆಂಗಳೂರು

ವಿ. ಆರ್. [illegible]
ಕಾರ್ಯದರ್ಶಿಗಳು
ರಾಜಭವನ, ಬೆಂಗಳೂರು

[illegible]
ಅಧ್ಯಕ್ಷರು
ಸರ್ವೋದಯ ಅಂತರರಾಷ್ಟ್ರೀಯ ಸಂಸ್ಥೆ,
ಬೆಂಗಳೂರು ಕೇಂದ್ರ

[illegible] ಆರ್. [illegible]
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕರ್ನಾಟಕ ಸರ್ಕಾರ

ಡಾ. ಪಿ. ಎಸ್. [illegible], ಐಪಿಎಸ್
ನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಕರ್ನಾಟಕ ಸರ್ಕಾರ

ಮಹಾತ್ಮಗಾಂಧಿ ಜಯಂತಿ ಹಾಗೂ ಅಂತರರಾಷ್ಟ್ರೀಯ ಅಹಿಂಸಾ ದಿನಾಚರಣೆಯ ಪ್ರಯುಕ್ತ

ನೃತ್ಯ ಹಾಗೂ ಗೀತನಮನ



ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿಕೊಟ್ಟವರ ಆದರ್ಶಗಳನ್ನು ಗೌರವಿಸುವುದು ಮತ್ತು ಪಾಲಿಸುವುದು
ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತಕರ್ತವ್ಯ

ಪ್ರಕಟಣೆ : ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ **ಕರ್ನಾಟಕ ವಾರ್ತೆ**

ಸಂಯುಕ್ತ ಕರ್ನಾಟಕ 1 | ಅಕ್ಟೋಬರ್ | 2017 | ಭಾನುವಾರ



ಬೆಂಗಳೂರು ಬ್ರಹ್ಮ ಸಮಾಜದ ಆಶ್ರಯದಲ್ಲಿ ನಡೆದ ರಾಜಾರಾಂ ಮೋಹನ್‌ರಾಯರ 184ನೇ ಸಂಸ್ಮರಣ ಮಹೋತ್ಸವವನ್ನು ಮಾಜಿ ಸಚಿವೆ ಡಾ. ಲೀಲಾದೇವಿ ಆರ್. ಪ್ರಸಾದ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶಿಕ್ಷಣ ತಜ್ಞ ಡಾ. ವೂಡೆ ಪಿ. ಕೃಷ್ಣ, ಬ್ರಹ್ಮ ಸಮಾಜದ ಅಧ್ಯಕ್ಷ ಡಾ. ಅಶೋಕ ಗುರುದಾಸವ ಮತ್ತಿತರರಿದ್ದರು.

ಕರ್ನಾಟಕ
ಭಾನುವಾರ, 1 ಅಕ್ಟೋಬರ್ 2017

ವೂಡೇ ಪಿ ಕೃಷ್ಣಗೆ ದತ್ತಿ ಪ್ರಶಸ್ತಿ

ಕನ್ನಡ ಸಾಹಿತ್ಯ ಪರಿಷತ್ತು ನೀಡುವ 2017ನೇ ಸಾಲಿನ 'ಶ್ರೀ ಎ.ಆರ್.ನಾರಾಯಣಘಟ್ಟ ಮತ್ತು ಶ್ರೀಮತಿ ಸರೋಜಮ್ಮ ಗಾಂಧಿ ಪುದುಪಟ್ಟು ದತ್ತಿ ಪ್ರಶಸ್ತಿ'ಗೆ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಅವರು ಆಯ್ಕೆಯಾಗಿದ್ದಾರೆ. ಕಸಾಪ ಅಧ್ಯಕ್ಷ ಡಾ.ಮನು ಬಳಿಗಾರ್ ಅವರ ಅಧ್ಯಕ್ಷತೆಯಲ್ಲಿ ಸೆ.27ರಂದು ನಡೆದ ಆಯ್ಕೆ ಸಮಿತಿಯಲ್ಲಿ ಒಮ್ಮತವಾಗಿ ಅವರನ್ನು ಆಯ್ಕೆ ಮಾಡಲಾಗಿದೆ. ಸದರಿ ದತ್ತಿ ಪ್ರಶಸ್ತಿಯು 10ಸಾವಿರ ರೂ. ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.


ವಿಜಯ ಕರ್ನಾಟಕ VK
ಭಾನುವಾರ, 1 ಅಕ್ಟೋಬರ್ 2017, ಬೆಂಗಳೂರು

ಇವರು ಸಂಯುಕ್ತವಾಗಿ ಪ್ರಸ್ತುತಪಡಿಸುವ

ಗಾಂಧಿ ಜಯಂತಿ - ಅಹಿಂಸಾ ಮಹೋತ್ಸವ

ದಿನಾಂಕ: 01.10.2017 ಸಂಜೆ 6.00 ರಿಂದ 7.00 ಗಂಟೆವರೆಗೆ, ಸ್ಥಳ: ಗಾಜಿನ ಮನೆ, ರಾಜ್ ಭವನ, ಬೆಂಗಳೂರು





ಉದ್ಘಾಟನೆ

ಶ್ರೀ ವಜುಭಾಯಿ ವಾಲಾ
ಘನತೆವೆತ್ತ ರಾಜ್ಯಪಾಲರು, ಕರ್ನಾಟಕ

ದಿವ್ಯ ಸಾನಿಧ್ಯ

ಶ್ರೀ ಶ್ರೀ ಡಾ. ಶಾಂತವೀರ ಮಹಾಸ್ವಾಮೀಜಿ
ಶ್ರೀ ಕೋಳದ ಮಠ ಮಹಾಸಂಸ್ಥಾನ, ಬೆಂಗಳೂರು

ಮೋಸ್ಟ್ ರೆವರೆಂಡ್ ಡಾ. ಬರ್ನಾರ್ಡ್ ಮೋರಾಸ್
ಆರ್ಚ್ ಬಿಷಪ್, ಬೆಂಗಳೂರು

ಶ್ರೀ ಪ್ರದ್ಯೋತ್‌ಸಿಂಗ್ ಬಾಟ
ಅಧ್ಯಕ್ಷರು, ಗುರುಸಿಂಗ್ ಸಭಾ, ಬೆಂಗಳೂರು

ಶ್ರೀ ಆನಂದ್ ಭಂತೇಜಿ
ಮಹಾಬೋಧಿ ಸೊಸೈಟಿ, ಬೆಂಗಳೂರು

ಮುಖ್ಯ ಅತಿಥಿಗಳು

ಶ್ರೀ ಡಿ. ಎಚ್. ಶಂಕರಮೂರ್ತಿ
ಗೌರವಾನ್ವಿತ ಸಭಾಪತಿಗಳು, ವಿಧಾನ ಪರಿಷತ್ತು

ಶ್ರೀ ಕೆ. ಬಿ. ಕೋಳಿವಾಡ
ಗೌರವಾನ್ವಿತ ಅಧ್ಯಕ್ಷರು, ವಿಧಾನ ಸಭೆ


ಶ್ರೀ ರಾಮಲಿಂಗ ರೆಡ್ಡಿ
ಮಾನ್ಯ ಗೃಹ ಮಂತ್ರಿಗಳು

ಶ್ರೀ ಐವಾನ್ ಡಿ ಸೋಜಾ
ಸರ್ಕಾರದ ಮುಖ್ಯ ಸಚೇತಕರು, ವಿಧಾನ ಪರಿಷತ್ತು

ಕ್ಯಾಪ್ಟನ್ ಗಣೇಶ್ ಕಾರ್ಣಿಕ್
ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು, ವಿಧಾನ ಪರಿಷತ್ತು

ಡಾ. ಸುಭಾಷ್ ಚಂದ್ರ ಖುಂಟಿಆ, ಭಾ.ಆ.ಸೇ.
ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ

ಮಹಾತ್ಮಗಾಂಧಿ ಜಯಂತಿ ಹಾಗೂ ಅಂತರರಾಷ್ಟ್ರೀಯ
ಅಹಿಂಸಾ ದಿನಾಚರಣೆಯ ಪ್ರಯುಕ್ತ
ನೃತ್ಯ ಹಾಗೂ ಗೀತನಮನ



ಗೌರವ ಅತಿಥಿಗಳು

ಶ್ರೀಮತಿ ಚೆನ್ನಮ್ಮ ಹಳ್ಳಿಕೇರಿ
ಸ್ವಾತಂತ್ರ್ಯ ಹೋರಾಟಗಾರರು

ಡಾ. ವೂಡಿ ಪಿ. ಕೃಷ್ಣ
ಅಧ್ಯಕ್ಷರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು

ಈ ಕಾರ್ಯಕ್ರಮವು ದೂರದರ್ಶನ ಚಂದನ ವಾಹಿನಿಯಲ್ಲಿ ದಿನಾಂಕ: 02.10.2017ರಂದು ಬೆಳಗ್ಗೆ 9.30 ಗಂಟೆಗೆ ಪ್ರಸಾರವಾಗುವುದು ಮತ್ತು ಅದೇ ದಿನ ರಾತ್ರಿ 9.30 ಗಂಟೆಗೆ ಮರುಪ್ರಸಾರಗೊಳ್ಳುವುದು.

ಡಾ. ರಾಜ್ ಕುಮಾರ್ ಉಪಾಧ್ಯಾಯ, ಐ.ಟಿ.ಎಸ್
ಹೆಚ್ಚುವರಿ ಮಹಾನಿರ್ದೇಶಕರು (ದಕ್ಷಿಣ ವಲಯ)
ಬೆಂಗಳೂರು

ಎಸ್. ಚಂದ್ರಶೇಖರ್, ಐಬಿಪಿಎಸ್
ಉಪಮಹಾನಿರ್ದೇಶಕರು
ದೂರದರ್ಶನ ಕೇಂದ್ರ, ಬೆಂಗಳೂರು

ವಿ. ಆರ್. ರಮೇಶ್
ಕಾರ್ಯದರ್ಶಿಗಳು
ರಾಜಭವನ, ಬೆಂಗಳೂರು

ಡಿ. ಸುರೇಂದ್ರ ಕುಮಾರ್
ಅಧ್ಯಕ್ಷರು
ಸರ್ವೋದಯ ಅಂತರರಾಷ್ಟ್ರೀಯ ಸಂಸ್ಥೆ,
ಬೆಂಗಳೂರು ಕೇಂದ್ರ

ಎಸ್. ಆರ್. ವಿಶುಕುಮಾರ
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕರ್ನಾಟಕ ಸರ್ಕಾರ

ಡಾ. ಪಿ. ಎಸ್. ಹರ್ಷ, ಐಪಿಎಸ್
ನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಕರ್ನಾಟಕ ಸರ್ಕಾರ

ಪ್ರಕಟಣೆ : ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕರ್ನಾಟಕ ವಾರ್ತೆ

ಸಂಯುಕ್ತ ಕರ್ನಾಟಕ
ಭಾನುವಾರ, 1, ಅಕ್ಟೋಬರ್, 2017

ಗಾಂಧಿ ಜಯಂತಿ – ಅಹಿಂಸಾ ಮಹೋತ್ಸವ


ದಿನಾಂಕ: 01.10.2017 ಸಂಜೆ 6.00 ರಿಂದ 7.00 ಗಂಟೆವರೆಗೆ. ಸ್ಥಳ: ಗಾಜಿನ ಮನೆ, ರಾಜ್ ಭವನ, ಬೆಂಗಳೂರು





ಮಹಾತ್ಮಗಾಂಧಿ ಜಯಂತಿ ಹಾಗೂ ಅಂತರರಾಷ್ಟ್ರೀಯ
ಅಹಿಂಸಾ ದಿನಾಚರಣೆಯ ಪ್ರಯುಕ್ತ

ನೃತ್ಯ ಹಾಗೂ ಗೀತನಮನ



ಉದ್ಘಾಟನೆ

ಶ್ರೀ ವಜುಭಾಯಿ ವಾಲಾ
ಘನತೆವೆತ್ತ ರಾಜ್ಯಪಾಲರು, ಕರ್ನಾಟಕ

ದಿವ್ಯ ಸಾನಿಧ್ಯ

ಶ್ರೀ ಶ್ರೀ ಡಾ. ಶಾಂತವೀರ ಮಹಾಸ್ವಾಮೀಜಿ
ಶ್ರೀ ಕೊಳದ ಮಠ ಮಹಾಸಂಸ್ಥಾನ, ಬೆಂಗಳೂರು

ಮೋಸ್ಟ್ ರೆವರೆಂಡ್ ಡಾ. ಬರ್ನಾರ್ಡ್ ಮೊರಾಸ್
ಆರ್ಚ್‌ಬಿಷಪ್, ಬೆಂಗಳೂರು

ಶ್ರೀ ಪ್ರಭ್‌ಜೋತ್‌ಸಿಂಗ್ ಬಾಲಿ
ಅಧ್ಯಕ್ಷರು, ಗುರುಸಿಂಗ್ ಸಭಾ, ಬೆಂಗಳೂರು

ಶ್ರೀ ಆನಂದ್ ಭಂತೇಜಿ
ಮಹಾಬೋಧಿ ಸೊಸೈಟಿ, ಬೆಂಗಳೂರು

ಮುಖ್ಯ ಅತಿಥಿಗಳು

ಶ್ರೀ ಡಿ. ಎಚ್. ಶಂಕರಮೂರ್ತಿ
ಗೌರವಾನ್ವಿತ ಸಭಾಪತಿಗಳು, ವಿಧಾನ ಪರಿಷತ್ತು

ಶ್ರೀ ಕೆ. ಬಿ. ಕೋಳಿವಾಡ
ಗೌರವಾನ್ವಿತ ಅಧ್ಯಕ್ಷರು, ವಿಧಾನ ಸಭೆ

ಶ್ರೀ ರಾಮಲಿಂಗ ರೆಡ್ಡಿ
ಮಾನ್ಯ ಗೃಹ ಮಂತ್ರಿಗಳು

ಶ್ರೀ ಐವಾನ್ ಡಿ'ಸೋಜಾ
ಸರ್ಕಾರದ ಮುಖ್ಯ ಸಚೇತಕರು, ವಿಧಾನ ಪರಿಷತ್ತು

ಕ್ಯಾಪ್ಟನ್ ಗಣೇಶ್ ಕಾರ್ಣಿಕ್
ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು, ವಿಧಾನ ಪರಿಷತ್ತು

ಡಾ. ಸುಭಾಷ್ ಚಂದ್ರ ಖುಂಟಿಆ, ಭಾ.ಆ.ಸೇ.
ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ

ಗೌರವ ಅತಿಥಿಗಳು

ಶ್ರೀಮತಿ ಚೆನ್ನಮ್ಮ ಹಳ್ಳಿಕೆರೆ
ಸ್ವಾತಂತ್ರ್ಯ ಹೋರಾಟಗಾರರು

ಡಾ. ವೂಡೆ ಪಿ. ಕೃಷ್ಣ
ಅಧ್ಯಕ್ಷರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಬೆಂಗಳೂರು

ಈ ಕಾರ್ಯಕ್ರಮವು ದೂರದರ್ಶನ ಚಂದನ ವಾಹಿನಿಯಲ್ಲಿ ದಿನಾಂಕ: 02.10.2017ರಂದು ಬೆಳಗ್ಗೆ 9.30 ಗಂಟೆಗೆ ಪ್ರಸಾರವಾಗುವುದು ಮತ್ತು ಅದೇ ದಿನ ರಾತ್ರಿ 9.30 ಗಂಟೆಗೆ ಮರುಪ್ರಸಾರಗೊಳ್ಳುವುದು.

ಡಾ. ರಾಜ್ ಕುಮಾರ್ ಉಪಾಧ್ಯಾಯ, ಐ.ಬಿ.ಎಸ್
ಹೆಚ್ಚುವರಿ ಮಹಾನಿರ್ದೇಶಕರು (ದಕ್ಷಿಣ ವಲಯ)
ಬೆಂಗಳೂರು

ಎಸ್. ಚಂದ್ರಶೇಖರ್, ಐಐಎಸ್
ಉಪಮಹಾನಿರ್ದೇಶಕರು
ದೂರದರ್ಶನ ಕೇಂದ್ರ, ಬೆಂಗಳೂರು

ಪಿ. ಆರ್. ರಮೇಶ್
ಕಾರ್ಯದರ್ಶಿಗಳು
ರಾಜಭವನ, ಬೆಂಗಳೂರು

ಡಿ. ಸುರೇಂದ್ರ ಕುಮಾರ್
ಅಧ್ಯಕ್ಷರು
ಸರ್ವೋದಯ ಅಂತರರಾಷ್ಟ್ರೀಯ ಸಂಸ್ಥೆ,
ಬೆಂಗಳೂರು ಕೇಂದ್ರ

ಎನ್. ಆರ್. ವಿಶುಕುಮಾರ
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕರ್ನಾಟಕ ಸರ್ಕಾರ

ಡಾ. ಪಿ. ಎಸ್. ಹರ್ಷ, ಐಪಿಎಸ್
ನಿರ್ದೇಶಕರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಕರ್ನಾಟಕ ಸರ್ಕಾರ

ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿಕೊಟ್ಟವರ ಆದರ್ಶಗಳನ್ನು ಗೌರವಿಸುವುದು ಮತ್ತು ಪಾಲಿಸುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತಕರ್ತವ್ಯ

ಪ್ರಕಟಣೆ : ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ **ಕರ್ನಾಟಕ ವಾರ್ತೆ**

ಶೇಷಾದ್ರಿಪುರಂ ಸ್ತ್ರೀ ಸಮಾಜ ಮಾಧ್ಯಮಿಕ ಶಾಲೆ, ಪ್ರೌಢಶಾಲೆ ಮತ್ತು ಆಂಗ್ಲ ಪ್ರೌಢಶಾಲೆಯಿಂದ ಸಂಯುಕ್ತವಾಗಿ ಆಚರಿಸಿದ 71ನೇ ಸ್ವಾತಂತ್ರ ದಿನಾಚರಣೆ





ಶೇಷಾದ್ರಿಪುರಂ ಸ್ತ್ರೀ ಸಮಾಜ ಮಾಧ್ಯಮಿಕ ಶಾಲೆ, ಶೇಷಾದ್ರಿಪುರಂ ಪ್ರೌಢಶಾಲೆ, ಶೇಷಾದ್ರಿಪುರಂ ಆಂಗ್ಲ ಪ್ರೌಢಶಾಲೆಯವರು, ತಮ್ಮ 71ನೇ ಸ್ವಾತಂತ್ರ ದಿನಾಚರಣೆಯನ್ನು ಸಂಯುಕ್ತವಾಗಿ ಆಚರಿಸಿದರು. ಧ್ವಜ ವಂದನೆ ನೆರವೇರಿಸಲಾಯಿತು. ಪ್ರೌಢಶಾಲೆಯ ಮುಖ್ಯೋಪಧ್ಯಾಯರಾದ ಏಕಾಂಬರೇಶ್ವರ ಅವರು ಸ್ವಾಗತ ಭಾಷಣ ಮಾಡಿದರು. ವಿದ್ಯಾರ್ಥಿಗಳಿಂದ ಸಾಮೂಹಿಕ ಕವಾಯತು ನಡೆಯಿತು.

ಮುಖ್ಯ ಅತಿಥಿಗಳಾಗಿ ವಿದ್ವಾಂಸರು ಮತ್ತು ಸಾಹಿತಿಗಳು ಆದ ಡಾ. ಎನ್.ಕೆ. ರಾಮಶೇಷನ್ ಅವರು ಆಗಮಿಸಿ ತಮ್ಮ ಭಾಷಣದಲ್ಲಿ ಸ್ವಾತಂತ್ರ್ಯ ಪಡೆಯಲು ಪ್ರಾಣಾರ್ಪಣೆ ಮಾಡಿದ ಹುತಾತ್ಮರ ಬಗ್ಗೆ ತಿಳಿಸುತ್ತಾ ಅವರು ತಂದುಕೊಟ್ಟ ಸ್ವಾತಂತ್ರ್ಯಕ್ಕೆ ತೊಂದರೆ ಬಾರದಂತೆ ನೋಡಿಕೊಳ್ಳಬೇಕೆಂಬ ಹೊಣೆಗಾರಿಕೆಯನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ಮುಂದುವರೆದು ಮಕ್ಕಳು ಶಕ್ತಿ, ಸ್ಮೃತಿ, ಭಕ್ತಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ದೇಶದ ಪ್ರಗತಿಗೆ ತಾವೆಲ್ಲರೂ ಪ್ರಾಮಾಣಿಕವಾಗಿ ದುಡಿಯಬೇಕು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ಡಾ. ವೂಡೆ ಪಿ. ಕೃಷ್ಣ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸ್ವಾತಂತ್ರ್ಯ ಪಡೆಯಲು ನಡೆಸಿದ ಹೋರಾಟದ ಚಿತ್ರಣವನ್ನು ಮಕ್ಕಳಿಗೆ ಮನಮುಟ್ಟುವಂತೆ ತಿಳಿಸಿದರು.

ಸಂವಿಧಾನದ ಆಶೋತ್ತರಗಳನ್ನು ಪೂರೈಸಬೇಕು. ಸಂವಿಧಾನ ಭಗವದ್ ಗೀತೆಯಾಗಬೇಕು, ಬೈಬಲ್ ಆಗಬೇಕು, ಖುರಾನ್ ಆಗಬೇಕು ಎಂದು ತಿಳಿಸುತ್ತಾ ಸಂವಿಧಾನವನ್ನು ಚೆನ್ನಾಗಿ ಅರ್ಥೈಸಿಕೊಳ್ಳಬೇಕೆಂದರು ಪ್ರತಿಯೊಬ್ಬರಲ್ಲೂ ಅರ್ಪಣಾಭಾವ ಬೆಳೆಸಿಕೊಳ್ಳಬೇಕೆಂದು ತಿಳಿಸಿದರು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಶೇಷಾದ್ರಿಪುರಂ ಸ್ತ್ರೀ ಸಮಾಜ ಮಾಧ್ಯಮಿಕ ಶಾಲೆಯ ಮುಖೋಪಾಧ್ಯಾಯಿನಿಯವರು ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಧರ್ಮದರ್ಶಿಗಳಾದ ಕೃಷ್ಣಸ್ವಾಮಿ ಮತ್ತು ಧಾಮುರವರು ಉಪಸ್ಥಿತರಿದ್ದರು.

– ವರದಿ : ಎಂ. ಗೀತಾ

ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
ಶುಕ್ರವಾರ | 29 ಸೆಪ್ಟೆಂಬರ್ 2017

ಡಾ. ವೂಡೇ ಪಿ. ಕೃಷ್ಣಗೆ ಕಸಾಪ ದತ್ತಿ ಪ್ರಶಸ್ತಿ



ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸ್ಥಾಪಿಸಲಾಗಿರುವ ಎ.ಆರ್. ನಾರಾಯಣಪಟ್ಟಿ ಮತ್ತು ಸರೋಜಮ್ಮ ಗಾಂಧಿ ಪುದುವಟ್ಟು ದತ್ತಿ ಪ್ರಶಸ್ತಿಗೆ ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ ಆಯ್ಕೆಯಾಗಿದ್ದಾರೆ. ಬುಧವಾರ ಕಸಾಪದಲ್ಲಿ ಡಾ. ಮನು ಬಳಿಗಾರ್ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿ ಸಭೆಯಲ್ಲಿ ಸರ್ವಾನುಮತದಿಂದ ಶಿಕ್ಷಣ ತಜ್ಞರು ಹಾಗೂ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಅವರನ್ನು 2017ನೇ ಸಾಲಿಗೆ ಆಯ್ಕೆ ಮಾಡಲಾಯಿತು. ಪ್ರಶಸ್ತಿಯು 10 ಸಾವಿರ ರೂ. ನಗದು ಪುರಸ್ಕಾರವನ್ನು ಒಳಗೊಂಡಿದೆ.

ಹೊಸ ದಿಗಂತ
ಶುಕ್ರವಾರ
29 ಸೆಪ್ಟೆಂಬರ್ 2017

ಡಾ.ವೂಡೇ ಕೃಷ್ಣಗೆ ಪುದುವಟ್ಟಿ ದತ್ತಿ ಪ್ರಶಸ್ತಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಎ.ಆರ್.ನಾರಾಯಣ ಘಟ್ಟ ಮತ್ತು



ಸರೋಜಮ್ಮ ಗಾಂಧೀ ಪುದುವಟ್ಟು ದತ್ತಿ ಪ್ರಶಸ್ತಿಗೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಆಯ್ಕೆಯಾಗಿದ್ದಾರೆ.

ಬುಧವಾರ ಕಸಾಪ ಅಧ್ಯಕ್ಷ ಡಾ.ಮನು ಬಳಿಗಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿಯು 2017ನೇ ಸಾಲಿನ ಎ.ಆರ್.ನಾರಾಯಣ ಘಟ್ಟ ಮತ್ತು ಸರೋಜಮ್ಮ ಗಾಂಧೀ ಪುದುವಟ್ಟು ದತ್ತಿ ಪ್ರಶಸ್ತಿಗೆ ಡಾ.ವೂಡೇ ಪಿ.ಕೃಷ್ಣ ಅವರನ್ನು ಆಯ್ಕೆ ಮಾಡಿದೆ. ಈ ಪ್ರಶಸ್ತಿಯು 10 ಸಾವಿರ ನಗದು ಪುರಸ್ಕಾರ, ಪ್ರಶಸ್ತಿ ಫಲಕವನ್ನೊಳಗೊಂಡಿದೆ.

ಸಂಯುಕ್ತ ಕರ್ನಾಟಕ
ಶನಿವಾರ । 16 । ಸೆಪ್ಟೆಂಬರ್ । 2017

ಕಾಶ್ಮೀರ ಸಂಸ್ಕೃತಿ ಅನನ್ಯ: ಬಣ್ಣನೆ

ಬೆಂಗಳೂರು: ಶಿಕ್ಷಣದಲ್ಲಿ ಕಾಶ್ಮೀರದ ಸಂಸ್ಕೃತಿಯನ್ನು ಸೇರ್ಪಡೆ ಅಗತ್ಯ ಎಂದು ನ್ಯಾ. ಡಾ. ರಾಮಾಜೋಯಿಸ್ ತಿಳಿಸಿದ್ದಾರೆ.

ಶೇಷಾದ್ರಿಪುರಂ ಕಾಲೇಜಿನ ಎನ್‌ಎಸ್‌ಎಸ್ ಘಟಕವು ಇಂಡಿಯನ್ ಸ್ಪೈನ್ಸ್ ಮಾನಿಟರ್‌ನ 'ಭಲೇಭಾರತ್'ನ ಸಹಯೋಗದೊಂದಿಗೆ ಕಾಶ್ಮೀರ ಕ್ರೌನ್ ಆಫ್ ಇಂಡಿಯಾ ಎಂಬ ಶೀರ್ಷಿಕೆಯಡಿ ಪುರಾತತ್ವ ಮತ್ತು ಸಾಂಸ್ಕೃತಿಗೆ ಸಂಬಂಧಿಸಿದ ವಸ್ತುಪ್ರದರ್ಶನ ಉದ್ಘಾಟನೆ ಮಾಡಿ ಬಳಿಕ ಮಾತನಾಡಿದ ಅವರು, ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವ ಕಾಶ್ಮೀರದ ಸಂಸ್ಕೃತಿ ತಮ್ಮದೇ ಆದ ಕೊಡುಗೆ ನೀಡಿರುವುದು ಬಹುತೇಕ ಭಾರತೀಯರಿಗೆ ತಿಳಿದಿರುವುದಿಲ್ಲ. ಹೀಗಾಗಿ ಇದರ ಬಗ್ಗೆ ಶಿಕ್ಷಣದಲ್ಲಿ ಕಾಶ್ಮೀರದ ಸಂಸ್ಕೃತಿ ಸೇರ್ಪಡೆ ಅಗತ್ಯ ಎಂದು ತಿಳಿಸಿದ್ದಾರೆ.

ಇದೇ ಮೊದಲ ಬಾರಿಗೆ ಭಾರತೀಯ ಶಿಕ್ಷಣ ಸಂಸ್ಥೆಯೊಂದು ಕಾಶ್ಮೀರದ ಬಗ್ಗೆ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಸಲುವಾಗಿ ವಸ್ತು ಪ್ರದರ್ಶನವನ್ನು ಹಮ್ಮಿಕೊಂಡಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು. ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ, ಪುರಾತತ್ವ ಶಾಸ್ತ್ರಜ್ಞ ಟಿ.ಕೆವಿ ರಾಜನ್, ಡಾ.ಎಂ. ಪ್ರಕಾಶ್, ಡಾ.ಭಾರ್ಗವಿ ಸೇರಿದಂತೆ ಮತ್ತಿತರರಿದ್ದರು.



ಶೇಷಾದ್ರಿಪುರಂ ಕಾಲೇಜಿನ ಎನ್‌ಎಸ್‌ಎಸ್ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಕಾಶ್ಮೀರ ಕ್ರೌನ್ ಆಫ್ ಇಂಡಿಯಾ ಎಂಬ ಶೀರ್ಷಿಕೆಯಡಿ ಪುರಾತತ್ವ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ವಸ್ತು ಪ್ರದರ್ಶನವನ್ನು ನ್ಯಾ. ಡಾ.ರಾಮಾ ಜೋಯಿಸ್ ವೀಕ್ಷಿಸಿದರು.

ಪ್ರಜಾವಾಣಿ ಶನಿವಾರ ● ಸೆಪ್ಟೆಂಬರ್ 16, 2017



ಶೇಷಾದ್ರಿಪುರ ಕಾಲೇಜು ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾಶ್ಮೀರ: ದಿ ಕ್ರೌನ್ ಆಫ್ ಇಂಡಿಯಾ ಪುರಾತತ್ವ ಶಾಸ್ತ್ರ ಮತ್ತು ಸಾಂಸ್ಕೃತಿಕ ವಸ್ತು ಪ್ರದರ್ಶನದಲ್ಲಿ ನಿವೃತ್ತ ನ್ಯಾಯಮೂರ್ತಿ ರಾಮಾ ಜೋಯಿಸ್ ಅವರಿಗೆ ಪುರಾತತ್ವ ಶಾಸ್ತ್ರಜ್ಞ ಟಿ.ಕೆ.ವಿ ರಾಜನ್(ಎಡಬದಿ) ಸ್ಮರಣಸಂಚಿಕೆ ನೀಡಿದರು. ಶೇಷಾದ್ರಿಪುರ ಎಜುಕೇಷನ್ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ವೂಡೇ ಪಿ. ಕೃಷ್ಣ ಇದ್ದರು –ಪ್ರಜಾವಾಣಿ ಚಿತ್ರ

Bengaluru

ನಾವು ಕನ್ನಡಿಗರು

ಬುಧವಾರ
23-08-2017

ಗಾಂಧಿನಗರ ವಿಧಾನಸಭಾ ಕ್ಷೇತ್ರದ 4ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಅವರ ಭಾಷಣ

(ಕಳೆದ ಸಂಚಿಕೆಯಿಂದ)

ಇದು ನಮ್ಮ ನಗರೀಕರಣದ ಭರಾಟೆಯನ್ನು ಸೂಚಿಸುತ್ತದೆ. ನಾನು ಕಳೆದ ಐವತ್ತು ವರ್ಷಗಳಿಂದ ಇದೇ ಕ್ಷೇತ್ರದಲ್ಲಿ ನನ್ನ ಬದುಕನ್ನು ಕಟ್ಟಿಕೊಂಡು ಬಂದಿದ್ದೇನೆ. ನಾನು ಮೂಲ ಗಾಂಧಿನಗರದ ನಿವಾಸಿ. ನಾನು ಹುಟ್ಟಿದ್ದು ಗಾಂಧಿನಗರದಲ್ಲೇ. ಗಾಂಧಿನಗರದ ಆಸುಪಾಸಿನ ಹಲವಾರು ಸೇವಾ ಸಂಸ್ಥೆಗಳೊಡನೆ ಒಡನಾಟ ಇಟ್ಟುಕೊಂಡು ನನ್ನ ಸೇವಾ ಕೈಂಕರ್ಯವನ್ನು ನಡೆಸಿದ್ದೇನೆ. ಅವುಗಳಲ್ಲಿ ಪ್ರಮುಖವಾದದ್ದು ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಭಾರತ ಸೇವಾ ದಳ, ಗಾಂಧಿ ಶಾಂತಿ ಪ್ರತಿಷ್ಠಾನ, ವಿಶ್ವನೀಡಂ ಟ್ರಸ್ಟ್, ಕರ್ನಾಟಕ ಸರ್ವೋದಯ ಮಂಡಲ, ಶೇಷಾದ್ರಿಪುರಂ ರಾಮಸೇವಾ ಸಮಿತಿ, ಬಳೇಪೇಟೆ ಶ್ರೀನಿವಾಸ ಮಂದಿರ ಮತ್ತು ಧರ್ಮಸಂಸ್ಥೆ, ನೆಹರೂನಗರ ಸಹಕಾರಿ ಬ್ಯಾಂಕ್, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಮುಂತಾದವುಗಳು. ಗೆಳೆಯರೇ, ಗಾಂಧಿನಗರವನ್ನು ಧಾರ್ಮಿಕ ಶ್ರದ್ಧೆಯ ಪ್ರಮುಖ ತಾಣ ಎಂದು ನಾನು ಭಾವಿಸಿದ್ದೇನೆ. ಅನೇಕ ಲಿಗಾಯಿತ ಮಠಗಳು (ಸರ್ವಭೂಷಣ ಮಠ), ದೇವಸ್ಥಾನಗಳು, ಜೈನ ಮಂದಿರಗಳು, ಮಸೀದಿಗಳು ಹೀಗೆ ಎಲ್ಲ ಸಮುದಾಯಕ್ಕೆ ಸೇರಿದ ಧಾರ್ಮಿಕ ತಾಣಗಳಿರುವ ಒಂದು ಅಪೂರ್ವ ಕ್ಷೇತ್ರ ಇದು. ಸುಭೇದಾರ್ ಛತ್ರಂ ರಸ್ತೆಯಲ್ಲೇ ನಗರ ದೇವತೆ ಅಣ್ಣಮ್ಮನೂ ನೆಲೆಸಿದ್ದಾಳೆ. ಮತ್ತೊಂದು ವಿಶೇಷತೆ ಎಂದರೆ ಕನ್ನಡ ಚಲನಚಿತ್ರೋದ್ಯಮದ ಕೇಂದ್ರ ಭಾಗವಾಗಿ ಕಳೆದ ಐವತ್ತು ವರ್ಷಗಳಲ್ಲಿ ಇದು ಪರಿವರ್ತನೆಗೊಂಡಿದೆ.

ವರನಟ ಡಾ. ರಾಜ್‌ಕುಮಾರ್ ಆದಿಯಾಗಿ ಬಹುತೇಕ ನಟರು, ನಿರ್ಮಾಪಕರು, ವಿತರಕರು ಗಾಂಧಿನಗರವನ್ನು ಕರ್ನಾಟಕದ ಮನರಂಜನಾ ಕೇಂದ್ರವನ್ನಾಗಿ ರೂಪಿಸುವಲ್ಲಿ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಕನ್ನಡ ಚಿತ್ರರಂಗಕ್ಕೆ ಜೀವಧಾತುವಾಗಿದ್ದ ಕೆ.ಸಿ.ಎನ್.ಗೌಡರು ತಮ್ಮ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ. ಒಂದು ಕಾಲಕ್ಕೆ ಗಾಂಧಿನಗರದಲ್ಲಿ ಥಿಯೇಟರ್‌ಗಳ ಸಾಲುಗಳೇ ಇದ್ದವು. ಅನೇಕ ಥಿಯೇಟರ್‌ಗಳನ್ನು ವಾಣಿಜ್ಯ ಕಟ್ಟಡಗಳ ನಿರ್ಮಾಣಕ್ಕೆ ಹೊಡೆದು ಹಾಕಲಾಯಿತು. ಈ ಸಾಲಿನಲ್ಲಿ ನಾಶವಾದ ಥಿಯೇಟರ್‌ಗಳ ಪೈಕಿ ಕಾರ್ಪೋರೇಷನ್ ಬಳಿಯ ಪಲ್ಲವಿ, ಕೆಂಪೇಗೌಡ ರಸ್ತೆಯ ಪ್ರಭಾತ್, ಸಾಗರ್, ಕೆಂಪೇಗೌಡ, ಕಲ್ಪನಾ, ಅಲಂಕಾರ್, ತ್ರಿಭುವನ್, ಕೈಲಾಸ್, ಗೀತಾ, ಹಿಮಾಲಯ, ಮೆಜೆಸ್ಟಿಕ್, ಸಂಗಂ, ಶೇಷಾದ್ರಿಪುರಂನ ಸ್ವಸ್ತಿಕ್, ಸೆಂಟ್ರಲ್ ಮುಂತಾದವುಗಳು ನೆನಪಾಗುತ್ತವೆ.

ಇದೀಗ ವಾಣಿಜ್ಯ ಮಳಿಗೆಗಳಲ್ಲಿ ಮಲ್ಟಿಪ್ಲೆಕ್ಸ್‌ಗಳು ತಲೆ ಎತ್ತುತ್ತಿವೆ. ಇದು ಬದಲಾಗುತ್ತಿರುವ ಕಾಲ ಮಹಿಮೆಯ ಸಂಕೇತ. ಹಾಗೂ ಇದೇ ಗಾಂಧಿನಗರದಲ್ಲಿ ಗುಬ್ಬಿ ವೀರಣ್ಣ ರಂಗಮಂದಿರ ಇತ್ತು. ಈಗ ಅದನ್ನು ನವೀಕರಿಸಿ ನೃತ್ಯ ನಾಟಕ ಕಂಪನಿಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿದೆ. ಈ ಹಿಂದೆ ರಂಗ ಚಟುವಟಿಕೆಗಳಿಗೆ ಇದ್ದುದು ಇದೊಂದೇ ಕೇಂದ್ರ, ಆದರೆ ಈಗ ರವೀಂದ್ರ ಕಲಾಕ್ಷೇತ್ರ, ಎ.ಡಿ.ಎ ರಂಗಮಂದಿರ, ರಂಗಶಂಕರ ಮುಂತಾಗಿ ಅನೇಕ ರಂಗಮಂದಿರಗಳಿವೆ.

ಗಾಂಧಿನಗರ ವಿಧಾನಸಭಾ ಕ್ಷೇತ್ರದಲ್ಲಿ ಹಲವಾರು ಪ್ರತಿಷ್ಠಿತ ವಿದ್ಯಾಸಂಸ್ಥೆಗಳಿವೆ. ಅವುಗಳಲ್ಲಿ ಕೆಲವು ಪ್ರಮುಖವಾದವೆಂದರೆ: ಜಗದ್ಗುರು ಶ್ರೀ ರೇಣುಕಾಚಾರ್ಯ ವಿದ್ಯಾಸಂಸ್ಥೆ, ಆರ್ಯ ವಿದ್ಯಾಶಾಲೆ ಮುಂತಾದವು. ಒಂದು ಕಾಲಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಕೇಂದ್ರವಾಗಿದ್ದ ಸೆಂಟ್ರಲ್ ಕಾಲೇಜು ಇರುವುದು ಇಲ್ಲೇ. ಪಕ್ಕದಲ್ಲೇ ಹಿಂದೆ ಅಠಾರ ಕಛೇರಿಯೆಂದು ಕರೆಯುತ್ತಿದ್ದ ಕೋರ್ಟ್ ಕಚೇರಿಗಳು, ಕಾವೇರಿ ಭವನಗಳು ಇವೆ. ಇದಕ್ಕೆ ಹೊಂದಿಕೊಂಡೇ ಇರುವ ಸುಪ್ರಸಿದ್ಧ 'ಗ್ಯಾಸ್' ಕಾಲೇಜು ಎಂದು ಕರೆಯುವ ಕಲಾ ಮತ್ತು ವಿಜ್ಞಾನ ಕಾಲೇಜುಗಳು ಇವೆ. ಈಗ ಪರಪ್ಪನ ಅಗ್ರಹಾರಕ್ಕೆ ಸ್ಥಳಾಂತಗೊಂಡಿರುವ ಸೆಂಟ್ರಲ್ ಜೈಲು ಇಲ್ಲೇ ಇತ್ತು. ಈಗ ಇದು 'ಸ್ವಾತಂತ್ರ್ಯ ಉದ್ಯಾನವನ'ವಾಗಿದೆ. ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಸ್ಥಳಾಂತರಗೊಳ್ಳುವ ಮುನ್ನ ಕ್ರಿಕೆಟ್ ಆಡುತ್ತಿದುದು ಸೆಂಟ್ರಲ್ ಕಾಲೇಜ್ ಮೈದಾನದಲ್ಲೇ. ಹಾಗೂ ಪ್ರಸಿದ್ಧ ರೇಸ್‌ಕೋರ್ಸ್ ಕೂಡ ಇಲ್ಲೇ ಇದೆ. ಗಾಂಧಿನಗರದ ಇನ್ನೊಂದು ಹಿರಿಮೆ ಎಂದರೆ ಕನ್ನಡದ ಬಹುತೇಕ ಪ್ರಮುಖ ಚಳವಳಿಗಳಿಗೆ ಇದು ಕೇಂದ್ರ ಸ್ಥಾನ. ಮೈಸೂರ್ ಬ್ಯಾಂಕ್ ವೃತ್ತದಲ್ಲಿ ಹಲವಾರು ಹೋರಾಟಗಳು ಪ್ರಾರಂಭಗೊಂಡಿದ್ದನ್ನು ನಾನು ಚಿಕ್ಕ ವಯಸ್ಸಿನಿಂದಲೇ ಗಮನಿಸಿಕೊಂಡು ಬಂದಿದ್ದೇನೆ. ಹಿಂದಿ ಹೋರಾಟ, ಗೋಕಾಕ್ ಚಳವಳಿಗಳು ಚಿಗುರೊಡೆದದ್ದು ಇಲ್ಲಿಯೇ. ಇಂದು ಮೈಸೂರ್ ಬ್ಯಾಂಕ್ ಕೂಡ ಇತಿಹಾಸದಲ್ಲಿ ಲೀನವಾಗಿ 'ಎಸ್.ಬಿ.ಐ'. ಎನಿಸಿಕೊಂಡಿದ್ದು ಬೆಂಗಳೂರು ತನ್ನ ಒಂದು ಸಾಂಸ್ಕೃತಿಕ ಚಹರೆಯನ್ನೇ ಕಳೆದುಕೊಂಡಿದೆ, ಕಾಲದ ಕುರುಡುತನಕ್ಕೆ ಮೂಕ ಸಾಕ್ಷಿಯಾಗಿದೆ.

ಗಾಂಧೀನಗರ ಕ್ಷೇತ್ರವನ್ನು ಭಾರತದ ಸಂಕ್ಷಿಪ್ತ ರೂಪ ಅಥವಾ ಒಂದು ಮಿನಿ ಭಾರತ ಎಂದು ಹೇಳಿದರೆ ತಪ್ಪಿಲ್ಲ. ಏಕೆಂದರೆ ಇಲ್ಲಿ ಹಲವಾರು ವಿಭಿನ್ನ ಸಂಸ್ಕೃತಿಗೆ ಸೇರಿದ ಬೇರೆ ಬೇರೆ ಭಾಷಿಗರು ವಾಸಿಸುತ್ತಿದ್ದಾರೆ. ಇವತ್ತು ಗಾಂಧಿನಗರದಲ್ಲಿ ಗುಜರಾತಿ, ಸಿಂಧಿ, ಪಂಜಾಬಿ, ಉರ್ದು, ತಮಿಳು, ತೆಲುಗು, ಮಲಯಾಳಂ, ಮರಾಠಿ– ಹೀಗೆ ಅನೇಕ ಭಾಷೆಗಳನ್ನು ಮಾತನಾಡುವ ಜನ ಇದ್ದಾರೆ. ಇಷ್ಟೊಂದು ವಿಶೇಷತೆಗಳ ನಡುವೆ ಹಲವಾರು ಸಮಸ್ಯೆಗಳೂ ಸಹ ಗಾಂಧಿನಗರವನ್ನು ಕಾಡುತ್ತಿವೆ. ಮುಖ್ಯವಾಗಿ ಕಸ ವಿಲೇವಾರಿ ಹಾಗೂ ವಾಯು ಮಾಲಿನ್ಯ ಇಲ್ಲಿಯ ಜನರನ್ನು ತೀವ್ರವಾಗಿ ಕಾಡುತ್ತಿರುವ ಸಮಸ್ಯೆಗಳು. ಇದರ ಕಡೆ ಜನಪ್ರತಿನಿಧಿಗಳು ಗಮನ ಹರಿಸಬೇಕು ಎನ್ನುವುದು ನನ್ನ ಕೋರಿಕೆ.

ಮಿತ್ರರೇ, ಇಂತಹ ಸಾಹಿತ್ಯ ಸಮ್ಮೇಳನದಲ್ಲಿ ಇವರೇಕೆ ಭೂಪ್ರದೇಶದ ಚಿತ್ರಣವನ್ನು ಕೊಡುತ್ತಿದ್ದಾರೆ ಅಂತ ನೀವು ಭಾವಿಸಬಹುದು. ಗಾಂಧಿನಗರ ಕ್ಷೇತ್ರದ ಪ್ರಾಮುಖ್ಯತೆ ಹಾಗೂ ವೈವಿಧ್ಯತೆಯನ್ನು ಒಂದು ಸಲ ಮೆಲುಕು ಹಾಕಿಕೊಂಡರೆ ಈ ಸಮ್ಮೇಳನದ ಮಹತ್ವ ಇನ್ನಷ್ಟು ಹೆಚ್ಚಾಗುತ್ತದೆ ಎನ್ನುವ ಭಾವನೆ ನನ್ನದು. ಮೊದಲೇ ಹೇಳಿದಂತೆ, ಗಾಂಧಿನಗರ ಎಲ್ಲ ಭಾಷಿಗರು ಇರುವಂತಹ ಕ್ಷೇತ್ರ. ಇಲ್ಲಿ ಕನ್ನಡವನ್ನು ಉಳಿಸುವಂತಹ ಒಂದು ದೊಡ್ಡ ಸವಾಲು ನಮ್ಮ ಮುಂದಿದೆ. ಕನ್ನಡ ಭಾಷೆ ಮತ್ತು ಸಂಸ್ಕೃತಿಯ ವಿಚಾರಕ್ಕೆ ಬಂದರೆ ನಮಗೆ ಈ ಪ್ರದೇಶದಲ್ಲಿ ಎರಡು ದೊಡ್ಡ ಸಮಸ್ಯೆ ಎದುರಾಗಿರುವುದು ಕಂಡುಬರುತ್ತದೆ. ವಲಸಿಗರ ದಾಳಿ ಹಾಗೂ ಜಾಗತೀಕರಣದ ದಾಳಿ. ಯಾವುದೇ ಸಾಹಿತ್ಯದ ಮೂಲ ಉದ್ದೇಶ ಜನರ ಬದುಕನ್ನು ಹಸನಾಗಿಸುವುದು. ಬದುಕು ಬಿಟ್ಟು ಸಾಹಿತ್ಯವಿಲ್ಲ, ಸಾಹಿತ್ಯ ಬಿಟ್ಟು ಬದುಕಿಲ್ಲ. ಸಾಹಿತ್ಯವೆಂಬುದು ಜನಜೀವನದ ಪ್ರತಿಬಿಂಬವಲ್ಲ, ಗತಿಬಿಂಬ. ಯಾವ ಓದು ನಮಗೆ ಹಿತಕೊಡುತ್ತದೆಯೋ

(ಮುಂದುವರೆಯುವುದು)

ಕರ್ನಾಟಕ

ಬುಧವಾರ, 23 ಆಗಸ್ಟ್ 2017, ಮೈಸೂರು

ಶೇಷಾದ್ರಿಪುರಂ ಪದವಿ ಕಾಲೇಜಿನಲ್ಲಿ ದತ್ತಿ ಉಪನ್ಯಾಸ

ಗಾಂಧೀಜಿ ಪ್ರಭಾವಕ್ಕೊಳಗಾಗಿದ್ದ ಪುತಿನ

ವಿಕ ಸುದ್ದಿಲೋಕ ಮೈಸೂರು

ನವೋದಯ ಕಾಲದ ಶ್ರೇಷ್ಠ ಕವಿ ಪು.ತಿ.ನ. ಅವರು ಗಾಂಧಿ ೀಜಿಯವರ ಪ್ರಭಾವಕ್ಕೊಳಗಾಗಿದ್ದರು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕ ಡಾ. ನೀಲಗಿರಿ ತಳವಾರ ಹೇಳಿದರು.

ನಗರದ ಹೆಬ್ಬಾಳು ರಿಂಗ್ ರಸ್ತೆಯಲ್ಲಿರುವ ಶೇಷಾದ್ರಿಪುರಂ ಪದವಿ ಕಾಲೇಜಿನಲ್ಲಿ ಮೈಸೂರು ವಿವಿಯ ಗಾಂಧಿ ಅಧ್ಯಯನ ಕೇಂದ್ರ ಹಾಗೂ ಗಾಂಧಿ ಶಾಂತಿ ಪ್ರತಿಷ್ಠಾನ ಸಂಯುಕ್ತಾಶ್ರಯದಲ್ಲಿ ನಡೆದ ಪು.ತಿ.ನ. ಅವರ ದೃಷ್ಟಿಯಲ್ಲಿ ಗಾಂಧೀಜಿ ಕುರಿತು ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪುತಿನ ಅವರು ತಮ್ಮ ಕಥೆ ಮತ್ತು ಕಾವ್ಯಗಳಲ್ಲಿ ಗಾಂಧೀಜಿ ಅವರ ವಿಚಾರಧಾರೆಗಳನ್ನು ಬಿಂಬಿಸಿದ್ದು, ಅಷ್ಟರ ಮಟ್ಟಿಗೆ ಗಾಂಧೀಜಿ ಪ್ರಭಾವಕ್ಕೆ ಪುತಿನ ಒಳಗಾಗಿದ್ದರು ಎಂದು ಹೇಳಿದರು.

ಗಾಂಧೀ ಸಂಸ್ಥಾನದ ಅಧ್ಯಕ್ಷರಾದ ಡಾ. ವೂಡೇ. ಪಿ. ಕೃಷ್ಣ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಪು.ತಿ.ನ ಅವರು ಗಾಂಧೀಜಿ ಅವರ ವ್ಯಕ್ತಿತ್ವವನ್ನು ತಮ್ಮ ಬರಹಗಳ ಮೂಲಕ ನಮ್ಮ ಮುಂದೆ ಹಿಡಿದಿಟ್ಟಿರುವ ಪರಿಯನ್ನು ವಿವರಿಸಿದರು.

ಗಾಂಧೀಜಿಯವರ ಭಜನೆ ಹಾಗೂ ಗಾಂಧೀ ಪುತ್ಥಳಿಗೆ ಪುಷ್ಪಾರ್ಚನೆ ಮಾಡುವುದರೊಂದಿಗೆ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಾಯಿತು.

ಗಾಂಧಿ ಪ್ರತಿಷ್ಠಾನದ ಕಾರ್ಯದರ್ಶಿ ಪ್ರೊ. ಮಲ್ಲೇಶ್ವರಂ ಜಿ. ವೆಂಕಟೇಶ್ ಮಾತನಾಡಿ, ಮಹಾತ್ಮ ಗಾಂಧೀಜಿ ಅವರನ್ನು ನಾವು ಕೇವಲ ಬಾಹ್ಯವಾಗಿ ಮಾತ್ರ ಒಪ್ಪಿಕೊಳ್ಳದೆ ಆಂತರಿಕವಾಗಿ ಅವರ ತತ್ತ್ವಗಳನ್ನು ಅಳವಡಿಸಿಕೊಳ್ಳಬೇಕು ಎಂದು ನುಡಿದರು.

ಕಾರ್ಯಕ್ರಮದಲ್ಲಿ ಡಾ. ಎಂ. ಕೆ. ರಾಮಶೇಷನ್, ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಬಿ. ಎನ್. ಅನಂತರಾಮ್, ಶೇಷಾದ್ರಿಪುರಂ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಅರ್ಚನ ಸ್ವಾಮಿ. ಎನ್, ಪದವಿ ಕಾಲೇಜಿನ ಪ್ರಾಂಶುಪಾಲೆ ಸೌಮ್ಯ ಈರಪ್ಪ, ಕೆ, ಸಂಸ್ಥೆಯ ಪತ್ರಿಕಾ ಪ್ರತಿನಿಧಿ ಶಾಂತಮ್ಮ ಇದ್ದರು.



ಮೈಸೂರಿನ ಹೆಬ್ಬಾಳು ರಿಂಗ್ ರಸ್ತೆಯಲ್ಲಿರುವ ಶೇಷಾದ್ರಿಪುರಂ ಪದವಿ ಕಾಲೇಜಿನಲ್ಲಿ ನಡೆದ ಪು.ತಿ.ನ ಅವರ ದೃಷ್ಟಿಯಲ್ಲಿ ಗಾಂಧೀಜಿ ವಿಷಯವನ್ನು ಕುರಿತು ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಕೇಂದ್ರದ ಪ್ರಾಧ್ಯಾಪಕ ಡಾ. ನೀಲಗಿರಿ ತಳವಾರ,ಗಾಂಧೀ ಸಂಸ್ಥಾನದ ಅಧ್ಯಕ್ಷರಾದ ಡಾ. ವೂಡೇ. ಪಿ. ಕೃಷ್ಣ , ಪ್ರತಿಷ್ಠಾನದ ಕಾರ್ಯದರ್ಶಿ ಪ್ರೊ. ಮಲ್ಲೇಶ್ವರಂ ಜಿ. ವೆಂಕಟೇಶ್,ಡಾ. ಎಂ. ಕೆ. ರಾಮಶೇಷನ್, ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಬಿ. ಎನ್. ಅನಂತರಾಮ್, ಶೇಷಾದ್ರಿಪುರಂ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಅರ್ಚನ ಸ್ವಾಮಿ. ಎನ್,ಪದವಿ ಕಾಲೇಜಿನ ಪ್ರಾಂಶುಪಾಲರಾದ ಸೌಮ್ಯ ಈರಪ್ಪ, ಕೆ, ಇದ್ದರು.

ಮೈಸೂರು

ಕನ್ನಡಿಗರ
ಪ್ರಜಾನುಡಿ
ದಿನಪತ್ರಿಕೆ

ಮಂಗಳವಾರ, ಆಗಸ್ಟ್ 22, 2017

ದತ್ತಿ ಉಪನ್ಯಾಸ ಕಾರ್ಯಕ್ರಮ: ಗಾಂಧಿ ಶಾಂತಿ ಪ್ರತಿಷ್ಠಾನ

ಮೈಸೂರು: ನಗರದ ಶೇಷಾದ್ರಿಪುರಂ ಪದವಿ ಕಾಲೇಜಿನ ಗಾಂಧಿ ಅಧ್ಯಯನ ಕೇಂದ್ರ ಹಾಗೂ ಗಾಂಧಿ ಶಾಂತಿ ಪ್ರತಿಷ್ಠಾನದ ಸಂಯುಕ್ತಾಶ್ರಯದಲ್ಲಿ ಪು.ತಿ.ನ ಅವರ ದೃಷ್ಟಿಯಲ್ಲಿ ಗಾಂಧೀಜಿ ವಿಷಯವನ್ನು ಕುರಿತು ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಸೋಮವಾರ ಹಮ್ಮಿಕೊಳ್ಳಲಾಗಿತ್ತು.

ಗಾಂಧೀಜಿಯವರ ಭಜನೆ ಹಾಗೂ ಗಾಂಧೀ ಪುತ್ಥಳಿಗೆ ಪುಷ್ಪಾರ್ಚನೆ ಮಾಡುವುದರೊಂದಿಗೆ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಾಯಿತು. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಕೇಂದ್ರದಲ್ಲಿ ಪ್ರಾಧ್ಯಾಪಕರಾಗಿರುವ ಡಾ. ನೀಲಗಿರಿ ತಳವಾರ ಅವರು ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿದ್ದರು.

ಗಾಂಧಿ ಸಂಸ್ಥಾನದ ಅಧ್ಯಕ್ಷ ಡಾ. ವೂಡೇ ಪಿ ಕೃಷ್ಣ, ಗಾಂಧಿ ಪ್ರತಿಷ್ಠಾನದ ಕಾರ್ಯದರ್ಶಿ ಪ್ರೊ.ಮಲ್ಲೇಶ್ವರಂ ಜಿ.ವೆಂಕಟೇಶ್, ಡಾ.ಎಂ.ಕೆ. ರಾಮಶೇಷನ್, ಬಿ.ಎನ್.ಅನಂತರಾಮ್, ಅರ್ಚನ ಸ್ವಾಮಿ.ಎನ್, ಸೌಮ್ಯ ಈರಪ್ಪ. ಕೆ ಮತ್ತು ಶಾಂತಮ್ಮ ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರು, ಬೋಧಕ, ಬೋಧಕೇತರರು ಉಪಸ್ಥಿತರಿದ್ದರು.

ಗುರುವಾರ 17 ಆಗಸ್ಟ್ 2017
VIJAYAVANI » 17 AUGUST 2017

ಸಾಮರಸ್ಯಂನಿಂದ ಸಂಸ್ಕೃತ ಪ್ರಚಾರ

ಪ್ರೇಕ್ಷಕರನ್ನು ಸೆಳೆದ ಮ್ಯೂಸಿಕ್ ಬ್ಯಾಂಡ್ » ಮೈತ್ರೀ ಸಂಸ್ಕೃತ ಸಂಸ್ಕೃತಿ ಪ್ರತಿಷ್ಠಾನದಿಂದ 'ಮೇಧಾನಮನಂ'

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಸಂಸ್ಕೃತ ಶ್ಲೋಕಗಳು ಎಲ್ಲರಿಗೂ ಗೊತ್ತು. ಆದರೆ, ಸಂಸ್ಕೃತದ ಗೀತೆಗಳು ಸಲ್ಪ ವಿರಳ. ಸಾಮರಸ್ಯಂ ಸಂಸ್ಕೃತ ಮ್ಯೂಸಿಕ್ ಬ್ಯಾಂಡ್ ಇಂಥದ್ದೊಂದು ವಿನೂತನ ಪ್ರಯೋಗಕ್ಕೆ ನಾಂದಿ ಹಾಡಿತು. ಕನ್ನಡದ ಪ್ರಸಿದ್ಧ ಗೀತೆಗಳನ್ನು ಸಂಸ್ಕೃತಕ್ಕೆ ಅನುವಾದಿಸಿ ಲಯಬದ್ಧವಾಗಿ ಹಾಡುವ ಮೂಲಕ ಪ್ರೇಕ್ಷಕರನ್ನು ಮೂಕವಿಸ್ಮಿತಗೊಳಿಸಿತು.

ಭಾರತೀಯ ವಿದ್ಯಾಭವನದಲ್ಲಿ ಮೈತ್ರೀಸಂಸ್ಕೃತಸಂಸ್ಕೃತಿಪ್ರತಿಷ್ಠಾನಂ ಆಯೋಜಿಸಿದ್ದ 'ಮೇಧಾನಮನಂ' ಕಾರ್ಯಕ್ರಮದಲ್ಲಿ ಸಂಸ್ಕೃತ ಭಾಷಾ ಪ್ರಚಾರಕ್ಕೆಂದೇ ಆರಂಭವಾಗಿರುವ ಸಾಮರಸ್ಯಂ ಬ್ಯಾಂಡ್ ಕಛೇರಿ ಸಭಿಕರಿಗೆ ವಿಭಿನ್ನ ಅನುಭವ ನೀಡಿತು.

ಪೋಷಕ ನಟ ಸುಚೇಂದ್ರ ಪ್ರಸಾದ್ ನಿರೂಪಣೆಯಲ್ಲಿ ಗಾಯಕಿಯರಾದ ಭವಾನಿ ಹೆಗಡೆ ಮತ್ತು ಓಹಿಲೇಶ್ವರಿ ಸಂಸ್ಕೃತ ಗೀತೆಗಳನ್ನು ಪ್ರಸ್ತುತಪಡಿಸಿದರು. ತಬಲಾದಲ್ಲಿ ಸುಧಾಂಶು ಹೆಗಡೆ, ಸ್ಯಾಕ್ಸೋಫೋನ್‌ನಲ್ಲಿ ತ್ಯಾಗರಾಜ ರಂಗ, ಡ್ರಮ್ಸ್‌ನಲ್ಲಿ ಅಮೋಘವರ್ಷ, ಕೀಬೋರ್ಡ್‌ನಲ್ಲಿ ಅಭಿಷೇಕ್ ಸಾಥ್ ನೀಡಿದರು.





'ಮೇಧಾನಮನಂ' ಕಾರ್ಯಕ್ರಮದಲ್ಲಿ ಡಾ. ಗಣಪತಿ ಹೆಗಡೆ ವಿರಚಿತ 'ಸಂಸ್ಕೃತ ಗುರುಕುಲಂ'ನ ಮೊದಲ 100 ಪಾಠಗಳ ಸಂಗ್ರಹ ಕೃತಿ ಲೋಕಾರ್ಪಣೆಗೊಳಿಸಲಾಯಿತು. ದೊಡ್ಡರಂಗೇಗೌಡ, ಎಸ್. ಷಡಕ್ಷರಿ, ಡಾ. ವೂಡೇ ಪಿ. ಕೃಷ್ಣ, ಸುಚೇಂದ್ರ ಪ್ರಸಾದ್, ವಿಜಯ ರಾಘವೇಂದ್ರ ಮತ್ತಿತರರು ಉಪಸ್ಥಿತರಿದ್ದರು.

> ಶಾಲೆಯಲ್ಲಿ ಸಂಸ್ಕೃತ ಅಭ್ಯಾಸ ಮಾಡಿದ್ದೆ. ಅದ್ದರಿಂದ ನನ್ನ ಪಾತ್ರಗಳನ್ನು ಅನುಭವಿಸಿ, ಪೂಜಿಸಲು ಬಹಳ ಸಹಕಾರಿಯಾಯಿತು. ಆಧುನಿಕ ಜೀವನದ ಜಪ ಎಷ್ಟೇ ಇದ್ದರೂ ಹಳೆಯ ಸಂಪ್ರದಾಯದೆಡೆಗೆ ತುಡಿತ ಇರಬೇಕು.
>
> : ವಿಜಯ ರಾಘವೇಂದ್ರ ನಟ

ಸುಮಧುರ ಗಾಯನ: ಗಣ ನಾಯಕಾಯ... ಗೀತೆಯಿಂದ ಆರಂಭವಾದ ಕಛೇರಿಯಲ್ಲಿ ಕಾ ಹಿ ಮೋಹನ, ವಿಲಸತು ಸಾ ಮೇ ರಸನಾಗ್ರೇ, ಅಹ, ಮೇವ ಭಾಗ್ಯವತಿ, ಧರಣಿ ಮಂಡಲ, ಭಾಗ್ಯದ ವಲಯೇಶ, ಅಯಿಭಾರತ, ಭಜಗೋವಿಂದಂ ಮುಂತಾದ ಗೀತೆಗಳನ್ನು ಸುಮಧುರವಾಗಿ ಪ್ರಸ್ತುತಪಡಿಸಲಾಯಿತು. ವಿದ್ವಾಂಸರಾದ ರಾಮಚಂದ್ರ ಶರ್ಮಾ ತ್ಯಾಗಲಿ, ಡಾ. ರಾಮಕೃಷ್ಣ ಪೆಜತ್ತಾಯ, ನವೀನ್ ಗಂಗೋತ್ರಿ ಅವರು ಕನ್ನಡದಿಂದ ಸಂಸ್ಕೃತಕ್ಕೆ ಅನುವಾದಿಸಿದ ಮತ್ತು ಡಾ. ಗಣಪತಿ ಹೆಗಡೆ ಅವರ ಸಂಸ್ಕೃತ ಗೀತೆಗಳನ್ನು ಹಾಡಲಾಯಿತು.

ವಿದ್ಯಾರ್ಥಿಗಳಿಗೆ ಅಭಿನಂದನೆ: ಸಂಸ್ಕೃತದಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿ, ಸ್ಮರಣಿಕೆ ವಿತರಿಸಲಾಯಿತು. ಹಿರಿಯ ವಕೀಲ ಕೆ.ಜೆ. ಕಾಮತ್, ಲೇಖಕ ನಾಗತಿಹಳ್ಳಿ ಜಯಪ್ರಕಾಶ ಮತ್ತಿತರರಿದ್ದರು.

ಪುಸ್ತಕ ಲೋಕಾರ್ಪಣೆ

ಮೇಧಾನಮನಮನಂ ಕಾರ್ಯಕ್ರಮಕ್ಕೆ ಹಿರಿಯ ಸಾಹಿತಿ ದೊಡ್ಡರಂಗೇಗೌಡ, ಅಂಕಣಕಾರ ಎಸ್. ಷಡಕ್ಷರಿ, ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ, ನಟರಾದ ಸುಚೇಂದ್ರ ಪ್ರಸಾದ್, ವಿಜಯ ರಾಘವೇಂದ್ರ ಚಾಲನೆ ನೀಡಿದರು. 'ವಿಜಯವಾಣಿ'ಯಲ್ಲಿ ಪ್ರಕಟವಾಗುತ್ತಿರುವ ಡಾ. ಗಣಪತಿ ಹೆಗಡೆ ಅವರ 'ಸಂಸ್ಕೃತ ಗುರುಕುಲಂ'ನ ಮೊದಲ 100 ಪಾಠಗಳ ಸಂಗ್ರಹ ಕೃತಿ ಲೋಕಾರ್ಪಣೆಗೊಳಿಸಲಾಯಿತು.

ಸಂಯುಕ್ತ ಕರ್ನಾಟಕ
ಶುಕ್ರವಾರ, 11, ಆಗಸ್ಟ್, 2017,

ಜನಸಂಖ್ಯೆಗೆ ಅನುಗುಣವಾಗಿ ಆಹಾರ ಉತ್ಪಾದನೆ

ಬೆಂಗಳೂರು: ದೇಶದ ಜನಸಂಖ್ಯೆಗೆ ಅನುಗುಣವಾಗಿ ಆಹಾರ ಉತ್ಪಾದನೆಯಲ್ಲಿ ಹೆಚ್ಚಳ ಮಾಡಿಕೊಳ್ಳಬೇಕಿದೆ ಎಂದು ಐಟಿಸಿ ಅಗ್ರಿಟೆಕ್ ಇನ್‌ಕ್ಲೂಷನ್ ಅಧ್ಯಕ್ಷ ಡಾ.ಎಸ್. ಅಯ್ಯಪ್ಪನ್ ಅಭಿಪ್ರಾಯಪಟ್ಟರು.

ನಿಮ್ಹಾನ್ಸ್ ಸಭಾಂಗಣದಲ್ಲಿ ನಡೆದ ಇಂಡಿಯನ್ ಟೆಕ್ನಾಲಜಿ ಕಾಂಗ್ರೆಸ್‌ನಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ದೇಶದಲ್ಲಿ ಶೇ.60ರಷ್ಟು ಅಧಿಕ ಜನತೆ ಕೃಷಿಯನ್ನೇ ಅವಲಂಬಿಸಿದ್ದಾರೆ. ದೇಶದ ಬಹುತೇಕ ಕೃಷಿಕರು ಸಣ್ಣ ರೈತರಾಗಿದ್ದಾರೆ. ಕೃಷಿಗೆ ಸಮಗ್ರ ಒತ್ತು ನೀಡುವ ಮೂಲಕ ಅಗತ್ಯಕ್ಕೆ ತಕ್ಕ ಆಹಾರವನ್ನು ಉತ್ಪಾದನೆ ಮಾಡಬೇಕಿದೆ ಎಂದು ಹೇಳಿದರು.

ಇಸ್ರೋ ಉಪಗ್ರಹ ಕೇಂದ್ರ ನಿರ್ದೇಶಕ ಡಾ.ಎಂ. ಅಣ್ಣಾದೊರೈ ಮಾತನಾಡಿ, ಲಭ್ಯವಿರುವ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ಕೃಷಿ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಬಹುದು. ಈ ನಿಟ್ಟಿನಲ್ಲಿ ಯುವ ಎಂಜಿನಿಯರ್‌ಗಳು ಸಂಶೋಧನೆ ನಡೆಸಬೇಕಾಗಿದೆ ಎಂದರು.

ಉಪಗ್ರಹ ಸಹಾಯದಿಂದ ಯಾವ ಸಮಯದಲ್ಲಿ ಯಾವ ಬೆಳೆ ಬೆಳೆಯಬೇಕು. ಹವಾಮಾನದ ವೈಪರಿತ್ಯದಿಂದ ಕೃಷಿಯ ಮೇಲೆ ಬೀರುವ ಪರಿಣಾಮದ ಕುರಿತು ಇಸ್ರೋ ಸಹ ಮಾಹಿತಿ ನೀಡುತ್ತಿದೆ ಎಂದರು. ಈ ವೇಳೆ ಐಎನ್‌ಡಿಐಎ ವಿಜ್ಞಾನಿ ಡಾ.ವಿ. ಪ್ರಕಾಶ್, ಐಟಿಸಿ ಅಧ್ಯಕ್ಷ ಡಾ.ಎಲ್.ವಿ. ಮುರುಳೀಕೃಷ್ಣರೆಡ್ಡಿ, ಐಟಿಸಿ ರಾಷ್ಟ್ರೀಯ ಸಲಹಾ ಸಮಿತಿ ಅಧ್ಯಕ್ಷ ಪ್ರೊ.ಆರ್.ಎಂ. ವಾಸಗಮ್ ಮತ್ತಿತರರಿದ್ದರು.



ನಿಮ್ಹಾನ್ಸ್ ಸಭಾಂಗಣದಲ್ಲಿ ನಡೆದ ಇಂಡಿಯನ್ ಟೆಕ್ನಾಲಜಿ ಕಾಂಗ್ರೆಸ್‌ನಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಪ್ರೊ. ರಾಧಾಕೃಷ್ಣ ಅವರಿಗೆ ಇಸ್ರೋ ಉಪಗ್ರಹ ಕೇಂದ್ರ ನಿರ್ದೇಶಕ ಡಾ.ಎಂ. ಅಣ್ಣಾದೊರೈ, ಐಎನ್‌ಡಿಐಎ ವಿಜ್ಞಾನಿ ಡಾ.ವಿ. ಪ್ರಕಾಶ್, ಡಾ. ವೂಡೆ ಪಿ. ಕೃಷ್ಣ ಅವರು ಮೈಸೂರು ಪೇಟ ಧರಿಸಿ ಸನ್ಮಾನಿಸಿದರು.

ಶುಕ್ರವಾರ, 11, ಆಗಸ್ಟ್, 2017

ಸಂಯುಕ್ತ ಕರ್ನಾಟಕ

ಮೈಲಾರ ಮಹದೇವಪ್ಪ ಕಡೆಗಣನೆ: ವಿಷಾದ

ಬೆಂಗಳೂರು: ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಕರ್ನಾಟಕದ ಏಕೈಕ ಹುತಾತ್ಮ ಮೈಲಾರ ಮಹದೇವಪ್ಪ ಅವರನ್ನು ಕಡೆಗಣಿಸಲಾಗಿದೆ ಎಂದು ಕಸಾಪ ಅಧ್ಯಕ್ಷ ಡಾ. ಮನುಬಳಿಗಾರ್ ಬೇಸರ ವ್ಯಕ್ತಪಡಿಸಿದರು.

ಗಾಂಧಿಭವನದಲ್ಲಿ ಆಯೋಜಿಸಲಾಗಿದ್ದ 'ಚಂಪಾರಣ್ ಸತ್ಯಾಗ್ರಹ ಶತಮಾನೋತ್ಸವ ಆಚರಣೆ ಹಾಗೂ ಕ್ವಿಟ್ ಇಂಡಿಯಾ ಚಳವಳಿ 75ನೇ ವರ್ಷಾಚರಣೆ ಹಾಗೂ ಮೈಲಾರ ಮಹದೇವಪ್ಪ ದತ್ತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗಾಂಧೀಜಿ ಅವರ ಅಹಿಂಸಾ ಮಾರ್ಗವನ್ನು ಅನುಸರಿಸಿಕೊಂಡು ಬಂದವರಲ್ಲಿ ಮಹದೇವಪ್ಪನವರೂ ಒಬ್ಬರು. ನಮ್ಮ ಭಾರತದ ಚರಿತ್ರೆ ವಿಚಿತ್ರವಾಗಿದೆ ಯಾವುದಕ್ಕೆ ಮಹತ್ವ ನೀಡಬೇಕೋ ಅಂತಹ ವಿಚಾರಗಳನ್ನು ಮರೆಮಾಚಲಾಗುತ್ತದೆ ಎಂದರು.

ಇಂದು ಯಾರ್‍ಯಾರದ್ದೋ ಹೆಸರಿನಲ್ಲಿ ಉಪನ್ಯಾಸ ನಡೆಸಲಾಗುತ್ತದೆ. ರಸ್ತೆ, ಬಡಾವಣೆಗಳಿಗೆ ಹೆಸರನ್ನು ಇಡಲಾಗುತ್ತದೆ. ಆದರೆ, ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕಕ್ಕೆ ಒಂದು ಮಹತ್ವದ ಸ್ಥಾನ ಕಲ್ಪಿಸಿಕೊಟ್ಟ ಮಹದೇವಪ್ಪನವರನ್ನು ಮರೆತಿರುವುದು ದುರಾದೃಷ್ಟದ ಸಂಗತಿ ಎಂದು ವಿಷಾದಿಸಿದರು.

ಪ್ರಗತಿಪರ ಕೃಷಿಕ ನಾಡೋಜ ನಾರಾಯಣರೆಡ್ಡಿ ಮಾತನಾಡಿ, ದಿನದಲ್ಲಿ 18 ಗಂಟೆಗಳ ಕಾಲ ದುಡಿಮೆ ಅವಶ್ಯಕತೆ ಇರೋದಿಲ್ಲ. ಗಾಂಧೀಜಿ ಹೇಳಿದಷ್ಟು ಸಮಯ ಮಾತ್ರ ದುಡಿದು ಅದರಲ್ಲಿ ಶೇ.20ರಷ್ಟನ್ನು ಉಳಿತಾಯ ಮಾಡಿದರೂ ಹೃದಯ ಶ್ರೀಮಂತರಾಗಬಹುದು ಎಂದರು.

ಇತಿಹಾಸ ತಜ್ಞ ಡಾ.ಎಸ್. ಚಂದ್ರಶೇಖರ್, ಪ್ರಾಧ್ಯಾಪಕಿ ಪಿ.ಪದ್ಮಾ ಉಪನ್ಯಾಸ ನೀಡಿದರು. ಮೈಲಾರ ಮಹದೇವಪ್ಪನವರ ಪುತ್ರಿ ಕಸ್ತೂರಿ ದೇವಿ 'ಸಂಗ್ರಾಮದ ನೆನಪುಗಳು' ಪುಸ್ತಕ ಬಿಡುಗಡೆ ಮಾಡಿದರು.




ಗಾಂಧಿಭವನದಲ್ಲಿ ಆಯೋಜಿಸಿದ್ದ ಚಂಪಾರಣ್ ಸತ್ಯಾಗ್ರಹ ಶತಮಾನೋತ್ಸವ ಹಾಗೂ ಕ್ವಿಟ್ ಇಂಡಿಯಾ ಚಳವಳಿಗೆ 75 ಕಾರ್ಯಕ್ರಮಕ್ಕೆ ಕಸ್ತೂರಿ ದೇವಿ, ಕಸಾಪ ಅಧ್ಯಕ್ಷ ಮನುಬಳಿಗಾರ್, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ. ವೊಡೇ ಪಿ.ಕೃಷ್ಣ ಚಾಲನೆ ನೀಡಿದರು.

ಹೊಸ ದಿಗಂತ

ಶುಕ್ರವಾರ
11 ಆಗಸ್ಟ್ 2017

ದಿಗಂತ ಚಿತ್ರ



ನಗರದ ನಿಮ್ಹಾನ್ಸ್ ಸಮ್ಮೇಳನ ಸಭಾಂಗಣದಲ್ಲಿ ಗುರುವಾರ ನಡೆದ ಭಾರತೀಯ ತಾಂತ್ರಿಕ ಸಮಾರಂಭದಲ್ಲಿ ಪ್ರೊ .ರಾಧಾಕೃಷ್ಣ ಅವರಿಗೆ ಟೆಕ್ನಾಲಜಿ ಎಕ್ಸಲೆನ್ಸ್ ಪ್ರಶಸ್ತಿ ಪ್ರದಾನ ಮಾಡಲಾಯಿತು. ಇಸ್ರೋ ಸ್ಯಾಟಲೈಟ್ ಕೇಂದ್ರದ ನಿರ್ದೇಶಕ ಡಾ.ಎಂ. ಅಣ್ಣಾದುರೈ, ಇಂಡಿಯನ್ ಟೆಕ್ನಾಲಜಿ ಕಾಂಗ್ರೆಸ್ ಅಧ್ಯಕ್ಷ ಡಾ.ಎಲ್.ವಿ. ಮುರಳೀಕೃಷ್ಣರೆಡ್ಡಿ ಸೇರಿದಂತೆ ಇನ್ನಿತರರಿದ್ದರು.



ನಿಮ್ಹಾನ್ಸ್ ಸಮ್ಮೇಳನ ಸಭಾಂಗಣದಲ್ಲಿ ಇಂಡಿಯನ್ ಟೆಕ್ನಾಲಜಿ ಕಾಂಗ್ರೆಸ್ ವತಿಯಿಂದ ಹಮ್ಮಿಕೊಂಡಿದ್ದ ಕೃಷಿ ತಂತ್ರಜ್ಞಾನದ ಆವಿಷ್ಕಾರಗಳು ಕುರಿತ ಸಮ್ಮೇಳನವನ್ನು ಇಸ್ರೋದ ನಿರ್ದೇಶಕ ಡಾ.ಎಂ.ಅಣ್ಣಾದೊರೈ ಉದ್ಘಾಟಿಸಿದರು. ನ್ಯಾಷನಲ್ ಅಡ್ವೈಸರಿ ಕಮಿಟಿಯ ಅಧ್ಯಕ್ಷ ಆರ್.ಎಂ.ವಾಸಗಂ, ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್‌ನ ಡಾ.ಕೆ.ಗೋಪಾಲಕೃಷ್ಣನ್, ಡಾ.ವೂಡೆ ಪಿ.ಕೃಷ್ಣ, ಡಾ.ಎಲ್.ವಿ.ಮುರಳಿ ಕೃಷ್ಣರೆಡ್ಡಿ, ನಬಾರ್ಡ್‌ನ ಅಯ್ಯಪ್ಪನ್, ಡಾ.ವಿ.ಎಸ್.ಪ್ರಕಾಶ್ ಮತ್ತಿತರರು ಹಾಜರಿದ್ದರು.

ಬೆಂಗಳೂರು ಉದಯವಾಣಿ

ಗುರುವಾರ, ಆಗಸ್ಟ್ 10, 2017

ಚಳವಳಿ ಸ್ಮರಣೆ

■ ಪ್ರಗತಿಪರ ಕೃಷಿಕ, ನಾಡೋಜ ನಾರಾಯಣ ರೆಡ್ಡಿ ಅಭಿಪ್ರಾಯ

ಸಾಲಮನ್ನಾ, ಬಡ್ಡಿರಹಿತ ಸಾಲ ಯೋಜನೆ ಸರಿಯಲ್ಲ

ಬೆಂಗಳೂರು: ಸರ್ಕಾರದಿಂದ ರೈತರ ಸಾಲ ಮನ್ನಾ ಹಾಗೂ ರೈತರಿಗೆ ಬಡ್ಡಿ ರಹಿತ ಸಾಲ ನೀಡಬಾರದು. ಇದರಿಂದ ರೈತರು ಆಸೆಗೆ ಬೀಳುವ ಸಾಧ್ಯತೆ ಇದೆ ಎಂದು ಪ್ರಗತಿಪರ ಕೃಷಿಕ ನಾಡೋಜ ನಾರಾಯಣ ರೆಡ್ಡಿ ಅಭಿಪ್ರಾಯಪಟ್ಟಿದ್ದಾರೆ.

ಗಾಂಧಿ ಸ್ಮಾರಕ ನಿಧಿ, ಮೈಲಾರ ಮಹದೇವ ರಾಷ್ಟ್ರೀಯ ಟ್ರಸ್ಟ್ ವತಿಯಿಂದ ನಗರದ ಗಾಂಧಿ ಭವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಚಂಪಾರಣ್ ಸತ್ಯಾಗ್ರಹ ಶತಮಾನೋತ್ಸವ, ಕ್ವಿಟ್ ಇಂಡಿಯಾ ಚಳವಳಿ ನೆನಪು ಮತ್ತು ಹುತಾತ್ಮ ಮೈಲಾರ ಮಹದೇವಪ್ಪ ದತ್ತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, 'ರೈತರಿಂದ ರಾಷ್ಟ್ರಪತಿಯ ತನಕ ಎಲ್ಲರೂ ಗಾಂಧಿ ತತ್ವ ಅಳವಡಿಸಿಕೊಂಡಿದ್ದರೆ ಅನೇಕ ಸಮಸ್ಯೆಗೆ ಪರಿಹಾರ ಸಿಗುತಿತ್ತು ಮತ್ತು ದೇಶವೂ ಬದಲಾಗುತ್ತಿತ್ತು,' ಎಂದು ಹೇಳಿದರು.

'ನಮ್ಮ ಸಂಸ್ಕೃತಿ ಬಿಟ್ಟು ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುತ್ತಿರುವ ಪರಿಣಾಮವಾಗಿ ದೇಶ ಹೀಗಿದೆ. ನಾವು ಗಳಿಸಿದ ಸಂಪತ್ತಿನಲ್ಲಿ ಶೇ.20ರಷ್ಟು ತೆಗೆದಿಟ್ಟಾಗ ಬೇರೆಯವರ ಸಂಪತ್ತು ಕೊಳ್ಳೆ ಹೊಡೆಯುವ ಅವಶ್ಯಕತೆ ಇರುವುದಿಲ್ಲ. ಭ್ರಷ್ಟಾಚಾರವೂ ಕಡಿಮೆಯಾಗುತ್ತದೆ. ಕೊಡುವ ಸಂಸ್ಕೃತಿಯು ಬೆಳೆಯುತ್ತದೆ. ವಿದ್ಯಾರ್ಥಿಗಳು ಗಾಂಧಿ ತತ್ವನ್ನು ಓದಿ, ಅರ್ಥೈಸಿಕೊಂಡು, ಜೀವನದಲ್ಲಿ ಅಳವಡಿಸಿಕೊಳ್ಳಬೇಕು,' ಎಂದರು.



ಗಾಂಧಿ ಸ್ಮಾರಕ ನಿಧಿ, ಮೈಲಾರ ಮಹಾದೇವ ರಾಷ್ಟ್ರೀಯ ಟ್ರಸ್ಟ್ ವತಿಯಿಂದ ನಗರದ ಗಾಂಧಿ ಭವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಚಂಪಾರಣ್ ಸತ್ಯಾಗ್ರಹ ಶತಮಾನೋತ್ಸವ, ಕ್ವಿಟ್ ಇಂಡಿಯಾ ಚಳವಳಿ ನೆನಪು ಮತ್ತು ಹುತಾತ್ಮ ಮೈಲಾರ ಮಹದೇವಪ್ಪ ದತ್ತಿ ಕಾರ್ಯಕ್ರಮವನ್ನು ಗಾಂಧೀಜಿ ಮತ್ತು ಮೈಲಾರ ಮಹಾದೇವ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಲಾಯಿತು.

ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಡಾ. ಮನು ಬಳಿಗಾರ್ ಮಾತನಾಡಿ, ಬ್ರಿಟಿಷರ ವಿರುದ್ಧ ಮೈಲಾರ ಮಹದೇವಪ್ಪ ಅವರು ಭೂಗತ ಚಳುವಳಿ ಮಾಡಿದ್ದರು. ತ್ಯಾಗದ ಮೂಲಕ ಜನ ಮಾನಸದಲ್ಲಿ ಉಳಿದಿದ್ದಾರೆ. ಉಪ್ಪಿನ ಚಳವಳಿಯಲ್ಲಿ ಮೈಲಾರ ಮಹದೇವ ಭಾಗವಹಿಸದೇ ಇದ್ದಿದ್ದರೆ ರಾಜ್ಯದ ಚರಿತ್ರೆಯೇ ಬರಡಾಗುತಿತ್ತು. ಹರಿಜನರ ಏಳ್ಗೆ, ಕೋಮುಸೌಹಾರ್ದತೆಯ ಬಗ್ಗೆ ಅಂದೇ ಗಾಂಧಿಜಿ ಹೇಳಿದ್ದರು. ಅದನ್ನು ಮೈಲಾರ ಮಹದೇವಪ್ಪ ಅವರು ಜೀವನದಲ್ಲಿ ಅಳವಡಿಸಿಕೊಂಡಿದ್ದರು,' ಎಂದು ವಿವರಿಸಿದರು.

'ಚೀನಾ ವಸ್ತುಗಳನ್ನು ಈಗ ಬಹಿಷ್ಕರಿಸುತ್ತಿದ್ದೇವೆ. ಮೈಲಾರ ಅವರು ತಮ್ಮ 12ನೇ ವರ್ಷದಲ್ಲೇ ವಿದೇಶಿ ಉತ್ಪನ್ನ ಬಹಿಷ್ಕಾರಿಸಿದ್ದರು. ಹೊರಗಿನವರ ಇತಿಹಾಸ ಗೊತ್ತಿದೆ. ಆದರೆ ನಮ್ಮವರ ಇತಿಹಾಸ ತಿಳಿಯುವುದಿಲ್ಲ. ಜಾನ್ಸಿ ರಾಣಿ ಬಗ್ಗೆ ಗೊತ್ತು, ಆದರೆ, ಕಿತ್ತೂರು ರಾಣಿ ಚೆನ್ನಮ್ಮ ಅವರನ್ನು ಮರೆಯುತ್ತಿದ್ದೇವೆ. ಚರಿತ್ರೆ ಓದುವವರ ಸಂಖ್ಯೆ ಕಡಿಮೆಯಾಗಿದೆ. ಕಾಂಗ್ರೆಸ್‌ಗಾಗಿ ಮೈಲಾರ ಅವರು ದುಡಿದಿದ್ದರು. ಈ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವೇ ಅಧಿಕಾರದಲ್ಲಿದ್ದರೂ, ಅವರನ್ನು ನೆನಯದೇ ಇರುವಷ್ಟು ಗೊಡ್ಡು ತನ ಬೆಳೆದುಬಿಟ್ಟಿದೆ,' ಎಂದು ಬೇಸರ ವ್ಯಕ್ತಪಡಿಸಿದರು.

ಎನ್‌ಎಸ್‌ಎಸ್ ರಾಜ್ಯ ಸಂಪರ್ಕಾಧಿಕಾರಿ ಡಾ.ಗಣನಾಥ ಶೆಟ್ಟಿ ಎಕ್ಕಾರ್ ಮಾತನಾಡಿ, ಅನೇಕ ವಿದ್ಯಾರ್ಥಿಗಳಲ್ಲಿ ಗಾಂಧೀಜಿ ಬಗ್ಗೆ ಅಪ ನಂಬಿಕೆ ಇದೆ. ಅದನ್ನು ಹೋಗಲಾಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರದ ನೆರವಿನಿಂದ ಕಾಲೇಜು ವಿದ್ಯಾರ್ಥಿಗಳಿಗೆ ಗಾಂಧೀಜಿ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದಕ್ಕಾಗಿ ಯುವ ಸಬಲೀಕರಣ ಇಲಾಖೆಯಿಂದ 35 ಲಕ್ಷ ರೂ. ಮೀಸಲಿಟ್ಟಿದೆ ಎಂದರು. ಕ್ವಿಟ್ ಇಂಡಿಯಾ ಚಳವಳಿ ಬಗ್ಗೆ ವಿಶ್ರಾಂತ ಕುಲಪತಿ ಡಾ. ಚಂದ್ರಶೇಖರ್ ಹಾಗೂ ಚಂಪಾರಣ್ ಸತ್ಯಾಗ್ರಹದ ಬಗ್ಗೆ ಪ್ರಾಧ್ಯಾಪಕಿ ಡಾ. ಪಿ. ಪದ್ಮ ಉಪನ್ಯಾಸ ಮಾಡಿದರು. ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಮೈಲಾರ ಮಹದೇವಪ್ಪ ಕುಟುಂಬದ ಕಸ್ತೂರಿ ದೇವಿ ಮೊದಲಾದವರು ಉಪಸ್ಥಿತರಿದ್ದರು.

ಸಂಜೆವಾಣಿ



ರಾಜ್ಯ ಗಾಂಧಿ ಸ್ಮಾರಕ ನಿಧಿ ನಗರದ ಗಾಂಧಿ ಭವನದಲ್ಲಿಂದು ಏರ್ಪಡಿಸಿದ್ದ ಚಂಪಾರಣ್ ಸತ್ಯಾಗ್ರಹ ಶತಮಾನೋತ್ಸವ ಹಾಗೂ ಕ್ವಿಟ್ ಇಂಡಿಯಾ ಚಳವಳಿಯ 75ನೇ ವರ್ಷಾಚರಣೆಯಲ್ಲಿ ಪಾಲ್ಗೊಂಡ ಶೇಷಾದ್ರಿಪುರಂ ಶಿಕ್ಷಣ ಸಮೂಹ ಸಂಸ್ಥೆಗಳ ಮುಖ್ಯಸ್ಥ ವೂಡೇ ಪಿ ಕೃಷ್ಣ, ಚಂದ್ರಶೇಖರ್ ಅವರು ಗಾಂಧಿ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು.

ಕರ್ನಾಟಕ ಬುಧವಾರ, 9 ಆಗಸ್ಟ್ 2017, ಚಿತ್ರದುರ್ಗ

ತತ್ತ್ವ ರಹಿತ ರಾಜಕಾರಣ ಸಮಾಜಕ್ಕೆ ಘಾತಕ

ವಿಕ ಸುದ್ದಿಲೋಕ ಚಿತ್ರದುರ್ಗ

ತತ್ವ ರಹಿತ ರಾಜಕಾರಣ ಸಮಾಜಕ್ಕೆ ಘಾತಕ. :ಧಿಕಾರಕ್ಕಾಗಿ ಎಲ್ಲವನ್ನು ಮರೆಯುವ ಜನರ ನಡುವೆ ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಮಾದರಿಯಾಗಿ ಇತಿಹಾಸದ ಪುಟ ಸೇರಿ ಹೋಗಿದ್ದಾರೆ ಎಂದು ಕರ್ನಾಟಕ ರಾಜ್ಯ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣತಿಳಿಸಿದರು.

ತಾಲೂಕಿನ ಸೀಬಾರದ ಎಸ್ಎನ್ ಸ್ಮಾರಕದ ಆವರಣದಲ್ಲಿ ಎಸ್.ನಿಜಲಿಂಗಪ್ಪ ಮೆಮೋರಿಯಲ್ ಟ್ರಸ್ಟ್‌ನಿಂದ ಮಂಗಳವಾರ ನಡೆದ ರಾಷ್ಟ್ರನಾಯಕ ಎಸ್.ನಿಜಲಿಂಗಪ್ಪ ಸ್ಮರಣಾರ್ಥ ಭಾರತ ಬಿಟ್ಟು ತೊಲಗಿ ಆಗಸ್ಟ್ ಕ್ರಾಂತಿಯ ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ಉಪ ನ್ಯಾಸ ನೀಡಿ, ನಿಜಲಿಂಗಪ್ಪ ಗಾಂಧಿವಾದಿಯಲ್ಲ, ಗಾಂಧೀಜಿ ಅವರ ತತ್ವ ಸಿದ್ಧಾಂತಗಳ ಮೈಗೂಡಿಸಿಕೊಂಡು ಕೊನೆ ತನಕ ಹಾಗೇ ಬಾಳಿದ ಅವರು ಗಾಂಧಿ ಅನುಯಾಯಿ ಎಂದು ಹೇಳಿದರು.

ಮಾದರಿ ಜೀವನ ನಡೆಸಿದ ಎಸ್ಎನ್ ಅವರಲ್ಲಿ ಆಚಾರ-ವಿಚಾರದಲ್ಲಿ ಶುದ್ಧತೆ, ನಿಂದನೆ ಸಹಿಸಿಕೊಳ್ಳುವ ಶಕ್ತಿ ಇತ್ತು. ಅಧಿಕಾರದ ಹಿಂದೆ ಹೋಗದೆ ತತ್ವ ಸಿದ್ಧಾಂತಕ್ಕಾಗಿ ರಾಷ್ಟ್ರಪತಿ ಹುದ್ದೆ ಧಿಕ್ಕರಿಸಿದ್ದು ಕನ್ನಡ ನಾಡಿಗೆ ಕೀರ್ತಿ ತಂದಿದ್ದಾರೆ. ತತ್ವ ಸಿದ್ಧಾಂತಗಳನ್ನು ಒಪ್ಪಿ ಅಪ್ಪಿಕೊಂಡರಲ್ಲದೆ ವಿಚಾರಧಾರೆಗಳಿಗೆ ಅಂಟಿಕೊಂಡವರು ಎಂದರು.



ಚಿತ್ರದುರ್ಗ ತಾಲೂಕಿನ ಸೀಬಾರದ ಎಸ್ಎನ್ ಸಮಾಧಿಗೆ ಮಂಗಳವಾರ ಕರ್ನಾಟಕ ರಾಜ್ಯ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಮತ್ತಿತರರು ಪುಷ್ಪನಮನ ಸಲ್ಲಿಸಿದರು.

ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂದು ಗಾಂಧೀಜಿ ಕರೆ ಕೊಟ್ಟಾಗ ಬ್ರಿಟಿಷರು ಅದರಿ ಹೋಗಿದ್ದರು. ಸ್ವಾತಂತ್ರ ಹೋರಾಟದಲ್ಲಿ ಎಂದೂ ಹಿಂಸೆ ಪೋಷಣೆ ಮಾಡಲಿಲ್ಲ, ಗಾಧಿಜಿ 1906ರಲ್ಲಿ ಬರೆದ ಹಿಂದ್ ಸ್ವರಾಜ್ ಪುಸ್ತಕದಲ್ಲಿ ಅವರ ಕನಸಿನ ಭಾರತ ಹೇಗಿತ್ತು ಎನ್ನುವುದನ್ನು ಚಿತ್ರಿಸಿದ್ದಾರೆ. ಈ ಗ್ರಂಥದ ಮೂಲಕ ಗಾಂಧೀಜಿ ಯಾರೂ ಎನ್ನುವುದು ಜಗತ್ತಿಗೆ ಅರ್ಥವಾಗುತ್ತದೆ. ಆದರೆ ಇಂದಿಗೂ ಗಾಂಧೀಜಿ ಕಂಡ ಸ್ವಾತಂತ್ರ ಭಾರತದ ಆಶಯ ಇನ್ನೂ ಈಡೇರಿಲ್ಲ ಎಂದು ವಿಷಾದಿಸಿದರು.

ಗಾಂಧೀಜಿ ಅವರು ಆರ್ಥಿಕ ಸ್ವಾತಂತ್ರ, ಸಾಮಾಜಿಕ ಸ್ವಾತಂತ್ರ, ನೈತಿಕ ಸ್ವಾತಂತ್ರ ಜನತೆಗೆ ಸಿಗಬೇಕು ಎಂದು ಹಂಬಲಿಸಿದ್ದರು. ಆದರೆ ದೇಶದಲ್ಲಿ ಗಾಂಧಿ ಕಂಡ ಕನಸು ನನಸಾಗದೆ. ರಾಜಕೀಯ ಅನೈತಿಕತೆಯಿಂದ ಕೂಡಿದೆ. ರಾಜ್ಯಸಭಾ ಸ್ಥಾನ ಗೆಲ್ಲಲು ಅಡ್ಡ ಮತದಾನ, ಮತಕ್ಕಾಗಿ ಲಂಚ ನೀಡುವುದು, ಮತ ಮಾರಿಕೊಳ್ಳುವುದು ನೋಡಿದರೆ ರಾಜಕೀಯ ಅಧಃಪತನ ಕಂಡಿದ್ದೇವೆ. ಇಂಥಹ ಪರಿಸ್ಥಿತಿಯಲ್ಲಿ ಗಾಂಧೀಜಿಯ ಪ್ರಸ್ತುತತೆ ಎದ್ದು ಕಾಣುತ್ತದೆ ಎಂದು ಹೇಳಿದರು. »IV

ಪ್ರಜಾವಾಣಿ ಬುಧವಾರ ಆಗಸ್ಟ್ 9, 2017 ಚಿತ್ರದುರ್ಗ

ಕರ್ನಾಟಕ ರಾಜ್ಯ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೆ ಪಿ.ಕೃಷ್ಣ


ಗಾಂಧಿ ಸಿದ್ಧಾಂತದೊಂದಿಗೆ ಬದುಕಿದ್ದ ಎಸ್.ಎನ್

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ತತ್ವರಹಿತ ರಾಜಕಾರಣ ಸಮಾಜಕ್ಕೆ ಅಪಾಯ ತಂದೊಡ್ಡುತ್ತದೆ ಎಂಬುದನ್ನು ಪ್ರತಿಪಾದಿಸಿದ್ದ ರಾಷ್ಟ್ರ ನಾಯಕ ಎಸ್.ನಿಜಲಿಂಗಪ್ಪ, ಜೀವನದ ಕೊನೆಯವರೆಗೂ, ಗಾಂಧಿ ತತ್ವ ಸಿದ್ಧಾಂತ ಅನುಸರಿಸುತ್ತಾ ಜನರ ನಡುವೆಯೇ ಬದುಕಿದ್ದರು' ಎಂದು ಕರ್ನಾಟಕ ರಾಜ್ಯ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೆ ಪಿ.ಕೃಷ್ಣ ಹೇಳಿದರು.

ಇಲ್ಲಿನ ಸೀಬಾರದ ಎಸ್. ನಿಜಲಿಂಗಪ್ಪ ಮೆಮೋರಿಯಲ್ ಟ್ರಸ್ಟ್ ಸಭಾಂಗಣದಲ್ಲಿ ರಾಷ್ಟ್ರನಾಯಕ ನಿಜಲಿಂಗಪ್ಪ ಅವರ ಸ್ಮರಣಾರ್ಥ ಮಂಗಳವಾರ ಹಮ್ಮಿಕೊಂಡಿದ್ದ 'ಭಾರತ ಬಿಟ್ಟು ತೊಲಗಿ ಆಗಸ್ಟ್ ಕ್ರಾಂತಿಯ ವಜ್ರ ಮಹೋತ್ಸವ' ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

'ಎಸ್.ಎನ್. ಗಾಂಧಿವಾದಿಯಲ್ಲ, ಗಾಂಧಿ ಅನುಯಾಯಿ. ಅವರ ಆಚಾರ-ವಿಚಾರಗಳಲ್ಲಿ ಶುದ್ಧತೆ ಇತ್ತು. ಅಧಿಕಾರದ ಹಿಂದೆ ಹೋಗದೇ ತತ್ವ, ಸಿದ್ಧಾಂತಕ್ಕಾಗಿ ರಾಷ್ಟ್ರಪತಿ ಹುದ್ದೆಯನ್ನೇ ತಿರಸ್ಕರಿಸಿದ್ದರು. ಗಾಂಧಿ ತತ್ವ, ಸಿದ್ಧಾಂತಗಳನ್ನು ಒಪ್ಪಿ ಅಪ್ಪಿಕೊಂಡರಲ್ಲದೆ ವಿಚಾರಧಾರೆಗಳಿಗೆ ಅಂಟಿಕೊಂಡಿದ್ದರು' ಎಂದು ಹೇಳಿದರು.



ಸೀಬಾರದ ಎಸ್.ನಿಜಲಿಂಗಪ್ಪ ಮೆಮೋರಿಯಲ್ ಟ್ರಸ್ಟ್ ಸಭಾಂಗಣದಲ್ಲಿ ರಾಷ್ಟ್ರನಾಯಕ ಎಸ್.ನಿಜಲಿಂಗಪ್ಪ ಅವರ ಸ್ಮರಣಾರ್ಥ ಮಂಗಳವಾರ ಹಮ್ಮಿಕೊಂಡಿದ್ದ 'ಭಾರತ ಬಿಟ್ಟು ತೊಲಗಿ ಆಗಸ್ಟ್ ಕ್ರಾಂತಿಯ ವಜ್ರ ಮಹೋತ್ಸವ' ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೆ ಪಿ.ಕೃಷ್ಣ ಮಾತನಾಡಿದರು

ಬ್ರಿಟಿಷರ ಆಳ್ವಿಕೆಯ ವೇಳೆ ಗಾಂಧೀಜಿ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂದು ಕರೆ ಕೊಟ್ಟಾಗ, ಬ್ರಿಟಿಷರು ಬೆದರಿದ್ದರು. ಆ ಹೋರಾಟದಲ್ಲಿ ಎಂದೂ ಹಿಂಸೆ ಪೋಷಣೆ ಮಾಡಲಿಲ್ಲ. ಹಾಗಾಗಿಯೇ ಗಾಂಧೀಜಿ ವಿಚಾರಧಾರೆ ಇವತ್ತಿಗೂ ಪ್ರಸ್ತುತವಾಗಿವೆ ಎಂದು ಪ್ರತಿಪಾದಿಸಿದರು.

ಗಾಂಧೀಜಿಯವರ ಕಲ್ಪನೆಯ ಸ್ವಾತಂತ್ರ್ಯ ಇನ್ನೂ ನಮ್ಮ ದೇಶಕ್ಕೆ ಸಿಕ್ಕಿಲ್ಲ. ಆರ್ಥಿಕ ಸ್ವಾತಂತ್ರ, ಸಾಮಾಜಿಕ ಸ್ವಾತಂತ್ರ್ಯ, ನೈತಿಕ ಸ್ವಾತಂತ್ರ ಜನರಿಗೆ ಸಿಗಬೇಕು ಎಂದು ಬಯಸಿದ್ದರು. ಆದರೆ, ದೇಶದಲ್ಲಿ ಗಾಂಧಿ ಕಂಡ ಕನಸು ನನಸಾಗದೆ ರಾಜಕಾರಣದಲ್ಲಿ ಅನೈತಿಕತೆಯೇ ಮೇಳೈಸುತ್ತಿದೆ. ರಾಜ್ಯಸಭಾ ಸ್ಥಾನ ಗೆಲ್ಲಲು ಅಡ್ಡ ಮತದಾನ, ಮತಕ್ಕಾಗಿ ಲಂಚ, ಮತವನ್ನೇ ಮಾರಿಕೊಳ್ಳುವುದನ್ನು ಕಂಡಾಗ, ರಾಜಕೀಯ ಅದೆಷ್ಟು ಅಧಃಪತನ ಕಂಡಿದೆ. ಇಂಥ ಪರಿಸ್ಥಿತಿಯಲ್ಲಿ ಗಾಂಧೀಜಿಯ ಪ್ರಸ್ತುತತೆ ಎದ್ದು ಕಾಣುತ್ತದೆ ಎಂದರು.

ಗಾಂಧಿ ವಿಚಾರಧಾರೆಗಳು ಸ್ವಾತಂತ್ರ್ಯ ಆಂದೋಲನ ಮೀರಿದವುಗಳಾಗಿದ್ದವು. ಅವರ ಮಾತುಗಳಲ್ಲಿ ಪ್ರಬಲ ಶಕ್ತಿ ಇತ್ತು. ಹೊಸ ದೃಷ್ಟಿಕೋನ ಇಟ್ಟುಕೊಂಡು ಅನೇಕ ರಾಷ್ಟ್ರೀಯ ನಾಯಕರನ್ನು ತಯಾರಿಸುವ ಶಕ್ತಿಯನ್ನು ಗಾಂಧೀಜಿ ಹೊಂದಿದ್ದರು ಎಂದರು.

ಎಸ್.ಎನ್.ಮೆಮೋರಿಯಲ್ ಟ್ರಸ್ಟ್ ಗೌರವ ಕಾರ್ಯದರ್ಶಿ ಎಚ್. ಹನುಮಂತಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, 'ರಾಜಕೀಯದಲ್ಲಿ ದಿಕ್ಕು ತೋರಿಸುವವರು ಇಲ್ಲವಾಗಿದ್ದಾರೆ. ಹಾಗಾಗಿ ರಾಜಕೀಯ ಅಧೋಗತಿಗೆ ಇಳಿದಿದೆ. ಹೋರಾಟಗಳು ಮೌಲ್ಯ ಕಳೆದು ಕೊಳ್ಳುತ್ತಿವೆ. ಚುನಾವಣೆಯಲ್ಲೂ ಭ್ರಷ್ಟಾಚಾರವೆಸಗಿ, ಮತಗಳನ್ನು ಮಾರಾಟಕ್ಕಿಟ್ಟಿದ್ದಾರೆ' ಎಂದು ಆತಂಕ ವ್ಯಕ್ತ ಪಡಿಸಿದರು.

ಉದ್ಯಮಿ ಎಂ.ಕೆ.ತಾಜ್‌ಪೀರ್ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ಗಮಿತ ಸಹಾಯಕ ನಿರ್ದೇಶಕಿ ನೀಲಮ್ಮ ವೇದಿಕೆಯಲ್ಲಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮಲ್ಲಿಕಾರ್ಜುನಯ್ಯ ಅತಿಥಿಗಳ ಪರಿಚಯ ಮಾಡಿದರು. ಪ್ರೊ.ಡಿ.ಎಚ್. ನಟರಾಜ್ ಕಾರ್ಯಕ್ರಮ ನಿರೂಪಿಸಿದರು. ನಗರಸಭೆ ಮಾಜಿ ಅಧ್ಯಕ್ಷ ನಿರಂಜನಮೂರ್ತಿ ಸ್ವಾಗತಿಸಿದರು.

'ಗಾಂಧೀಜಿ ಕಂಡ ಭಾರತ ಅಗತ್ಯ'

'ಗಾಂಧೀಜಿ 1906ರಲ್ಲಿ ಬರೆದ ಹಿಂದ್ ಸ್ವರಾಜ್ ಪುಸ್ತಕದಲ್ಲಿ ಅವರ ಕನಸಿನ ಭಾರತ ಹೇಗಿತ್ತು ಎನ್ನುವುದನ್ನು ಚಿತ್ರಿಸಿದ್ದಾರೆ. ಈ ಗ್ರಂಥದ ಮೂಲಕ ಗಾಂಧೀಜಿ ಯಾರು ಎನ್ನುವುದು ಜಗತ್ತಿಗೆ ಅರ್ಥವಾಗುತ್ತದೆ. ಆದರೆ, ಗಾಂಧೀಜಿ ಕಂಡ ಸ್ವತಂತ್ರ ಭಾರತ ಇನ್ನೂ ಅಸ್ತಿತ್ವಕ್ಕೆ ಬಂದಿಲ್ಲ' ಎಂದು ವೂಡೆ.ಪಿ ಕೃಷ್ಣ ಬೇಸರ ವ್ಯಕ್ತಪಡಿಸಿದರು.

ಮುಖ್ಯಾಂಶಗಳು

- ಎಸ್.ಎನ್ ಸ್ಮರಣೆಯಲ್ಲಿ ಗಾಂಧಿ ತತ್ವದ ನೆನಪು
- ಗಾಂಧೀಜಿ ವಿಚಾರಧಾರೆಗಳು ಪ್ರಸ್ತುತದ ಅವಲೋಕನ
- ಹೋರಾಟ ಮೌಲ್ಯ ಕಳೆದುಕೊಳ್ಳುತ್ತಿದೆ: ಆತಂಕ

ದಾವಣಗೆರೆ ಉದಯವಾಣಿ
ಬುಧವಾರ ' ಆಗಸ್ಟ್ 9 2017

ತತ್ವ ರಹಿತ ರಾಜಕಾರಣ ಸಮಾಜದ ಪ್ರಗತಿಗೆ ಮಾರಕ

ಚಿತ್ರದುರ್ಗ: ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಗಾಂಧಿವಾದಿಯಲ್ಲ, ಅವರೊಬ್ಬ ಗಾಂಧಿ ಅನುಯಾಯಿಯಾಗಿದ್ದಾರೆ. ಗಾಂಧಿಜಿಯವರ ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಕೊನೆ ತನಕ ಹಾಗೆಯೇ ಬಾಳಿದರು ಎಂದು ಕರ್ನಾಟಕ ರಾಜ್ಯ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ| ವೂಡೇ ಪಿ. ಕೃಷ್ಣ ಹೇಳಿದರು.

ಸೀಬಾರದ ಎಸ್. ನಿಜಲಿಂಗಪ್ಪ ಮೆಮೋರಿಯಲ್ ಟ್ರಸ್ಟ್ ಸಭಾಂಗಣದಲ್ಲಿ ರಾಷ್ಟ್ರ ನಾಯಕ ಎಸ್. ನಿಜಲಿಂಗಪ್ಪ ಸ್ಮರಣಾರ್ಥ ಮಂಗಳವಾರ ಹಮ್ಮಿಕೊಂಡಿದ್ದ ಭಾರತ ಬಿಟ್ಟು ತೊಲಗಿ ಆಗಸ್ಟ್ ಕ್ರಾಂತಿಯ ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು. ಆಚಾರ-ವಿಚಾರದಲ್ಲಿ ನಿಜಲಿಂಗಪ್ಪ ಅವರಲ್ಲಿ ಶುದ್ಧತೆ, ನಿಂದನೆಯನ್ನು ಸಹಿಸಿಕೊಳ್ಳುವ ಶಕ್ತಿ ಇತ್ತು. ಸಾರ್ವಜನಿಕ ಜೀವನದಲ್ಲಿ ಮಾದರಿ ಜೀವನ ನಡೆಸಿದರು. ಅಧಿಕಾರದ ಹಿಂದೆ ಹೋಗದೆ ತತ್ವ ಸಿದ್ಧಾಂತಕ್ಕಾಗಿ ರಾಷ್ಟ್ರಪತಿ ಹುದ್ದೆಯನ್ನೇ ನಿರಾಕರಿಸಿ ಕನ್ನಡ ನಾಡಿಗೆ ಕೀರ್ತಿ ತಂದಿದ್ದಾರೆ. ತತ್ವ ಸಿದ್ಧಾಂತಗಳನ್ನು ಒಪ್ಪಿ ಅಪ್ಪಿಕೊಂಡರಲ್ಲದೆ ವಿಚಾರಧಾರೆಗಳಿಗೆ ಅಂಟಿಕೊಂಡವರಾಗಿದ್ದರು. ತತ್ವ ರಹಿತ ರಾಜಕಾರಣ ಸಮಾಜಕ್ಕೆ ಘಾತಕ. ಅಧಿಕಾರಕ್ಕಾಗಿ ಎಲ್ಲವನ್ನು ಮರೆಯುವ ಜನರ ಮಧ್ಯೆ ಎಸ್ಎನ್ ಮಾದರಿಯಾಗಿ ಇತಿಹಾಸದ ಪುಟದಲ್ಲಿ ಸೇರಿದ್ದಾರೆ ಎಂದು ಸ್ಮರಿಸಿದರು.


ಗಾಂಧೀಜಿಯವರ ವಿಚಾರ ಧಾರೆಗಳನ್ನು ನಾವು ನೆನೆಯಬೇಕು. ಗಾಂಧೀಜಿ ಸಕಾರಾತ್ಮಕವಾಗಿ ಕೆಲಸ ಮಾಡುತ್ತಿದ್ದರು. ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂದು ಕರೆ ಕೊಟ್ಟಾಗ ಬ್ರಿಟಿಷರು ಆದುರಿ ಹೋಗಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಎಂದೂ ಹಿಂಸೆಯನ್ನು ಪೋಷಿಸಲಿಲ್ಲ. 1906ರಲ್ಲಿ ಬರೆದ ಹಿಂದ್ ಸ್ವರಾಜ್ ಪುಸ್ತಕದಲ್ಲಿ ಅವರ ಕನಸಿನ ಭಾರತ ಹೇಗಿತ್ತು ಎನ್ನುವುದನ್ನು ಚಿತ್ರಿಸಿದ್ದಾರೆ. ಈ ಗ್ರಂಥದ ಮೂಲಕ ಗಾಂಧೀಜಿ ಯಾರು ಎನ್ನುವುದು ಜಗತ್ತಿಗೇ ಅರ್ಥವಾಗುತ್ತದೆ. ಆದರೆ ಇಂದಿಗೂ ಗಾಂಧೀಜಿ ಕಂಡ ಸ್ವತಂತ್ರ ಭಾರತ ಅಸ್ತಿತ್ವಕ್ಕೆ ಬಂದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಗಾಂಧೀಜಿಯವರು ಭಾರತದ ಚರಿತ್ರೆ ಹಾಗೂ ಸಮಾಜದ ಮನಸ್ಥಿತಿಯನ್ನೇ ಬದಲಾಯಿಸಿದರು. ಜನ ಸಾಮಾನ್ಯರ ಜೀವನಶೈಲಿಯನ್ನು ಅರ್ಥ ಮಾಡಿಕೊಂಡರು. ದೇಶದ ಬಡತನ ಅವರಿಗೆ ದೊಡ್ಡ ಶಕ್ತಿಯಾಗಿ ಪ್ರೇರಣೆ ನೀಡಿತು. ದೇಶದ ಬಡತನದ ಮೂಲಕ ಸತ್ಯ, ದೇಶದ ಮನಸ್ಸು ಆತ್ಮ ಎಲ್ಲವನ್ನೂ ಅರಿತುಕೊಂಡಿದ್ದರು ಎಂದರು.

ಎಸ್.ಎನ್. ಮೆಮೋರಿಯಲ್ ಟ್ರಸ್ಟ್ ಗೌರವ ಕಾರ್ಯದರ್ಶಿ ಎಚ್. ಹನುಮಂತಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ರಾಜಕೀಯದಲ್ಲಿ ಮಾರ್ಗದರ್ಶನ ಮಾಡುವವರೇ ಇಲ್ಲವಾಗಿದೆ. ರಾಜಕೀಯ ಅಧೋಗತಿಗೆ ಇಳಿದಿದೆ. ಸ್ವಾತಂತ್ರ್ಯ ಹೋರಾಟ ಮೌಲ್ಯ ಕಳೆದುಕೊಂಡಿದೆ. ಚುನಾವಣೆಯಲ್ಲಿ ಕೋಟ್ಯಂತರ ರೂ. ಖರ್ಚು ಮಾಡಿ ಭಾರೀ ಭ್ರಷ್ಟಾಚಾರ ಮಾಡುತ್ತಿದ್ದಾರೆ. ಮತಗಳು ಮಾರಾಟವಾಗುತ್ತಿವೆ ಎಂದು ಆತಂಕ ವ್ಯಕ್ತ ಪಡಿಸಿದರು.

ಎಸ್. ನಿಜಲಿಂಗಪ್ಪನವರು ಭದ್ರಾ ಮೇಲ್ದಂಡೆ ಸೇರಿದಂತೆ ಜಿಲ್ಲೆಗೆ ಯಾವುದೇ ಕೊಡುಗೆ ನೀಡಲಿಲ್ಲ ಎನ್ನುವ ಆರೋಪ ಸೇರಿದಂತೆ ಆಸ್ತಿ ವಿಚಾರವಾಗಿಯೂ ಆರೋಪ ಕೇಳಿ ಬಂದಿದ್ದವು. ಆದರೆ ಅವು ಸಾಬೀತಾಗಲಿಲ್ಲ. ಇಂದಿನ ರಾಜಕೀಯವನ್ನು ಗಮನಿಸಿದರೆ ಪ್ರಜಾಪ್ರಭುತ್ವದ ಬಗ್ಗೆ ಕಾಳಜಿ ಇದ್ದವರಿಗೆ ಆಘಾತವಾಗುತ್ತದೆ ಎಂದರು.

ಉದ್ಯಮಿ ಎಂ.ಕೆ. ತಾಜ್‌ಪೀರ್ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ನೀಲಮ್ಮ ಇದ್ದರು. ನಗರಸಭೆ ಮಾಜಿ ಅಧ್ಯಕ್ಷ ನಿರಂಜನಮೂರ್ತಿ ಸ್ವಾಗತಿಸಿದರು. ಕಸಾಪ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನಯ್ಯ ಅತಿಥಿ ಪರಿಚಯ ಮಾಡಿದರು. ಪ್ರೊ| ಡಿ.ಎಚ್. ನಟರಾಜ್ ನಿರೂಪಿಸಿದರು.



ಚಿತ್ರದುರ್ಗ: ಆಗಸ್ಟ್ ಕ್ರಾಂತಿಯ ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ಡಾ| ವೂಡೇ ಪಿ. ಕೃಷ್ಣ ಉಪನ್ಯಾಸ ನೀಡಿದರು.

ಕನಸಾಗಿಯೇ ಉಳಿದ ಮಹಾತ್ಮ ಗಾಂಧೀಜಿ ಕಲ್ಪನೆಯ ಭಾರತ

ಗಾಂಧೀಜಿಯವರ ಕಲ್ಪನೆಯ ಭಾರತದ ಸ್ವಾತಂತ್ರ್ಯ ಇಂದಿಗೂ ಸಿಕ್ಕಿಲ್ಲ. ಆರ್ಥಿಕ ಸ್ವಾತಂತ್ರ್ಯ, ಸಾಮಾಜಿಕ ಸ್ವಾತಂತ್ರ್ಯ, ನೈತಿಕ ಸ್ವಾತಂತ್ರ್ಯ ಜನತೆಗೆ ಸಿಗಬೇಕು ಎಂದು ಹಂಬಲಿಸಿದ್ದರು. ಆದರೆ ದೇಶದಲ್ಲಿ ಗಾಂಧಿ ಕಂಡ ಕನಸು ನನಸಾಗದೆ ರಾಜಕೀಯ ಅನೈತಿಕತೆಯಿಂದ ಕೂಡಿದೆ. ರಾಜ್ಯಸಭಾ ಸ್ಥಾನ ಗೆಲ್ಲಲು ಅಡ್ಡ ಮತದಾನ, ಮತಕ್ಕಾಗಿ ಲಂಚ ನೀಡುವುದು, ಮತ ಮಾರಿಕೊಳ್ಳುವುದನ್ನು ನೋಡಿದರೆ ರಾಜಕೀಯ ಅಧಃಪತನ ಎದ್ದು ಕಾಣುತ್ತದೆ. ಇಂತಹ ಸಂದರ್ಭದಲ್ಲಿ ಗಾಂಧೀಜಿ ವಿಚಾರಧಾರೆ ಪ್ರಸ್ತುತ ಎಂದು ಡಾ| ವೂಡೇ ಪಿ. ಕೃಷ್ಣ ಅಭಿಪ್ರಾಯಪಟ್ಟರು.

ಕನ್ನಡಪ್ರಭ
ಚಿತ್ರದುರ್ಗ
ಬುಧವಾರ 9.8.201

ತತ್ವ, ಸಿದ್ಧಾಂತದ ನಿಜದನಿಯ ನಾಯಕ ನಿಜಲಿಂಗಪ್ಪ

ಮಾಜಿ ಮುಖ್ಯಮಂತ್ರಿ ನಿಜಲಿಂಗಪ್ಪ ಸ್ಮರಣೆ ಕಾರ್ಯಕ್ರಮದಲ್ಲಿ ಗಾಂಧಿ ಸ್ಮಾರಕ ನಿಧಿ ಕಾರ್ಯದರ್ಶಿ ಡಾ.ವೊಡೇ ಪಿ.ಕೃಷ್ಣ ಬಣ್ಣನೆ

• **ಕನ್ನಡಪ್ರಭವಾರ್ತೆ** ಚಿತ್ರದುರ್ಗ

ತಮ್ಮ ಬದುಕಿನುದ್ದಕ್ಕೂ ತತ್ವ ಸಿದ್ಧಾಂತಗಳಿಗೆ ಬದ್ಧತೆಯಿಂದಿದ್ದ ಎಸ್. ನಿಜಲಿಂಗಪ್ಪ ನಿಜದನಿಯ ನಾಯಕರಾಗಿದ್ದರೆಂದು ಗಾಂಧಿ ಸ್ಮಾರಕ ನಿಧಿ ಕಾರ್ಯದರ್ಶಿ ಡಾ.ವೊಡೇ ಪಿ.ಕೃಷ್ಣ ಬಣ್ಣಿಸಿದರು.

ಮಾಜಿ ಮುಖ್ಯಮಂತ್ರಿ ಹಾಗೂ ಹಿರಿಯ ಮುತ್ಸದ್ದಿ ಎಸ್. ನಿಜಲಿಂಗಪ್ಪ ಅವರ 17ನೇ ವರ್ಷದ ಸ್ಮರಣೆ ಅಂಗವಾಗಿ ಸೀಬಾರದ ಎಸ್.ನಿಜಲಿಂಗಪ್ಪ ಮೆಮೋರಿಯಲ್ ಟ್ರಸ್ಟ್ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಭಾರತ ಬಿಟ್ಟು ತೊಲಗಿ, ಆಗಸ್ಟ್ ಕ್ರಾಂತಿಯ ವಜ್ರ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಮಹಾತ್ಮ ಗಾಂಧಿಯವರ ಅನುಯಾಯಿಯಾಗಿ ಅವರ ಮಾರ್ಗದಲ್ಲಿಯೇ ನಡೆದ ನಿಜಲಿಂಗಪ್ಪ ತ್ಯಾಗಮಯಿಯಾಗಿ ಕಾಣುತ್ತಾರೆಂದರು.

ಆಗಸ್ಟ್ ಕ್ರಾಂತಿ ಕೇವಲ ನೆನಪು ಮಾತ್ರ. 1906ರಲ್ಲಿ ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ಇದ್ದಾಗ ದೇಶವನ್ನು ಬ್ರಿಟೀಷರ ದಾಸ್ಯದಿಂದ ಮುಕ್ತಿಗೊಳಿಸುವ ಚಿಂತನೆಗಳು ಆರಂಭವಾದವು. ಅಲ್ಲಿಂದ ಮರಳಿ ಭಾರತಕ್ಕೆ ಬಂದ ಗಾಂಧಿ ಗೋಪಾಲಕೃಷ್ಣ ಗೋಖಲೆ ಅವರ ಸಲಹೆಯಂತೆ ಅಖಂಡ ಭಾರತ ಪ್ರವಾಸ ಮಾಡಿ ಬಡತನದ ಬಗ್ಗೆ ಸೂಕ್ಷ್ಮವಾಗಿ ಅರ್ಥ ಮಾಡಿಕೊಂಡರು ಎಂದರು.

ನಿಜಲಿಂಗಪ್ಪವರ ಆಚಾರ-ವಿಚಾರದಲ್ಲಿ ಶುದ್ಧತೆ



ಮಾಜಿ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರ 17 ನೇ ವರ್ಷದ ಸ್ಮರಣೆ ಅಂಗವಾಗಿ ಅವರ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಇತ್ತು. ಅವರಲ್ಲಿ ನಿಂದನೆ ಸಹಿಸಿಕೊಳ್ಳುವ ಶಕ್ತಿ ಇತ್ತು. ಸಾರ್ವಜನಿಕ ಜೀವನದಲ್ಲಿ ಎಸ್.ಎನ್. ಮಾದರಿ ಜೀವನ ನಡೆಸಿದರು. ಅಧಿಕಾರದ ಹಿಂದೆ ಹೋಗದೆ ತತ್ವ ಸಿದ್ಧಾಂತಕ್ಕಾಗಿ ರಾಷ್ಟ್ರಪತಿ ಹುದ್ದೆ ಧಿಕ್ಕರಿಸಿ ಕನ್ನಡ ನಾಡಿಗೆ ಕೀರ್ತಿ ತಂದಿದ್ದಾರೆ. ತತ್ವರಹಿತ ರಾಜಕಾರಣ ಸಮಾಜಕ್ಕೆ ಘಾತಕ. ಅಧಿಕಾರಕ್ಕಾಗಿ ಎಲ್ಲವನ್ನೂ ಮರೆಯುವ ಜನರ ಮಧ್ಯೆ ಎಸ್ಸೆನ್ ಮಾದರಿಯಾಗಿ ಇತಿಹಾಸದ ಪುಟ ಸೇರಿ ಹೋಗಿದ್ದಾರೆಂದು ತಿಳಿಸಿದರು.

ಗಾಂಧೀಜಿ ಸಕಾರಾತ್ಮಕವಾಗಿ ಕೆಲಸ ಮಾಡುತ್ತಿದ್ದರು. ಅವರು ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂದು ಗಾಂಧೀಜಿ ಕರೆ ಕೊಟ್ಟಾಗ ಬ್ರಿಟಿಷರು ನಡುಗಿದ್ದರು. ಸ್ವಾತಂತ್ರ ಹೋರಾಟದಲ್ಲಿ ಎಂದೂ ಹಿಂಸೆ ಪೋಷಣೆ ಮಾಡಲಿಲ್ಲ. ಹಿಂದ್ ಸ್ವರಾಜ್ ಪುಸ್ತಕದಲ್ಲಿ ಅವರ ಕನಸಿನ ಭಾರತ ಹೇಗಿತ್ತು ಎನ್ನುವುದನ್ನು ಚಿತ್ರಿಸಿದ್ದಾರೆ. ಈ ಗ್ರಂಥದ ಮೂಲಕ ಗಾಂಧೀಜಿ ಯಾರೂ ಎನ್ನುವುದು ಜಗತ್ತಿಗೆ ಅರ್ಥವಾಗುತ್ತದೆ. ಆದರೆ ಇಂದಿಗೂ ಗಾಂಧೀಜಿ ಕಂಡ ಸ್ವಾತಂತ್ರ ಭಾರತ ಇನ್ನೂ ಅಸ್ತಿತ್ವಕ್ಕೆ ಬಂದಿಲ್ಲ ಎಂದು ಬೇಸರ ವ್ಯಕ್ತ ಪಡಿಸಿದರು.

ಗಾಂಧೀಜಿಯವರ ಕಲ್ಪನೆಯ ಭಾರತಕ್ಕೆ ಸ್ವಾತಂತ್ರ್ಯ ಇಂದಿಗೂ ಸಿಕ್ಕಿಲ್ಲ. ಆರ್ಥಿಕ ಸ್ವಾತಂತ್ರ್ಯ, ಸಾಮಾಜಿಕ ಸ್ವಾತಂತ್ರ್ಯ, ನೈತಿಕ ಸ್ವಾತಂತ್ರ್ಯ ಜನತೆಗೆ ಸಿಗಬೇಕು ಎಂದು ಹಂಬಲಿಸಿದ್ದರು. ಆದರೆ ದೇಶದಲ್ಲಿ ಗಾಂಧಿ ಕಂಡ ಕನಸು ನನಸಾಗದೆ ರಾಜಕೀಯ ಅನೈತಿಕತೆಯಿಂದ ಕೂಡಿದೆ. ರಾಜ್ಯಸಭಾ ಸ್ಥಾನಗೆಲ್ಲಲು ಅಡ್ಡಮತದಾನ, ಮತಕ್ಕಾಗಿ ಲಂಚ ನೀಡುವುದು, ಮತ ಮಾರಿಕೊಳ್ಳುವುದು ನೋಡಿದರೆ ರಾಜಕೀಯ ಅಧಃಪತನ ಕಂಡಿದ್ದೇವೆ. ಇಂಥಹ ಪರಿಸ್ಥಿತಿಯಲ್ಲಿ ಗಾಂಧೀಜಿಯ ಪ್ರಸ್ತುತತೆ ಎದ್ದು ಕಾಣುತ್ತದೆ ಎಂದು ಹೇಳಿದರು.

- 1906ರಲ್ಲಿ ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ಇದ್ದಾಗ ದೇಶವನ್ನು ಬ್ರಿಟೀಷರ ದಾಸ್ಯದಿಂದ ಮುಕ್ತಿಗೊಳಿಸುವ ಚಿಂತನೆಗಳು ಆರಂಭವಾದವು.
- ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂದು ಗಾಂಧೀಜಿ ಕರೆ ಕೊಟ್ಟಾಗ ಬ್ರಿಟಿಷರು ನಡುಗಿದ್ದರು

ಗಾಂಧೀಜಿಯವರಿಗೆ ಸ್ವದೇಶಿ ಮತ್ತು ಅಸಹಕಾರ ಅಸ್ತ್ರಗಳಾಗಿದ್ದವು. ಬ್ರಿಟಿಷರ ಬಟ್ಟೆಗಳನ್ನು ಗಾಂಧೀಜಿ ಸುಟ್ಟು ಹಾಕಿ ಪ್ರತಿಭಟಿಸಿದರು. ಸತ್ಯ ಮತ್ತು ಅಹಿಂಸಾ ನೆಲೆಯಲ್ಲಿ ನೈತಿಕತೆಗೆ ಧಕ್ಕೆಯಾಗದಂತೆ ಅವರು ನಡೆದುಕೊಂಡು ಅಹಿಂಸಾತ್ಮಕ ಸಮಾಜ ನಿರ್ಮಾಣಕ್ಕೆ ಒತ್ತು ನೀಡಿದ್ದರು.

ಗಾಂಧಿ ವಿಚಾರಧಾರೆಗಳು ಸ್ವಾತಂತ್ರ್ಯ ಆಂದೋಲನ ಮೀರಿದವುಗಳಾಗಿದ್ದವು. ಅವರ ಮಾತುಗಳಲ್ಲಿ ಪ್ರಬಲ ಶಕ್ತಿ ಇತ್ತು. ಹೊಸ ದೃಷ್ಟಿಕೋನ ಇಟ್ಟುಕೊಂಡು ಅನೇಕ ರಾಷ್ಟ್ರೀಯ ನಾಯಕರನ್ನು ತಯಾರಿಸುವ ಶಕ್ತಿಯನ್ನು ಗಾಂಧೀಜಿ ಹೊಂದಿದ್ದರು ಎಂದು ಸ್ಮರಿಸಿದರು.

ಎಸ್. ನಿಜಲಿಂಗಪ್ಪ ಮೆಮೋರಿಯಲ್ ಟ್ರಸ್ಟ್ ಗೌರವ ಕಾರ್ಯದರ್ಶಿ ಎಚ್.ಹನುಮಂತಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ಪ್ರಸ್ತುತ ರಾಜಕೀಯದಲ್ಲಿ ಮಾರ್ಗದರ್ಶನ ಮಾಡುವವರು ಇಲ್ಲವಾಗಿದೆ. ಸ್ವಾತಂತ್ರ್ಯ ಹೋರಾಟ ಮೌಲ್ಯ ಕಳೆದುಕೊಂಡಿದೆ. ಚುನಾವಣೆಯಲ್ಲಿ ಕೋಟ್ಯಂತರ ರು.ಖರ್ಚು ಮಾಡಿ ಆಯ್ಕೆಯಾಗಿ ಬಂದು ಭಾರಿ ಭ್ರಷ್ಟಾಚಾರ ಮಾಡುತ್ತಿದ್ದಾರೆ. ಮತಗಳು ಮಾರಾಟಕ್ಕಿವೆ ಎಂದು ಆತಂಕ ವ್ಯಕ್ತ ಪಡಿಸಿದರು.

ಉದ್ಯಮಿ ಎಂ.ಕೆ.ತಾಜ್ ಪೀರ್ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ನೀಲಮ್ಮ ಇದ್ದರು. ನಿಕಟಪೂರ್ವ ಕಸಾಪ ಅಧ್ಯಕ್ಷ ಮಲ್ಲಿಕಾರ್ಜುನಯ್ಯ ಅತಿಥಿಗಳ ಪರಿಚಯ ಮಾಡಿದರು. ಪ್ರೊ.ಡಿ.ಎಚ್.ನಟರಾಜ್ ನಿರೂಪಿಸಿದರು. ಮಾಜಿ ನಗರಸಭಾಧ್ಯಕ್ಷ ನಿರಂಜನಮೂರ್ತಿ ಸ್ವಾಗತಿಸಿದರು.

ವ್ಯವಹಾರಕ್ಕೆ ಇಂಗ್ಲೀಷ್ ಸಾಕು, ಅಭಿವ್ಯಕ್ತಿಗೆ ಕನ್ನಡವೇ ಬೇಕು

ವೃತ್ತಿಪರ ಕೋರ್ಸಿಗೂ ಕನ್ನಡ ಕಡ್ಡಾಯವಾಗಲಿ

ದಿಗಂತ ಚಿತ್ರ



ನಗರದ ಜಗದ್ಗುರು ರೇಣುಕಾಚಾರ್ಯ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಗಾಂಧಿನಗರದ ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳದಲ್ಲಿ ಸಮ್ಮೇಳನಾಧ್ಯಕ್ಷ ಡಾ.ವೂಡೇ ಪಿ.ಕೃಷ್ಣ, ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್, ಮಾಜಿ ಸಚಿವೆ ಲಿಲಾದೇವಿ ಆರ್. ಪ್ರಸಾದ್ ಉಪಸ್ಥಿತರಿದ್ದರು.

▸ ದಿಗಂತ ವರದಿ: ಬೆಂಗಳೂರು, ಜು.31

ವೃತ್ತಿಪರ ಕೋರ್ಸ್‌ಗಳನ್ನು ಬೋಧಿಸುತ್ತಿರುವ ರಾಜ್ಯದ ಎಲ್ಲ ಕಾಲೇಜುಗಳಲ್ಲಿಯೂ ಕನ್ನಡ ಭಾಷೆಯ ಪಠ್ಯವನ್ನು ಕಡ್ಡಾಯಗೊಳಿಸಬೇಕು ಎಂದು ಗಾಂಧಿನಗರ ವಿಧಾನಸಭಾ ಕ್ಷೇತ್ರದ ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಆಗ್ರಹಿಸಿದರು.

ನಗರದ ಆನಂದ್‌ರಾವ್ ವೃತ್ತದಲ್ಲಿರುವ ಜಗದ್ಗುರು ರೇಣುಕಾಚಾರ್ಯ ಕಾಲೇಜಿನಲ್ಲಿ ಗಾಂಧಿನಗರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಹಮ್ಮಿಕೊಂಡಿದ್ದ ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಭಾಗವಹಿಸಿ ಅವರು ಮಾತನಾಡಿದರು.

ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯಗಳು ಮುಂದಾಗಬೇಕು. ಸರ್ಕಾರವೂ ಸೂಕ್ತ ಆದೇಶ ನೀಡಬೇಕು ಎಂದು ತಿಳಿಸಿದರು.

ಕನ್ನಡ ಭಾಷೆ ಕಲಿಕೆಗೆ ಬರೀ ಪಿಯುಸಿವರೆಗೆ ಮಾತ್ರ ಅವಕಾಶವಿದೆ. ವೃತ್ತಿಪರ ಕೋರ್ಸ್‌ಗಳಿಗೆ ಸೇರುವ ಮಕ್ಕಳ ಕನ್ನಡ ಕಲಿಕೆ ನಿಂತುಹೋಗಿದೆ. ಆದ್ದರಿಂದ ಅವರಿಗೂ ಕನ್ನಡ ಕಡ್ಡಾಯ ಮಾಡಬೇಕು. ಯಾವ. ರೂಪದಲ್ಲಾದರೂ ಅವರಿಗೆ ಕನ್ನಡ ಕಲಿಸಬೇಕು. ವೃತ್ತಿಯಲ್ಲಿಯೂ ಕನ್ನಡ ಬಳಸುವಂತಾಗಬೇಕು ಎಂದು ಕರೆ ನೀಡಿದರು.

ವ್ಯವಹಾರಿಕ ಭಾಷೆಗಾಗಿ ಮಾತ್ರ ಇಂಗ್ಲೀಷ್ ಕಲಿಯಬೇಕು. ಮಾತನಾಡುವ ಭಾಷೆ, ಭಾಷಾಭಿವ್ಯಕ್ತಿಯ ಭಾಷೆ ಕನ್ನಡವೇ ಆಗಿರಬೇಕು ಎಂಬ ಮನೋಭಾವನೆ ಎಲ್ಲರಲ್ಲೂ ಬರಬೇಕು. ಶಾಸ್ತ್ರೀಯ ಮನ್ನಣೆ ದೊರೆತಿರುವ ಭಾಷೆಗೆ ಜಾಗತಿಕ ಮನ್ನಣೆ ದೊರೆಯುವಂತಾಗಬೇಕು. ಕನ್ನಡ ಕೃತಿಗಳು ಬೇರೆ ಭಾಷೆಗಳಿಗೆ ಅನುವಾದ ಗೊಳ್ಳಬೇಕು. ಆಗ ವಿಶ್ವಮಾನ್ಯತೆ ದೊರೆಯುತ್ತದೆ ಎಂದರು.

ಕನ್ನಡ ಶಾಲೆಗಳನ್ನು ಉಳಿಸಿ, ರಾಜ್ಯದ ಗಡಿ ಭಾಗಗಳಲ್ಲೂ ಕನ್ನಡ ಗಟ್ಟಿಗೊಳಿಸುವುದು ಅವಶ್ಯವಾಗಿದೆ ಎಂದು ಕಿವಿಮಾತು ಹೇಳಿದರು.

ಮೆರವಣಿಗೆ

ನಗರದ ಮಲ್ಲೇಶ್ವರ ಕುವೆಂಪು ಪ್ರತಿಮೆ ಬಳಿ ಬೆಳಗ್ಗೆ 8 ಗಂಟೆಗೆ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡಿ ಧ್ವಜಾರೋಹಣ ನೆರವೇರಿಸಲಾಯಿತು. ನಂತರ ಮೆರವಣಿಗೆ ಮೂಲಕ ಸಮ್ಮೇಳನಾಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಅವರನ್ನು ಬಸಪ್ಪ ಸಭಾಂಗಣಕ್ಕೆ ಕರೆತರಲಾಯಿತು. ಮೆರವಣಿಗೆ ಕಾರ್ಯಕ್ರಮಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮಾಜಿ ಅಧ್ಯಕ್ಷ ಡಾ.ಮುಖ್ಯಮಂತ್ರಿ ಚಂದ್ರು ಚಾಲನೆ ನೀಡಿದರು.

ಅಪಪ್ರಚಾರ ಸರಿಯಲ್ಲ

ಸಮ್ಮೇಳನಕ್ಕೆ ಚಾಲನೆ ನೀಡಿ ಮಾತನಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್, ಈಗಾಗಲೇ ನಾಡಿನ ಧ್ವಜ ಇದೆ. ಅದಕ್ಕೆ ಅಧಿಕೃತ ಮಾನ್ಯತೆ ಸಿಕ್ಕಿಲ್ಲ. ಮಾನ್ಯತೆ ನೀಡುವುದು ರಾಜ್ಯ ಸರ್ಕಾರದ ಜವಾಬ್ದಾರಿ. ಇದರಲ್ಲಿ ಯಾವುದೇ ಪ್ರತ್ಯೇಕತೆ ಸ್ಥಾಪಿಸುವ ಪ್ರಶ್ನೆ ಇಲ್ಲ. ಆದರೂ ಇಲ್ಲಸಲ್ಲದ ಅಪಪ್ರಚಾರ ಮಾಡಲಾಗುತ್ತಿರುವುದು ಸರಿಯಲ್ಲ ಎಂದರು.

ಕನ್ನಡ ಧ್ವಜಕ್ಕೆ ಅಧಿಕೃತ ಮಾನ್ಯತೆ ನೀಡುವ ಉದ್ದೇಶವನ್ನು ರಾಜ್ಯ ಸರ್ಕಾರ ಹೊಂದಿದೆ. ಆದರೆ, ಕೆಲ ಕಿಡಿಗೇಡಿಗಳು ಜನರ ದಾರಿ ತಪ್ಪಿಸಲು ಅದರಲ್ಲಿ ಪ್ರತ್ಯೇಕವಾದ ಸೃಷ್ಟಿ ಮಾಡುತ್ತಿದ್ದಾರೆ. ಅದು ಸರಿಯಲ್ಲ. ಸರ್ಕಾರ ಯಾವುದೇ ರೀತಿಯ ಸಂವಿಧಾನ ವಿರೋಧಿ ನಿರ್ಧಾರ ಕೈಗೆತ್ತಿಗೊಂಡಿಲ್ಲ ಎಂದು ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ ನಾಡಗೀತೆ, ರಾಷ್ಟ್ರಗೀತೆಗೆ ಹೇಗೆ ಗೌರವ ನೀಡುತ್ತಿದ್ದೇವೆ. ಅದೇ ರೀತಿ ಕನ್ನಡ ಧ್ವಜಕ್ಕೂ ಮಾನ್ಯತೆ ನೀಡವುದು ಇದರ ಉದ್ದೇಶ. ಅದು ತಪ್ಪಾ ಎಂದು ಪ್ರಶ್ನಿಸಿದ ಅವರು, ಈ ಕುರಿತು ನಡೆಯುತ್ತಿರುವ ವಾದ-ವಿವಾದ ಹೋರಾಟಗಳ ಬಗ್ಗೆ ವಿಷಾದ ವ್ಯಕ್ತಪಡಿಸಿದರು.

ಕನ್ನಡ ಭಾಷೆ ಉಳಿಸಿ, ಬೆಳೆಸಬೇಕು. ಕನ್ನಡ ಪರ ಹೋರಾಟಗಳಿಗೆ ನನ್ನ ಸಂಪೂರ್ಣ ಬೆಂಬಲವಿದೆ. ರಾಜ್ಯದಲ್ಲಿ ಇರುವ ಹೊರರಾಜ್ಯದವರು ಕನ್ನಡ ಕಲಿಯಲು ಮುಂದಾಗಬೇಕು. ಆಗ ಸ್ಥಳೀಯ ಭಾಷೆಗಳ ಅಸ್ತಿತ್ವಕ್ಕೆ ಧಕ್ಕೆ ಬರುವುದಿಲ್ಲ ಎಂದರು.

ವೂಡೆ ಪಿ. ಕೃಷ್ಣ ಆಗ್ರಹ | ಗಾಂಧಿನಗರ ವಿಧಾನಸಭಾ ಕ್ಷೇತ್ರದ 4ನೇ ಕನ್ನಡ ಸಾಹಿತ್ಯ ಸಮ್ಮೇಳನ


ವೃತ್ತಿಪರ ಕೋರ್ಸ್‌ಗಳಲ್ಲೂ ಕನ್ನಡ ಕಲಿಕೆ ಅಗತ್ಯ

• ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯದ ಎಲ್ಲಾ ವೈದ್ಯಕೀಯ ಹಾಗೂ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಕನ್ನಡವನ್ನು ಒಂದು ಕಡ್ಡಾಯ ವಿಷಯವನ್ನಾಗಿ ಬೋಧಿಸಬೇಕು. ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯಗಳು ಮುಂದಾಗಬೇಕು. ಸರಕಾರವೂ ಸೂಕ್ತ ಆದೇಶ ಹೊರಡಿಸಬೇಕು ಎಂದು ಡಾ.ವೂಡೇ ಪಿ.ಕೃಷ್ಣ ಒತ್ತಾಯಿಸಿದರು.




ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷರ ಕುರಿತ ಪುಸ್ತಕ ಬಿಡುಗಡೆ ಮಾಡಲಾಯಿತು. ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್, ಸಮ್ಮೇಳನಾಧ್ಯಕ್ಷ ವೂಡೆ ಪಿ.ಕೃಷ್ಣ ಮತ್ತಿತರರು ಇದ್ದರು.



ಸಮ್ಮೇಳನಕ್ಕೂ ಮುನ್ನ ಸಮ್ಮೇಳನಾಧ್ಯಕ್ಷ ವೂಡೆ ಪಿ.ಕೃಷ್ಣ ಅವರನ್ನು ಕಲಾತಂಡಗಳನ್ನು ಒಳಗೊಂಡ ಮೆರವಣಿಗೆ ಮೂಲಕ ಕರೆತರಲಾಯಿತು.

ಜಗದ್ಗುರು ರೇಣುಕಾಚಾರ್ಯ ಕಾಲೇಜಿನಲ್ಲಿ ಕನ್ನಡ ಉತ್ಸವ



ಜಗದ್ಗುರು ರೇಣುಕಾಚಾರ್ಯ ಕಾಲೇಜಿನಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಗಾಂಧಿನಗರ ವಿಧಾನಸಭಾ ಕ್ಷೇತ್ರದ ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

''ಪ್ರಸ್ತುತ ಪಿಯುಸಿವರೆಗೆ ಮಾತ್ರ ಕನ್ನಡ ಕಲಿಕೆಗೆ ಅವಕಾಶವಿದೆ. ವೃತ್ತಿಪರ ಕೋರ್ಸ್‌ಗಳಿಗೆ ಸೇರುವ ಮಕ್ಕಳ ಕನ್ನಡ ಕಲಿಕೆ ನಿಂತು ಹೋಗಿದೆ. ಆದ್ದರಿಂದ ಅವರಿಗೂ ಕನ್ನಡ ಕಡ್ಡಾಯ ಮಾಡಬೇಕು. ತಾಂತ್ರಿಕ ಕನ್ನಡ, ವಾಣಿಜ್ಯ ಕನ್ನಡ, ವೈದ್ಯಕೀಯ ಕನ್ನಡ.. ಹೀಗೆ ಯಾವ ರೂಪದಲ್ಲಾದರೂ ಕನ್ನಡ ಕಲಿಸಬೇಕು,'' ಎಂದು ಸಲಹೆ ನೀಡಿದರು.

''ಇಂಗ್ಲಿಷ್ ಕೇವಲ ವ್ಯವಹಾರಿಕ ಭಾಷೆಯಾದರೆ ಸಾಕು. ಜೀವನದ ಭಾಷೆ, ಭಾವಾಭಿವ್ಯಕ್ತಿಯ ಭಾಷೆ ಕನ್ನಡವೇ ಆಗಬೇಕು ಎಂಬ ಧೋರಣೆ ಪ್ರತಿಯೊಬ್ಬರಲ್ಲೂ ಬರಬೇಕು. ಶಾಸ್ತ್ರೀಯ ಮನ್ನಣೆ ದೊರೆತಿರುವ ಭಾಷೆಗೆ ಜಾಗತಿಕ ಮನ್ನಣೆ ದೊರೆಯುವಂತಾಗಬೇಕು. ಕನ್ನಡ ಕೃತಿಗಳು ಬೇರೆ ಭಾಷೆಗಳಿಗೆ ಅನುವಾದಗೊಳ್ಳಬೇಕು. ಆಗ ವಿಶ್ವಮಾನ್ಯತೆ ದೊರೆಯುತ್ತದೆ. ಕನ್ನಡ ಶಾಲೆಗಳನ್ನು ಉಳಿಸಿ, ರಾಜ್ಯದ ಗಡಿ ಭಾಗಗಳಲ್ಲೂ ಕನ್ನಡ ಗಟ್ಟಿಗೊಳಿಸಬೇಕಾಗಿದೆ'' ಎಂದರು.

ಮಾಜಿ ಸಚಿವೆ ಲೀಲಾದೇವಿ ಆರ್.ಪ್ರಸಾದ್ ಮಾತನಾಡಿ, ''ಅಂಕಲ್, ಆಂಟಿ, ಸ್ಸಾರಿಯಂತಹ ಇಂಗ್ಲಿಷ್ ಪದಗಳನ್ನು ಸಂಪೂರ್ಣವಾಗಿ ಹೋಗಲಾಡಿಸಬೇಕು. ಮಕ್ಕಳಿಗೆ ಕನ್ನಡ ಭಾಷಾ ಪದಗಳನ್ನು ಕಲಿಸಿಕೊಡಬೇಕು. ಇಂಗ್ಲಿಷ್ ಹಾಗೂ ಬೇರೆ ಭಾಷೆಗಳ ವ್ಯಾಮೋಹ ಬಿಟ್ಟು, ಮೊದಲು ಕನ್ನಡಕ್ಕೆ ಒತ್ತು ನೀಡಬೇಕು'' ಎಂದು ಸಲಹೆ ಮಾಡಿದರು.

ಕರ್ನಾಟಕ ಸಂಸ್ಕೃತ ವಿವಿ ಕುಲಪತಿ ಡಾ.ಪದ್ಮಾ ಶೇಖರ್ ಸಮ್ಮೇಳನದ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಕನ್ನಡಪರ ಹೋರಾಟಗಾರ ಬಿ.ಎಂ.ನಂಜುಂಡಸ್ವಾಮಿ, ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ, ಮಹಿಳಾ ಕೋ ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರಾದ ಕೆ.ನರಸಿಂಹಶೆಟ್ಟಿ ಅವರನ್ನು ಇದೇ ವೇಳೆ ಗೌರವಿಸಲಾಯಿತು. ಮಧ್ಯಾಹ್ನದ ನಂತರ ಚಿಂತನಾ ಗೋಷ್ಠಿ, ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ, ಕವಿಗೋಷ್ಠಿಗಳು ನಡೆದವು.

ಶಿಕ್ಷಣ ತಜ್ಞ ಡಾ.ಎಚ್.ಎಸ್.ಗಣೇಶ್ ಭಟ್, ಸಾಹಿತಿ ಬೈರಮಂಗಲ ರಾಮೇಗೌಡ, ಬೆಂ.ನಗರ ಜಿಲ್ಲಾ ಕಸಾಪ ಅಧ್ಯಕ್ಷ ಮಾಯಣ್ಣ, ಗಾಂಧಿನಗರ ಕಸಾಪ ಅಧ್ಯಕ್ಷೆ ಮಂಜು ಮಹಾದೇವಮ್ಮ, ಪಾಲಿಕೆ ಸದಸ್ಯರಾದ ಆರ್.ಸಿ.ಸತ್ಯನಾರಾಯಣ, ಲತಾ, ಪ್ರಮೋದ್, ಗೋವಿಂದರಾಜು, ಶಿವಪ್ರಕಾಶ್, ಎಸ್.ಲೀಲಾ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸಂವಿಧಾನ ವಿರೋಧಿಯಲ್ಲ

ಕನ್ನಡದ ಧ್ವಜ ಈಗಾಗಲೇ ಇದ್ದು, ಅದಕ್ಕೆ ಅಧಿಕೃತ ಮಾನ್ಯತೆ ನೀಡುವುದೇ ರಾಜ್ಯ ಸರಕಾರದ ಉದ್ದೇಶ. ಇದರಲ್ಲಿ ಯಾವುದೇ ಪ್ರತ್ಯೇಕತೆಯ ಭಾವನೆ ಇಲ್ಲ. ಆದರೂ ಈ ಬಗ್ಗೆ ಅಪಪ್ರಚಾರ ಮಾಡಲಾಗುತ್ತಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದರು. ಸಮ್ಮೇಳನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ''ನಮ್ಮ ಕನ್ನಡ ಧ್ವಜಕ್ಕೆ ಅಧಿಕೃತ ಮಾನ್ಯತೆ ನೀಡುವ ಉದ್ದೇಶ ರಾಜ್ಯ ಸರಕಾರದ್ದು. ಕಿಡಿಗೇಡಿಗಳು ಜನರ ದಾರಿ ತಪ್ಪಿಸಲು ಅದರಲ್ಲಿ ಪ್ರತ್ಯೇಕತಾವಾದ ಸೃಷ್ಟಿ ಮಾಡುತ್ತಿದ್ದಾರೆ. ಸರಕಾರ ಸಂವಿಧಾನ ವಿರೋಧಿ ನಿರ್ಧಾರ ಕೈಗೆತ್ತಿಗೊಂಡಿಲ್ಲ'' ಎಂದು ಹೇಳಿದರು.


ಬೃಹತ್ ಮೆರವಣಿಗೆ

ಬೆಳಗ್ಗೆ 8ಕ್ಕೆ ನಗರದ ಮಲ್ಲೇಶ್ವರದಲ್ಲಿ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಧ್ವಜಾರೋಹಣ ನೆರವೇರಿಸಲಾಯಿತು. ನಂತರ ಮೆರವಣಿಗೆ ಮೂಲಕ ಸಮ್ಮೇಳನಾಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಅವರನ್ನು ಬಸಪ್ಪ ಸಭಾಂಗಣಕ್ಕೆ ಕರೆತರಲಾಯಿತು. ಮೆರವಣಿಗೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ, ಮುಖ್ಯಮಂತ್ರಿ ಚಂದ್ರು ಚಾಲನೆ ನೀಡಿದರು. ನಂತರ ಮಾತನಾಡಿ, ''ನಮ್ಮ ಮೆಟ್ರೊದಲ್ಲಿ ಹಿಂದಿ ಹೇರಿಕೆ ಕುರಿತು ಸಿಎಂ ಸಿದ್ದರಾಮಯ್ಯ ಅವರು ಕೇಂದ್ರಕ್ಕೆ ಪತ್ರ ಬರೆದಿರುವುದು ಸ್ವಾಗತಾರ್ಹ. ಇದು ಅವರ ಭಾಷಾ ಪ್ರೇಮವನ್ನು ತೋರಿಸುತ್ತದೆ. ಆದರೆ, ಸಮಸ್ಯೆ ಬಗೆಹರಿಯದಿದ್ದರೆ ಹೋರಾಟ ಮುಂದುವರಿಯಲಿದೆ,'' ಎಂದರು.



ಸಮ್ಮೇಳನದ ನಿರ್ಣಯಗಳು

- ಕನ್ನಡಿಗರೇ ಕನ್ನಡ ಭಾಷೆ ಕಡೆಗಣಿಸುತ್ತಿದ್ದು, ಅದನ್ನು ಬೆಳೆಸುವುದನ್ನು ಸವಾಲಾಗಿ ಸ್ವೀಕರಿಸಬೇಕು
- ಯುವ ಪೀಳಿಗೆಗೆ ಕನ್ನಡದ ಸಂಸ್ಕೃತಿಯನ್ನು ತಿಳಿಸಿಕೊಡಬೇಕು
- ಕನ್ನಡೇತರರಿಗೆ ಕನ್ನಡದ ಸಂಸ್ಕೃತಿಯ ಘಮಲು ಮುಟ್ಟುವಂತಾಗಬೇಕು
- ಕಸ ವಿಲೇವಾರಿ, ವಾಯುಮಾಲಿನ್ಯ ಗಾಂಧಿನಗರದ ಜನರನ್ನು ಕಾಡುತ್ತಿದ್ದು, ಅದನ್ನು ಸರಿಪಡಿಸಬೇಕು
- ಪ್ರಕೃತಿ ಮತ್ತು ಪ್ರಗತಿ ನಡುವೆ ಸಮತೋಲನ ಸಾಧಿಸಬೇಕು





ಸಮ್ಮೇಳನಾಧ್ಯಕ್ಷ ವೂಡೇ ಪಿ.ಕೃಷ್ಣ ಅವರನ್ನು ಮೆರವಣಿಗೆ ಮೂಲಕ ಕರೆತರಲಾಯಿತು (ಎಡಚಿತ್ರ) ದಿನೇಶ್ ಗುಂಡೂರಾವ್ (ಎಡದಿಂದ ಎರಡನೆಯವರು) ಹಾಗೂ ವೂಡೇ ಪಿ.ಕೃಷ್ಣ ಮಾತುಕತೆ ನಡೆಸಿದರು. ಲೀಲಾದೇವಿ ಆರ್ ಪ್ರಸಾದ್, ಡಾ.ಪದ್ಮಾ ಶೇಖರ್ ಇದ್ದಾರೆ -ಪ್ರಜಾವಾಣಿ ಚಿತ್ರಗಳು

ಸಮ್ಮೇಳನಾಧ್ಯಕ್ಷ ವೂಡೇ ಪಿ.ಕೃಷ್ಣ ಒತ್ತಾಯ • ಎಲ್ಲ ವೃತ್ತಿಯ ವ್ಯಕ್ತಿಗಳು ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಸಾಹಿತ್ಯ ರಚಿಸಲಿ

ವೃತ್ತಿಪರ ಕೋರ್ಸ್‌ಗಳಿಗೆ ಕನ್ನಡ ಕಡ್ಡಾಯವಾಗಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವೃತ್ತಿಪರ ಕೋರ್ಸ್‌ಗಳಲ್ಲಿ ಒಂದು ವಿಷಯವಾಗಿ ಕನ್ನಡವನ್ನು ಕಡ್ಡಾಯ ಮಾಡಬೇಕು' ಎಂದು ಗಾಂಧಿನಗರ ವಿಧಾನಸಭಾ ಕ್ಷೇತ್ರದ ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ವೂಡೇ ಪಿ.ಕೃಷ್ಣ ಒತ್ತಾಯ ಮಾಡಿದರು.

ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ರೇಣುಕಾಚಾರ್ಯ ಕಾಲೇಜಿನಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಾಹಿತ್ಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

'ಎಂಜಿನಿಯರಿಂಗ್, ವೈದ್ಯಕೀಯ ವಿದ್ಯಾರ್ಥಿಗಳು ಪದವಿಪೂರ್ವ ಕಾಲೇಜಿನವರೆಗೆ ಮಾತ್ರ ಕನ್ನಡವನ್ನು ಅಭ್ಯಾಸ ಮಾಡಿರುತ್ತಾರೆ. ಬಳಿಕ ಅವರು ಕನ್ನಡವನ್ನು ಓದುವುದಿಲ್ಲ. ಹೀಗಾಗಿ ಅವರಿಗೆ ತಾಂತ್ರಿಕ ಕನ್ನಡ, ವಾಣಿಜ್ಯ ಕನ್ನಡ ಹಾಗೂ ವೈದ್ಯಕೀಯ ಕನ್ನಡದ ರೂಪದಲ್ಲಿ ಕಲಿಸಬೇಕು. ಅವರು ವೃತ್ತಿಯಲ್ಲೂ ಕನ್ನಡ ಬಳಸುವಂತಾಗಬೇಕು' ಎಂದು ಹೇಳಿದರು.

'ವೈದ್ಯರು, ಎಂಜಿನಿಯರ್‌ಗಳು, ತಂತ್ರಜ್ಞರು, ವಾಣಿಜ್ಯೋದ್ಯಮಿಗಳು, ವಕೀಲರು ಸೇರಿದಂತೆ ಎಲ್ಲ ವೃತ್ತಿಯ ವ್ಯಕ್ತಿಗಳು ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಾಹಿತ್ಯ ರಚನೆ ಮಾಡಬೇಕು' ಎಂದು ಮನವಿ ಮಾಡಿದರು.

'ಕನ್ನಡದ ಕೃತಿಗಳನ್ನು ವಿದೇಶಿ ಭಾಷೆಗಳಿಗೆ ಅನುವಾದ ಮಾಡಬೇಕು. ಇದರಿಂದ ಅಲ್ಲಿನ ಜನರಿಗೆ ಕನ್ನಡ ಸಾಹಿತ್ಯದ ಬಗ್ಗೆ ಪರಿಚಯವಾಗುತ್ತದೆ. ವಿಶ್ವ ಮಾನ್ಯತೆ ದೊರೆಯುತ್ತದೆ' ಎಂದು ಸಲಹೆ ನೀಡಿದರು.

ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಡಾ.ಪದ್ಮಾ ಶೇಖರ್, 'ಕನ್ನಡ ಶಾಲೆಗಳನ್ನು ಮುಚ್ಚುತ್ತಿದ್ದರೆ, ಕಾನ್ವೆಂಟ್‌ಗಳು ನಾಯಿಕೊಡೆಗಳಂತೆ ತಲೆ ಎತ್ತುತ್ತಿವೆ. ಈ ಶಾಲೆಗಳಲ್ಲಿ ಕನ್ನಡದ ವಾತಾವರಣ ಸೃಷ್ಟಿಸಬೇಕು. ಅನ್ಯಭಾಷೆಯಲ್ಲಿ ಕಲಿತ ಮಕ್ಕಳಲ್ಲಿ ಸಂಬಂಧಗಳ ಸಂವೇದನೆ ಇರುವುದಿಲ್ಲ. ಇದರಿಂದಲೇ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚುತ್ತಿದೆ' ಎಂದರು.

> ಗಾಂಧಿನಗರ ಕ್ಷೇತ್ರದಲ್ಲಿ ಕನ್ನಡ ಭವನ ನಿರ್ಮಿಸಬೇಕು. ದತ್ತಿ ನಿಧಿ ಸ್ಥಾಪಿಸಿದರೆ, ಅದರಿಂದ ಬರುವ ಬಡ್ಡಿಯಿಂದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗಬಹುದು.
>
> **ಡಾ.ವಿ. ಮಂಜುಳಾ ಶಿವಾನಂದ,** ಕನ್ನಡ ಸಾಹಿತ್ಯ ಪರಿಷತ್ತಿನ ಗಾಂಧಿನಗರ ವಿಧಾನಸಭಾ ಕ್ಷೇತ್ರ ಘಟಕದ ಅಧ್ಯಕ್ಷೆ

> **ಹಿಂದಿ ಭಾಷೆ ಹೇರಿಕೆ ವಿರುದ್ಧ ದೊಡ್ಡ ಚಳವಳಿಯನ್ನು ರೂಪಿಸಬೇಕು. ಅದರ ಮುಂದಾಳತ್ವವನ್ನು ದಿನೇಶ್ ಗುಂಡೂರಾವ್ ವಹಿಸಿಕೊಳ್ಳಬೇಕು.**
>
> **ಬೈರಮಂಗಲ ರಾಮೇಗೌಡ,** ಲೇಖಕ

'ಮಾತೃಭಾಷೆ ಹೃದಯದ ಭಾಷೆ. ಸಂಬಂಧಗಳ ಕೊಂಡಿಯನ್ನು ಬೆಸೆಯುವಂತಹ ಭಾಷೆ. ಅಂತಹ ಭಾಷೆಯಾದ ಕನ್ನಡದಲ್ಲಿ ಕಲಿತು ಉದ್ಯೋಗ ಸೃಷ್ಟಿಸಿಕೊಳ್ಳುವ ವಾತಾವರಣ ನಿರ್ಮಾಣವಾಗಬೇಕು. ಈ ವಿಷಯದಲ್ಲಿ ರಾಜಕಾರಣಿಗಳು ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕು' ಎಂದು ಸಲಹೆ ನೀಡಿದರು.

'ಫ್ರಾನ್ಸ್‌ನಲ್ಲಿ ಕೆಲಸ ಮಾಡಬೇಕಾದರೆ ಫ್ರೆಂಚ್ ಭಾಷೆಯನ್ನು ಕಲಿಯಬೇಕು. ಅಂತಹ ವಾತಾವರಣ ರಾಜ್ಯದಲ್ಲೂ ಸೃಷ್ಟಿಯಾಗಬೇಕು' ಎಂದರು.

ಉಡುತಡಿಯ ಅಕ್ಕಮಹಾದೇವಿ ಸಮಿತಿಯ ಅಧ್ಯಕ್ಷೆ ಲೀಲಾದೇವಿ ಆರ್. ಪ್ರಸಾದ್, 'ಕನ್ನಡ ಚಳವಳಿಗಾರರು ಒಗ್ಗಟ್ಟಾಗಬೇಕು. ಆಗ ಕನ್ನಡಕ್ಕೆ ಮತ್ತಷ್ಟು ಶಕ್ತಿ ಬರುತ್ತದೆ. ಸಮ್ಮೇಳನಗಳು ನಿಂತ ನೀರಾಗಬಾರದು. ನಿರಂತರವಾಗಿ ಹರಿಯುತ್ತಿರುವ ನದಿಯಾಗಬೇಕು' ಎಂದು ಹೇಳಿದರು.

ಸಾಧಕರಿಗೆ ಸನ್ಮಾನ: ಕನ್ನಡಪರ ಹೋರಾಟಗಾರ ಟಿ.ಎಂ.ನಂಜುಂಡಸ್ವಾಮಿ, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ, ಮಲ್ಲೇಶ್ವರದ ಮಹಿಳಾ ಕೋ-ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕ ಕೆ.ನರಸಿಂಹಶೆಟ್ಟಿ ಅವರನ್ನು ಸನ್ಮಾನಿಸಲಾಯಿತು.

ಸಮ್ಮೇಳನಾಧ್ಯಕ್ಷರ ಮೆರವಣಿಗೆ: ಸಮ್ಮೇಳನಾಧ್ಯಕ್ಷ ವೂಡೇ ಪಿ.ಕೃಷ್ಣ ಅವರನ್ನು ಮಲ್ಲೇಶ್ವರ ವೃತ್ತದಲ್ಲಿರುವ ಕುವೆಂಪು ಪ್ರತಿಮೆಯಿಂದ ಕಾರ್ಯಕ್ರಮದ ಸಭಾಂಗಣದವರೆಗೆ ಮೆರವಣಿಗೆ ಮೂಲಕ ಕರೆತರಲಾಯಿತು. ವಿವಿಧ ಜನಪದ ಕಲಾ ತಂಡಗಳು ಮೆರವಣಿಗೆಗೆ ಮೆರುಗು ನೀಡಿದವು.

'ನಾಡಧ್ವಜದಿಂದ ರಾಷ್ಟ್ರಧ್ವಜಕ್ಕೆ ಚ್ಯುತಿ ಇಲ್ಲ'

'ನಮ್ಮ ಮೆಟ್ರೊದಲ್ಲಿ ಹಿಂದಿ ಹೇರುತ್ತಿರುವುದನ್ನು ವಿರೋಧಿಸುತ್ತೇವೆ. ಅಂದ ಮಾತ್ರಕ್ಕೆ ಹಿಂದಿ ಭಾಷೆಗೆ ಅವಮಾನ ಮಾಡುತ್ತಿಲ್ಲ. ಅನ್ಯ ಭಾಷಿಕರು ಈ ನೆಲದ ಭಾಷೆಯನ್ನು ಗೌರವಿಸಬೇಕು. ರಾಷ್ಟ್ರಗೀತೆಯಂತೆ ನಾಡಗೀತೆ ಇದೆ. ಇದರಿಂದ ರಾಷ್ಟ್ರಗೀತೆಗೆ ಯಾವುದೇ ಚ್ಯುತಿ ಬಂದಿಲ್ಲ. ರಾಷ್ಟ್ರಧ್ವಜದಂತೆ ನಾಡಧ್ವಜಕ್ಕೂ ಅಧಿಕೃತ ಮಾನ್ಯತೆ ನೀಡಲು ರಾಜ್ಯ ಸರ್ಕಾರ ಕ್ರಮ ಕೈಗೊಂಡಿದೆ' ಎಂದು ಶಾಸಕ ದಿನೇಶ್ ಗುಂಡೂರಾವ್ ಅವರು ಹೇಳಿದರು.

'ನಾಮಫಲಕಗಳಲ್ಲಿ ಕನ್ನಡ ಇರಲಿ'

'ರಾಜ್ಯದಲ್ಲಿ ಎಲ್ಲ ನಾಮಫಲಕಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಕೆ ಮಾಡಬೇಕು. ಇದನ್ನು ನಾವೆಲ್ಲರೂ ಪಾಲಿಸಿದರೆ ಕನ್ನಡದ ಅಸ್ತಿತ್ವವನ್ನು ದೃಶ್ಯ ರೂಪದಲ್ಲಿ ತೋರಿಸಿದಂತಾಗುತ್ತದೆ' ಎಂದು ವೂಡೇ ಪಿ. ಕೃಷ್ಣ ಅವರು ತಿಳಿಸಿದರು.

ನಂ. 1 ಕನ್ನಡ ದಿನಪತ್ರಿಕೆ

ಸೋಮವಾರ 31 ಜುಲೈ 2017
VIJAYAVANI · 31 JULY 2017

ತಂತ್ರಜ್ಞಾನ ಬಳಸಿ ಅನ್ಯಭಾಷಿಕರಿಗೆ ಕನ್ನಡ ಕಲಿಸಿ

ಸಮ್ಮೇಳನಾಧ್ಯಕ್ಷ ಡಾ. ವೂಡೇ ಪಿ. ಕೃಷ್ಣ ಸಲಹೆ » ಗಾಂಧಿನಗರ ವಿಧಾನಸಭಾ ಕ್ಷೇತ್ರದ 4ನೇ ಕನ್ನಡ ಸಾಹಿತ್ಯ ಸಮ್ಮೇಳನ

▪ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಆಧುನಿಕ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಂಡು ರಾಜಧಾನಿಯಲ್ಲಿ ನೆಲೆಸಿರುವ ಕನ್ನಡೇತರರಿಗೆ ಕನ್ನಡ ಕಲಿಸಬೇಕು ಎಂದು ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ ಸಲಹೆ ನೀಡಿದ್ದಾರೆ.

ಆನಂದರಾವ್ ವೃತ್ತದಲ್ಲಿರುವ ಶ್ರೀ ಜಗದ್ಗುರು ರೇಣುಕಾಚಾರ್ಯ ಕಾಲೇಜಿನಲ್ಲಿ ಭಾನುವಾರ ಏರ್ಪಾಡಾಗಿದ್ದ ಗಾಂಧಿನಗರ ವಿಧಾನಸಭಾ ಕ್ಷೇತ್ರದ 4ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಇಂದು ತಂತ್ರಜ್ಞಾನ ಎಲ್ಲ ವಿಭಾಗಗಳನ್ನೂ ಆವರಿಸಿದೆ. ಆದರಿಂದ ನಮ್ಮ ಜೀವನಶೈಲಿ ಬದಲಾಗಿದೆ. ಕನ್ನಡ ಹಾಗೂ ಇಲ್ಲಿನ ಸಂಸ್ಕೃತಿಯ ಬಗ್ಗೆ ಸಾಂಪ್ರದಾಯಿಕ ವಿಧಾನದಲ್ಲಿ ತಿಳಿಸಿದರೆ, ಯುವಕರಿಗೆ ಸುಲಭವಾಗಿ ತಲುಪುವುದಿಲ್ಲ. ಹಾಗಾಗಿ, ತಂತ್ರಜ್ಞಾನವನ್ನು ಮಾಧ್ಯಮವಾಗಿಸಿ ಕೊಂಡು ಕನ್ನಡವನ್ನು ಪರಿಸರಿಸಬೇಕು. ಈ ರೀತಿ ಅನ್ಯ ಭಾಷಿಕರಿಗೂ ಕನ್ನಡ ಸಂಸ್ಕೃತಿಯ ಘಮಲು ಪಸರಿಸುವಂತೆ ಮಾಡಬೇಕು ಎಂದರು.

ಸಾಧಕರಿಗೆ ಸನ್ಮಾನ

ಕನ್ನಡದ ಕೃತಿ ಭಾಷಾಂತರ ಅಗತ್ಯ: ಶಾಸ್ತ್ರೀಯ ಭಾಷೆಯ ಮನ್ನಣೆ ಪಡೆದಿರುವ ಕನ್ನಡಕ್ಕೆ ಜಾಗತಿಕ ಮನ್ನಣೆ ದೊರೆಯುವಂತೆ ಆಗಬೇಕು. ಅದಕ್ಕಾಗಿ, ಕನ್ನಡ ಕೃತಿಗಳನ್ನು ಅನ್ಯ ಭಾಷೆಗಳಿಗೆ, ವಿಶೇಷವಾಗಿ ಇಂಗ್ಲಿಷ್‌ಗೆ ಅನುವಾದಿಸಬೇಕು. ಆಗ ವಿದೇಶಿಯರಿಗೂ ಕನ್ನಡ ಸಾಹಿತ್ಯದ ಪರಿಚಯವಾಗಿ, ಜಾಗತಿಕ ಮನ್ನಣೆ ಸಿಗುತ್ತದೆ. ಇಂಜಿನಿಯರಿಂಗ್, ವೈದ್ಯಕೀಯ ಕ್ಷೇತ್ರದಲ್ಲಿ ಕನ್ನಡ ಸಾಹಿತ್ಯ ಸೃಷ್ಟಿ ಆಗಬೇಕು ಎಂದು ಹೇಳಿದರು.

ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್, ಸಂಸ್ಕೃತ ವಿವಿ ಕುಲಪತಿ ಡಾ. ಪದ್ಮಾಶೇಖರ್, ಬಿಬಿಎಂಪಿ ಸದಸ್ಯೆ ಲತಾ ನವೀನ್‌ಕುಮಾರ್, ಕಸಾಪ ಬೆಂಗಳೂರು ನಗರ ಜಿಲ್ಲಾಧ್ಯಕ್ಷ ಮಾಯಣ್ಣ, ಗಾಂಧಿನಗರಕ್ಷೇತ್ರದ ಕಸಾಪ ಅಧ್ಯಕ್ಷೆ ಹಾ.ವೀ. ಮಂಜುಳಾ ಶಿವಾನಂದ ಮತ್ತಿತರರಿದ್ದರು.

ಕನ್ನಡ ಧ್ವಜಕ್ಕೆ ಮಾನ್ಯತೆ ದೊರೆಯಬೇಕು

ರಾಜ್ಯದಲ್ಲಿ ನಾಡಗೀತೆಯನ್ನು ಅಧಿಕೃತಗೊಳಿಸಲಾಗಿದೆ. ಅದರ ಜತೆಗೆ ರಾಷ್ಟ್ರಗೀತೆಯನ್ನೂ ಗೌರವಿಸುತ್ತಿದ್ದೇವೆ. ಧ್ವಜದ ವಿಚಾರವಾಗಿ ಸಹ ಇದೇ ನಿಲುವು ತಳೆಯಲಾಗಿದೆ. ಹಲವು ವರ್ಷಗಳಿಂದ ಬಳಸುತ್ತಿರುವ ಕನ್ನಡ ಧ್ವಜಕ್ಕೆ ಮಾನ್ಯತೆ ದೊರೆಯಬೇಕಿದೆ ಎಂದು ಡಾ. ವೂಡೇ ಪಿ. ಕೃಷ್ಣ ಹೇಳಿದರು. ಪ್ರತಿನಾಡಿಗೂ ಅದರದ್ದೇ ಆದ ಸಂಸ್ಕೃತಿ ಹಾಗೂ ಭಾಷೆಗಳಿವೆ. ಅದನ್ನು ಎಲ್ಲರೂ ಗೌರವಿಸಬೇಕು. ಹಿಂದಿ ಹೇರಿಕೆ ವಿಚಾರವಾಗಿ ಹಿಂದೆಯೇ ಕೇಂದ್ರಕ್ಕೆ ಪತ್ರ ಬರೆಯಲಾಗಿದೆ. ಅಷ್ಟಕ್ಕೂ ನಾವು ಹಿಂದಿ ವಿರೋಧಿಗಳಲ್ಲ. ಹೊರರಾಜ್ಯದ ಜನರೂ ಇಲ್ಲಿನ ಭಾಷೆ ಕಲಿಯಬೇಕು ಎಂದು ತಿಳಿಸಿದರು.



ಸಮ್ಮೇಳನದಲ್ಲಿ 'ಶಿಕ್ಷಣ ಶಿಲ್ಪಿ' ಪುಸ್ತಕ ಬಿಡುಗಡೆಗೊಳಿಸಲಾಯಿತು. ಸಮ್ಮೇಳನಾಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಸ್ಥಳೀಯ ಶಾಸಕ ದಿನೇಶ್ ಗುಂಡೂರಾವ್, ಕಸಾಪ ನಗರ ಜಿಲ್ಲಾಧ್ಯಕ್ಷ ಮಾಯಣ್ಣ ಇತರರಿದ್ದರು.

'ಶಿಕ್ಷಣ ಶಿಲ್ಪಿ' ಪುಸ್ತಕ ಲೋಕಾರ್ಪಣೆ

ಡಾ. ವೂಡೇ ಪಿ. ಕೃಷ್ಣ ಅವರ ಜೀವನಚರಿತ್ರೆ ಆಧರಿಸಿ ಡಾ. ಕೆ.ವಿ. ಮುದ್ದವೀರಪ್ಪ ಹಾಗೂ ಪ್ರೊ. ಎಂ.ಜಿ. ರಂಗಸ್ವಾಮಿ ಸಂಪಾದಿಸಿರುವ 'ಶಿಕ್ಷಣ ಶಿಲ್ಪಿ' ಪುಸ್ತಕವನ್ನು ಡಾ. ಲೀಲಾದೇವಿ ಆರ್. ಪ್ರಸಾದ್ ಬಿಡುಗಡೆ ಮಾಡಿದರು. ಡಾ. ವೂಡೇ ಪಿ. ಕೃಷ್ಣ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ ಹಾಗೂ ಸಾಧನೆಗಳನ್ನು ಇದರಲ್ಲಿ ವಿವರಿಸಲಾಗಿದೆ. ಕರ್ನಾಟಕ ಸಂಸ್ಕೃತ ವಿವಿ ಕುಲಪತಿ ಡಾ. ಪದ್ಮಾಶೇಖರ್ ಸಮ್ಮೇಳನದ ಸ್ಮರಣ ಸಂಚಿಕೆ ಲೋಕಾರ್ಪಣೆ ಮಾಡಿದರು.



ಜಾನಪದ ಕಲಾತಂಡಗಳೊಂದಿಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ.

ಎಲ್ಲ ವಿವಿಗಳ ಇಂಜಿನಿಯರಿಂಗ್ ಹಾಗೂ ಮೆಡಿಕಲ್ ಕಾಲೇಜುಗಳಲ್ಲಿ ಕನ್ನಡವನ್ನು ಒಂದು ವಿಷಯವನ್ನಾಗಿ ಕಡ್ಡಾಯವಾಗಿ ಬೋಧಿಸಬೇಕು. ತಾಂತ್ರಿಕ ಕನ್ನಡ, ವೈದ್ಯಕೀಯ ಕನ್ನಡ ಕಲಿತು, ವೃತ್ತಿಯಲ್ಲೂ ಅದನ್ನು ಬಳಸುವಂತಾಗಬೇಕು.

। ಡಾ.ವೂಡೇ ಪಿ. ಕೃಷ್ಣ ಸಮ್ಮೇಳನಾಧ್ಯಕ್ಷ

ಸಾಧಕರಿಗೆ ಸನ್ಮಾನ

ಕನ್ನಡಪರ ಹೋರಾಟಗಾರ ಬಿ.ಎಂ. ನಂಜುಂಡಸ್ವಾಮಿ, ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ. ತಿಮ್ಮಯ್ಯ ಹಾಗೂ ಮಲ್ಲೇಶ್ವರ ಸಹಕಾರ ಬ್ಯಾಂಕ್‌ನ ನಿರ್ದೇಶಕ ಕೆ. ನರಸಿಂಹಶೆಟ್ಟಿ ಅವರನ್ನು ಸನ್ಮಾನಿಸಲಾಯಿತು.

ಆಡಳಿತದಲ್ಲಿ ಕನ್ನಡವಿದ್ದರೂ ರಾಜಧಾನಿಯಲ್ಲಿ ಅದು ಕಣ್ಮರೆಯಾಗುತ್ತಿದೆ. ನೆಲ-ಜಲದ ವಿಚಾರ ಬಂದರೆ ತಮಿಳಿಗರು ಪಕ್ಷಾತೀತವಾಗಿ ಒಂದಾಗುತ್ತಾರೆ. ಆದರೆ, ನಮ್ಮಲ್ಲಿ ಮಾತ್ರ ಇದಕ್ಕೆ ತದ್ವಿರುದ್ಧ ಪರಿಸ್ಥಿತಿ ಇದೆ. ಕನ್ನಡದಲ್ಲಿ ಮಾತನಾಡುವುದು ಅವಮಾನ ಎಂಬ ಮನಸ್ಥಿತಿಯಿಂದ ಯುವ ಜನತೆ ಹೊರಬರಬೇಕಿದೆ.

ಕರ್ನಾಟಕ ಸಂಸ್ಕೃತ ವಿವಿ ಕುಲಪತಿ



ಸಮ್ಮೇಳನದಲ್ಲಿ ಭಾಗವಹಿಸಿದ್ದ ಸಾಹಿತ್ಯಾಸಕ್ತರು.

ಪ್ರತಿ ಮನೆಯಲ್ಲೂ ಕನ್ನಡ ಕಾವಲು ಪಡೆ ಸದಸ್ಯರು ಹುಟ್ಟಿಕೊಳ್ಳಬೇಕು. ಮಾತೃಭಾಷೆಯನ್ನು ಗೌರವಿಸಿ, ದೈನಂದಿನ ಜೀವನದಲ್ಲಿ ಬಳಸಬೇಕು. ಅನ್ಯಭಾಷೆಗಳ ಹಾವಳಿಯಿಂದ ಸಂಬಂಧಗಳಿಗೂ ಬೆಲೆ ಇಲ್ಲದಂತಾಗಿದೆ.

। ಡಾ. ಲೀಲಾದೇವಿ ಆರ್. ಪ್ರಸಾದ್ ಮಾಜಿ ಸಚಿವೆ

ಅದ್ದೂರಿ ಮೆರವಣಿಗೆ

ಸಮ್ಮೇಳನಾಧ್ಯಕ್ಷ ಡಾ.ವೂಡೇ ಪಿ. ಕೃಷ್ಣ ಅವರನ್ನು ಮಲ್ಲೇಶ್ವರ ವೃತ್ತದ ಕುವೆಂಪು ಪ್ರತಿಮೆ ಬಳಿಯಿಂದ ಬೆಳಗ್ಗೆ 9 ಗಂಟೆಗೆ ಮೆರವಣಿಗೆಯಲ್ಲಿ ಕರೆತರಲಾಯಿತು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.'ಮುಖ್ಯಮಂತ್ರಿ' ಚಂದ್ರು ಮೆರವಣಿಗೆಗೆ ಚಾಲನೆ ನೀಡಿದರು. ಡೊಳ್ಳು ಕುಣಿತದ ಕಲಾವಿದರು ಸಾಥ್ ನೀಡಿದರು. ಲಿಂಕ್ ರಸ್ತೆ ಪೈಪ್‌ಲೈನ್‌ನಿಂದ ಶೇಷಾದ್ರಿ ರಸ್ತೆಯ ಮೂಲಕ ಆನಂದರಾವ್ ವೃತ್ತಕ್ಕೆ ಮೆರವಣಿಗೆ ಸಾಗಿತು. ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್, ಕ್ಷೇತ್ರ ಶಿಕ್ಷಣ ಅಧಿಕಾರಿ ವಿ.ಸಿ. ಬಸವರಾಜೇಗೌಡ, ಗಾಂಧಿನಗರ ವಿಧಾನಸಭಾ ಕ್ಷೇತ್ರದ ಎಲ್ಲ ಕನ್ನಡಪರ ಸಂಘ ಸಂಸ್ಥೆಗಳ ಸದಸ್ಯರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಟೈಮ್ಸ್ ಆಫ್ ಕರ್ನಾಟಕ

ಸೋಮವಾರ, 3 ಜುಲೈ 2017

ಯುವಜನಾಂಗಕ್ಕೆ ಗಾಂಧೀಜಿಯವರ ಚಿಂತನೆಗಳು ಅವಶ್ಯಕ

ಹಿರಿಯ ಸಂಸ್ಕೃತಿ ಚಿಂತಕ ಪುತ್ತೂರು ಲಕ್ಷ್ಮೀಶ ತೋಳ್ಪಾಡಿ ಅಭಿಮತ

ಅರಸೀಕೆರೆ(ಹಾಸನ): ಗಾಂಧೀಜಿಯವರ ಆದರ್ಶ, ಚಿಂತನೆ ಮತ್ತು ಆಲೋಚನೆಗಳು ಇಂದಿನ ಪದವೀಧರರಲ್ಲಿ ಕೊರತೆ ಕಾಣುತ್ತಿದ್ದು, ಇಂದಿನ ಯುವ ಜನಾಂಗಕ್ಕೆ ಗಾಂಧೀಜಿಯವರ ಚಿಂತನೆಗಳು ಅತ್ಯವಶ್ಯಕವಾಗಿದ್ದು, ಆ ನಿಟ್ಟಿನಲ್ಲಿ ಉಪನ್ಯಾಸಕರು ಮಾಹಿತಿ ಸಂಗ್ರಹಿಸಿ ಬೋಧನೆ ಮಾಡಬೇಕೆಂದು ಹಿರಿಯ ಸಂಸ್ಕೃತಿ ಚಿಂತಕ ಪುತ್ತೂರು ಲಕ್ಷ್ಮೀಶ ತೋಳ್ಪಾಡಿ ಕರೆ ನೀಡಿದರು.

ನಗರದ ಹೊರವಲಯದಲ್ಲಿರುವ ಕಸ್ತೂರಿಬಾ ಗಾಂಧಿ ಆಶ್ರಮದಲ್ಲಿ ಶನಿವಾರ ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಸಂಯುಕ್ತಾಶ್ರಯದಲ್ಲಿ ಕಾಲೇಜು ಅಧ್ಯಾಪಕರಿಗಾಗಿ ಗಾಂಧಿ ಮತ್ತು ಸಮಾಜವಾದ ಕುರಿತು ಆಯೋಜಿಸಲಾಗಿದ್ದ ಅಧ್ಯಯನ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಯುವ ಜನಾಂಗದಲ್ಲಿ ಗಾಂಧೀಜಿಯವರ ಬಗ್ಗೆ ಅನೇಕ ಗೊಂದಲಗಳು ಮನೆ ಮಾಡಿವೆ. ಇದನ್ನು ವಿದ್ಯಾರ್ಥಿ ಜೀವನದಲ್ಲೇ ಬಗೆಹರಿಸುವ ಪ್ರಯತ್ನವು ಹೆಚ್ಚಾಗಬೇಕಾಗಿದೆ. ಇಂದಿನ ಉಪನ್ಯಾಸಕರಿಗೆ ಗಾಂಧೀಜಿ ಜೀವನ ಚರಿತ್ರೆಯ ಬಗ್ಗೆ ಮಾಹಿತಿ ಕೊರತೆ ಬಹಳಷ್ಟಿದೆ. ಯುವ ಜನಾಂಗಕ್ಕೆ ಕನಿಷ್ಟ ಅವರು ಓದುವ ಪ್ರೌಢಶಾಲೆ ವಿದ್ಯಾಭ್ಯಾಸದವರೆಗಾದರೂ ಮಾತೃ ಭಾಷೆಗಳಲ್ಲಿ ಗಾಂಧೀಜಿಯವರ ಬಗ್ಗೆ ಮಾಹಿತಿ ನೀಡಬೇಕಾಗಿದೆ. ಶಿಕ್ಷಣದ ವ್ಯವಸ್ಥೆ ಅಜೆಂಡಾದಲ್ಲಿ ಗಾಂಧೀಜಿಯವರ ಜೀವನ ಚರಿತ್ರೆ ಇಂದು ಭಾಗವಾಗಬೇಕಾಗಿದೆ ಎಂದರು.

ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟೀಷರಿಗೆ ಬ್ರಿಟಿಷರೇ ಶತ್ರುಗಳು ಎಂಬುದನ್ನು ಗಾಂಧೀಜಿ ತೋರಿಸಿಕೊಟ್ಟರು. ತಪ್ಪು ಕಾನೂನುಗಳನ್ನು ರಚಿಸಿದವರಿಗೆ ಯಾಕೆ ಶಿಕ್ಷೆಯನ್ನು ನೀಡಬಾರದು ಎಂದು ಪ್ರಶ್ನಿಸುವ ದಿಟ್ಟ ಎದೆಗಾರಿಕೆಯನ್ನು ಅಂದು ಬ್ರಿಟೀಷರಿಗೆ ತೋರಿಸಿದ್ದರು. ಗಾಂಧೀಜಿ ಸಮಾನ ಕಾಲದವರಾದ ಲೋಕಮಾನ್ಯ ತಿಲಕರು ಅಂದು ಹುಟ್ಟುಹಾಕಿದ ಸಾಮೂಹಿಕ ಗಣಪತಿ ಮಹೋತ್ಸವ ಇಂದು ಸಾಮಾಜಿಕ ದುರುದ್ದೇಶದಿಂದ ರಾಜಕೀಯ ಪ್ರೇರಿತವಾಗಿ ಧರ್ಮ ಧರ್ಮಗಳ ನಡುವೆ ವೈಷಮ್ಯಕ್ಕೆ ದಾರಿ ಮಾಡಿಕೊಟ್ಟಿದೆ. ಗಾಂಧೀಜಿಯವರ ವಿಚಾರಧಾರೆಗಳು ಪ್ರಾರಂಭದಲ್ಲಿ ಅರಿಯಬೇಕಾದರೆ ಕಬ್ಬಿಣದ ಕಡಲೆಯಂತಿದ್ದರೂ ಹಲವಾರು ಬಾರಿ ಮನನ ಮಾಡಿಕೊಂಡಲ್ಲಿ ಅವರಲ್ಲಿರುವ ಅದ್ಭುತ ಮಾಹಿತಿಗಳು ಲಭ್ಯವಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ತಿಳಿಸಿದರು. ದೇಶದಲ್ಲಿ ಜನತೆ ಯಾವುದನ್ನು ಖರೀದಿ ಮಾಡಬೇಕು, ಬೇಡವೆಂಬ ನಿರ್ಧಾರಗಳನ್ನು ತೆಗೆದುಕೊಳ್ಳುವ ನಿಷ್ಕಲ್ಮಷ ಮನಸ್ಸುಗಳು ಇದ್ದರೆ ಸ್ವದೇಶಿ ವಸ್ತುಗಳಿಗೆ ಭಾರೀ ಬೇಡಿಕೆ ಮತ್ತು ಪ್ರೋತ್ಸಾಹ ತಾನಾಗಿಯೇ ಬರುತ್ತದೆ ಎಂಬ ವಿಷಯವನ್ನು ಅವರು ಮನಗಂಡಿದ್ದರು. ಕೆಳವರ್ಗದ ವ್ಯಕ್ತಿಗೆ ನ್ಯಾಯ ದೊರಕಿಸಿಕೊಡಲು ಸಾಧ್ಯವಾಗುತ್ತದೆಯೋ ಆ ಸನ್ನಿವೇಶವನ್ನು ಸಮಾಜವಾದಕ್ಕೆ ಸಿಕ್ಕ ಜಯ ಎಂದು ಹೇಳಬಹುದು. ಗಾಂಧೀಜಿ ಎನ್ನುವ ಪದವೇ ಒಂದು ಅದ್ಭುತ ಜ್ಞಾನ ಭಂಡಾರವಾಗಿದೆ. ಭಂಡಾರದ ಪ್ರತಿ ಪುಟಗಳನ್ನು ಅರಿಯುತ್ತಾ, ಜ್ಞಾನಾರ್ಜನೆ ಮಾಡಿ ತಮ್ಮ ವಿದ್ಯಾರ್ಥಿ ವೃಂದಕ್ಕೆ ಗಾಂಧೀಜಿಯವರ ಬಗ್ಗೆ ಹೆಚ್ಚಿನ ಮಾಹಿತಿ ಮತ್ತು ವಿಚಾರಧಾರೆಗಳನ್ನು ನೀಡಬೇಕೆಂದು ಹೇಳಿದರು.



ರಾಷ್ಟ್ರೀಯ ಸೇವಾ ಯೋಜನೆ ರಾಜ್ಯ ಸಂಪರ್ಕಾಧಿಕಾರಿ ಡಾ.ಗಣನಾಥ ಎಕ್ಕಾರು ಮಾತನಾಡಿ, ಉಪನ್ಯಾಸಕರು ಗಾಂಧೀಜಿಯವರ ಬಗ್ಗೆ ಸಂಶೋಧನೆ ಮಾಡುವ ಸಂದರ್ಭದಲ್ಲಿ ಅವರ ಸಂಶೋಧನೆಯ ಬಗ್ಗೆಯೇ ವಿಶ್ವಾಸವಿರುವುದಿಲ್ಲ. ಜಡಗಟ್ಟಿರುವ ವಿಶ್ವಾಸಕ್ಕೆ ನೀರೆರೆದು ಪೋಷಿಸಲು ಇಂತಹ ಅಧ್ಯಯನ ಶಿಬಿರಗಳು ಹೆಚ್ಚಿನ ಸಹಕಾರಿಯಾಗಲಿದೆ ಎಂದರು.

ಗಾಂಧೀಜಿ, ಅಂಬೇಡ್ಕರ್, ಲೋಹಿಯಾ ಸೇರಿದಂತೆ ಇನ್ನಿತರೆ ದಾರ್ಶನಿಕರ ವಿಚಾರ ಮಂಥನಗಳನ್ನು ನಡೆಸಲು ಸರ್ಕಾರವು ಅನೇಕ ಯೋಜನೆಗಳ ಮೂಲಕ ಅನುದಾನವನ್ನು ಬಿಡುಗಡೆ ಮಾಡುತ್ತಿದೆ. ಇಂದಿನ ಶಾಲಾ ಕಾಲೇಜು ವಿದ್ಯಾರ್ಥಿಗಳಲ್ಲಿ ಗಾಂಧೀಜಿಯವರ ಬಗ್ಗೆ ಇರುವ ಪೂರ್ವಾಗ್ರಹಿತ ವಿಚಾರಗಳನ್ನು ತೊಡೆದು ಹಾಕುವ ಜವಾಬ್ದಾರಿ ಪ್ರತಿಯೊಂದು ಕ್ಷೇತ್ರದ ಶಿಕ್ಷಕರು ಮತ್ತು ಉಪನ್ಯಾಸಕರ ಮೇಲಿದೆ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇಂದು ವಿವಿಧ ಯೋಜನೆಗಳ ಮೂಲಕ ಶಾಲೆ ಕಾಲೇಜುಗಳಲ್ಲಿ ಗಾಂಧೀಜಿ ಮತ್ತು ದಾರ್ಶನಿಕರ ವಿಚಾರಧಾರೆಗಳನ್ನು ಮಹತ್ವವನ್ನು ಬೋಧಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬರುತ್ತಿದೆ. ಇಂದಿನಿಂದ ನಡೆಯುತ್ತಿರುವ ಈ ಶಿಬಿರದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಸುಮಾರು ಎಪ್ಪತ್ತಕ್ಕೂ ಹೆಚ್ಚು ಉಪನ್ಯಾಸಕರು ಭಾಗವಹಿಸುತ್ತಿರುವುದು ಶ್ಲಾಘನೀಯ. ಈ ಶಿಬಿರದಲ್ಲಿ ಮುಕ್ತವಾದ ಚರ್ಚೆಗಳಿಗೆ ಅವಕಾಶವಿದ್ದು, ಎಲ್ಲರೂ ಗಾಂಧೀಜಿಯ ಬಗ್ಗೆ ಇರುವ ವಿಚಾರಧಾರೆಗಳನ್ನು ಆರೋಗ್ಯಕರವಾಗಿ ಚರ್ಚಿಸಿ ಉತ್ತರ ಕಂಡುಕೊಳ್ಳಬಹುದು. ಅದಕ್ಕೆ ಪೂರಕವಾದ ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿ ಉತ್ತರಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೆ ಪಿ.ಕೃಷ್ಣ, ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ ಅಧ್ಯಕ್ಷ ಡಿ.ಎಸ್. ನಾಗಭೂಷಣ, ಕಸ್ತೂರಿ ಆಶ್ರಮ ಪ್ರತಿನಿಧಿ ಡಾ. ಉಷಾ ಅಬ್ರಾಲ್ ಮಾತನಾಡಿದರು. ಪ್ರಾಂಶುಪಾಲ ಪ್ರಸನ್ನ, ಗಾಂಧಿ ಸ್ಮಾರಕ ನಿಧಿ ಉಪಾಧ್ಯಕ್ಷ ಜಿ.ಬಿ.ಶಿವರಾಜು, ಲೋಹಿಯಾ ಜನ್ಮ ಶತಾಬ್ದಿ ಪ್ರತಿಷ್ಠಾನ ಕಾರ್ಯದರ್ಶಿ ಎನ್.ಎಂ.ಕುಲಕರ್ಣಿ ಇನ್ನಿತರರು ಹಾಜರಿದ್ದರು.

ವಿವಿಧ ಹಂತಗಳ ವಿಚಾರ ಗೋಷ್ಠಿಗಳಲ್ಲಿ, ಗಾಂಧಿ ಮತ್ತು ಜೆ.ಪಿ ಸಂವಾದದಲ್ಲಿ ಮೂಡಿದ ಸಮಾಜವಾದ ಎಂಬ ವಿಚಾರ ಮಂಡನೆಯಲ್ಲಿ ಡಾ.ಮೀನಾ ದೇಶಪಾಂಡೆ ಉಪನ್ಯಾಸ ನೀಡಿದರು. ಪ್ರಶ್ನೋತ್ತರ ಮತ್ತು ಚರ್ಚೆಗಳು ಗಾಂಧೀಜಿ ವಿಚಾರಧಾರೆಗಳ ಬಗ್ಗೆ ಅನೇಕ ಮಾಹಿತಿಯನ್ನು ಹೊರಗೆಡವಲು ಕಾರ್ಯಕ್ರಮದಲ್ಲಿ ಸಾಧ್ಯವಾಯಿತು.

■ ಇಂದಿನ ಯುವ ಜನಾಂಗದಲ್ಲಿ ಗಾಂಧೀಜಿಯವರ ಬಗ್ಗೆ ಅನೇಕ ಗೊಂದಲಗಳು ಮನೆ ಮಾಡಿವೆ. ಇದನ್ನು ವಿದ್ಯಾರ್ಥಿ ಜೀವನದಲ್ಲೇ ಬಗೆಹರಿಸುವ ಪ್ರಯತ್ನವು ಹೆಚ್ಚಾಗಬೇಕಾಗಿದೆ. ಇಂದಿನ ಉಪನ್ಯಾಸಕರಿಗೆ ಗಾಂಧೀಜಿ ಜೀವನ ಚರಿತ್ರೆಯ ಬಗ್ಗೆ ಮಾಹಿತಿಕೊರತೆ ಬಹಳಷ್ಟಿದೆ. ಯುವ ಜನಾಂಗಕ್ಕೆ ಕನಿಷ್ಟ ಅವರು ಓದುವ ಪ್ರೌಢಶಾಲೆ ವಿದ್ಯಾಭ್ಯಾಸದವರೆಗಾದರೂ ಮಾತೃ ಭಾಷೆಗಳಲ್ಲಿ ಗಾಂಧೀಜಿಯವರ ಬಗ್ಗೆ ಮಾಹಿತಿ ನೀಡಬೇಕಾಗಿದೆ. ಶಿಕ್ಷಣದ ವ್ಯವಸ್ಥೆ ಅಜೆಂಡಾದಲ್ಲಿ ಗಾಂಧೀಜಿಯವರ ಜೀವನ ಚರಿತ್ರೆ ಇಂದು ಭಾಗವಾಗಬೇಕಾಗಿದೆ

ಹೊಸ ದಿಗಂತ

ಶುಕ್ರವಾರ
11 ಆಗಸ್ಟ್ 2017

ಚಂಪಾರಣ್ ಸತ್ಯಾಗ್ರಹ ಶತಮಾನೋತ್ಸವ ಆಚರಣೆ

ಸ್ವದೇಶಿ ವಸ್ತುಗಳ ಬಳಕೆಗೆ ಅಭಿಯಾನ

▸ ದಿಗಂತ ವರದಿ: ಬೆಂಗಳೂರು, ಆ. 10

ಮಹಾತ್ಮ ಗಾಂಧೀಜಿ ಅಹಿಂಸೆಯನ್ನು ಮೂಲ ಅಸ್ತ್ರವನ್ನಾಗಿ ಬಳಸಿ ಸ್ವಾತಂತ್ರ್ಯ ಪಡೆಯಲು ಕಾರಣರಾದರು. ಅಂತಹ ಅಹಿಂಸಾ ಮಂತ್ರವನ್ನು ಜಗತ್ತಿಗೆ ಹೇಳಿಕೊಟ್ಟವರು ಭಾರತೀಯರು ಎಂದು ಕ.ಸಾ.ಪ. ಅಧ್ಯಕ್ಷ ಮನು ಬಳಿಗಾರ ಹೇಳಿದರು.

ನಗರದ ಗಾಂಧಿ ಭವನದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಮೈಲಾರ ಮಹಾದೇವಪ್ಪ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಷ್ಟ್ರೀಯ ಸೇವಾ ಯೋಜನೆ ಬೆಂಗಳೂರು ವಿಶ್ವವಿದ್ಯಾಲಯ ವತಿಯಿಂದ ಹಮ್ಮಿಕೊಂಡಿದ್ದ ಚಂಪಾರಣ್ ಸತ್ಯಾಗ್ರಹ ಶತಮಾನೋತ್ಸವ ಆಚರಣೆ (1917-2017), ಕ್ವಿಟ್ ಇಂಡಿಯಾ ಚಳವಳಿಯ 75ನೇ ವರ್ಷಾಚರಣೆ, ಹುತಾತ್ಮ ಮೈಲಾರ ಮಹದೇವಪ್ಪ ದತ್ತಿ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿ ಅವರು ಮಾತನಾಡಿದರು.

ಗಾಂಧೀಜಿಯವರ ಅಹಿಂಸಾ ಮಾರ್ಗವನ್ನು ಅನುಸರಿಸಿದವರಲ್ಲಿ ಮೈಲಾರ ಮಹದೇವಪ್ಪ [illegible] ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡಿಗರ [illegible]ದಲು ಧ್ವನಿ ಎತ್ತಿದ ಕರ್ನಾಟಕದ ಪುರುಷ ಸಿಂಹ ಮೈಲಾರ ಮಹದೇವಪ್ಪ. ದೇಶಕ್ಕಾಗಿ ತಮ್ಮ ಪ್ರಾಣ ಬಲಿದಾನ ಮಾಡಿದ್ದಾರೆ. ಗಾಂಧೀಜಿ ದಂಪತಿಗಳು ಬಿಟ್ಟರೆ ಮೈಲಾರ ದಂಪತಿಗಳಿಬ್ಬರೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಆದರೆ, ಇತಿಹಾಸದಲ್ಲಿ ಅವರ ಬಗ್ಗೆ ಹೆಚ್ಚು ಉಲ್ಲೇಖ ಮಾಡದಿರುವುದು ಕಳವಳಕಾರಿ ಸಂಗತಿ ಎಂದರು.

ದಿಗಂತ ಚಿತ್ರ



ನಗರದ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಚಂಪಾರಣ್ ಸತ್ಯಾಗ್ರಹ ಶತಮಾನೋತ್ಸವ ಆಚರಣೆ, ಹುತಾತ್ಮ ಮೈಲಾರ ಮಹದೇವಪ್ಪ ದತ್ತಿ ಕಾರ್ಯಕ್ರಮದಲ್ಲಿ ಗಣ್ಯರು ಮಹಾತ್ಮ ಗಾಂಧಿ ಮತ್ತು ಮೈಲಾರ ಮಹಾದೇವಪ್ಪ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

1936 ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದಲ್ಲಿ ಕರ್ನಾಟಕದಿಂದ ಮಹದೇವಪ್ಪ ಭಾಗವಹಿಸದೇ ಇರದಿದ್ದರೆ ಕನ್ನಡಕ್ಕೆ ಕಳಂಕ ಬರುತ್ತಿತ್ತು. ಅವರು ಭಾಗವಹಿಸಿದ್ದರಿಂದ ಇಂದು ಕನ್ನಡ ನಾಡು ಹೆಮ್ಮೆ ಪಡುವಂತಾಗಿದೆ. ಇಷ್ಟೊಂದು ಹೋರಾಟ ಮಾಡಿದ ಸ್ವಾತಂತ್ರ್ಯ ಹೋರಾಟಗಾರರ ಹೆಸರನ್ನು ರಸ್ತೆ, ಬಡಾವಣೆಗೆ ಇಲ್ಲ ಎಂದರು.

ಇತ್ತೀಚಿನ ದಿನಗಳಲ್ಲಿ ವಿದೇಶಿ ವಸ್ತುಗಳನ್ನು ಖರೀದಿಸಬೇಡಿ ಎನ್ನುತ್ತಿದ್ದಾರೆ. ಆದರೆ, ವಿದೇಶಿ ವಸ್ತುಗಳನ್ನು ಉಪಯೋಗಿಸಬೇಡಿ ಎಂದು ಮಹಾತ್ಮ ಗಾಂಧಿ ಮತ್ತು ಮಹದೇವಪ್ಪ ಅವರು ಆಗಲೇ ಹೇಳಿದ್ದರು. ಅವರ ಮಾತಿಗೆ ಆಗ ಯಾರೂ ಕಿವಿಗೊಡಲಿಲ್ಲ. ಈಗ ಚೀನಾ ದೇಶದವರು ನಮ್ಮ ಜತೆ ಯುದ್ಧ ಮಾಡುತ್ತಾರೆ ಎಂಬ ಕಾರಣಕ್ಕೆ ಚೀನಾ ವಸ್ತುಗಳನ್ನು ಖರೀದಿಸಬೇಡಿ ಎನ್ನುತ್ತಿದ್ದಾರೆ. ಇನ್ನು ಮುಂದಾದರೂ ಸ್ವದೇಶಿ ವಸ್ತುಗಳನ್ನು ಬಳಸಿ ಎಂದು ಕಿವಿಮಾತು ಹೇಳಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ರಾಜ್ಯ ಸಂಪರ್ಕಾಧಿಕಾರಿ ಡಾ.ಗಣನಾಥಶೆಟ್ಟಿ ಎಕ್ಕಾರು, ಹುತಾತ್ಮ ಮೈಲಾರ ಮಹದೇವಪ್ಪನವರ ಪುತ್ರಿ ಕಸ್ತೂರಿ ದೇವಿ, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಉಪಸ್ಥಿತರಿದ್ದರು.

ಬುಧವಾರ 16 ಆಗಸ್ಟ್ 2017
VIJAYAVANI » 16 AUGUST 2017

ಭಾರತ್ ಮಾತಾ ಕಿ ಜೈ ಘೋಷಣೆಗೆ ಅಪಮಾನ

ಡಾ. ಬಾಬು ಕೃಷ್ಣಮೂರ್ತಿ ಬೇಸರ » 'ಮುಕುಟ ಮಣಿ' ಕವನ ಸಂಕಲನ ಬಿಡುಗಡೆ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

'ಭಾರತ್ ಮಾತಾ ಕಿ ಜೈ' ಎಂಬ ಘೋಷಣೆ ದೇಶಪ್ರೇಮವನ್ನು ಮೂಡಿಸುವ ಜತೆಗೆ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯಕ್ಕೆ ಒಂದಾಗಿ ಹೋರಾಡುವಂತೆ ಪ್ರೇರೇಪಿಸಿತು. ಆದರೆ ಇಂದು ಈ ಘೋಷಣೆಗೆ ಅಪಮಾನ ಮಾಡಲಾಗುತ್ತಿರುವುದು ವಿಪರ್ಯಾಸ ಎಂದು ಲೇಖಕ ಹಾಗೂ 'ವಿಜಯವಾಣಿ' ಅಂಕಣಕಾರ ಡಾ. ಬಾಬು ಕೃಷ್ಣಮೂರ್ತಿ ಬೇಸರ ವ್ಯಕ್ತಪಡಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಭಾನುವಾರ ಸಮರ್ಥ ಪ್ರಕಾಶನ ಆಯೋಜಿಸಿದ್ದ ಡಾ. ದೊಡ್ಡರಂಗೇಗೌಡರ ದೇಶಭಕ್ತಿಗೀತೆಗಳ ಕವನ ಸಂಕಲನ 'ಮುಕುಟ ಮಣಿ' ಬಿಡುಗಡೆ ಮಾಡಿ ಮಾತನಾಡಿದರು. ಮಹಾತ್ಮಾ ಗಾಂಧಿ, ಸುಭಾಷ್ ಚಂದ್ರ ಬೋಸ್ ಸೇರಿ ಹಲವಾರು ಸ್ವಾತಂತ್ರ್ಯ ಹೋರಾಟಗಾರರು 'ಭಾರತ್ ಮಾತಾ ಕಿ ಜೈ' ಎಂಬ ಘೋಷಣೆ ಮೂಲಕ ಬ್ರಿಟಿಷರ ವಿರುದ್ಧ ಕಹಳೆ ಊದಿದರು. ಅಷ್ಟೇ ಅಲ್ಲ, ಕನ್ಯಾಕುಮಾರಿಯಿಂದ ಕಾಶ್ಮೀರದವರೆಗಿನ ದೇಶದ ಜನತೆ ಒಂದಾಗಿ ನಿಲ್ಲಲು ಈ ಘೋಷಣೆ ಕಾರಣವಾಯಿತು. ಇಂದು ಈ ಘೋಷಣೆ ಬೇರೆಯದೇ ಉದ್ದೇಶಗಳಿಗೆ ಬಳಕೆಯಾಗುತ್ತಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಕವಿಗಳು ಬ್ರ್ಯಾಂಡ್ ಆಗುತ್ತಿದ್ದಾರೆ. ಬದಲಾಗಿ ಎಲ್ಲ ರೀತಿಯ ಕವಿತೆ ಬರೆಯುವ ಕಲೆ ರೂಢಿಸಿಕೊಳ್ಳಬೇಕಾಗಿದೆ ಎಂದು ಸಲಹೆ ನೀಡಿದರು.

ತಾಯ್ನಾಡನ್ನು ಮರೆಯಬೇಡಿ: ಯುವಜನಾಂಗ ವಿದೇಶಗಳಿಗೆ ಆಕರ್ಷಿತರಾಗದೇ ತಮ್ಮ ಬೆಳವಣಿಗೆಗೆ ಕಾರಣವಾದ ತಾಯ್ನಾಡಿಗೆ ಕೊಡುಗೆ ನೀಡಬೇಕು. ಅಷ್ಟೇ ಅಲ್ಲ, ನಮ್ಮ ಶ್ರೀಮಂತ ಸಂಸ್ಕೃತಿಗೆ ಚ್ಯುತಿಬಾರದ ಹಾಗೆ ನೋಡಿಕೊಳ್ಳಬೇಕು ಎಂದ ಅವರು, 'ಮುಕುಟ ಮಣಿ' ನಿಜ್ಕವಿತೆ ಪ್ರಧಾನಿ ನರೇಂದ್ರ ಮೋದಿ ಅವರ ಸಾಧನೆ ಹಾಗೂ ನಾಡಿನ ಶ್ರೇಷ್ಠ ಕವಿಗಳ ಬಗ್ಗೆ ಸಹ ತೆರೆದುಕೊಳ್ಳುತ್ತದೆ. ನನ್ನ ಬಹುದಿನದ ಕನಸನ್ನು ಈ ಕವನ ಸಂಕಲನ ಸಾಕಾರ ಮಾಡಿದೆ ಎಂದು ಸಾಹಿತಿ ಡಾ. ದೊಡ್ಡರಂಗೇಗೌಡ ಹೇಳಿದರು. ದೇಶದ ಧ್ವಜ ಸುಡುವುದು, ಅನ್ಯ ರಾಷ್ಟ್ರಕ್ಕೆ ಜೈ ಎನ್ನುವುದನ್ನು ನೋಡಿದಾಗ ದುಃಖವಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.

ಹಿರಿಯ ಪತ್ರಕರ್ತ ದು.ಗು. ಲಕ್ಷ್ಮಣ್, ಸಾಹಿತಿ ವಸಂತಕುಮಾರ ಪೆರ್ಲ, ಕರ್ನಾಟಕ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ. ವೂಡೇ ಪಿ. ಕೃಷ್ಣ, ಸಮಾಜ ಸೇವಕ ಕೃಷ್ಣಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.



ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಡಾ. ದೊಡ್ಡರಂಗೇಗೌಡರ ದೇಶಭಕ್ತಿಗೀತೆಗಳ ಕವನ ಸಂಕಲನ 'ಮುಕುಟ ಮಣಿ'ಯನ್ನು ಲೇಖಕ ಡಾ. ಬಾಬು ಕೃಷ್ಣಮೂರ್ತಿ ಬಿಡುಗಡೆ ಮಾಡಿದರು. ದು.ಗು. ಲಕ್ಷ್ಮಣ್, ವಸಂತಕುಮಾರ ಪೆರ್ಲ, ಡಾ. ವೂಡೇ ಪಿ ಕೃಷ್ಣ ಮತ್ತಿತರರಿದ್ದರು.


> ವೈಚಾರಿಕತೆ ಕಾರಣಕ್ಕೆ ಕಾವ್ಯ ಜನಸಾಮಾನ್ಯರಿಂದ ದೂರವಾಗುತ್ತಿದೆ. ಭಾವನೆಗಳಿರದ ಶುಷ್ಕ ಕಾವ್ಯದಿಂದ ಸಹೃದಯರನ್ನು ತಲುಪುವುದು ಕಷ್ಟ. ಅಷ್ಟಕ್ಕೂ ಇಂದಿನ ತಲೆಮಾರು ಕನ್ನಡವನ್ನು ಕಡೆಗಣಿಸಿ, ಕಂಗ್ಲಿಷ್‌ಗೆ ಒಗ್ಗಿಕೊಂಡಿರುವುದು ವಿಪರ್ಯಾಸ.
>
> ವಸಂತಕುಮಾರ ಪೆರ್ಲ ಹಿರಿಯ ಸಾಹಿತಿ

ಸಾಧಕರಿಗೆ ಪ್ರಶಸ್ತಿ ಪ್ರದಾನ

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಾಹಿತಿ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ವೈದ್ಯಕೀಯ ಸಾಹಿತ್ಯ ಕ್ಷೇತ್ರದಲ್ಲಿ ಡಾ.ನಾ. ಸೋಮೇಶ್ವರ, ಧಾರ್ಮಿಕ ಕ್ಷೇತ್ರದಲ್ಲಿ ಹ.ರಾ. ನಾಗರಾಜಾಚಾರ್ಯ, ಪತ್ರಿಕೋದ್ಯಮದಲ್ಲಿ ಮಾಲತಿ ಶೆಟ್ಟಿ, ಸುಗಮ ಸಂಗೀತ ವಿಭಾಗದಲ್ಲಿ ಶಿವಮೊಗ್ಗ ಸುಬ್ಬಣ್ಣ, ಶಾಸ್ತ್ರೀಯ ಸಂಗೀತ ವಿಭಾಗದಲ್ಲಿ ಪಿ.ಎಲ್. ಗೋವಿಂದರಾಜ ಗುಪ್ತ, ಮುದ್ರಣ ವಿಭಾಗದಲ್ಲಿ ಎಚ್.ಎಸ್. ಮಂಜುನಾಥ ಶೆಟ್ಟಿ, ಶಿಕ್ಷಣ ಕ್ಷೇತ್ರದಲ್ಲಿ ಡಾ. ನಳಿನಾ ಕಮಲಾಕ್ಷಿ, ಸಮಾಜಸೇವೆಯಲ್ಲಿ ವಿ.ಆರ್. ನಾಗರಾಜ್, ಕೆ. ಅಮರನಾಥ್, ಹರೀಶ್ ತೇರ್ಗಡೆ, ಆರ್.ಜಿ. ದತ್ತರಾಜ್, ಎಸ್.ಎಲ್. ಕೋರಾ, ಎ.ಎಸ್. ರಾಮಲಿಂಗಗುಪ್ತ, ನಾಗರಾಜ್, ವಿಮಲಾ ಸುಬ್ರಮಣ್ಯ, ಎಸ್. ಪ್ರಶಾಂತ್‌ಬಾಬು, ಆರ್. ಭಾಗ್ಯಲಕ್ಷ್ಮಿ, ವಿಜಯಾ ಸುಬ್ರಹ್ಮಣ್ಯ, ಜಾನಪದ ಗಾಯನ ವಿಭಾಗದಲ್ಲಿ ಚಿನ್ನುಪ್ರಕಾಶ್ ರಾಮನಹಳ್ಳಿ, ಗಾಯಕಿ ಎಂ.ಡಿ. ಪಲ್ಲವಿ, ಚುಟುಕು ಸಾಹಿತ್ಯಕ್ಕೆ ಅಶೋಕ್‌ಕುಮಾರ್, ಸಂಘಟನೆಗೆ ಬಿ.ಕೆ. ನರೇಂದ್ರಬಾಬು, ರಂಗಭೂಮಿಯಲ್ಲಿ ಮೈನಾ ಸುಬ್ರಮಣ್ಯ, ಉದ್ಯಮಿ ಜೀವನ್ ಕೃಷ್ಣ ಹಾಗೂ ಯೋಗ ತರಬೇತಿ ಶಿಕ್ಷಕ ಈರಣ್ಣ ಶೆಟ್ಟಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವಿಜಯ ಕರ್ನಾಟಕ ಮಂಗಳವಾರ,15 ಆಗಸ್ಟ್ 2017

ಚಿತ್ರ ಸುದ್ದಿ



ಇತ್ತೀಚೆಗೆ ನಡೆದ ಇಂಡಿಯನ್ ಟೆಕ್ನಾಲಜಿ ಕಾಂಗ್ರೆಸ್ ಕಾರ್ಯಕ್ರಮದಲ್ಲಿ, ಗೀತಂ ವಿಶ್ವ ವಿದ್ಯಾಲಯದ ನಿರ್ದೇಶಕ ಕೆ. ವಿಜಯ ಭಾಸ್ಕರ್ ರಾಜು ಅವರಿಗೆ ಡಿಆರ್‌ಡಿಒ ನಿರ್ದೇಶಕ ಅಣ್ಣಾದೊರೆ ಅವರು 'ಅಕಾಡೆಮಿಕ್ ಎಕ್ಸಲೆನ್ಸ್ ಅವಾರ್ಡ್' ಪ್ರಶಸ್ತಿ ನೀಡಿದರು.

14 AUGUST 2017 VIJAYAVANI ○ BENGALURU

ಮರ ಕಡಿಯುವುದನ್ನು ನಿಲ್ಲಿಸಿ

» ಎಚ್‌ಎಎಲ್ ರಸ್ತೆಯಲ್ಲಿ ಸಿಗ್ನಲ್ ಮುಕ್ತ ಕಾರಿಡಾರ್‌ಗಾಗಿ ಮರಗಳ ಬಲಿ

» ಮಾನವಸರಪಳಿ ಮೂಲಕ ಪ್ರತಿಭಟನೆ

ಬೆಂಗಳೂರು: ಹಳೇ ವಿಮಾನ ನಿಲ್ದಾಣ ರಸ್ತೆಯಲ್ಲಿ ನಿರ್ಮಿಸಲಾಗುತ್ತಿರುವ ಸಿಗ್ನಲ್‌ಮುಕ್ತ ಕಾರಿಡಾರ್ ಯೋಜನೆಗೆ 20ಕ್ಕೂ ಹೆಚ್ಚು ಮರಗಳನ್ನು ಕಡಿಯಲಾಗಿದ್ದು, ಇನ್ನೂ 40 ಮರಗಳನ್ನು ಕಡಿಯಲು ಉದ್ದೇಶಿಸಲಾಗಿದೆ. ಇದನ್ನು ತಡೆಯುವ ದೃಷ್ಟಿಯಿಂದ ಸ್ಥಳೀಯರು ಭಾನುವಾರ ಮಾನವ ಸರಪಳಿ ರಚಿಸಿ ಪ್ರತಿಭಟಿಸಿದರು.

ಹಳೇ ವಿಮಾನ ನಿಲ್ದಾಣ ರಸ್ತೆಯಿಂದ ಹೋಪ್ ಫಾರ್ಮ ಕಡೆಗಿನ ಮಾರ್ಗದಲ್ಲಿನ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಬಿಬಿಎಂಪಿ ಸಿಗ್ನಲ್‌ಮುಕ್ತ ಕಾರಿಡಾರ್ ನಿರ್ಮಿಸುತ್ತಿದೆ. ಯೋಜನೆಗಾಗಿ ಎಚ್‌ಎಎಲ್ ಬಳಿ ಮತ್ತಷ್ಟು ಮರಗಳನ್ನು ಕಡಿಯುವುದನ್ನು ನಿಲ್ಲಿಸುವಂತೆ ಆಗ್ರಹಿಸಿ ಭಾನುವಾರ ಮಕ್ಕಳು ಹಾಗೂ ಹಿರಿಯರು ಒಟ್ಟಾಗಿ ಮಾನವ ಸರಪಳಿ ರಚಿಸಿದರು. ಮಕ್ಕಳು ಸ್ವಾತಂತ್ರ್ಯ ಹೋರಾಟಗಾರರ ವೇಷ ಧರಿಸಿ ಪ್ರತಿಭಟಿಸಿದ್ದಲ್ಲದೆ, ಮರ ಉಳಿಸುವಂತೆ ಭಿತ್ತಿಪತ್ರ ಹಿಡಿದು ಘೋಷಣೆ ಕೂಗಿದರು.



ಇಂಡಿಯನ್ ಟೆಕ್ನಾಲಜಿ ಕಾಂಗ್ರೆಸ್ ಆಯೋಜಿಸಿದ್ದ ಇಂಡಸ್ಟ್ರಿ 4.0 ವಿಚಾರ ಸಂಕಿರಣದಲ್ಲಿ ಡಿಆರ್‌ಡಿಓ ನಿರ್ದೇಶಕ ಡಾ.ಎಂ. ಅಣ್ಣಾದೊರೈ ಅವರು ಗೀತಂ ವಿಶ್ವವಿದ್ಯಾಲಯಕ್ಕೆ 'ಬೆಸ್ಟ್ ಎಮರ್ಜಿಂಗ್ ಯೂನಿವರ್ಸಿಟಿ ಕ್ಯಾಂಪಸ್' ಎಂಬ ಪ್ರಶಸ್ತಿ ನೀಡಿದರು. ವಿವಿಯ ಪರವಾಗಿ ಗೀತಂ ವಿವಿ ನಿರ್ದೇಶಕ ಪ್ರೊ.ಕೆ.ವಿಜಯ ಭಾಸ್ಕರ ರಾಜು ಸ್ವೀಕರಿಸಿದರು.

ಸಂಯುಕ್ತ ಕರ್ನಾಟಕ

ಸೋಮವಾರ, 14, ಆಗಸ್ಟ್, 2017,



ಹಿರಿಯ ಸಾಹಿತಿ ದೊಡ್ಡರಂಗೇಗೌಡರ ಅವರ ದೇಶಭಕ್ತಿಗೀತೆಗಳ ಕವನ ಸಂಕಲನ 'ಮುಕುಟ ಮಣಿ' ಪುಸ್ತಕವನ್ನು ಪತ್ರಕರ್ತ ಡಾ. ಬಾಬು ಕೃಷ್ಣಮೂರ್ತಿ ಅವರು ಬಿಡುಗಡೆ ಮಾಡಿದರು. ಈ ವೇಳೆ ಸಮರ್ಥ ಪ್ರಕಾಶನದ ಅಧ್ಯಕ್ಷ ಎಚ್. ವಿಜಯ ಸಮರ್ಥ, ಡಾ.ವೂಡೇ ಪಿ. ಕೃಷ್ಣ, ಸೇರಿದಂತೆ ಮತ್ತಿತರಿದ್ದರು.

ಕೆಂಗಲ್ ಪ್ರಶಸ್ತಿ ಪ್ರದಾನ ವೇಳೆ ಸಾಹಿತಿಗಳ ಅತೃಪ್ತಿ

ಯುವಪೀಳಿಗೆಗೆ ಕನ್ನಡ ಬೇಡ

ಬೆಂಗಳೂರು: ಹೊಸ ತಲೆಮಾರಿನ ಯುವ ಪೀಳಿಗೆಗೆ ಕನ್ನಡ ಬೇಡವಾಗಿರುವುದು ಬೇಸರ ತಂದಿದೆ ಎಂದು ಹಿರಿಯ ಸಾಹಿತಿ ಡಾ. ವಸಂತಕುಮಾರ್ ಪೆರ್ಲ ಅಸಮಾಧಾನ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಮರ್ಥ ಪ್ರಕಾಶನ ಹಮ್ಮಿಕೊಂಡಿದ್ದ ಹಿರಿಯ ಸಾಹಿತಿ ದೊಡ್ಡರಂಗೇಗೌಡರ ಅವರ ದೇಶ ಭಕ್ತಿಗೀತೆಗಳ ಕವನ ಸಂಕಲನ 'ಮುಕುಟ ಮಣಿ' ಬಿಡುಗಡೆ ಮತ್ತು ಕೆಂಗಲ್ ಹನುಮಂತಯ್ಯ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು. ಹೊಸ ತಲೆಮಾರಿನವರಿಗೆ ಇಂದು ಕನ್ನಡ ಭಾಷೆ ಬೇಡವಾಗುತ್ತಿದೆ. ಎಲ್ಲವೂ ಕಂಗ್ಲೀಷ್‌ಮಯವಾಗುತ್ತಿದೆ. ಬೇರೆ ಭಾಷೆ ಬಳಸಿದರೂ ಕನ್ನಡ ಉಳಿಸುವ ಕಡೆ ಗಮನಹರಿಸಬೇಕು ಎಂದವರು ಕಿವಿಮಾತು ಹೇಳಿದರು.

ನಮ್ಮ ದೇಶದ ಬಾವುಟವನ್ನು ಸುಡುವುದು ಅನ್ಯ ದೇಶದ ರಾಷ್ಟ್ರಕ್ಕೆ ಜೈ ಎನ್ನುವುದು ನಮ್ಮ ನೆಲದಲ್ಲೇ ನಡೆಯುತ್ತಿದೆ. ಇದು ದುಃಖದ ಸಂಗತಿಯಾಗಿದ್ದು, ಹಾದಿ ತಪ್ಪುತ್ತಿರುವ ತರುಣ ತರುಣಿಯರಿಗೆ ಈ ಪುಸ್ತಕ ಎಚ್ಚರಿಕೆ ಗಂಟೆಯಾಗಲಿದೆ ಎಂದ ಅವರು ಪುಸ್ತಕ ಹಾಗೂ ಅದರಲ್ಲಿನ ಕವಿತೆಗಳ ಕುರಿತು ವಿವರಿಸಿದರು.

ಸಾಹಿತಿ ಡಾ.ದೊಡ್ಡರಂಗೇಗೌಡ ಮಾತನಾಡಿ, ಇಂದಿನ ಯುವಕರಲ್ಲಿ ದೇಶಪ್ರೇಮ ಕಡಿಮೆಯಾಗುತ್ತಿದ್ದು, ಯುವಕರಲ್ಲಿ ದೇಶದ ಭಾವೈಕ್ಯತೆ, ವೈಜ್ಞಾನಿಕ ಸಾಧನೆ, ಹಿಂದಿನ ಔನ್ನತ್ಯ ಎಲ್ಲವನ್ನೂ ನಿರೂಪಿಸುವ, ಸಾಮಾಜಿಕ ಮತ್ತು ಸಮಾನತೆಯ ನ್ಯಾಯವನ್ನು ವಸ್ತುವಾಗಿ ಇಟ್ಟುಕೊಂಡು ಕಾವ್ಯಾಭಿಮುಖವಾಗಿ ಕವನ ಸಂಕಲನವನ್ನು ರಚಿಸಲಾಗಿದೆ. ಹೀಗಾಗಿ ಅವರಲ್ಲಿ ದೇಶಾಭಿಮಾನ ಮೂಡಿಸುವ ಸಣ್ಣ ಪ್ರಯತ್ನ ಇದಾಗಿದೆ ಎಂದು ಹೇಳಿದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 26 ಮಂದಿಗೆ ಕೆಂಗಲ್ ಹನುಮಂತಯ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ವೇಳೆ ಡಾ.ವೂಡೇ ಪಿ. ಕೃಷ್ಣ, ಸಮಾಜ ಸೇವಕ ಕೃಷ್ಣಮೂರ್ತಿ, ಪತ್ರಕರ್ತ ಡಾ.ಬಾಬು ಕೃಷ್ಣಮೂರ್ತಿ ಮುತ್ತಿತರಿದ್ದರು.

ಪ್ರಜಾವಾಣಿ ಸೋಮವಾರ ● ಆಗಸ್ಟ್ 14, 2017

'ಯುವಜನರಿಗೆ ಕನ್ನಡ ಬೇಡವಾಗಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಂದಿನ ಯುವಜನರು ಇಂಗ್ಲಿಷ್ ಮಿಶ್ರಿತ ಕನ್ನಡವನ್ನು ಹೆಚ್ಚು ಬಳಸುತ್ತಿದ್ದಾರೆ. ಅವರಿಗೆ ಕನ್ನಡ ಭಾಷೆ ಬೇಡವಾಗಿದೆ' ಎಂದು ಲೇಖಕ ವಸಂತಕುಮಾರ್ ಪೆರ್ಲ ಹೇಳಿದರು.

ಸಮರ್ಥ ಪ್ರಕಾಶನವು ನಗರದಲ್ಲಿ ಆಯೋಜಿಸಿದ್ದ ದೊಡ್ಡರಂಗೇಗೌಡರ 'ಮುಕುಟ ಮಣಿ' ಕವನ ಸಂಕಲನ ಬಿಡುಗಡೆ ಮತ್ತು 'ಕೆಂಗಲ್ ಹನುಮಂತಯ್ಯ' ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ದೇಶದ ಬಾವುಟವನ್ನು ಸುಡುವುದು ಮತ್ತು ಅನ್ಯ ದೇಶಕ್ಕೆ ಜೈಕಾರ ಹಾಕುವ ಘಟನೆಗಳು ನಮ್ಮ ನೆಲದಲ್ಲಿ ನಡೆಯುತ್ತಿವೆ. ಅಂತಹ ಘಟನೆಗಳ ಕುರಿತು ಮುಕುಟಮಣಿ ಸಂಕಲನ ಯುವಜನರಲ್ಲಿ ಎಚ್ಚರಿಕೆ ಮೂಡಿಸುತ್ತದೆ' ಎಂದರು.

ಸಾಹಿತಿ ದೊಡ್ಡರಂಗೇಗೌಡ ಮಾತನಾಡಿ, 'ಇಂದಿನ ಯುವಕರಲ್ಲಿ ದೇಶಪ್ರೇಮ ಕಡಿಮೆಯಾಗುತ್ತಿದೆ. ದೇಶದ ಭಾವೈಕ್ಯ, ವೈಜ್ಞಾನಿಕ ಸಾಧನೆ, ಸಾಮಾಜಿಕ ನ್ಯಾಯವನ್ನು ವಸ್ತುವಾಗಿ ಇಟ್ಟುಕೊಂಡು ಕವನಗಳನ್ನು ರಚಿಸಿದ್ದೇನೆ. ಜನರಲ್ಲಿ ದೇಶಾಭಿಮಾನ ಬೆಳೆಸುವ ಸಣ್ಣ ಪ್ರಯತ್ನವಿದು' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಿಗೆ ಕೊಡುಗೆ ನೀಡಿದ 26 ಸಾಧಕರಿಗೆ ಕೆಂಗಲ್ ಹನುಮಂತಯ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ಕಾರ್ಯಕ್ರಮಕ್ಕೆ ದೊಡ್ಡರಂಗೇಗೌಡ, ವಸಂತಕುಮಾರ್ ಪೆರ್ಲ, ಶಿಕ್ಷಣತಜ್ಞ ವೂಡೇ ಪಿ.ಕೃಷ್ಣ, ಪತ್ರಕರ್ತ ದು.ಗು.ಲಕ್ಷ್ಮಣ್ ಅವರನ್ನು ಸಾಂಪ್ರದಾಯಿಕ ಮೆರವಣಿಗೆ ಮೂಲಕ ಕರೆತರಲಾಯಿತು -ಪ್ರಜಾವಾಣಿ ಚಿತ್ರ

ನಂ. 1 ... ದಿನಪತ್ರಿಕೆ
ವಿಶ್ವವಾಣಿ

ಬೆಂಗಳೂರು
vishwavani.news
14.08.2017 ಸೋಮವಾರ

ವೈಚಾರಿಕ ಸಾಹಿತ್ಯಕ್ಕಿಂತ ಭಾವನಾತ್ಮಕ ಸಾಹಿತ್ಯ ಅಗತ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವೈಚಾರಿಕ ಸಾಹಿತ್ಯಕ್ಕಿಂತ ಭಾವನಾತ್ಮಕ ಸಾಹಿತ್ಯ ಹೆಚ್ಚು ಅಗತ್ಯವಿದ್ದು ಅದರಿಂದ ಸಾಮಾನ್ಯ ಜನರನ್ನು ಸುಲಭ ಸಾಧ್ಯ ಎಂದು ವಿಮರ್ಶಕ ಡಾ.ವಸಂತಕುಮಾರ್ ಪೆರ್ಲ ಅಭಿಪ್ರಾಯಪಟ್ಟರು.

ಸಮರ್ಥ ಪ್ರಕಾಶನದಿಂದ ಭಾನುವಾರ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಏರ್ಪಡಿಸಿದ್ದ ಸಾಹಿತಿ ವಿ.ದೊಡ್ಡರಂಗೇಗೌಡರ ದೇಶಭಕ್ತಿ ಗೀತೆಗಳ ಕವನ ಸಂಕಲನ 'ಮುಕುಟ ಮಣಿ' ಪುಸ್ತಕ ಬಿಡುಗಡೆ ಹಾಗೂ ಕೆಂಗಲ್ ಹನುಮಂತಯ್ಯ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

ಹೆಚ್ಚು ಕ್ಲಿಷ್ಟ ಭಾಷೆ ಬಳಸುವುದರಿಂದ ಹೆಚ್ಚು ಜನರನ್ನು ತಲುಪಲು ಸಾಧ್ಯವಾಗುತ್ತಿಲ್ಲ. ಅದರಲ್ಲೂ ಹೊಸ ತಲೆಮಾರಿನವರು ಇಂಗ್ಲೀಷ್ ಅಳವಡಿಕೆಯಿಂದ ಇಂಗ್ಲಿಷ್‌ಮಯವಾಗಿದ್ದಾರೆ. ಶುದ್ಧ ಕನ್ನಡ ಮರೀಚಿಕೆಯಾಗುತ್ತಿದೆ.

ರಂಗೇಗೌಡರು ಶುದ್ಧ ಕನ್ನಡ ಹಾಗೂ ಭಾವನಾತ್ಮಕ ಸಾಹಿತ್ಯದ ಮೂಲಕ ಹೆಚ್ಚು ಜನರನ್ನು ತಲುಪುವ ಮೂಲಕ ಜನಪ್ರಿಯರಾಗುತ್ತಿದ್ದಾರೆ ಎಂದರು.

ಪತ್ರಕರ್ತ ಡಾ.ಬಾಬು ಕೃಷ್ಣಮೂರ್ತಿ ಮಾತನಾಡಿ, ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ಗಾಂಧೀಜಿ ಹಾಗೂ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಭಾರತ್ ಮಾತಾ ಕೀ ಜೈ, ಒಂದೇ ಮಾತರಂ ಘೋಷಣೆಗಳಿಂದ ದೇಶವನ್ನು ಒಂದು ಮಾಡಿದರು. ಆದರಿಂದು ಈ ಘೋಷಣೆ ಕೂಗಿದರೆ ಅನ್ಯ ದೇಶದವರಂತೆ ವರ್ತಿಸುವುದು ಏಕೆ ಎಂಬುದು ತಿಳಿಯುತ್ತಿಲ್ಲ ಎಂದು ಹೇಳಿದರು.

ಸುಗಮ ಸಂಗೀತ ಗಾಯಕರಾದ ಶಿವಮೊಗ್ಗ ಸುಬ್ಬಣ್ಣ, ಎಂ.ಡಿ.ಪಲ್ಲವಿ, ಈರಣ್ಣ ಶೆಟ್ಟಿ, ಆರ್.ಭಾಗ್ಯಲಕ್ಷ್ಮಿ, ಜೀವನ ಕೃಷ್ಣನ್ ಸೇರಿದಂತೆ ವಿವಿಧ ಕ್ಷೇತ್ರದ 26 ಸಾಧಕರಿಗೆ ಕೆಂಗಲ್ ಹನುಮಂತಯ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ಸಾಹಿತಿ ದೊಡ್ಡರಂಗೇಗೌಡರ ದೇಶಭಕ್ತಿಗೀತೆಗಳ ಸಂಕಲನ 'ಮುಕುಟ ಮಣಿ'ಯನ್ನು ಪತ್ರಕರ್ತ ಡಾ.ಬಾಬು ಕೃಷ್ಣಮೂರ್ತಿ ಲೋಕಾರ್ಪಣೆಗೊಳಿಸಿದರು. ಸಾಹಿತಿ ಹರಿಹರಪ್ರಿಯ, ಕರ್ನಾಟಕ ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಡಾ.ವೂಡೇ ಪಿ.ಕೃಷ್ಣ, ಪತ್ರಿ ಸ್ಮಾರಿ ಸದನ್‌ನ ಪತ್ರಿ ರಘುನಾಥ, ಪರಸ್ಪರ ಚಾರಿಟಬಲ್ ಟ್ರಸ್ಟ್ ಕಾರ್ಯದರ್ಶಿ ಕೃಷ್ಣಮೂರ್ತಿ, ಪತ್ರಕರ್ತ ದು.ಗು. ಲಕ್ಷ್ಮಣ್ ಹಾಗೂ ಸಮರ್ಥ ಪ್ರಕಾಶನದ ಅಧ್ಯಕ್ಷ ರಾ.ವಿಜಯ ಸಮರ್ಥ ಇದ್ದರು.

> ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ನಂತರ ಭಾರತವನ್ನು ಪ್ರಗತಿಯತ್ತ ಕೊಂಡೊಯ್ಯುವತ್ತ ಸಕಾರಾತ್ಮಕವಾಗಿ ಕೆಲಸ ಮಾಡುವಲ್ಲಿ ಪ್ರಧಾನಿ ಮೋದಿ ಅವರು ಉತ್ತಮ ಹೆಜ್ಜೆ ಇಟ್ಟಿದ್ದಾರೆ. ಪಕ್ಷಭೇದ ಮರೆತು ದೇಶ ಕಟ್ಟಲು ಎಲ್ಲರೂ ಕೈ ಜೋಡಿಸಬೇಕು.
>
> – ಡಾ.ದೊಡ್ಡರಂಗೇಗೌಡ ಕವಿ

ಹೊಸ ದಿಗಂತ
ಸೋಮವಾರ
14 ಆಗಸ್ಟ್ 2017

ದೇಶಭಕ್ತಿ ಗೀತೆ ಕುರಿತ ಕವನ ಸಂಕಲನ ಲೋಕಾರ್ಪಣೆ

ಯುವಕರಲ್ಲಿ ದೇಶ ಪ್ರೇಮ ಕಡಿಮೆ

ದಿಗಂತ ವರದಿ: ಬೆಂಗಳೂರು, ಆ.13

ಇಂದಿನ ವಿಷಮ ಸಂದರ್ಭದಲ್ಲಿ ಯುಕವರಲ್ಲಿ ದೇಶಪ್ರೇಮ ಕಡಿಮೆಯಾಗುತ್ತಿದೆ ಎಂದು ಕವಿ ಡಾ.ದೊಡ್ಡರಂಗೇಗೌಡ ಕಳವಳ ವ್ಯಕ್ತಪಡಿಸಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಭಾನುವಾರ ಸಮರ್ಥ ಪ್ರಕಾಶನ ವತಿಯಿಂದ ಹಮ್ಮಿಕೊಂಡಿದ್ದ ಸಾಹಿತಿ ದೊಡ್ಡರಂಗೇಗೌಡರ ದೇಶಭಕ್ತಿಗೀತೆಗಳ ಕವನ ಸಂಕಲನ ಮುಕುಟ ಮಣಿ ಪುಸ್ತಕ ಬಿಡುಗಡೆ ಮತ್ತು ಕೆಂಗಲ್ ಹನುಮಂತಯ್ಯ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಯುವಕರಲ್ಲಿ ದೇಶದ ಭಾವ್ಯಕ್ಯತೆ, ವೈಜ್ಞಾನಿಕ ಸಾಧನೆ, ಹಿಂದಿನ ಔನ್ನತ್ಯ ಎಲ್ಲವನ್ನೂ ನಿರೂಪಿಸುವ, ಸಾಮಾಜಿಕ ಮತ್ತು ಸಮಾನತೆಯ ನ್ಯಾಯವನ್ನು ಮುಖ್ಯವಾಗಿ ಇರಿಸಿಕೊಂಡು ಕಾವ್ಯಾಭಿಮುಖವಾಗಿ ಅದನ್ನು ಬಿಂಬಿಸಲಾಗಿದೆ. ಅವರಲ್ಲಿ ದೇಶಾಭಿಮಾನ ಮೂಡಿಸುವ ಸಣ್ಣ ಪ್ರಯತ್ನ ಇದಾಗಿದೆ ಎಂದು ಹೇಳಿದರು. ಜಾತಿ, ಮತ, ಪಂಥಗಳ ಅಂತರ್ಯ ಭಾರತವು ವೈವಿಧ್ಯತೆಯಲ್ಲಿ ಏಕತೆ ಇರುವ ರಾಷ್ಟ್ರ ▶4



ನಗರದ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸಾಹಿತಿ ದೊಡ್ಡರಂಗೇಗೌಡರ ದೇಶಭಕ್ತಿ ಗೀತೆಗಳ ಕವನ ಸಂಕಲನ ಮುಕುಟ ಮಣಿ ಪುಸ್ತಕವನ್ನು ಡಾ. ಲೇಖಕ ಬಾಬು ಕೃಷ್ಣಮೂರ್ತಿ ಬಿಡುಗಡೆ ಮಾಡಿದರು. ಹಿರಿಯ ಪತ್ರಕರ್ತ ದು.ಗು.ಲಕ್ಷ್ಮಣ ಮತ್ತಿತರರಿದ್ದರು.

ಸಮಾಜ ಒಗ್ಗೂಡಿಸುವ ಆಶಯ

ಕವಿ ಡಾ. ದೊಡ್ಡರಂಗೇಗೌಡರು ಯುವಜನತೆಗೆ ಸಮಾಜವನ್ನು ಸರಿಪಡಿಸುವಂತೆ ಕರೆ ನೀಡಿದ್ದಾರೆ. ಅವರನ್ನು ಪ್ರೇರೆಪಿಸುವುದುಂಟು; ಅವರ ಮಾತುಗಳೆಲ್ಲವೂ ದೇಶ ಕಟ್ಟಬೇಕೆನ್ನುವ ಕಿವಿಮಾತು ಹೇಳುತ್ತವೆಯೆ ಹೊರತು ಸಮಾಜ ಒಡೆಯುವ ಜನರಲ್ಲಿ ದ್ವೇಷದ ಕಿಚ್ಚನ್ನು ಹಚ್ಚುವ ಅಥವಾ ದೌರ್ಜನ್ಯ, ದಮನಗಳಿಗೆ ಪ್ರೋತ್ಸಾಹಿಸುವ ನೇತ್ಯಾತ್ಮಕ ವಿಚಾರಗಳಿಲ್ಲ.

■ ಡಾ. ಬಾಬು ಕೃಷ್ಣಮೂರ್ತಿ, ಲೇಖಕ

ಯುವಕರಲ್ಲಿ ದೇಶ ಪ್ರೇಮ ಕಡಿಮೆ

1▶ 5 ಸಾವಿರ ವರ್ಷಗಳ ಹಿಂದಿನ ಅಖಂಡ ಆರ್ಯಾವರ್ತದ ಪುರಾತನ ಭಾರತದ ಹಿರಿಮೆ, ಗರಿಮೆಗಳನ್ನು ಕವಿತೆಗಳಲ್ಲಿ ಚಿತ್ರಿಸುವ ಪ್ರಯತ್ನ ಮಾಡಲಾಗಿದೆ. ಅದು ಇಂದಿನ ಯುವಕರನ್ನು ಗಮನದಲ್ಲಿ ಇಟ್ಟುಕೊಂಡು ರಚಿಸಲಾಗಿದೆ ಎಂದರು.

ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರನ್ನು ಬಿಟ್ಟರೆ ಭಾರತವನ್ನು ಪ್ರಗತಿಯತ್ತ ಕೊಂಡೊಯ್ಯುವತ್ತ ಸಕಾರಾತ್ಮಕವಾಗಿ ಕೆಲಸ ಮಾಡುವಲ್ಲಿ ಪ್ರಧಾನಿ ಮೋದಿ ಅವರು ಉತ್ತಮ ಹೆಜ್ಜೆ ಇಡುತ್ತಿದ್ದು, ಅದಕ್ಕೆ ತಮ್ಮ ಬೆಂಬಲವಿದೆ ಎಂದು ತಿಳಿಸಿದರು.

ಸಾಹಿತ್ಯದಲ್ಲಿ ವೈಚಾರಿಕತನ ಹೆಚ್ಚುತ್ತಿದೆ: ಸಾಹಿತಿ, ವಿಮರ್ಶಕ ಡಾ.ವಸಂತ್‌ಕುಮಾರ್ ಪೆರ್ಲ ಮಾತನಾಡಿ, ಸಾಹಿತ್ಯದಲ್ಲಿ ವೈಚಾರಿಕತನ ಹೆಚ್ಚುತ್ತಿದೆ. ಆದರೆ, ಅದು ಸಾಹಿತ್ಯದ ಉದ್ದೇಶವಲ್ಲ. ಇತ್ತೀಚಿನ ದಿನಗಳಲ್ಲಿ ಹೊರಬರುತ್ತಿರುವ ಪುಸ್ತಕಗಳನ್ನು ಗಮನಿಸುತ್ತಿದ್ದು, ಅದರಲ್ಲಿ ವೈಚಾರಿಕತೆಯೇ ಎದ್ದು ಕಾಣುತ್ತಿದೆ.

ವೈಚಾರಿಕ ಕವಿತೆಗಳು ಹೆಚ್ಚು ಹೊರ ಬರುತ್ತಿವೆ. ಸಾಹಿತ್ಯ ಎಂದರೆ ಕೇವಲ ವೈಚಾರಿಕತೆಯಲ್ಲ. ಅದರಲ್ಲಿ ಭಾವನಾತ್ಮಕತೆಯನ್ನು ಕಟ್ಟಿಕೊಡಬೇಕು ಎಂದು ಹೇಳಿದರು. ಆಧುನಿಕ ಕಾವ್ಯ ಜನಸಾಮಾನ್ಯರಿಂದ ದೂರ ಆಗುತ್ತಿದೆ. ವೈಚಾರಿಕ ಕಾವ್ಯಗಳು ಜನತೆಯನ್ನು ಮುಟ್ಟುತ್ತಿಲ್ಲ. ಹೆಚ್ಚು ಕ್ಲಿಷ್ಟ ಭಾಷೆಯಲ್ಲಿ ಹೊರಬರುತ್ತಿವೆ. ಆದ್ದರಿಂದ ಭಾವನಾತ್ಮಕತೆಯನ್ನು ಹಿಡಿಯುವಂತಹ ಕವಿತೆ, ಕವನಗಳು ಹೊರಬರುವ ನಿಟ್ಟಿನಲ್ಲಿ ಯುವ ಲೇಖಕರು ಕೆಲಸ ಮಾಡಬೇಕಿದೆ ಎಂದರು.

ಹೊಸ ತಲೆಮಾರಿನವರಿಗೆ ಇಂದು ಕನ್ನಡ ಭಾಷೆ ಬೇಡವಾಗುತ್ತಿದೆ. ಎಲ್ಲವೂ ಇಂಗ್ಲಿಷ್‌ಮಯವಾಗುತ್ತಿದೆ. ಬೇರೆ ಭಾಷೆ ಬಳಸಿದರೂ ಕನ್ನಡ ಉಳಿಸುವ ಕಡೆ ಗಮನಹರಿಸಬೇಕು ಎಂದು ಕಿವಿ ಮಾತು ಹೇಳಿದರು.

ನಮ್ಮ ದೇಶದ ಬಾವುಟವನ್ನು ಸುಡುವುದು, ಅನ್ಯ ದೇಶದ ರಾಷ್ಟ್ರಕ್ಕೆ ಜೈ ಎನ್ನುವುದು ನಮ್ಮ ನೆಲದಲ್ಲೇ ನಡೆಯುತ್ತಿದೆ. ಇದು ದುಃಖದ ಸಂಗತಿಯಾಗಿದ್ದು, ಹಾದಿ ತಪ್ಪುತ್ತಿರುವ ತರುಣ ತರುಣಿಯರಿಗೆ ಈ ಪುಸ್ತಕ ಎಚ್ಚರಿಕೆ ಗಂಟೆ ಆಗಲಿದೆ ಎಂದ ಅವರು ಪುಸ್ತಕ ಹಾಗೂ ಅದರಲ್ಲಿನ ಕವಿತೆಗಳ ಕುರಿತು ವಿವರಿಸಿದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 26 ಮಂದಿಗೆ ಇದೇ ವೇಳೆ ಕೆಂಗಲ್ ಹನುಮಂತಯ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಡಾ.ವೂಡೆ ಪಿ. ಕೃಷ್ಣ, ಪತ್ರಕರ್ತ ದು.ಗು.ಲಕ್ಷ್ಮಣ್, ಸಮರ್ಥ ಪ್ರಕಾಶನದ ಅಧ್ಯಕ್ಷ ರಾ. ವಿಜಯ ಸಮರ್ಥ, ಸಮಾಜ ಸೇವಕ ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ವಿಜಯ ಕರ್ನಾಟಕ VK
ಶನಿವಾರ, 12 ಆಗಸ್ಟ್ 2017, ಬೆಂಗಳೂರು

ಯುವ ರೈತರಿಗೆ ಡಾ. ಎಂ. ಅಣ್ಣಾದೊರೈ ಕರೆ

ತಂತ್ರಜ್ಞಾನ ಆಧರಿತ ಕೃಷಿಯತ್ತ ಮುಖಮಾಡಿ

ವಿಕ ಸುದ್ದಿಲೋಕ ಬೆಂಗಳೂರು

ಹವಾಮಾನ ವೈಪರೀತ್ಯವು ಕೂಡ ರೈತರಿಗೆ ಮಾರಕವಾಗಿದ್ದು, ಯುವ ರೈತರು ತಂತ್ರಜ್ಞಾನ ಆಧರಿತ ಕೃಷಿಯತ್ತ ದೃಷ್ಟಿ ಹರಿಸಬೇಕಿದೆ ಎಂದು ಇಸ್ರೊ ಉಪಗ್ರಹ ಕೇಂದ್ರದ ನಿರ್ದೇಶಕ ಡಾ. ಎಂ. ಅಣ್ಣಾದೊರೈ ಕರೆ ನೀಡಿದರು.

ಭಾರತೀಯ ತಂತ್ರಜ್ಞಾನ ಕಾಂಗ್ರೆಸ್ ನಗರದ ನಿಮ್ಹಾನ್ಸ್ ಸಮ್ಮೇಳನ ಸಭಾಂಗಣದಲ್ಲಿ ಗುರುವಾರ ನಡೆದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡಿದರು.

"ಮಾಹಿತಿ ಮತ್ತು ತಂತ್ರಜ್ಞಾನದ ಕೊರತೆಯಿಂದಾಗಿ ಕೃಷಿ ಕ್ಷೇತ್ರದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಉತ್ಪಾದನೆ ಸಾಧ್ಯವಾಗುತ್ತಿಲ್ಲ, ಆಧುನಿಕ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಂಡರಷ್ಟೇ ಕೃಷಿ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಲು ಸಾಧ್ಯ. ಈ ದಿಕ್ಕಿನಲ್ಲಿ ಎಂಜಿನಿಯರಿಂಗ್ ವಿದ್ಯಾರ್ಥಿಗಳು ಸಂಶೋಧನೆ ಕೈಗೊಳ್ಳಬೇಕಿದೆ," ಎಂದು ಹೇಳಿದರು.

"ಕೊಯ್ಲು ಮತ್ತು ಕೊಯ್ಲೋತ್ತರ ಕಾಲದಲ್ಲಿ ಬೆಳೆ ಹಾನಿ ತಪ್ಪಿಸಲು ತಂತ್ರಜ್ಞಾನದ ನೆರವು ಪಡೆಯಬಹುದಾಗಿದೆ. ಅಭಿವೃದ್ಧಿ ರಾಷ್ಟ್ರಗಳಲ್ಲಿ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವಲ್ಲಿ ಯಶಸ್ವಿಯಾಗಿವೆ. ಹವಾಮಾನ ವೈಪರೀತ್ಯದಿಂದ ಕೃಷಿ ಮೇಲಾಗುವ ಪರಿಣಾಮಗಳ ಕುರಿತಂತೆಯೂ ಇಸ್ರೊ ಮಾಹಿತಿ ಒದಗಿಸುತ್ತಿದೆ," ಎಂದರು.



ಭಾರತೀಯ ತಂತ್ರಜ್ಞಾನ ಕಾಂಗ್ರೆಸ್ ಬೆಂಗಳೂರಿನ ನಿಮ್ಹಾನ್ಸ್ ಸಮ್ಮೇಳನ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣವನ್ನು ಇಸ್ರೊ ಉಪಗ್ರಹ ಕೇಂದ್ರದ ನಿರ್ದೇಶಕ ಡಾ. ಎಂ.ಅಣ್ಣಾದೊರೈ ಉದ್ಘಾಟಿಸಿದರು. ಐಟಿಸಿ ಅಧ್ಯಕ್ಷ ಡಾ. ಎಸ್. ಅಯ್ಯಪ್ಪನ್, ಪ್ರೊ. ಆರ್.ಎಂ.ವಾಸಗಮ್, ಡಾ. ಪೂಡೇ ಪಿ.ಕೃಷ್ಣ ಮತ್ತಿತರರಿದ್ದರು.

ಐಟಿಸಿ ಅಧ್ಯಕ್ಷ ಡಾ. ಎಸ್.ಅಯ್ಯಪ್ಪನ್ ಮಾತನಾಡಿ, "ದೇಶದ ಜನಸಂಖ್ಯೆಗೆ ಅನುಗುಣವಾಗಿ ಆಹಾರ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳಬೇಕಿದೆ. ದೇಶದ ಬಹುಪಾಲು ಜನರು ಕೃಷಿಯನ್ನೇ ಅವಲಂಬಿಸಿದ್ದು ಹಲವರು ಸಣ್ಣ ರೈತರಾಗಿದ್ದಾರೆ," ಎಂದು ಹೇಳಿದರು.

ಕೃಷಿ, ಶಿಕ್ಷಣ, ತಂತ್ರಜ್ಞಾನ ಸೇರಿದಂತೆ ನಾನಾ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿರುವ ಸಂಸ್ಥೆಗಳಿಗೆ ಐಟಿಸಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಐಟಿಸಿ ತಾಂತ್ರಿಕ ಎಕ್ಸಲೆನ್ಸ್ ಪ್ರಶಸ್ತಿಯನ್ನು ಇನ್ಫೋಸಿಸ್ ಮತ್ತು ಸೂಪರ್‌ವೇರ್ ಟೆಕ್ನಾಲಜಿ ಕಂಪನಿಗಳು ಪಡೆದುಕೊಂಡವು. ಕೃಷಿ ತಂತ್ರಜ್ಞಾನ ಕ್ಷೇತ್ರದಲ್ಲಿನ ಜೀವಮಾನ ಸಾಧನೆಗಾಗಿ ಡಿ.ವಿ.ನಾಗಭೂಷಣ್ ಅವರಿಗೆ ಪ್ರಶಸ್ತಿ ನೀಡಲಾಯಿತು. ಜತೆಗೆ ಕೋಲ್ಕತ್ತಾದ ಏಡಿಎಂಎಸ್ ವಿಶ್ವವಿದ್ಯಾಲಯ, ಗೀತಂ ವಿವಿ, ಅಲಯನ್ಸ್ ವಿವಿ, ಆಂಧ್ರದ ಎಸ್.ಆರ್‌.ಕೆಆರ್ ಕಾಲೇಜು, ತಂಜಾವೂರಿನ ಐಐಎಫ್‌ಪಿಟಿ, ಬೆಂಗಳೂರಿನ ಡಾನ್ ಬಾಸ್ಕೊ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತಿತರ ಶಿಕ್ಷಣ ಸಂಸ್ಥೆಗಳಿಗೆ ವಿಶೇಷ ಪ್ರಶಸ್ತಿ ನೀಡಲಾಯಿತು.

ಭಾರತೀಯ ತಂತ್ರಜ್ಞಾನ ಕಾಂಗ್ರೆಸ್‌ನ (ಐಟಿಸಿ) ಅಧ್ಯಕ್ಷ ಡಾ. ಎಲ್.ವಿ. ಮುರಳಿಕೃಷ್ಣ ರೆಡ್ಡಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪ್ರೊಡಕ್ಷನ್ ಎಂಜಿನಿಯರ್ಸ್‌ನ ರಾಷ್ಟ್ರೀಯ ಅಧ್ಯಕ್ಷ ಡಾ. ಪೂಡೇ ಪಿ.ಕೃಷ್ಣ, ಐಟಿಸಿ ಮುಖ್ಯಸ್ಥ ಪ್ರೊ. ಆರ್.ಎಂ. ವಾಸಗಮ್, ಡಾ. ಕೆ.ಗೋಪಾಲಕೃಷ್ಣನ್ ಮತ್ತಿತರರು ಹಾಜರಿದ್ದರು.

ಕನ್ನಡಪ್ರಭ

ಸೋಮವಾರ 31.7.2017

ಕನ್ನಡ ಧ್ವಜ ಪ್ರತ್ಯೇಕತೆಯಲ್ಲ: ದಿನೇಶ್ ಗುಂಡೂರಾವ್


ಧ್ವಜಕ್ಕೆ ಮಾನ್ಯತೆ ನೀಡುವುದರಲ್ಲಿ ಸಂವಿಧಾನ ವಿರೋಧಿ ಅಂಶವಿಲ್ಲ | ಹಿಂದಿ ವಿರೋಧಿ ಹೋರಾಟಕ್ಕೆ ಬೆಂಬಲ

• ಕನ್ನಡಪ್ರಭ ವಾರ್ತೆ ಬೆಂಗಳೂರು

ಕನ್ನಡ ಧ್ವಜಕ್ಕೆ ಅಧಿಕೃತ ಮಾನ್ಯತೆ ನೀಡುವುದು ರಾಜ್ಯ ಸರ್ಕಾರದ ಉದ್ದೇಶವಾಗಿದೆ ಹೊರತು, ಯಾವುದೇ ರೀತಿಯ ಪ್ರತ್ಯೇಕತೆ ಸ್ಥಾಪಿಸುವುದಲ್ಲ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದ್ದಾರೆ.

ನಗರದ ರೇಣುಕಾಚಾರ್ಯ ಕಾಲೇಜಿನಲ್ಲಿ ಭಾನುವಾರ ಆಯೋಜಿಸಿದ್ದ 'ಗಾಂಧಿನಗರ ವಿಧಾನಸಭಾ ಕ್ಷೇತ್ರದ 4ನೇ ಕನ್ನಡ ಸಾಹಿತ್ಯ ಸಮ್ಮೇಳನ' ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಕನ್ನಡ ಧ್ವಜ ಈಗಾಗಲೇ ಇದೆ. ಕರ್ನಾಟಕದಲ್ಲಿ ನಾಡಗೀತೆ ಅಧಿಕೃತಗೊಳಿಸಿ ಗೌರವ ಸಲ್ಲಿಸಲಾಗುತ್ತಿದೆ. ಅದೇ ರೀತಿ ರಾಷ್ಟ್ರಗೀತೆಯನ್ನೂ ಗೌರವಿಸುತ್ತಿದ್ದೇವೆ. ಹಾಗಾಗಿ ಕನ್ನಡ ಧ್ವಜಕ್ಕೆ ಅಧಿಕೃತ ಮಾನ್ಯತೆ ನೀಡುವುದರಲ್ಲಿ ಸಂವಿಧಾನ ವಿರೋಧಿ ಅಂಶವಿಲ್ಲ. ಇದರಲ್ಲಿ ಪ್ರತ್ಯೇಕತೆ ಬಿಂಬಿಸುವುದು ಸರಿಯಲ್ಲ ಎಂದು ಸಮರ್ಥಿಸಿಕೊಂಡರು.

ನಮ್ಮ ಮೆಟ್ರೋದಲ್ಲಿ ಹಿಂದಿ ಭಾಷೆ ಹೇರಿಗೆ ಸಹ್ಯವಲ್ಲ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕೇಂದ್ರಕ್ಕೆ ಪತ್ರ ಬರೆದು ಹಿಂದಿ ತೆಗೆದು ಹಾಕುವಂತೆ ಒತ್ತಾಯಿಸಿದ್ದಾರೆ. ಕರ್ನಾಟಕದ ಏಕೀಕರಣಕ್ಕೆ ಹಲವು ಹೋರಾಟಗಾರರು ಶ್ರಮಿಸಿದ್ದಾರೆ. ಕನ್ನಡ ಅಭಿಮಾನ ಆಳವಾಗಿ ಬೇರೂರಿಸಲು ಕನ್ನಡ



'ಗಾಂಧಿನಗರ ವಿಧಾನಸಭಾ ಕ್ಷೇತ್ರದ 4ನೇ ಕನ್ನಡ ಸಾಹಿತ್ಯ ಸಮ್ಮೇಳನ'ದಲ್ಲಿ ಕರ್ನಾಟಕ ಕೈಗಾರಿಕಾ ಮತ್ತು ವಾಣಿಜ್ಯೋದ್ಯಮ ಕನ್ನಡ ಸಂಘಗಳ ಒಕ್ಕೂಟದ ಅಧ್ಯಕ್ಷ ಎಂ.ತಿಮ್ಮಯ್ಯ, ಕನ್ನಡಪರ ಹೋರಾಟಗಾರ ಬಿ.ಎಂ. ನಂಜುಂಡಸ್ವಾಮಿ, ಮಹಿಳಾ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಕೆ. ನರಸಿಂಹಶೆಟ್ಟಿ ಅವರನ್ನು ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಸನ್ಮಾನಿಸಿದರು. ಡಾ.ಲೀಲಾವತಿ ಆರ್.ಪ್ರಸಾದ್, ಮಾಯಣ್ಣ, ಡಾ. ಪದ್ಮಾಶೇಖರ್, ಡಾ.ವೂಡೇ ಪಿ. ಕೃಷ್ಣ ಇದ್ದರು.

ಕಾಳಜಿ ಇರಬೇಕು. ನಮ್ಮ ರಾಜ್ಯದಲ್ಲಿ ಕನ್ನಡಿಗರೇ ಕನ್ನಡ ಉಳಿಸಿ ಬೆಳೆಸದಿದ್ದರೆ ಬೇರೆ ಯಾರು ಉಳಿಸಲು ಸಾಧ್ಯ? ಹಿಂದಿ ಹೇರಿಕೆ ವಿರುದ್ಧ ನಡೆಯುತ್ತಿರುವ ಹೋರಾಟಕ್ಕೆ ನನ್ನ ಬೆಂಬಲ ಇದೆ ಎಂದು ತಿಳಿಸಿದರು.

ಕನ್ನಡ ಶಾಲೆಗಳ ಉಳಿಸಿ: ಸಾಹಿತ್ಯ ಸಮ್ಮೇಳನಾಧ್ಯಕ್ಷ ಹಾಗೂ ಶೇಷಾದ್ರಿಪುರ ಶಿಕ್ಷಣ ಸಂಸ್ಥೆಗಳ ಸಮೂಹದ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ಗಾಂಧಿನಗರ ಕ್ಷೇತ್ರವನ್ನು 'ಮಿನಿ ಭಾರತ' ಎಂದು ಕರೆದರೆ ತಪ್ಪಿಲ್ಲ ಎಂದ ಅವರು, ಗಾಂಧಿನಗರದಲ್ಲಿ ವಿಭಿನ್ನ ಭಾಷೆ, ಸಂಸ್ಕೃತಿಯ ಜನರು ನೆಲೆಕಂಡುಕೊಂಡಿದ್ದಾರೆ. ಆದರೆ, ಇಷ್ಟೆಲ್ಲಾ ವಿಶೇಷತೆಗಳ ಕಸ ವಿಲೇವಾರಿ, ವಾಯುಮಾಲಿನ್ಯ ಹೀಗೆ ಹಲವು ಸಮಸ್ಯೆಗಳು ಇಲ್ಲಿನ ನಿವಾಸಿಗಳನ್ನು ತೀವ್ರವಾಗಿ ಕಾಡುತ್ತಿವೆ. ಈ ಸಮಸ್ಯೆಗಳ ಬಗ್ಗೆ ಜನಪ್ರತಿನಿಧಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಕನ್ನಡ ಶಾಲೆಗಳನ್ನು ಉಳಿಸಬೇಕು. ಜತೆಗೆ ಅವುಗಳಿಗೆ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಿ ಬಲಪಡಿಸಬೇಕು. ಅದೇ ರೀತಿ ಗಡಿ ಭಾಗಗಳಲ್ಲಿನ ಕನ್ನಡ ಶಾಲೆಗಳನ್ನು ಗಟ್ಟಿಗೊಳಿಸಬೇಕಿದೆ. ರಾಜ್ಯ ಸರ್ಕಾರ ಕನ್ನಡ ಉಳಿಸಲು ಮುಂದಾಗಿರುವುದು ಸ್ವಾಗತಾರ್ಹ ಎಂದರು.

ಬೆಳಗ್ಗೆ 8 ಗಂಟೆಗೆ ನಗರದ ಮಲ್ಲೇಶ್ವರದ ಕುವೆಂಪು ಪ್ರತಿಮೆ ಬಳಿ ಧ್ವಜಾರೋಹಣ ಮಾಡಲಾಯಿತು. ಬಳಿಕ ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಅವರ ಮೆರವಣಿಗೆ ಕಾರ್ಯಕ್ರಮಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ. ಮುಖ್ಯಮಂತ್ರಿ ಚಂದ್ರು, ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಸೇರಿದಂತೆ ಪ್ರಮುಖರು ಚಾಲನೆ ನೀಡಿದರು. ಸಮ್ಮೇಳನದಲ್ಲಿ ಮಾಜಿ ಸಚಿವೆ ಡಾ. ಲೀಲಾದೇವಿ ಆರ್.ಪ್ರಸಾದ್, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಡಾ. ಪದ್ಮಾಶೇಖರ್, ಸಾಹಿತಿ ಬೈರಮಂಗಲ ರಾಮೇಗೌಡ, ಬೆಂಗಳೂರು ನಗರ ಜಿಲ್ಲಾ ಕಸಾಪ ಅಧ್ಯಕ್ಷ ಮಾಯಣ್ಣ, ಗಾಂಧಿನಗರ ಕಸಾಪ ಅಧ್ಯಕ್ಷೆ ಮಂಜು ಮಹಾದೇವಮ್ಮ, ಪಾಲಿಕೆ ಸದಸ್ಯರಾದ ಆರ್.ಸಿ. ಸತ್ಯನಾರಾಯಣ ಇನ್ನಿತರರು ಉಪಸ್ಥಿತರಿದ್ದರು.

ಬೆಂಗಳೂರು
vishwavani.news
31.07.2017 ಸೋಮವಾರ

ಗಾಂಧಿನಗರ ವಿಧಾನಸಭಾ ಕ್ಷೇತ್ರದ ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದಿನೇಶ್ ಗುಂಡೂರಾವ್

ಪ್ರತ್ಯೇಕ ನಾಡಧ್ವಜದ ಹಿಂದೆ ದುರುದ್ದೇಶವಿಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪ್ರತ್ಯೇಕ ಧ್ವಜ ಸ್ಥಾಪಿಸಿ ಮಾನ್ಯತೆ ನೀಡುವ ಉದ್ದೇಶದಿಂದ ಸರಕಾರ ನಾಡಧ್ವಜವನ್ನು ರೂಪಿಸುತ್ತಿದೆಯೇ ಹೊರತು ರಾಜ್ಯವನ್ನು ಪ್ರತ್ಯೇಕಿಸುವ ಉದ್ದೇಶದಿಂದ ಅಲ್ಲ, ಇದರ ಹಿಂದೆ ಯಾವುದೇ ಕೆಟ್ಟ ಉದ್ದೇಶವಿಲ್ಲ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಹೇಳಿದರು.

ನಗರದ ರೇಣುಕಾಚಾರ್ಯ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಗಾಂಧಿನಗರ ವಿಧಾನಸಭಾ ಕ್ಷೇತ್ರದ ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

ಈಗಾಗಲೇ ರಾಜ್ಯದಲ್ಲಿ ನಾಡಧ್ವಜ ಇದೆ. ಆದರೆ ಪ್ರಸ್ತುತ ಇರುವ ನಾಡ ಧ್ವಜ ಮಾನ್ಯತೆ ಪಡೆದಿಲ್ಲ. ಆದ್ದರಿಂದ ಸರಕಾರದಿಂದ ನಾಡಧ್ವಜಕ್ಕೆ ಮಾನ್ಯತೆ ದೊರಕಿಸಿಕೊಡುವ ಉದ್ದೇಶದಿಂದ ಪ್ರತ್ಯೇಕ ನಾಡಧ್ವಜ ಸ್ಥಾಪಿಸಲಾಗುತ್ತಿದೆಯೇ ಹೊರತು ಬೇರೆ ಯಾವುದೇ ರಾಜಕೀಯ ತಂತ್ರಗಳು, ರಾಜ್ಯವನ್ನು ವಿಭಾಗಿಸುವ ಹುನ್ನಾರವಿಲ್ಲ ಎಂದು ಸ್ಪಷ್ಟಪಡಿಸಿದರು.

ನಾಡಧ್ವಜದ ವಿಷಯವನ್ನು ಕೆಲ ಪಕ್ಷಗಳು ರಾಜಕೀಯ ವಸ್ತುವಾಗಿ ಬಳಸಿಕೊಳ್ಳುತ್ತಿರುವುದು ಸರಿಯಲ್ಲ, ಈ ಕುರಿತು ಪ್ರತ್ಯೇಕತಾವಾದಿಗಳು ಮಂಡಿಸುವ ವಿಚಾರಗಳಲ್ಲಿ ಯಾವುದೇ ಹುರುಳಿಲ್ಲ, ಇದು ಸಂವಿಧಾನವನ್ನು ವಿರೋಧಿಸುವ ನಿರ್ಧಾರವಲ್ಲ, ನಾಡಗೀತೆಯನ್ನು ಅಧಿಕೃತಗೊಳಿಸಿ, ಗೌರವ ದೊರಕಿಸುವ ಉದ್ದೇಶ. ನಾಡಗೀತೆಯನ್ನು ಎಲ್ಲರು ಗೌರವಿಸುತ್ತಾರೆ, ಅದೇ ನಿಟ್ಟಿನಲ್ಲಿ ನಾಡಧ್ವಜಕ್ಕೂ ಮಾನ್ಯತೆ ದೊರಕಿಸಿ ಕೊಟ್ಟು ಗೌರವ ಭಾವನೆ ಜನರಲ್ಲಿ ಮೂಡಿಸುವ ಉದ್ದೇಶವಾಗಿದ್ದು, ಇದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದರು.



ಗಾಂಧಿನಗರ ವಿಧಾನಸಭಾ ಕ್ಷೇತ್ರದ ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಭಾಗವಹಿಸಿದ್ದರು.

"ಕನ್ನಡ ಭಾಷೆ ಉಳಿಸಿ, ಬೆಳೆಸುವ ಕಾರ್ಯವಾಗಬೇಕಿದ್ದು, ಅನ್ಯ ಭಾಷಿಕರು ರಾಜ್ಯದಲ್ಲಿ ಕನ್ನಡ ಕಲಿತು ವ್ಯವಹರಿಸುವಂತಾಗಬೇಕು, ಸ್ಥಳೀಯ ಭಾಷೆ ಉಳಿಯಲು ಹೋರಾಟ ನಿರಂತರವಾಗಬೇಕಿದೆ.

– ದಿನೇಶ್ ಗುಂಡೂರಾವ್ ಕೆಪಿಸಿಸಿ ಕಾರ್ಯಾಧ್ಯಕ್ಷ

ಪ್ರಧಾನಿಗೆ ಪತ್ರ

ಮೆಟ್ರೋದಲ್ಲಿ ಹಿಂದಿ ಹೇರಿಕೆಯನ್ನು ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರಕ್ಕೆ ಪತ್ರ ಬರೆದು ರಾಜ್ಯದ ನಿಲ್ದಾಣಗಳಲ್ಲಿ ಹಿಂದಿ ಭಾಷೆಯ ನಾಮಫಲಕವನ್ನು ತೆಗೆಯುವಂತೆ ಒತ್ತಾಯಿಸಿದ್ದು, ಹಿಂದಿ ಹೇರಿಕೆಯನ್ನು ರಾಜ್ಯ ಸರಕಾರ ಸಂಪೂರ್ಣ ವಿರೋಧಿಸಲಾಗುವುದು. ಹೋರಾಟಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಘೋಷಿಸಿದರು.

ನಿರಂತರ ಹೋರಾಟ ಅಗತ್ಯ

ಬೆಂಗಳೂರು: ಗಡಿಯಲ್ಲಿ ಅನ್ಯಭಾಷೆಗಳ ಅಬ್ಬರ, ಇಂಗ್ಲಿಷ್ ಭಾಷೆಗಳ ಪ್ರಭಾವದಿಂದ ಕನ್ನಡ ಶಾಲೆಗಳ ಮುಚ್ಚುತ್ತಿವೆ. ಅನೇಕ ಸಮಸ್ಯೆಗಳ ನಡುವೆ ಕನ್ನಡವನ್ನು ಉಳಿಸಿ, ಬೆಳೆಸುವ ಕಾರ್ಯವಾಗಬೇಕಿದೆ ಎಂದು ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಹೇಳಿದರು.

ನಗರದ ರೇಣುಕಾಚಾರ್ಯ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಗಾಂಧಿನಗರ ವಿಧಾನಸಭಾ ಕ್ಷೇತ್ರದ ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿ, ಹಲವು ಭಾಷಿಕರು, ವಿಭಿನ್ನ ಸಂಸ್ಕೃತಿ ಆಚರಿಸುವವರ ಸಂಖ್ಯೆ ಗಾಂಧಿನಗರಲ್ಲಿ ಬಹಳಷ್ಟಿದೆ. ಈ ನಗರವನ್ನು ಮಿನಿ ಭಾರತ ಎಂದರೂ ತಪ್ಪಾಗಲಾರದು, ಇಲ್ಲಿ ಸಾಹಿತ್ಯ ಸಮ್ಮೇಳನ ಆಚರಿಸುವುದು ಅರ್ಥಪೂರ್ಣವಾಗಲಿದೆ ಎಂದರು.

ಗಾಂಧಿನಗರ ವಿಧಾನಸಭಾ ಕ್ಷೇತ್ರದಲ್ಲಿ ಅನೇಕ ಸಮಸ್ಯೆಗಳು ಬಗೆಹರಿಯಬೇಕಿದ್ದು, ಮುಖ್ಯವಾಗಿ ಕಸ ವಿಲೇವಾರಿ, ವಾಯು ಮಾಲಿನ್ಯ ಇಲ್ಲಿನ ಜನರನ್ನು ತ್ರೀವವಾಗಿ ಕಾಡುತ್ತಿರುವ ಸಮಸ್ಯೆಯಾಗಿದೆ. ಜನಪ್ರತಿನಿಧಿಗಳು ಈ ಕುರಿತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಇಂಗ್ಲೀಷ್ ಭಾಷೆಯ ಅಬ್ಬರದಿಂದ ಕನ್ನಡ ಶಾಲೆಗಳು ಮುಚ್ಚುತ್ತಿದ್ದು, ಕನ್ನಡ ಶಾಲೆಯನ್ನು ಉಳಿಸುವ ಕಾರ್ಯವಾಗಬೇಕಿದೆ.



ಗಾಂಧಿನಗರದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಹಿಳೆಯೊಬ್ಬರು ಕಾಣಿಸಿಕೊಂಡಿದ್ದು ಹೀಗೆ.

ಗಡಿಯಲ್ಲಿ ಅನ್ಯ ಭಾಷೆಗಳ ಹಾವಳಿಯನ್ನು ತಪ್ಪಿಸಿ ಸ್ಥಳೀಯ ಭಾಷೆ, ಕನ್ನಡ ಭಾಷೆಯನ್ನು ಉಳಿಸಬೇಕು ಎಂದರು.


ಸಮ್ಮೇಳನದಲ್ಲಿ ಮಾಜಿ ಸಚಿವೆ ಡಾ. ಲೀಲಾದೇವಿ ಆರ್.ಪ್ರಸಾದ್, ಕರ್ನಾಟಕ ಸಂಸ್ಕೃತ ವಿವಿಯ ಕುಲಪತಿ ಡಾ.ಪದ್ಮಾಶೇಖರ್, ಸಾಹಿತಿ ಬೈರಮಂಗಲ ರಾಮೇಗೌಡ, ಬೆಂ.ನಗರ ಜಿಲ್ಲಾ ಕಸಾಪ ಅಧ್ಯಕ್ಷ ಮಾಯಣ್ಣ, ಗಾಂಧಿನಗರ ಕಸಾಪ ಅಧ್ಯಕ್ಷೆ ಮಂಜುಮಹಾದೇವಮ್ಮ, ಬಿಬಿಎಂಪಿ ಸದಸ್ಯ ಆರ್.ಸಿ. ಸತ್ಯನಾರಾಯಣ, ಲತಾ, ಪ್ರಮೋದ್ ಮತ್ತಿತರರು ಇದ್ದರು.

ವಾರ್ತಾ ಭಾರತಿ
ಬೆಂಗಳೂರು, ಸೋಮವಾರ, ಜುಲೈ 31, 2017

ನಾಡಗೀತೆಯಂತೆ ಕನ್ನಡಕ್ಕೆ ಪ್ರತ್ಯೇಕ ಧ್ವಜದ ಮಾನ್ಯತೆ

ಬೆಂಗಳೂರು, ಜು. 30: ರಾಷ್ಟ್ರಕವಿ ಕುವೆಂಪು ರಚಿಸಿರುವ ನಾಡಗೀತೆ ಹೇಗೆ ಅಧಿಕೃತಗೊಳಿಸಲಾಗಿದೆಯೋ, ಅದೇ ರೀತಿ, ಕನ್ನಡ ಪ್ರತ್ಯೇಕ ಧ್ವಜಕ್ಕೆ ಮಾನ್ಯತೆ ನೀಡಲಾಗುವುದು. ಇದರಲ್ಲಿ ಪ್ರತ್ಯೇಕವಾದದ ಮಾತಿಲ್ಲ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದ್ದಾರೆ.

ರವಿವಾರ ನಗರದ ರೇಣುಕಾಚಾರ್ಯ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಗಾಂಧಿನಗರ ವಿಧಾನ ಸಭಾ ಕ್ಷೇತ್ರದ ನಾಲ್ಕನೆ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಕರ್ನಾಟದಲ್ಲಿ ಕನ್ನಡ ಧ್ವಜ ಈಗಾಗಲೇ ಇದೆ. ಆದರೆ, ರಾಜ್ಯ ಸರಕಾರ ಇದನ್ನು ಅಧಿಕೃತಗೊಳಿಸುವ ಉದ್ದೇಶ ಹೊಂದಿದೆ ವಿನಃ, ಪ್ರತ್ಯೇಕತೆಗೆ ಮುಂದಾಗಿಲ್ಲ



ಎಂದು ನುಡಿದರು.

ದೇಶಕ್ಕೆ ರಾಷ್ಟ್ರಗೀತೆ, ರಾಜ್ಯಕ್ಕೆ ನಾಡಗೀತೆ ಅಧಿಕೃತವಾಗಿದೆ. ಇನ್ನೂ ಕನ್ನಡ ಧ್ವಜವೂ ಅಧಿಕೃತಗೊಂಡರೆ, ಯಾರ ಮೇಲಿರುವ ಗೌರವ ಕಡಿಮೆ ಆಗುವುದಿಲ್ಲ. ಈ ಬಗ್ಗೆ ಸುಮ್ಮನೆ ವಿವಾದ ಸೃಷ್ಟಿಸುವುದು ಸರಿಯಲ್ಲ. ಇದು ಸಂವಿಧಾನ ವಿರೋಧಿಯೂ ಅಲ್ಲ ಎಂದು ದಿನೇಶ್‌ಗುಂಡೂರಾವ್ ಹೇಳಿದರು.

ಹಿಂದಿ ಬೇಡ: ನಮ್ಮ ಮೆಟ್ರೋದಲ್ಲಿ ಹಿಂದಿ ಹೇರಿಕೆ ಸರಿಯಲ್ಲ, ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಸರಕಾರಕ್ಕೆ ಪತ್ರಬರೆದು, ತ್ರಿಭಾಷೆ ಸೂತ್ರ ಬೇಡವೆಂದು ಹೇಳಿದ್ದಾರೆ.ಅಲ್ಲದೆ, ಹೊರರಾಜ್ಯದವರು ಎಲ್ಲೂ ಹಿಂದಿ ಬೇಕೆಂದು ಬೇಡಿಕೆಯಿಟ್ಟಿಲ್ಲ.ಅನಗತ್ಯವಾಗಿ

ಗುಂಡೂರಾವ್

ಹಿಂದಿ ಬೇಕೆಂದು ವಿವಾದ ಹುಟ್ಟು ಹಾಕಲಾಗಿದ್ದು, ಹಿಂದಿ ಹೇರಿಕೆ ವಿರುದ್ಧ ನಡೆಯುತ್ತೀರುವ ಹೋರಾಟಕ್ಕೆ ನನ್ನ ಬೆಂಬಲ ಇದೆ ಎಂದರು.

ರಾಜ್ಯ ಸರಕಾರ ಕನ್ನಡ ಭಾಷೆ ಉಳಿಸಿ, ಬೆಳೆಸುವ ಕಾಯಕ ಹೊಂದಿದೆ. ಇತ್ತೀಚೆಗೆ ಕನ್ನಡ ವಿದ್ಯಾರ್ಥಿಗಳಿಗೆ ಮೀಸಲಾತಿ ನೀಡಲಾಗಿದೆ ಎಂದ ಅವರು, ಹೊರರಾಜ್ಯಗಳಿಂದ ನಮ್ಮ ರಾಜ್ಯಕ್ಕೆ ಬರುವರು ಇಲ್ಲಿನ ಸ್ಥಳೀಯ ಭಾಷೆ ಕಲಿಯಲು ಮುಂದಾಗಬೇಕು. ಇದರಿಂದ ಸ್ಥಳೀಯ ಭಾಷೆಗಳು ಶಾಶ್ವತವಾಗಿ ಉಳಿಯಲಿವೆ ದಿನೇಶ್ ಗುಂಡೂರಾವ್ ಹೇಳಿದರು.

ಪ್ರಜಾವಾಣಿ

ಭಾನುವಾರ ○ ಜುಲೈ 30, 2017

ಗಾಂಧಿನಗರ ವಿಧಾನಸಭಾ ಕ್ಷೇತ್ರದ 4ನೇ ಕನ್ನಡ ಸಾಹಿತ್ಯ ಸಮ್ಮೇಳನ



ಸಮ್ಮೇಳನಾಧ್ಯಕ್ಷ-ವೂಡೇ ಪಿ. ಕೃಷ್ಣ
ಅತಿಥಿಗಳುಆರ್.ಸಿ.ಸತ್ಯನಾರಾಯಣ,
ಸುಬ್ಬನರಸಿಂಹ. ಬೆಳಿಗ್ಗೆ 11ಕ್ಕೆ
ಉದ್ಘಾಟನೆ,
ಸ್ಥಳ-ಜಗದ್ಗುರು ರೇಣುಕಾಚಾರ್ಯ
ಕಾಲೇಜು, ಆನಂದರಾವ್ ವೃತ್ತ. ಬೆಳಿಗ್ಗೆ
8ಕ್ಕೆ ಧ್ವಜಾರೋಹಣ. ರಾಷ್ಟ್ರಧ್ವಜ-
ದಿನೇಶ್ ಗುಂಡೂರಾವ್. ಬೆಳಿಗ್ಗೆ 9ಕ್ಕೆ
ಮಲ್ಲೇಶ್ವರ ವೃತ್ತದಿಂದ ಕುವೆಂಪು ಪ್ರತಿಮೆ
ಸಮ್ಮೇಳನಾಧ್ಯಕ್ಷರ ಮೆರವಣಿಗೆ.

ಈ ಸಂಜೆ

ಭಾನುವಾರ,30-07-2017



ಗಾಂಧಿನಗರ

ವಿಧಾನಸಭಾ ಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಉದ್ಘಾಟಿಸಿದರು. ಶಿಕ್ಷಣ ತಜ್ಞ ವೂಡೆ ಪಿ.ಕೃಷ್ಣ, ಬಿಬಿಎಂಪಿ ಸದಸ್ಯ ಸತ್ಯನಾರಾಯಣ, ಕಸಾಪ ನಗರ ಘಟಕ ಅಧ್ಯಕ್ಷ ಮಾಯಣ್ಣ, ಹಾವಿ ಮಂಜುಳಾ ಶಿವಾನಂದ್, ಮಾಜಿ ಸಚಿವೆ ಲೀಲಾದೇವಿ ಆರ್.ಪ್ರಸಾದ್ ಮತ್ತಿತರರು ಪಾಲ್ಗೊಂಡಿದ್ದರು.

ಸಂಜೆವಾಣಿ

ಭಾನುವಾರ, ಜುಲೈ 30, 2017

ಪ್ರತ್ಯೇಕತೆಗಾಗಿ ಕನ್ನಡ ಧ್ವಜ ಅಲ್ಲ



ನಗರದ ರೇಣುಕಾಚಾರ್ಯ ಕಾಲೇಜಿನಲ್ಲಿ ಇಂದು ನಡೆದ ಗಾಂಧಿನಗರ ವಿಧಾನಸಭಾ ಕ್ಷೇತ್ರ, ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್, ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್, ಶಿಕ್ಷಣ ತಜ್ಞ ಡಾ. ವೂಡೇ ಪಿ. ಕೃಷ್ಣ, ಕಸಾಪ ನಗರ ಅಧ್ಯಕ್ಷ ಮಾಯಣ್ಣ, ಬಿಬಿಎಂಪಿ ಸದಸ್ಯ ಆರ್.ಪಿ. ಸತ್ಯನಾರಾಯಣ, ಅಧ್ಯಕ್ಷೆ ಪಾ.ವೀ.ಮಂಜುಳಾ ಶಿವಾನಂದ ಭಾಗವಹಿಸಿದ್ದರು.

ಬೃಹತ್ ಮೆರವಣಿಗೆ..

ಬೆಳಗ್ಗೆ 8ಗಂಟೆಗೆ ನಗರದ ಮಲ್ಲೇಶ್ವರಂ ಕುವೆಂಪು ಪ್ರತಿಮೆ ಬಳಿ ಧ್ವಜಾರೋಹಣ ಮಾಡಲಾಯಿತು.ಬಳಿಕ ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ.ವೂಡೇ ಪಿ.ಕೃಷ್ಣ ಅವರ ಮೆರವಣಿಗೆ ಕಾರ್ಯಕ್ರಮಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮಾಜಿ ಅಧ್ಯಕ್ಷ ಡಾ.ಮುಖ್ಯಮಂತ್ರಿ ಚಂದ್ರು, ಕೆಪಿಸಿಸಿ ದಿನೇಶ್ ಗುಂಡೂರಾವ್ ಸೇರಿ ಪ್ರಮುಖರು ಚಾಲನೆ ನೀಡಿದರು.

ಬೆಂಗಳೂರು.ಜು.30–ಕನ್ನಡದ ಧ್ವಜ ಈಗಾಗಲೇ ಇದೆ.ಆದರೆ,ಅಧಿಕೃತವಾಗಿ ಮಾನ್ಯತೆ ನೀಡುವುದೇ ರಾಜ್ಯ ಸರ್ಕಾರದ ಉದ್ದೇಶ ವಿನಃ. ಯಾವುದೇ ರೀತಿಯ ಪ್ರತ್ಯೇಕತೆ ಸ್ಥಾಪಿಸುವುದಲ್ಲ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಸ್ಪಷ್ಟಪಡಿಸಿದ್ದಾರೆ.

ನಗರದಲ್ಲಿಂದು ರೇಣುಕಾಚಾರ್ಯ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಗಾಂಧಿನಗರ ವಿಧಾನಸಭಾ ಕ್ಷೇತ್ರದ ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಧ್ವಜಕ್ಕೆ ಅಧಿಕೃತ ಮಾನ್ಯತೆ ನೀಡುವ ಉದ್ದೇಶವನ್ನು ರಾಜ್ಯ ಸರ್ಕಾರ ಹೊಂದಿದೆ.ಆದರೆ ಇದರಲ್ಲಿ ಪ್ರತ್ಯೇಕವಾದ ಮಾತುಗಳನ್ನು ಹೇಳುತ್ತಿರುವುದು ಸರಿಯಲ್ಲ. ಅಲ್ಲದೆ, ಇದು ಸಂವಿಧಾನ ವಿರೋಧಿ ನಿರ್ಧಾರವಲ್ಲ ಎಂದು ಹೇಳಿದರು.

ಕರ್ನಾಟಕದಲ್ಲಿ ನಾಡಗೀತೆ ಅಧಿಕೃತಗೊಳಿಸಿ ಗೌರವ ನೀಡುತ್ತಿದ್ದೇವೆ.ಅದೇ ರೀತಿ, ರಾಷ್ಟ್ರಗೀತೆಯನ್ನು ಗೌರವಿಸುತ್ತಿದ್ದೇವೆ. ಹೇಗೆ, ಕನ್ನಡ ಧ್ವಜಕ್ಕೂ ಮಾನ್ಯತೆ ನೀಡುವ ಉದ್ದೇಶ ಹೊಂದಲಾಗಿದೆ. ಇದರಲ್ಲಿ, ಯಾವ ರೀತಿಯ ತಪ್ಪು ಇದೆ ಎಂದು ಪ್ರಶ್ನಿಸಿದರು.

ಹಿಂದಿ ಬೇಡ: ನಮ್ಮ ಮೆಟ್ರೋದಲ್ಲಿ ಹಿಂದಿ ಹೇರಿಕೆ ಸರಿಯಲ್ಲ, ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರಕ್ಕೆ ಪತ್ರ ಬರೆದು,ಹಿಂದಿ ತೆಗೆಯುವಂತೆ ಒತ್ತಾಯಿಸಿದ್ದಾರೆ.ಹಿಂದಿ ಹೇರಿಕೆ ವಿರುದ್ಧ ನಡೆಯುತ್ತಿರುವ ಹೋರಾಟಕ್ಕೆ ನನ್ನ ಬೆಂಬಲ ಇದೆ ಎಂದು ದಿನೇಶ್ ಗುಂಡೂರಾವ್ ನುಡಿದರು.

ಕನ್ನಡ ಭಾಷೆ ಉಳಿಸಿ, ಬೆಳಸಬೇಕು. ಕನ್ನಡ ಪರ ಹೋರಾಟಗಳಿಗೆ ನನ್ನ ಬೆಂಬಲ ಇದೆ ಎಂದ ಅವರು, ಹೊರರಾಜ್ಯಗಳ ಜನರು ಕನ್ನಡ ಕಲಿಯಲು ಮುಂದಾಗಬೇಕು.ಇದರಿಂದ ಸ್ಥಳೀಯ ಭಾಷೆಗಳು ಶಾಶ್ವತವಾಗಿ ಉಳಿಯಲಿವೆ ಎಂದರು.

ಸಾಹಿತ್ಯ ಸಮ್ಮೇಳನಾಧ್ಯಕ್ಷ,ಶೇಷಾದ್ರಿಪುರ ಶಿಕ್ಷಣ ಸಂಸ್ಥೆಗಳ ಸಮೂಹದ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ಗಾಂಧಿನಗರ ಕ್ಷೇತ್ರವನ್ನು ಮಿನಿ ಭಾರತ ಎಂದು ಹೇಳಿದರೆ ತಪ್ಪಿಲ್ಲ;

ಏಕೆಂದರೆ, ಇಲ್ಲಿ ಹಲವಾರು ವಿಭಿನ್ನ ಸಂಸ್ಕೃತಿಗೆ ಸೇರಿದ ಭಾಷಿಕರು ವಾಸಿಸುತ್ತಿದ್ದಾರೆ. ಇಷ್ಟೊಂದು ವಿಶೇಷತೆಗಳ ನಡುವೆ ಹಲವಾರು ಸಮಸ್ಯೆಗಳು ಇವೆ.

ಮುಖ್ಯವಾಗಿ ಕಸವಿಲೇವಾರಿ, ವಾಯುಮಾಲಿನ್ಯ ಇಲ್ಲಿನ ಜನರನ್ನು ತೀವ್ರ ವಾಗಿ ಕಾಡುತ್ತಿರುವ ಸಮಸ್ಯೆ. ಈ ಬಗ್ಗೆ ಜನಪ್ರತಿನಿಧಿಗಳು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಕನ್ನಡ ಶಾಲೆಗಳನ್ನು ಉಳಿಸಬೇಕು.ಅದೇ ರೀತಿ,ರಾಜ್ಯದ ಗಡಿ ಭಾಗಗಳಲ್ಲೂ ಕನ್ನಡ ಗಟ್ಟಿಗೊಳಿಸಬೇಕಾಗಿದೆ ಎಂದ ಅವರು, ರಾಜ್ಯ ಸರ್ಕಾರ ಕನ್ನಡ ಉಳಿಸಲು ಮುಂದಾಗಿರುವುದು ಸ್ವಾಗರ್ಹ ಎಂದು ತಿಳಿಸಿದರು.

ಸಮ್ಮೇಳನದಲ್ಲಿ ಮಾಜಿ ಸಚಿವೆ ಡಾ.ಲೀಲಾದೇವಿ ಆರ್.ಪ್ರಸಾದ್, ಕರ್ನಾಟಕ ಸಂಸ್ಕೃತ ವಿವಿಯ ಕುಲಪತಿ ಡಾ.ಪದ್ಮಾಶೇಖರ್,ಸಾಹಿತಿ ಬೈರಮಂಗಲ ರಾಮೇಗೌಡ,ಬೆಂ.ನಗರ ಜಿಲ್ಲಾ ಕಸಾಪ ಅಧ್ಯಕ್ಷ ಮಾಯಣ್ಣ,ಗಾಂಧಿನಗರ ಕಸಾಪ ಅಧ್ಯಕ್ಷೆ ಮಂಜುಮಹಾದೇವಮ್ಮ,ಶ್ರೀಧರ್, ಪಾಲಿಕೆ ಸದಸ್ಯರಾದ ಆರ್.ಸಿ.ಸತ್ಯನಾರಾಯಣ, ಲತಾ, ಪ್ರಮೋದ್, ಗೋವಿಂದರಾಜು, ಶಿವಪ್ರಕಾಶ್,ಎಸ್.ಲೀಲಾ,ಮಹಾದೇವಮ್ಮ ಸೇರಿ ಪ್ರಮುಖರು ಹಾಜರಿದ್ದರು.

ಕರ್ನಾಟಕ

ಭಾನುವಾರ, 30 ಜುಲೈ 2017

' ಜಿಎಸ್‌ಟಿಯಿಂದ ಉದ್ಯೋಗಾವಕಾಶ ಹೆಚ್ಚಳ'

ಯಲಹಂಕ: ಜಿಎಸ್‌ಟಿಯು ಸರಳೀಕೃತವಾದ ಪದ್ಧತಿ. ಕಾನೂನು, ವಿವರಗಳು ಸುಲಭವಾಗಿ ಸಿಗುತ್ತವೆ, ಉದ್ಯೋಗಾವಕಾಶಗಳು ಹೆಚ್ಚುತ್ತವೆ ಎಂದು ಕೇಂದ್ರ ತೆರಿಗೆ ಇಲಾಖೆಯ ಪ್ರಧಾನ ಆಯುಕ್ತ ಶ್ರೀರಾಮ್ ಹೇಳಿದರು.

ಕೇಂದ್ರ ಸರಕಾರದ ಸಹಯೋಗದಲ್ಲಿ ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್ ಸ್ಟಡೀಸ್ ಯಲಹಂಕ ಮತ್ತು ಶೇಷಾದ್ರಿ ಪುರಂ ಕಾಲೇಜು ಸ್ನಾತಕೋತ್ತರ ಅಧ್ಯಯನ ಕೇಂದ್ರ ವತಿಯಿಂದ 'ಜಿಎಸ್‌ಟಿ - ಸವಾಲುಗಳು ಹಾಗೂ ಯಶಸ್ವಿ ನಿರ್ವಹಣೆ' ಕುರಿತು ರಾಷ್ಟ್ರ ಮಟ್ಟದ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದರು.

''ಜಿಎಸ್‌ಟಿ ಅತ್ಯುತ್ತಮವಾದ ತೆರಿಗೆ ಪದ್ಧತಿ ಆಗಿದೆ. ವಸ್ತುಗಳ ರಫ್ತು ಮಾಡುವಿಕೆ ಸುಲಭವಾಗುತ್ತದೆ. ದೇಶದ ಎಲ್ಲ ಜನರ ಒಳಿತಿಗಾಗಿ ಈ ತೆರಿಗೆಯ ಬದಲಾವಣೆ ಅಗತ್ಯವಿದೆ,'' ಎಂದರು.

''ಹಳೆಯ ತೆರಿಗೆ ಪದ್ಧತಿಯು ಕ್ಲಿಷ್ಟವಾಗಿತ್ತು. ಇದರ ವಿರುದ್ಧ ಕಾನೂನು ಹೋರಾಟಗಳು ನಡೆಯುತ್ತಿವೆ. ಆದರ ಪರಿಣಾಮ ಹಣದ ಕ್ರೋಢೀಕರಣ ಕುಂಠಿತವಾಗುತ್ತಿತ್ತು,'' ಎಂದರು.

ರಾಜ್ಯ ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ಆಯುಕ್ತ ಡಾ.ಬಿ.ವಿ. ಮುರಳೀಧರ್, ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಎಫ್ ಕೆಸಿಸಿಐ ಅಧ್ಯಕ್ಷರಾದ ಕೆ.ರವಿ, ಎನ್.ಆರ್. ಪಂಡಿತಾರಾಧ್ಯ, ನಿತಿನ್‌ಮಿಶ್ರ, ಎಸ್.ಎನ್. ರಂಗಪ್ರಸಾದ್ ಉಪಸ್ಥಿತರಿದ್ದರು.



ಚಿತ್ರ
ಯಲಹಂಕದ ಶೇಷಾದ್ರಿಪುರಂ ಕಾಲೇಜಿನಲ್ಲಿ 'ಜಿಎಸ್‌ಟಿ - ಸವಾಲುಗಳು ಹಾಗೂ ಯಶಸ್ವಿ ನಿರ್ವಹಣೆ' ಕುರಿತು ರಾಷ್ಟ್ರೀಯ ಮಟ್ಟದ ಕಾರ್ಯಾಗಾರ ನಡೆಯಿತು.

ಶನಿವಾರ, ಜುಲೈ 29, 2017
ವಾರ್ತಾ ಭಾರತಿ

■ ಸುದ್ದಿ ಮಾಹಿತಿ ■

ನಾಳೆ ಗಾಂಧಿನಗರ ಸಾಹಿತ್ಯ ಸಮ್ಮೇಳನ

ಬೆಂಗಳೂರು, ಜು. 28: ಗಾಂಧಿ ನಗರ ವಿಧಾನಸಭಾ ಕ್ಷೇತ್ರದ 4ನೆ ಕನ್ನಡ ಸಾಹಿತ್ಯ ಸಮ್ಮೇಳನ ಜು. 30ರಂದು ಜರಗಲಿದ್ದು, ಲೇಖಕ, ಡಾ.ವೂಡೆ ಪಿ.ಕೃಷ್ಣ ಸಮ್ಮೇಳನದ ಅಧ್ಯಕ್ಷತೆ ವಹಿಸಲಿದ್ದಾರೆ.

ಶುಕ್ರವಾರ ನಗರದ ಪ್ರೆಸ್‌ಕ್ಲಬ್‌ನಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಗಾಂಧಿನಗರದ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷೆ ಮಂಜುಳಾ ಶಿವಾನಂದ ಮಾತನಾಡಿ, ಮಲ್ಲೇಶ್ವರ ವೃತ್ತದಲ್ಲಿರುವ ಕುವೆಂಪು ಪ್ರತಿಮೆಗೆ ಅಂದು ಬೆಳಗ್ಗೆ 9ಕ್ಕೆ ಮಾಲಾರ್ಪಣೆ ಮಾಡುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಲಾಗುವುದು ಎಂದರು.

ರೇಣುಕಾಚಾರ್ಯ ಕಾಲೇಜಿನ ಆವರಣದಲ್ಲಿರುವ ಸರಫ್ ಬಸಪ್ಪ ಸಭಾಂಗಣದಲ್ಲಿ ಸಮ್ಮೇಳನ ಜರಗಲಿದೆ. ಸಮ್ಮೇಳನದ ಮೆರವಣಿಗೆಯ ಉದ್ಘಾಟನೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಹಾಗೂ ವೇದಿಕೆಯ ಕಾರ್ಯಕ್ರಮದ ಉದ್ಘಾಟನೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಹಾಲಿ ಅಧ್ಯಕ್ಷ ಎಸ್.ಜಿ. ಸಿದ್ದರಾಮಯ್ಯ ನೆರವೇರಿಸಲಿದ್ದಾರೆ. ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಸ್ವಾಗತಿಸಲಿದ್ದಾರೆ ಎಂದು ತಿಳಿಸಿದರು. ಸಮ್ಮೇಳನದಲ್ಲಿ ನಡೆಯುವ ಕವಿಗೋಷ್ಠಿ, ಚಿಂತನಾಗೋಷ್ಠಿ ಕಾರ್ಯಕ್ರಮಗಳಲ್ಲಿ ಮಾಜಿ ಸಚಿವೆ ಲೀಲಾದೇವಿ ಆರ್.ಪ್ರಸಾದ್, ಲೇಖಕಿ ಡಾ. ಪದ್ಮಾಶೇಖರ್, ಲೇಖಕ ಡಾ.ಬೈರಮಂಗಲ ರಾಮೇಗೌಡ ಸೇರಿದಂತೆ ಅನೇಕ ಚಿಂತಕರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸಮಾರೋಪ ಸಮಾರಂಭಕ್ಕೆ ಚೆನ್ನೈಯ ಕನ್ನಡ ವಿವಿಯ ಕುಲಪತಿ ಡಾ.ತಮಿಳ್ ಸೆಲ್ವಿ ಭಾಗಿಯಾಗಲಿದ್ದಾರೆ. ಸಮಾರೋಪ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಪದಾಧಿಕಾರಿಗಳಾದ ನಾ.ಶ್ರೀಧರ್, ಶೃಂಗೇಶ್ ಮತ್ತಿತರರು ಉಪಸ್ಥಿತರಿದ್ದರು.

ಪ್ರಜಾವಾಣಿ
ಶನಿವಾರ • ಜುಲೈ 29, 2017

ಗಾಂಧಿನಗರ: ನಾಳೆ ಸಾಹಿತ್ಯ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಾಂಧಿನಗರ ವಿಧಾನ ಸಭಾ ಕ್ಷೇತ್ರದ 4ನೇ ಕನ್ನಡ ಸಾಹಿತ್ಯ ಸಮ್ಮೇಳನವು ಜುಲೈ 30ರಂದು ನಡೆಯಲಿದೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಕ್ಷೇತ್ರ ಘಟಕದ ಅಧ್ಯಕ್ಷೆ ಹಾ.ವೀ.ಮಂಜುಳಾ ಶಿವಾನಂದ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ಸಮ್ಮೇಳನದ ಅಧ್ಯಕ್ಷರಾಗಿ ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವೂಡೆ ಪಿ.ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ' ಎಂದರು.

'ಭಾನುವಾರ ಬೆಳಿಗ್ಗೆ 9 ಗಂಟೆಗೆ ಮಲ್ಲೇಶ್ವರ ವೃತ್ತದಲ್ಲಿರುವ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡುತ್ತೇವೆ. ಅಲ್ಲಿಂದ ಸಮ್ಮೇಳನ ನಡೆಯುವ ರೇಣುಕಾಚಾರ್ಯ ಕಾಲೇಜಿನ ಸಭಾಂಗಣದವರೆಗೆ ಸಾಂಸ್ಕೃತಿಕ ಮೆರವಣಿಗೆ ಮೂಲಕ ಸಮ್ಮೇಳನಾಧ್ಯಕ್ಷರನ್ನು ಕರೆತರುತ್ತೇವೆ' ಎಂದು ತಿಳಿಸಿದರು.

'ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಶಾಸಕ ದಿನೇಶ್ ಗುಂಡುರಾವ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಜಿ. ಸಿದ್ಧರಾಮಯ್ಯ, ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಭಾಗವಹಿಸುವರು. ಸಾಧಕರಾದ ಎಚ್.ಎಸ್. ಮಂಜುನಾಥ್, ಬಿ.ಎಂ.ನಂಜುಂಡಸ್ವಾಮಿ, ಎಂ.ತಿಮ್ಮಯ್ಯ ಮತ್ತು ಕೆ.ನರಸಿಂಹಶೆಟ್ಟಿ ಅವರನ್ನು ಸನ್ಮಾನಿಸುತ್ತೇವೆ' ಎಂದು ಹೇಳಿದರು.

'ಗೋಷ್ಠಿಯಲ್ಲಿ ಬಿ.ಟಿ.ಲಲಿತಾ ನಾಯಕ್, ಎಚ್.ಎಸ್.ಗಣೇಶ ಭಟ್ಟ, ಬಿ.ಗಣಪತಿ, ಜಾಣಗೆರೆ ವೆಂಕಟರಾಮಯ್ಯ ವಿಚಾರ ಮಂಡಿಸುವರು. ಕವಿಗೋಷ್ಠಿಯಲ್ಲಿ ಜರಗನಹಳ್ಳಿ ಶಿವಶಂಕರ್ ಮತ್ತು ಇಪ್ಪತ್ತು ಹೆಚ್ಚು ಯುವ ಕವಿಗಳು ಭಾಗವಹಿಸುವರು. ಲೇಖಕಿ ತಮಿಳ್ ಸೆಲ್ವಿ ಸಮಾರೋಪ ಭಾಷಣ ಮಾಡುತ್ತಾರೆ' ಎಂದು ತಿಳಿಸಿದರು.

ಬೆಂಗಳೂರು ಉದಯವಾಣಿ
ಶನಿವಾರ | ಜುಲೈ | 29 | 2017

ಗಾಂಧಿನಗರ ಕ್ಷೇತ್ರ ಸಾಹಿತ್ಯ ಸಮ್ಮೇಳನ ನಾಳೆ

ಬೆಂಗಳೂರು: ಗಾಂಧಿನಗರ ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಜು.30ರಂದು 4ನೇ ಕನ್ನಡ ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಗಾಂಧಿನಗರ ಕನ್ನಡ ಸಾಹಿತ್ಯ ಪರಿಷತ್ತು ನಿಕಟಪೂರ್ವ ಅಧ್ಯಕ್ಷ ಶ್ರೀಧರ್, 4ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ವೂಡೇ ಪಿ.ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ. ಮೆರವಣಿಗೆ ಉದ್ಘಾಟನೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ನೆರವೇರಿಸುವರು. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ.ಎಸ್.ಜಿ.ಸಿದ್ದರಾಮಯ್ಯ ಸಮ್ಮೇಳನ ಉದ್ಘಾಟನೆ ಮಾಡುವರು ಎಂದು ಹೇಳಿದರು.

ಜು.30ರಂದು ಬೆಳಗ್ಗೆ 9ಕ್ಕೆ ಮಲ್ಲೇಶ್ವರಂ ವೃತ್ತದಲ್ಲಿ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಲಾಗುವುದು. ಅಲ್ಲಿಂದ ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ ಜಗದ್ಗುರು ರೇಣುಕಾಚಾರ್ಯ ಕಾಲೇಜುವರೆಗೆ ಬೃಹತ್ ಮೆರವಣಿಗೆ ಮೂಲಕ ಆಗಮಿಸಲಾಗುವುದು. ಬೆಳಗ್ಗೆ 11ಕ್ಕೆ ಸಮ್ಮೇಳನದ ಉದ್ಘಾಟನೆ ನಡೆಯಲಿದ್ದು, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಅವರನ್ನು ಸಮಾರಂಭದಲ್ಲಿ ಸನ್ಮಾನಿಸಲಾಗುವುದು. ಮಧ್ಯಾಹ್ನ 12.30ಕ್ಕೆ ಚಿಂತನಾಗೋಷ್ಠಿ, 2.30ಕ್ಕೆ ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ, 3.30ಕ್ಕೆ ಕವಿಗೋಷ್ಠಿ, ಸಂಜೆ 5ಕ್ಕೆ ಸಮಾರೋಪ ಸಮಾರಂಭ ನಡೆಯಲಿದೆ ಎಂದು ಹೇಳಿದರು.

ಡಾ.ತಮಿಳ್‌ಸೆಲ್ವಿ ಸಮ್ಮೇಳನದ ಸಮಾರೋಪ ಭಾಷಣ ಮಾಡುವರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದರು.

ಹೊಸ ದಿಗಂತ
ಶನಿವಾರ
29 ಜುಲೈ 2017
ಬೆಂಗಳೂರು

ನಾಳೆ ಗಾಂಧಿ ನಗರ ಸಾಹಿತ್ಯ ಸಮ್ಮೇಳನ


ಬೆಂಗಳೂರು: ಗಾಂಧಿನಗರ ವಿಧಾನಸಭಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಜು.30ರಂದು ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿದೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಗಾಂಧಿನಗರದ ಕಸಾಪದ ನಿಕಟಪೂರ್ವ ಅಧ್ಯಕ್ಷ ಶ್ರೀಧರ್ ಮಾತನಾಡಿ, ಸಮ್ಮೇಳನಾದ ಸರ್ವಾಧ್ಯಕ್ಷರನ್ನಾಗಿ ಶೇಷಾದ್ರಿಪುರ ಶಿಕ್ಷಣ ಸಂಸ್ಥೆಗಳ ಪ್ರಧಾನ ಕಾರ್ಯದರ್ಶಿ ವೂಡೆ ಪಿ.ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ.

ಭಾನುವಾರ ಬೆಳಗ್ಗೆ ಮಲ್ಲೇಶ್ವರ ವೃತ್ತದಲ್ಲಿರುವ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸಮ್ಮೇಳನಕ್ಕೆ ಚಾಲನೆ ನೀಡಲಾಗುವುದು.

ಸಮ್ಮೇಳನದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಜಿ ಸಿದ್ದರಾಮಯ್ಯ, ಮಾಜಿ ಸಚಿವೆಯರಾದ ಡಾ.ಲೀಲಾದೇವಿ ಆರ್.ಪ್ರಸಾದ್, ಬಿ.ಟಿ ಲಲಿತಾನಾಯಕ್, ಗಾಯಕಿ ಶ್ಯಾಮಲ ಜಿ.ಭಾವೆ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

ಕನ್ನಡಪ್ರಭ
ಶನಿವಾರ 29.7.2017



ನಾಳೆ ಗಾಂಧಿನಗರ ಕ್ಷೇತ್ರ ಕನ್ನಡ ಸಾಹಿತ್ಯ ಸಮ್ಮೇಳನ

ಬೆಂಗಳೂರು: ಗಾಂಧಿನಗರ ವಿಧಾನಸಭಾ ಕ್ಷೇತ್ರದ 4ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಜು. 30ರಂದು ಹಮ್ಮಿಕೊಂಡಿರುವುದಾಗಿ ಕಸಾಪ ಅಧ್ಯಕ್ಷೆ ಹಾ.ವಿ. ಮಂಜುಳಾ ಶಿವಾನಂದ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರಾಫ್ ಬಸಪ್ಪ ಸಭಾಂಗಣದಲ್ಲಿ ಸಮ್ಮೇಳನ ನಡೆಯಲಿದೆ. ಮೆರವಣಿಗೆಯನ್ನು ಮುಖ್ಯಮಂತ್ರಿ ಚಂದ್ರು ಉದ್ಘಾಟಿಸಲಿದ್ದಾರೆ. ಡಾ.ವುಡೇ ಪಿ. ಕೃಷ್ಣ ಸಮ್ಮೇಳನಾಧ್ಯಕ್ಷರು. ಶಾಸಕ ದಿನೇಶ್ ಗುಂಡೂರಾವ್ ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷರು.. ಕಾರ್ಯಕ್ರಮದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಸ್.ಜಿ. ಸಿದ್ದರಾಮಯ್ಯ, ಮಾಜಿ ಸಚಿವೆ ಲೀಲಾದೇವಿ ಆರ್.ಪ್ರಸಾದ್, ಡಾ. ಪದ್ಮಾ ಶೇಖರ್, ಡಾ.ಬೈರಮಂಗಲ ರಾಮೇಗೌಡ, ಲೇಖಕಿ ಡಾ. ಬಿ.ಟಿ. ಲಲಿತಾನಾಯಕ್, ಜಾಣಗೆರೆ ವೆಂಕಟರಾಮಯ್ಯ, ಜರಗನಹಳ್ಳಿ ಶಿವಶಂಕರ್, ಡಾ. ಸಂಧ್ಯಾ ರೆಡ್ಡಿ, ಮದ್ರಾಸ್ ವಿವಿ ಕನ್ನಡ ವಿಭಾಗದ ಮುಖ್ಯಸ್ಥೆ ಡಾ. ತಮಿಳ್‌ಸೆಲ್ವಿ ಭಾಗಿಯಾಗಲಿದ್ದಾರೆ ಎಂದರು.

ಉದಯವಾಣಿ ಬೆಂಗಳೂರು

ಶನಿವಾರ | ಜುಲೈ | 29 | 2017

ಜಿಎಸ್‌ಟಿ ಸರಳ ತೆರಿಗೆ ಪದ್ಧತಿ; ಸುಲಭ ಮಾಹಿತಿ ಲಭ್ಯ

ಯಲಹಂಕ: 'ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸರಳ ತೆರಿಗೆ ಪದ್ಧತಿಯಾಗಿದ್ದು, ಅದರ ಕಾನೂನು, ವಿವರಗಳು ಸುಲಭವಾಗಿ ಲಭ್ಯವಿವೆ. ಜಿಎಸ್‌ಟಿಯಿಂದ , ಉದ್ಯೋಗಾವಕಾಶಗಳೂ ಹೆಚ್ಚುವ ಸಾಧ್ಯತೆಗಳಿವೆ' ಎಂದು ಕೇಂದ್ರ ತೆರಿಗೆ ಇಲಾಖೆಯ ಪ್ರಧಾನ ಆಯುಕ್ತ ಶ್ರೀರಾಮ್ ಹೇಳಿದರು.

ಕೇಂದ್ರ, ಸರ್ಕಾರ, ಯಲಹಂಕದ 'ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್' ಮತ್ತು ಶೇಷಾದ್ರಿಪುರಂ ಕಾಲೇಜು ಸ್ನಾತಕೋತ್ತರ ಅಧ್ಯಯನ ಕೇಂದ್ರ ವತಿಯಿಂದ ಶುಕ್ರವಾರ ಆಯೋಜಿಸಿದ್ದ 'ಜಿಎಸ್‌ಟಿ - ಸವಾಲುಗಳು ಹಾಗೂ ಯಶಸ್ವಿ ನಿರ್ವಹಣೆ' ಕುರಿತ ರಾಷ್ಟ್ರ ಮಟ್ಟದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, 'ಜಿಎಸ್‌ಟಿ ಅನುಷ್ಠಾನಗೊಳ್ಳುವುದು ವಿಳಂಬವಾದರೂ ಅದು ಅತ್ಯುತ್ತಮವಾದ ತೆರಿಗೆ ಪದ್ಧತಿ. ವಸ್ತುಗಳ ರಫ್ತು ಮಾಡುವಿಕೆ ಸುಲಭವಾಗುತ್ತದೆ,' ಎಂದರು.

'ಜಿಎಸ್‌ಟಿ ಕೌನ್ಸಿಲ್‌ನಲ್ಲಿ ಎಲ್ಲಾ ನಿರ್ಣಯಗಳನ್ನು ಸರ್ವಸಮ್ಮತವಾಗಿ ಅಂಗೀಕರಿಸಲಾಗಿದೆ. ಕಾನೂನು ಮತ್ತು ಜಿಎಸ್‌ಟಿಯ ಬಗ್ಗೆ ತಿಳಿಸಲು ಜಿಎಸ್‌ಟಿ ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಹಳೆಯ ತೆರಿಗೆ ಪದ್ಧತಿ ಕ್ಲಿಷ್ಟವಾಗಿತ್ತು. ಇದರಿಂದಾಗಿ ಕಾನೂನು ಹೋರಾಟಗಳು ನಡೆಯುತ್ತಿದ್ದವು. ಅದರ ಪರಿಣಾಮ ಹಣದ ಕ್ರೋಢೀಕರಣ ಕುಂಠಿತವಾಗುತ್ತಿತ್ತು,' ಎಂದು ತಿಳಿಸಿದರು.

ರಾಜ್ಯ ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ಆಯುಕ್ತ ಡಾ.ಬಿ.ವಿ.ಮುರಳೀದರ್ ಮಾತನಾಡಿ, 'ಜನ ಜಿಎಸ್‌ಟಿಯನ್ನು ಸರಿಯಾಗಿ ಅರಿತುಕೊಂಡಲ್ಲಿ ರಾಜ್ಯಕ್ಕೆ ಒಳಿತಾಗುತ್ತದೆ,' ಎಂದು ಹೇಳಿದರು.

ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ.ಪಿ.ಕೃಷ್ಣ, ಎಫ್‌ಕೆಸಿಐ ಅಧ್ಯಕ್ಷ ಕೆ.ರವಿ, ಸರಕು ಮತ್ತು ಸೇವಾ ತೆರಿಗೆ ಜಾಲದ ಕಾರ್ಯನಿರ್ವಾಹಕ ಉಪಾಧ್ಯಕ್ಷ (ತಂತ್ರಜ್ಞಾನ) ನಿತಿನ್ ಮಿಶ್ರ, ಎಮ್‌ಎಸ್‌ಎಂಇ ಅಭಿವೃದ್ಧಿ ಸಂಸ್ಥೆಯ ನಿರ್ದೇಶಕ ಎಸ್.ಎನ್.ರಂಗಪ್ರಸಾದ್, ಶೇಷಾದ್ರಿಪುರಂ ಶಿಕ್ಷಣ ದತ್ತಿ ಗೌರವ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ ಮತ್ತಿತರರು ಇದ್ದರು.



ಯಲಹಂಕದ ಶೇಷಾದ್ರಿಪುರಂ ಕಾಲೇಜಿನಲ್ಲಿ ಶುಕ್ರವಾರ ಆಯೋಜಿಸಿದ್ದ ಜಿಎಸ್‌ಟಿ - ಸವಾಲುಗಳು ಹಾಗೂ ಯಶಸ್ವಿ ನಿರ್ವಹಣೆ ಕುರಿತ ರಾಷ್ಟ್ರ ಮಟ್ಟದ ಕಾರ್ಯಾಗಾರಕ್ಕೆ ಕೇಂದ್ರ ತೆರಿಗೆ ಇಲಾಖೆಯ ಪ್ರಧಾನ ಆಯುಕ್ತ ಶ್ರೀರಾಮ್ ಚಾಲನೆ ನೀಡಿದರು.

ಹೊಸ ದಿಗಂತ

ಶನಿವಾರ
29 ಜುಲೈ 2017

ಹಳೆಯ ತೆರಿಗೆ ಪದ್ಧತಿ ಜನ ಸ್ನೇಹಿಯಾಗಿರಲಿಲ್ಲ | ಜಿಎಸ್‌ಟಿ ಸರಳ ತೆರಿಗೆ ಪದ್ಧತಿ

ಜಿಎಸ್‌ಟಿಯಿಂದ ಉದ್ಯೋಗ ಹೆಚ್ಚಳ

▶ ದಿಗಂತ ವರದಿ: ಯಲಹಂಕ, ಜು.28

ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸರಳೀಕೃತವಾದ ಪದ್ಧತಿಯಾಗಿದ್ದು, ಇದರಿಂದ ಉದ್ಯೋಗವಕಾಶಗಳು ಹೆಚ್ಚಾಗಲಿವೆ ಎಂದು ಕೇಂದ್ರ ತೆರಿಗೆ ಇಲಾಖೆಯ ಪ್ರಧಾನ ಆಯುಕ್ತ ಶ್ರೀರಾಮ್ ತಿಳಿಸಿದರು.

ಕೇಂದ್ರ ಸರ್ಕಾರ ಮತ್ತು ಯಲಹಂಕದ ಶೇಷಾದ್ರಿಪುರ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್ ಮತ್ತು ಶೇಷಾದ್ರಿಪುರ ಕಾಲೇಜು ಸ್ನಾತಕೋತ್ತರ ಅಧ್ಯಯನ ಕೇಂದ್ರದಿಂದ ಜಿಎಸ್‌ಟಿ - ಸವಾಲುಗಳು ಹಾಗೂ ಯಶಸ್ವಿ ನಿರ್ವಹಣೆ ಕುರಿತು ಆಯೋಜಿಸಿದ್ದ ರಾಷ್ಟ್ರಮಟ್ಟದ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಜಿಎಸ್‌ಟಿ ವಿಧಿಸುವುದು ತೀರಾ ವಿಳಂಬವಾದರೂ ಅದು ಅತ್ಯುತ್ತಮವಾದ ತೆರಿಗೆ ಪದ್ಧತಿ ಆಗಿದೆ. 1.25 ಕೋಟಿ ಜನರ ಅಭಿವೃದ್ಧಿಗಾಗಿ ಈ ತೆರಿಗೆಯ ಅಗತ್ಯವಿದೆ. ವಸ್ತುಗಳನ್ನು ರಫ್ತು ಮಾಡಲು ಜಿಎಸ್‌ಟಿಯಿಂದಾಗಿ ಸುಲಭವಾಗುತ್ತದೆ ಎಂದು ಹೇಳಿದರು.

ಹಿಂದಿನ ತೆರಿಗೆ ಕ್ಲಿಷ್ಟಕರ: ಜಿಎಸ್‌ಟಿ ಕೌನ್ಸಿಲ್‌ನಲ್ಲಿ ತೆರಿಗೆಯ ಎಲ್ಲರ ಒಪ್ಪಿಗೆ ಪಡೆದುಕೊಳ್ಳಲಾಗಿದೆ. ಕಾನೂನು ಮತ್ತು ಜಿಎಸ್‌ಟಿಯ ಬಗ್ಗೆ ಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಹಿಂದಿನ ತೆರಿಗೆ ಪದ್ಧತಿಯು ಕ್ಲಿಷ್ಟವಾಗಿದ್ದು, ಇದರಿಂದಾಗಿ ಕಾನೂನು ಹೋರಾಟಗಳು ನಡೆಯುತ್ತಿದ್ದು, ಅದರ ಪರಿಣಾಮ ಹಣದ ಕ್ರೋಢೀಕರಣ ಕುಂಠಿತವಾಗುತ್ತಿತ್ತು. ಹಳೆಯ ತೆರಿಗೆ ಪದ್ಧತಿ ಜನ ಸ್ನೇಹಿಯಾಗಿರಲಿಲ್ಲ. 2012ರಲ್ಲಿ ಭಾರತದ ಜಿಎಸ್‌ಟಿ ಕೇವಲ ಶೇ.17.7ರಷ್ಟಿತ್ತು ಎಂದು ವಿವರಿಸಿದರು.

ದಿಗಂತ ಚಿತ್ರ



ಯಲಹಂಕ ಶೇಷಾದ್ರಿಪುರ ಕಾಲೇಜಿನಲ್ಲಿ ಜಿಎಸ್‌ಟಿ-ಸವಾಲುಗಳು ಹಾಗೂ ಯಶಸ್ವಿ ನಿರ್ವಹಣೆ ಕುರಿತು ರಾಷ್ಟ್ರಮಟ್ಟದ ಕಾರ್ಯಾಗಾರಕ್ಕೆ ಕೇಂದ್ರ ತೆರಿಗೆ ಇಲಾಖೆಯ ಪ್ರಧಾನ ಆಯುಕ್ತ ಶ್ರೀರಾಮ್ ಚಾಲನೆ ನೀಡಿದರು.

ಉದ್ಯೋಗವಕಾಶ ಹೆಚ್ಚಳ: ಜಿಎಸ್‌ಟಿಯು ಸರಳ ತೆರಿಗೆ ಪದ್ಧತಿಯಾಗಿದೆ. ಕಾನೂನು ವಿವರಗಳು, ಜಿಎಸ್‌ಟಿಯನ್ನು ಶೇಕಡಾ ಎಷ್ಟು ವಿಧಿಸಲಾಗುತ್ತಿದೆ ಎಂಬುದನ್ನು ಸುಲಭದಲ್ಲಿ ತಿಳಿದುಕೊಳ್ಳಬಹುದಾಗಿದೆ. ಜಿಎಸ್‌ಟಿಯಿಂದಾಗಿ ಉದ್ಯೋಗವಕಾಶಗಳು ಹೆಚ್ಚಾಗಲಿವೆ. ಸ್ವಲ್ಪ ಈ ತೆರಿಗೆಯ ವಿಧಾನ ಅರ್ಥವಾಗದೆ ಜನರು ಗೊಂದಲದಲ್ಲಿ ಇರಬಹುದು. ಆದರೆ, ಈ ತೆರಿಗೆ ವಿಧಾನದಿಂದ ಆಗುವ ಅನುಕೂಲಗಳನ್ನು ಸರಿಯಾಗಿ ಅರ್ಥಮಾಡಿಕೊಂಡರೆ ಉತ್ತಮ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಆಯುಕ್ತ ಶ್ರೀರಾಮ್ ಜಿಎಸ್‌ಟಿಯ ಇತಿಹಾಸ, ಗುಣಲಕ್ಷಣ, ಈ ತೆರಿಗೆಗೆ ಒಳಪಡುವ ಬರುವ ಪದಾರ್ಥಗಳ ಬಗ್ಗೆ ತಿಳಿಸಿಕೊಟ್ಟರು. ಜಿಎಸ್‌ಟಿ ಒಕ್ಕೂಟದಲ್ಲಿರುವ ದೇಶ, ರಾಜ್ಯಗಳ ಪ್ರತಿನಿಧಿಗಳು, ಪ್ರತಿನಿಧಿಸಿದ ರಾಷ್ಟ್ರಗಳ ಆರ್ಥಿಕ ಸಂಬಂಧ ಬಗ್ಗೆ ವಿವರಿಸಿದರು.

ಜಿಎಸ್‌ಟಿ ಬಗ್ಗೆ ಜನರು ಅರಿಯಬೇಕು: ರಾಜ್ಯ ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ಆಯುಕ್ತ ಡಾ.ಬಿ.ವಿ.ಮುರಳೀದರ್ ಮಾತನಾಡಿ, ಜನಗಳು ಜಿಎಸ್‌ಟಿಯನ್ನು ಸರಿಯಾಗಿ ಅರಿತುಕೊಂಡಲ್ಲಿ ರಾಜ್ಯಕ್ಕೆ ಒಳಿತಾಗುವುದು. ಜನಸಾಮಾನ್ಯರು ಯಾವ ವಸ್ತುಗಳಿಗೆ ಹೇಗೆ ಸರ್ಕಾರ ತೆರಿಗೆ ವಿಧಿಸಲಿದೆ ಎಂದು ತಿಳಿದುಕೊಂಡರೆ ದೇಶ ಅಭಿವೃದ್ಧಿ ಪಥದಲ್ಲಿ ಸಾಗುವುದು ಎಂದರು. ಕಾರ್ಯಕ್ರಮದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ, ಎಫ್‌ಕೆಸಿಸಿಐ ಅಧ್ಯಕ್ಷ ಕೆ.ರವಿ, ಕಾರ್ಯನಿರ್ವಾಹಕ ಉಪಾಧ್ಯಕ್ಷ(ತಂತ್ರಜ್ಞಾನ) ಸರಕು ಮತ್ತು ಸೇವಾ ತೆರಿಗೆ ಜಾಲದ ನಿತಿನ್‌ಮಿಶ್ರ, ಎಂಎಸ್‌ಎಂಇ ಅಭಿವೃದ್ಧಿ ಸಂಸ್ಥೆಯ ನಿರ್ದೇಶಕ ಎಸ್.ಎನ್ ರಂಗಪ್ರಸಾದ್ ಹಾಜರಿದ್ದರು.

ಪ್ರಜಾವಾಣಿ
ಶನಿವಾರ • ಜುಲೈ 29, 2017



ಆರ್. ಶ್ರೀರಾಮ್ (ಎಡದಿಂದ ಮೂರನೆಯವರು) ಕೆ.ರವಿ ಮಾತುಕತೆ ನಡೆಸಿದರು. ಶೇಷಾದ್ರಿಪುರ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವೂಡೇ ಪಿ.ಕೃಷ್ಣ, ಜಿಎಸ್‌ಟಿ ಜಾಲದ (ತಂತ್ರಜ್ಞಾನ) ಕಾರ್ಯನಿರ್ವಾಹಕ ಉಪಾಧ್ಯಕ್ಷ ನಿತಿನ್ ಮಿಶ್ರಾ ಇದ್ದಾರೆ

‘ಜಿಎಸ್‌ಟಿ: ಸುಧಾರಣೆಯ ಯುಗ ಆರಂಭ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿಯಿಂದ ತೆರಿಗೆ ಸುಧಾರಣೆಯ ಯುಗ ಆರಂಭವಾಗಿದೆ’ ಎಂದು ಕೇಂದ್ರ ತೆರಿಗೆ (ಜಿಎಸ್‌ಟಿ) ಆಯುಕ್ತ ಆರ್.ಶ್ರೀರಾಮ್ ಹೇಳಿದರು.

ಅಸೋಚಾಮ್ ಕರ್ನಾಟಕ ಘಟಕ ಹಾಗೂ ಯಲಹಂಕದ ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನ ನಿರ್ವಹಣಾ ಅಧ್ಯಯನ ವಿಭಾಗದ ಆಶ್ರಯದಲ್ಲಿ ಆಯೋಜಿಸಿದ್ದ ‘ಜಿಎಸ್‌ಟಿ ಅನುಷ್ಠಾನ ನಂತರದ ಬೆಳವಣಿಗೆಗಳು’ ಕುರಿತ ರಾಷ್ಟ್ರೀಯ ಶೃಂಗಸಭೆಯಲ್ಲಿ ಅವರು ಮಾತನಾಡಿದರು.

‘ಹೊಸ ತೆರಿಗೆ ಪದ್ಧತಿಯಿಂದಾಗಿ ದೇಶದ ಪ್ರತಿಯೊಬ್ಬ ಪ್ರಜೆಯೂ ತೆರಿಗೆ ದಾರರಾಗಲಿದ್ದಾರೆ. ದೇಶದಾದ್ಯಂತ ಏಕ ರೂಪ ಮಾರುಕಟ್ಟೆ ವ್ಯವಸ್ಥೆ ಜಾರಿಗೆ ಬಂದಿದೆ’ ಎಂದರು.

‘ಜಿಎಸ್‌ಟಿಯು ಸರಳೀಕೃತವಾದ ತೆರಿಗೆ ಪದ್ಧತಿಯಾಗಿದೆ. ಉತ್ಪನ್ನಗಳನ್ನು ಸುಲಭವಾಗಿ ರಫ್ತು ಮಾಡಲು ಇದು ಸಹಕಾರಿ. ಇದರಿಂದ ಉದ್ಯೋಗಾವಕಾಶಗಳು ಹೆಚ್ಚಲಿದ್ದು, ದೇಶವು ಪ್ರಗತಿಯತ್ತ ಮುನ್ನಡೆಯಲಿದೆ’ ಎಂದರು.

ಕರ್ನಾಟಕ ವಾಣಿಜ್ಯೋದ್ಯಮ ಮಹಾಸಂಘದ ಅಧ್ಯಕ್ಷ ಕೆ.ರವಿ ಮಾತನಾಡಿ, ‘ರಾಜ್ಯದ ಉದ್ಯಮಿಗಳಿಗೆ ಜಿಎಸ್‌ಟಿ ಕುರಿತು ಮಾಹಿತಿ ನೀಡಲಾಗಿದೆ. ವಿವಿಧ ಜಿಲ್ಲೆಗಳಲ್ಲಿ ಸಲಹಾ ಕೇಂದ್ರಗಳನ್ನು ತೆರೆಯಲಾಗಿದೆ’ ಎಂದರು.

ಕನ್ನಡಪ್ರಭ

ಶನಿವಾರ 29.7.2017



ಯಲಹಂಕದ ಶೇಷಾದ್ರಿಪುರ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಜಿಎಸ್‌ಟಿ ಸವಾಲುಗಳು ಹಾಗೂ ಯಶಸ್ವಿ ನಿರ್ವಹಣೆ ಕುರಿತ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಕೇಂದ್ರ ತೆರಿಗೆ ಇಲಾಖೆ ಅಧಿಕಾರಿ ಆರ್.ಶ್ರೀರಾಮ್, ವಾಣಿಜ್ಯ ತೆರಿಗೆ ಇಲಾಖೆ ಜಂಟಿ ಆಯುಕ್ತ ಮುರಳಿಕೃಷ್ಣ, ಶೇಷಾದ್ರಿಪುರ ಶಿಕ್ಷಣ ದತ್ತಿಯ ವೂಡೇ.ಪಿ.ಕೃಷ್ಣ, ಎಫ್‌ಕೆಸಿಸಿಐ ಅಧ್ಯಕ್ಷ ಕೆ. ರವಿ ಇದ್ದರು.

ಈ ಸಂಜೆ

ಶುಕ್ರವಾರ,28-07-2017

30 ರಂದು ಗಾಂಧಿನಗರದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ

ಬೆಂಗಳೂರು, ಜು.28-ಗಾಂಧಿ ನಗರ ವಿಧಾನಸಭಾ ಕ್ಷೇತ್ರದ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಇದೇ 30ರಂದು ಕನ್ನಡ ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಗಾಂಧಿನಗರ ಕಸಾಪ ನಿಕಟಪೂರ್ವ ಅಧ್ಯಕ್ಷಶ್ರೀಧರ್, ಜು.30ರಂದು ಬೆಳಗ್ಗೆ 9 ಗಂಟೆಗೆ ಮಲ್ಲೇಶ್ವರಂ ವೃತ್ತದಲ್ಲಿ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಲಾಗುವುದು. ಅಲ್ಲಿಂದ ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ ಜಗದ್ಗುರು ರೇಣುಕಾಚಾರ್ಯ ಕಾಲೇಜು ವರೆಗೆ ಬೃಹತ್ ಮೆರವಣಿಗೆ ಮೂಲಕ ಆಗಮಿಸಲಾಗುವುದು ಎಂದರು.

ಸಮ್ಮೇಳನಾಧ್ಯಕ್ಷರಾಗಿ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಗಳ ಪ್ರಧಾನ ಕಾರ್ಯದರ್ಶಿ ವೂಡೇ.ಪಿ.ಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದ್ದು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮುಖ್ಯಮಂತ್ರಿಚಂದ್ರು ಮೆರವಣಿಗೆ ಸ್ವಾಗತಿಸಲಿದ್ದಾರೆ. ಕನ್ನಡಅಭಿವೃದ್ಧಿಪ್ರಾಧಿಕಾರದ ಅಧ್ಯಕ್ಷಎಸ್.ಜಿ.ಸಿದ್ದರಾಮಯ್ಯ, ಡಾ.ಪದ್ಮಶೇಖರ್ ರಾಮೇಗೌಡ, ಉಭಯ ಗಾನ ವಿದೂಷಿ ಶ್ಯಾಮಲಾ, ಡಾ.ಬಿ.ಟಿ.ಲಲಿತಾನಾಯಕ್, ಎಚ್.ಎಸ್.ಗಣೇಶ್‌ಭಟ್, ವಿ.ಗಣಪತಿ, ವೆಂಕಟರಾಮಯ್ಯ, ತಮಿಳ್‌ಸೆಲ್ವಿ ಮತ್ತಿತರರು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

ಕೆಪಿಸಿಸಿ ಕಾರ್ಯಾಧ್ಯಕ್ಷ ದಿನೇಶ್ ಗುಂಡೂರಾವ್ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದಾರೆ.

ಬೆಳಗ್ಗೆ 11 ಗಂಟೆಗೆ ಸಮ್ಮೇಳನದ ಉದ್ಘಾಟನಾಕಾರ್ಯಕ್ರಮದಲ್ಲಿಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಎಚ್.ಎಸ್.ದೊರೆಸ್ವಾಮಿ ಅವರನ್ನು ಸನ್ಮಾನಿಸಲಾಗುವುದು. ಮಧ್ಯಾಹ್ನ 12.30ಕ್ಕೆ ಚಿಂತನಾಗೋಷ್ಠಿ 2.30ಕ್ಕೆ ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ, 3.30ಕ್ಕೆ ಕವಿಗೋಷ್ಠಿ ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಹ ಕಾರ್ಯದರ್ಶಿ ಕಮಲಾಸುಧಾಕರ್, ಖಜಾಂಚಿ ತಪಸ್ವಿದೇವಿ, ಸಂಚಾಲಕ ವೇಣುಗೋಪಾಲ್ ಸೇರಿದಂತೆ ಮತ್ತಿತರರಿದ್ದರು.

ಯಶವಂತಪುರ ವಿಧಾನಸಭಾ ಕ್ಷೇತ್ರ ಸಾಹಿತ್ಯ ಸಮ್ಮೇಳನದ ಸಮಾರೋಪ

ಕನ್ನಡ ಕಾಪಾಡುವ ಕೆಲಸವನ್ನು ಕನ್ನಡಿಗರು ಮಾಡಬೇಕು

■ ವಿಕ ಸುದ್ದಿಲೋಕ ಕೆಂಗೇರಿ ಉಪನಗರ

ಕನ್ನಡವನ್ನು ಕಾಪಾಡುವಂತಹ ಕೆಲಸವನ್ನು ಪ್ರತಿ ಕನ್ನಡಿಗನು ಮಾಡಬೇಕು ಎಂದು ಶೇಷಾದ್ರಿಪುರಮ್ ಶಿಕ್ಷಣ ದತ್ತಿಯ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ.ಕೃಷ್ಣ ಕರೆ ನೀಡಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ನಾಲ್ಕನೇ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ವೂಡೆ ಪಿ.ಕೃಷ್ಣ ಸಲಹೆ

''ಭಾಷೆಗೆ ನಮ್ಮತನವನ್ನು ಉಳಿಸುವ ಶಕ್ತಿ ಇದೆ. ಪರದೇಶಕ್ಕೆ ತೆರಳಿದಾಗ ಅವರು ನಮ್ಮನ್ನು ಕೇಳುವುದು ನೀವು ಯಾವ ಭಾಷೆ ಯವರು ಎಂದೇ ಹೊರತು ಯಾವ ಜಾತಿ, ಮತ ಎಂದು ಪ್ರಶ್ನಿಸುವುದಿಲ್ಲ,'' ಎಂದರು. ''ವೈದ್ಯರು, ಎಂಜನಿಯರುಗಳು, ವಿಜ್ಞಾನಿಗಳು ಸೇರಿ ಇತರ ವೃತ್ತಿ ನಿರತರರು ವೃತ್ತಿ ಸಂಬಂಧಿತ ವಿಷಯಗಳನ್ನು ಕನ್ನಡದಲ್ಲಿಯೇ ಬರೆಯಬೇಕು. ಹೀಗಾದಾಗ ಕನ್ನಡ ಉಳಿಸಲು ಸಾಧ್ಯ,'' ಎಂದರು.

ಮುಖ್ಯ ಅತಿಥಿ ಜನಪದ ಕಲಾವಿದ ಅಪ್ಪಗೆರೆ ತಿಮ್ಮರಾಜು ಮಾತನಾಡಿ ''ಕನ್ನಡ ಸಂಸ್ಕೃತಿ, ಬದುಕು, ಕಲೆ, ಹಿರಿಮೆ ಗರಿಮೆ ಬೆಳೆಸಬೇಕೆಂದರೆ ಯುವಶಕ್ತಿಯ ಕೊಡುಗೆ ಅಗತ್ಯ,''ಎಂದರು.

ಸಮ್ಮೇಳನಾಧ್ಯಕ್ಷೆ ಡಾ. ಗೀತಾರಾಮಾನುಜಮ್ ಮಾತನಾಡಿ, ''ದೃಶ್ಯ ಮಾಧ್ಯಮದಲ್ಲಿ ನಮಗೆ ಬೇಡವಾದ ಕಾರ್ಯಕ್ರಮಗಳೇ ಹೆಚ್ಚು ಪ್ರಸಾರವಾಗುತ್ತದೆ. ಕನ್ನಡ ಹಾಗೂ ನಮ್ಮ ಸಂಸ್ಕೃತಿಯನ್ನು ಅವರು ಕಡೆಗಣಿಸುತ್ತಿದ್ದಾರೆ,'' ಎಂದು ದೂರಿದರು. ''ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಸರಕಾರವು ಕನ್ನಡ ಕಲಿಕೆಯನ್ನು ಕಡ್ಡಾಯ ಮಾಡಬೇಕು,'' ಎಂದರು,

''ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕನ್ನಡ ಭವನವನ್ನು ನಿರ್ಮಿಸಲು ನಿವೇಶನವನ್ನು ನೀಡಿ ಅಲ್ಲಿ ಕನ್ನಡದ ಕಾರ್ಯಕ್ರಮಗಳು ನಡೆಯಲು ಸುಸಜ್ಜಿತವಾದ ಕಟ್ಟಡವನ್ನು ನಿರ್ಮಿಸಲು ವಿಶೇಷವಾದ ಅನುದಾನವನ್ನು ನೀಡಬೇಕು,'' ಎಂದು ಸರಕಾರವನ್ನು ಅವರು ಒತ್ತಾಯಿಸಿದರು,


ಕಸಾಪ ನಗರ ಜಿಲ್ಲಾಧ್ಯಕ್ಷ ಮಾಯಣ್ಣ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕ್ಷೇತ್ರ ಕಸಾಪ ಅಧ್ಯಕ್ಷ ಬಿ.ಟಿ. ಶ್ರೀನಿವಾಸ್, ಗೌರವಾಧ್ಯಕ್ಷ ಎ.ಪಿ.ಕುಮಾರ್, ಕಾರ್ಯದರ್ಶಿ ಬಿ.ವೆಂಕಟೇಶ್, ಕೋಶಾಧ್ಯಕ್ಷ ಕನ್ನಡ ಸುರೇಶ್, ವಾರ್ಡ್ ಘಟಕದ ಅಧ್ಯಕ್ಷರಾದ ಅಶೋಕ್ ರಾಮಸಂದ್ರ, ವಿಶ್ವನಾಥ್, ಪ್ರೊ.ಜಯರಾಮ್ ಮತ್ತಿತರರು ಪಾಲ್ಗೊಂಡಿದ್ದರು.






ಯಶವಂತಪುರ ವಿಧಾನಸಭಾ ಕ್ಷೇತ್ರದ ನಾಲ್ಕನೇ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಸಮ್ಮೇಳನಾಧ್ಯಕ್ಷೆ ಡಾ. ಗೀತಾ ರಾಮಾನುಜಮ್ ಅವರನ್ನು ಸನ್ಮಾನಿಸಲಾಯಿತು. ಡಾ.ವೂಡೇ ಪಿ.ಕೃಷ್ಣ, ನಗರ ಜಿಲ್ಲಾಧ್ಯಕ್ಷ ಮಾಯಣ್ಣ ಮತ್ತಿತರರು ಇದ್ದಾರೆ. (ಚಿತ್ರ1) ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸಲಾಯಿತು. ಕೇಂದ್ರ ಸಚಿವ ಡಿ ವಿ ಸದಾನಂದ ಗೌಡ, ಶಾಸಕ ಎಸ್.ಟಿ. ಸೋಮಶೇಖರ್, ನಾರಾಯಣಸ್ವಾಮಿ ಹಾಗೂ ಮತ್ತಿತರರು ಇದ್ದರು. (ಚಿತ್ರ2)

ಸಂಯುಕ್ತ ಕರ್ನಾಟಕ 11, ಜುಲೈ, 2017



ಶೇಷಾದ್ರಿಪುರ ಕಾಲೇಜಿನಲ್ಲಿ ನೂತನ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಜ್ಞಾನವಿಕಸನ ತರಬೇತು ಮತ್ತು 2017ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದವರಿಗೆ ಪುರಸ್ಕರಿಸಲಾಯಿತು. ನಿವೃತ್ತ ಪ್ರಾಂಶುಪಾಲ ಡಾ. ಎಚ್.ಎಸ್. ಗಣೇಶ ಭಟ್, ಶೇಷಾದ್ರಿಪುರ ಶಿಕ್ಷಣ ದತ್ತಿಯ ಅಧ್ಯಕ್ಷ ಎನ್.ಆರ್. ಪಂಡಿತಾರಾಧ್ಯ, ಗೌರವ ಪ್ರಧಾನ ಕಾರ್ಯದರ್ಶಿ ವೂಡೆ ಪಿ. ಕೃಷ್ಣ ಮತ್ತಿತರರಿದ್ದರು.



ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಶಾಲಾ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ನೂತನ ವಿದ್ಯಾರ್ಥಿಗಳಿಗೆ 'ಜ್ಞಾನ ವಿಕಸನ ತರಬೇತಿ' ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಎಂಇಎಸ್ ಶಿಕ್ಷಕರ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಡಾ.ಎಚ್.ಎಸ್.ಗಣೇಶ್‌ಭಟ್ಟ, ಸಂಸ್ಥೆಯ ಅಧ್ಯಕ್ಷ ಎನ್.ಆರ್.ಪಂಡಿತರಾಧ್ಯ, ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ.ಕೃಷ್ಣ, ಬಿ.ಸಿ.ಲೋಕನಾಥ್ ಮತ್ತಿತರರಿದ್ದರು.